ಬಳ್ಳಾರಿ ಜಿಲ್ಲೆಯ ಜನಪದ ವೈದ್ಯ

ಒಂದು ವೈಜ್ಞಾನಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ
ಸುಧಾಕರ್ ಬಿ.ಎಸ್.

ಮಾರ್ಗದರ್ಶಕರು
ಡಾ.ಪಿ.ಚನ್ನೇಗೌಡ
ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ
ವಿ.ವಿ.ಪುರಂ. ವಿಜ್ಞಾನ ಮಹಾವಿದ್ಯಾಲಯ,
ಬೆಂಗಳೂರು.

ವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭

ಬಳ್ಳಾರಿ ಜಿಲ್ಲೆಯ ಜನಪದ ವೈದ್ಯ

ಒಂದು ವೈಜ್ಞಾನಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ
ಸುಧಾಕರ್ ಬಿ.ಎಸ್.

ಮಾರ್ಗದರ್ಶಕರು
ಡಾ.ಸಿ.ಚನ್ನೇಗೌಡ
ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ
ವಿ.ವಿ.ಪುರಂ, ವಿಜ್ಞಾನ ಮಹಾವಿದ್ಯಾಲಯ,
ಬೆಂಗಳೂರು

ವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭

ಸಂಶೋಧಕರ ಪ್ರಮಾಣ ಪತ್ರ

ಬಳ್ಳಾರಿ ಜಿಲ್ಲೆಯ ಜನಪದ ವೈದ್ಯ ಒಂದು ವೈಜ್ಞಾನಿಕ ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ಡಾ.ಸಿ.ಚನ್ನೇಗೌಡ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ವಿಜ್ಞಾನ ನಿಕಾಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸುಧಾಕರ್ ಬಿ.ಎಸ್.
ಸಂಶೋಧಕ
ವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ : ವಿದ್ಯಾರಣ್ಯ

ದೃಢೀಕರಣ ಪತ್ರ

ಶ್ರೀ.ಬಿ.ಎಸ್.ಸುಧಾಕರ್ ಇವರು ಬಳ್ಳಾರಿ ಜಿಲ್ಲೆ ಜನಪದ ವೈದ್ಯ : ಒಂದು ವೈಜ್ಞಾನಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ವಿಜ್ಞಾನನಿಕಾಯದಡಿಯಲ್ಲಿ ಪಿ.ಎಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೇ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ಡಾ: ಸಿ.ಚನ್ನೇಗೌಡ.

ದಿನಾಂಕ : 19/10/06.

ಸ್ಥಳ : Blore

ಅರಿಕೆ

ಆರಂಭದಲ್ಲಿ "ಬಳ್ಳಾರಿ ಜಿಲ್ಲೆಯ ಜನಪದ ವೈದ್ಯ ಒಂದು ವೈಜ್ಞಾನಿಕ ಅಧ್ಯಯನ" ಮಾಡಬೇಕೆಂಬ ಮಹತ್ವಾಕಾಂಕ್ಷೆಯಿಂದ ತೆಗೆದುಕೊಂಡೆ. ಆದರೆ ನನ್ನ ವೃತ್ತಿ ಪೋಲಿಸ್ ಇಲಾಖೆಯಲ್ಲಿ. ಕ್ಷೇತ್ರಕಾರ್ಯ ಜಟೀಲವೇನೋ ಅನ್ನಿಸುತ್ತಿತ್ತು. ಆದರೆ ನನ್ನ ಇಲಾಖೆಗೂ ಖೈದಿಗಳಿಗೂ ಒಂದು ರೀತಿಯ ನಂಟು ಎಡಬಿಡದೆ ಇರುತ್ತಿತ್ತು. ಅಂತಹ ಸಂದರ್ಭದಲ್ಲಿ ಕೆಲವರು ಒಳ್ಳೆಯವರೂ ಕೆಟ್ಟವರೂ ಬರುತ್ತಿದ್ದರು ಅವರುಗಳಲ್ಲಿ ಕಳ್ಳತನವನ್ನೂ ಹೇಗೆ ನಿಪುಣತೆಯಲ್ಲಿ ಮಾಡುತ್ತಿದ್ದರೋ ಅದೇ ರೀತಿ ಬೇರೆ ಬೇರೆ ಕಸಬುಗಳನ್ನು ಕಲಿತಿರುತ್ತಿದ್ದರು. ಆಗ ನನಗೆ ನನ್ನ ವೃತ್ತಿ ಜನಸಂಪರ್ಕ ಬಾಂಧವ್ಯವನ್ನು ಬೆಳೆಸಬೇಕೆಂಬ ಕುತೂಹಲ ಕೆರಳಿ ಖೈದಿಗಳ ವಿಚಾರಣೆಯಾದ ನಂತರ ಅವರುಗಳಲ್ಲಿ ನನ್ನ ಅಧ್ಯಯನಕ್ಕೆ ಪೂರಕವಾದ ಜನಪದ ವೈದ್ಯದ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿ ಅವರಿಂದ ಬಿಡುವು ಮಾಡಿಕೊಂಡು ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ. ನನಗನ್ನಿಸಿತು ಎಂತಂತವರಲ್ಲಿ ತುಂಬಾ ಮಹತ್ವದ ವಿದ್ಯೆ ಅಡಗಿರುತ್ತದೆ ಎಂದು ಅನ್ನಿಸಿತು.

ಕೆಲವು ಬಾರಿ ಹಳ್ಳಿಗಳ ಮೇಲೆ ಹೋಗುತ್ತಿದ್ದೆ. ಆಗ ಅನೇಕ ಸಂಕಷ್ಟಗಳು ಕಂಡುಬಂದೋ, ಯಾವಾಗ ಕ್ಷೇತ್ರಕಾರ್ಯದ ಬೆನ್ನಿಹತ್ತಿ ಹಳ್ಳಿಜನಪದರ ಹತ್ತಿರ ಹೋದಾಗ ಅವರು ತೋರಿದ ಅಂತರಂಗದ ಪ್ರೀತಿ, ಆದರ, ಜೊತೆಗೆ ಅವರು ಬಿಡುವು ಮಾಡಿಕೊಂಡು ತಮ್ಮ ಕಷ್ಟಗಳನ್ನು ಬದಿಗೊತ್ತಿ ಜನಪದರು ನಗೆ ಬೀರಿ ನನಗೆ ನೀಡಿದ ಮಾಹಿತಿ ಕುತೂಹಲ ಹಾಗೂ ಅಶ್ಚರ್ಯ ಮೂಡಿಸುತ್ತಿತ್ತು. ಆದುದರಿಂದ ನನ್ನಲ್ಲಿ ಮನಃಸ್ಥೈರ್ಯ ಹೆಚ್ಚಿ ಇನ್ನೂ ಹೆಚ್ಚಿನ ವಿಷಯಗಳನ್ನು ಸಂಗ್ರಹಿಸಲು, ತಿಳಿದುಕೊಳ್ಳಲು ತುಂಬಾ ಸಹಕಾರಿಯಾಯಿತು. ದಕ್ಷಿಣ ಹಾಗೂ ಉತ್ತರ ಕರ್ನಾಟಕದಲ್ಲಿ ಜನಪದ ವೈದ್ಯದ ಬಗ್ಗೆ ವಿದ್ವಾಂಸರು ಕೆಲಸ ಮಾಡಿದ್ದಾರೆ. ಆದರೆ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ವೈಜ್ಞಾನಿಕ ಅಧ್ಯಯನದತ್ತ ಗಮನಹರಿಸಿರಲಿಲ್ಲ. ಆದುದರಿಂದ ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಬಳ್ಳಾರಿ ಜಿಲ್ಲೆಯ ಸುತ್ತಮುತ್ತ ವೃತ್ತಿ ನಿರ್ವಹಿಸುತ್ತಿರುವ ನಾನು "ಬಳ್ಳಾರಿ ಜಿಲ್ಲೆಯ ಜನಪದ ವೈದ್ಯ ಒಂದು ವೈಜ್ಞಾನಿಕ ಅಧ್ಯಯನ" ಸಮಗ್ರವಾಗಿ ಮಾಡಿದ್ದು; ಅದರ ಪೂರಕವಾಗಿ ರಚಿಸಿದ ಮಹಾಪ್ರಬಂಧವೇ ಇದಾಗಿದೆ.

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಷಯದ ಆಯ್ಕೆ, ಸ್ವರೂಪ, ಪ್ರಬಂಧದ ಅಂತಿಮದವರೆಗೂ ಪ್ರೇರಣೆ ಮಾಡಿ ತುಂಬುಹೃದಯದಿಂದ ಮಾರ್ಗದರ್ಶನ ಮಾಡಿದ ಪ್ರೊ.ಚನ್ನೇಗೌಡ ಅವರಿಗೆ ಹೃನ್ಮಗಳಿಂದ ನೆನೆಯುತ್ತೇನೆ.

ಸಂಶೋಧನಾ ಕೆಲಸದಲ್ಲಿ ಹಮ್ಮಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಹಿಂದಿನ ಕುಲಪತಿಗಳಾದ ಡಾ.ಹೆಚ್.ಜೆ.ಲಕ್ಕಪ್ಪಗೌಡ, ಪ್ರಸ್ತುತ ಸರಳ ಹಾಗೂ ಮುಕ್ತ ಮನಸ್ಸಿನ ಕುಲಪತಿಗಳೂ, ಜಾನಪದ ವಿದ್ವಾಂಸರೂ ಆದ ಡಾ.ವಿವೇಕ ರೈ, ಸನ್ಮಾನ್ಯ ಗೃಹಸಚಿವರಾದ ಎಂ.ಪಿ.ಪ್ರಕಾಶ್ ಅವರಿಗೆ, ಕುಲಸಚಿವರಾದ ವಿ.ಶಂಕರ್, ಪ್ರಸಾರಾಂಗದ ನಿರ್ದೇಶಕರಾದ ಡಾ.ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಯನಾಂಗದ ನಿರ್ದೇಶರಾದ ಡಾ.ಟಿ.ಆರ್.ಚಂದ್ರಶೇಖರ್ ಅಲ್ಲದೆ ನನ್ನೆಲ್ಲ.ಕೆಲಸ ಕಾರ್ಯಗಳಿಗೆ ಸ್ಫೂರ್ತಿ ತುಂಬುತ್ತಿರುವ ದಲಿತ ಕಳಕಳಿ ಉಳ್ಳವರೂ, ಸಾಹಿತಿ ಗಳೂ, ಕತೆಗಾರರೂ ಆದ ಡಾ.ಕರೀಗೌಡ ಬೀಚನಳ್ಳಿ, ಬುಡಕಟ್ಟು ತಜ್ಞರೂ ಜಾನಪದ ವಿದ್ವಾಂಸರೂ, ನಗುಮುಖದಿಂದಲೇ ಪ್ರೋತ್ಸಾಹ ತುಂಬಿದ ಡಾ.ಹಿ.ಚಿ.ಬೋರಲಿಂಗಯ್ಯ, ಡಾ.ಹೆಬ್ಬಾಲೆ ಕೆ.ನಾಗೇಶ್ ಹಾಗೂ ಜಾನಪದ ವಿದ್ವಾಂಶರಾದ ಡಾ.ದುರ್ಗದಾಸ್, ಡಾ.ಅಂಬಳಿಕೆ ಹಿರಿಯಣ್ಣ, ಪ್ರೊ.ಆರ್.ವಿ.ಎಸ್. ಸುಂದರಂ ಅವರಿಗೆ ನಾನು ಕೃತಜ್ಞನಾಗಿರುತ್ತೇನೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸರ್ವರೀತಿಯಿಂದಲೂ ಆತ್ಮೀಯತೆಯಿಂದ ಮಾಹಿತಿ ನೀಡಿದ ಜ್ಞಾನದ ಚೇತನವಾದ ಜನಪದ ವಕ್ತೃಗಳೂ ಹಾಗೂ ಜನಪದರು ಮಾಹಿತಿಯನ್ನು ನೀಡಿ ಈ ಗ್ರಂಥದ ದೀವಿಗೆಯಾಗಿದ್ದಾರೆ. ಅವರಿಗೆ ನನ್ನ ಪ್ರೀತಿ ಪೂರ್ವಕ ಪ್ರಣಾಮಗಳು.

ಅಕ್ಷರ ಬರೆಯಲು ಒತ್ತು ನೀಡಿದ ನನ್ನ ತಾತ ರಾಣಪ್ಪಸಂಗೋಳಿಗಿ ಮತ್ತು ನನ್ನ ತಂದೆ, ತಾಯಿ, ಅಣ್ಣ ಅಶೋಕ್ ಕುಮಾರ್, ರವೀಂದ್ರಕುಮಾರ, ಅತ್ತಿಗೆಯೆಂದರಿಗೆ ಮತ್ತು ಶ್ರೀಯುತ ಸುರೇಶ್ ಮುದ್ದೆಬೀಹಾಳ, ಲಿಂಗರಾಜ ಪಾಟೀಲ್, ಅಂಗಡಿ ಚೆನ್ನಬಸಪ್ಪ, ಉಮಾಪತಿ, ಪಂಪಾಪತಿ, ರಾಜಶೇಖರಗೌಡ, ರಾಜೇಂದ್ರ ಬಂಢಾರಿ, ಹಂದ್ರಾಳ. ಮಾರ್ಕಂಡೇಯ, ರಾಮಸಾಗರದ ಶಿವಶಂಕರಗೌಡ, ನಾರಾಯಣ್, ವೆಂಕೋಬಿ, ಮುಖ್ಯಪೇದೆಗಳಾದ ಎನ್.ಕೃಷ್ಣಪ್ಪ, ಮಬೂಸಾಬ್, ಜಾತಪ್ಪ, ಆರೋಗ್ಯಸ್ವಾಮಿ, ಪೇದೆಗಳಾದ ರಫೀಕ್, ಬಿ.ವಿರೇಶಬಾಬು, ರಾಮಸ್ವಾಮಿ, ರಮೇಶ್, ನಾಗರಾಜ, ಜಗನ್ನಾಥ, ಕರಿವೀರಪ್ಪ, ಶಿವಕುಮಾರ್, ಉಮೇಶ್, ಬಾಲವರ್ಧನರಾಜು, ಬಸವರಾಜ ಅವರನ್ನು ಮನಃದಾಳದಿಂದ ನೆನೆಯುತ್ತೇನೆ.

ಎ.ಡಿ.ಜಿ.ಪಿ.ಡಾ.ಸುಭಾಷ ಭರಣಿ, ಪೂರ್ವವಲಯ ಐಜಿಪಿ ಎಂ.ಎಫ್.ಫಾಷ್ ಹಾಗೂ ನನ್ನೆಲ್ಲ ಕೆಲಸಕಾರ್ಯಗಳಿಗೆ ಸದಾ ಒತ್ತು ನೀಡಿ ಪ್ರೋತ್ಸಾಹ ತುಂಬಿದಂತ ಬಳ್ಳಾರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಯಾದಂತಹ ಅಮ್ರಿತ್‌ಪಾಲ್ ಮತ್ತು ಹೆಚ್ಚುವರಿ ವರಿಷ್ಠಾಧಿಕಾರಿಯಾದ ಡಾ.ಡಿ.ಸಿ.ರಾಜಪ್ಪ ಹಾಗೂ ಜಿಲ್ಲೆಯ ಪೋಲಿಸ್ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರನ್ನು ನೆನೆಯುತ್ತೇನೆ.

ಮಹಾಪ್ರಬಂಧದ ರಚನೆಯ ಸಂದರ್ಭದಲ್ಲಿ ಪ್ರಯೋಗಾಲಯದಲ್ಲಿ ಸಹಕರಿಸಿದ ಡಾ.ವಿಜಯ ಢಾಣಪುರ್, ಡಾ.ಗುರುರಾಜ್, ಶ್ರೀಕಾಂತ, ರಘುರಾಜ್ ಇವರುಗಳನ್ನು ನೆನೆಯುತ್ತೇನೆ.

ಈ ಪ್ರಬಂಧವನ್ನು ಗಣಕಯಂತ್ರದಲ್ಲಿ ಅಕ್ಷರ ವಿನ್ಯಾಸ ಮಾಡಿಕೊಟ್ಟ ಶ್ರೀ ಎ.ಎಂ.ಕೃಪಾಶಂಕರ್ ಮಹಾಪ್ರಬಂಧವನ್ನು ಸುಂದರವಾಗಿ ಬೈಂಡ್ ಮಾಡಿಕೊಟ್ಟ ಶ್ರೀ ಮಹಾಂತೇಶ್ ಬೈಂಡಿಂಗ್ ವರ್ಕ್ಸ್, ಧಾರವಾಡ, ಅವರಿಗೆ ಪ್ರೀತಿಯಿಂದ ಸ್ಮರಿಸುತ್ತೇನೆ.

ಸುಧಾಕರ್ ಬಿ.ಎಸ್.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಸ್ವರೂಪ ಮತ್ತು ಉದ್ದೇಶ

೧

ಅಧ್ಯಯನದ ಸ್ವರೂಪ ಮತ್ತು ಉದ್ದೇಶ

ಜಾನಪದ ಕ್ಷೇತ್ರ ತುಂಬ ವಿಶಾಲವಾದದ್ದು. ಅದು ಉಳಿದೆಲ್ಲಾ ಕ್ಷೇತ್ರಗಳಿಗಿಂತ ತನ್ನದೇ ರೀತಿಯಲ್ಲಿ ಶ್ರೇಷ್ಠತೆಯನ್ನು ಉಳಿಸಿ ಬೆಳಸಿಕೊಂಡು ಬಂದಿದೆ. ಅದಕ್ಕೆ ಆದಿ ಅಂತ್ಯಗಳಿಲ್ಲ. ಆದುದರಿಂದ ವಿಶ್ವವ್ಯಾಪಕ ಮತ್ತು ವಿಶ್ವಮಾನ್ಯ ತನ್ನ ಶಾಖೋಪಶಾಖೆಗಳಿಂದ ಭೂಮಾಕಾರವಾಗಿ ಬೆಳೆದು ಸಮಸ್ತ ಸಾಮಾಜಿಕ ಶಾಸ್ತ್ರಗಳಿಗೂ ಮಾತೃಸದೃಶ. ಒಂದು ಜನಾಂಗದ ಸಮಗ್ರ ಬದುಕಿನ ಪೂರ್ವೇತಿಹಾಸ ನಿರ್ಮಾಣಕ್ಕೆ ಜಾನಪದವೇ ಬಲವಾದ ಸಾಧನ. ಆದುದರಿಂದ ಜಾನಪದ ಅಧ್ಯಯನ ಕೇವಲ ಅಧ್ಯಾಯನ ಮಾತ್ರವಾಗಿರದೇ ಊಹಾತ್ಮಕ ಶಾಸ್ತ್ರವಲ್ಲ. ವಾಸ್ತವಿಕ ಆಧಾರಗಳ ಮೇಲೆ ನಿಲ್ಲಬಲ್ಲ ವಿಜ್ಞಾನವೂ ಕೂಡ ಹೌದು.

ಜಾನಪದವೆಂದು ನಿಂತ ನೀರಲ್ಲ. ಚಲನಾತ್ಮಕವಾದುದು. ನಮ್ಮ ಭಾರತದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ ಜಾನಪದರ ಮನಸ್ಸು ಹೆಚ್ಚು ಕಡಿಮೆ ಒಂದೇ ಮಾದರಿಯಲ್ಲಿ ಮಿಡಿಯುತ್ತಿರುತ್ತದೆ, ಎಂಬುದಕ್ಕೆ ಚತ್ತೀಸಗರ್ ದಲ್ಲಿರುವ ಹಾಡುಗಳಿಂದ ಪತ್ತೆ ಮಾಡಬಹುದಾಗಿದೆ. ಉದಾ : The house is broken when scandal is repeated so the C-wife is an enemy the husband goes away.

ಇದೇ ರೀತಿ ಆಡಾಲ್ಫ್ ಬಾಷ್ಟಿಯನ್ - ಜಾನಪದ ಭಾವನೆಗಳಿಗೆ ಮಾನಸಿಕ ವ್ಯಾಪಾರಗಳ ಜತೆಗೆ ಸುಪ್ತಪ್ರಜ್ಞೆಯ ಪ್ರಭಾವ ಕಾರಣ ಎನ್ನುತ್ತಾನೆ. ಜಾನಪದದಲ್ಲಿ ವೈಜ್ಞಾನಿಕವಾಗಿ ವೈದ್ಯ ವಿಜ್ಞಾನದಲ್ಲೂ ತನ್ನದೇ ಆದ ಮೌಲ್ಯವನ್ನು ಹೊಂದಿದೆ. ನಾಟಿ ವೈದ್ಯರು ನೀಡುವ ಮದ್ದುಗಳು ನಂಬಿಕೆಗಳನ್ನವಲಂಬಿಸಿರುವುದಿಲ್ಲ. ದೀರ್ಘನುಭವದ ಪ್ರಯೋಗಗಳ ಪ್ರತಿಫಲವೇ ಆಗಿರುತ್ತವೆ. ಹಾಗೆಯೇ ಆಯುರ್ವೇದದ ಮೂಲಗಳನ್ನು ಸೋಸುವಾಗ ಜಾನಪದ ವೈದ್ಯಕಣ್ಮುಂದೆ ನಿಲ್ಲುವುದನ್ನು ನೆನೆಪಿಸಿಕೊಳ್ಳಬೇಕಾಗುತ್ತದೆ.

ಈ ಜಗತ್ತಿನಲ್ಲಿ ಜನಪದ ವೈದ್ಯ ಎಂದಿನಿಂದ ಹುಟ್ಟಿಕೊಂಡಿತು ಎಂದು ನಿಖರವಾಗಿ ಹೇಳುವುದು ಕಷ್ಟ. ಈ ಧರೆಯ ಮೇಲೆ ಮಾನವ ಹಾಗೂ ಇತರ ಜೀವಿಗಳು ಜನ್ಮವೆತ್ತಿದ ಮೇಲೆ ಆಹಾರದ

ಹುಡುಕಾಟ, ಸಂತಸದ ಬದುಕು, ಪರಿಸರಗಳಲ್ಲಾದ ಏಳುಬೀಳುಗಳಿಂದ ಆಗುವ ರೋಗರುಜಿನಾದಿ ಪರಿಹಾರಕ್ಕೆ ಏನಾದರೊಂದು ಪ್ರಯತ್ನ ಮಾಡುತ್ತಲೇ ಬಂದಿದ್ದಾನೆ. ಪ್ರಸ್ತುತ ಸಂದರ್ಭದಲ್ಲಿ ಪಶು, ಪಕ್ಷಿ, ಪ್ರಾಣಿಗಳು ತಮಗೆ ರೋಗಬಂದರೆ ಉಪವಾಸವಿದ್ದೋ, ಅಥವಾ ಪ್ರಕೃತಿಯಲ್ಲಿ ದೊರೆಯುವ ಯಾವುದಾದರೊಂದು ಗಿಡಮೂಲಿಕೆಗಳನ್ನು ತಿಂದು, ಇಲ್ಲವೋ ವಾಂತಿ ಮಾಡಿಯೋ ತಮ್ಮ ರೋಗಗಳನ್ನು ಪರಿಹಾರ ಮಾಡಿಕೊಳ್ಳುವುದನ್ನು ನಾವು ಕಾಣಬಹುದಾಗಿದೆ.

ಒಟ್ಟಿನಲ್ಲಿ ಮನುಷ್ಯ ಪ್ರಾಣಿಗೆ ನೆಮ್ಮದಿ, ವಿಶ್ರಾಂತಿ ಮುಖ್ಯ. ಹಾಗೆಯೇ ಮನಸ್ಸಿನ ನೋವು ಮತ್ತು ದೇಹದ ರೋಗ ರುಜಿನಗಳನ್ನು ನಿವಾರಿಸಿಕೊಳ್ಳಲು ವೈದ್ಯಪದ್ಧತಿಯು ಮುಖ್ಯ ವೈದ್ಯಗಳಲ್ಲಿ ಅಲೋಪತಿ, ಹೋಮಿಯೋಪತಿ, ಆಯುರ್ವೇದ, ಪ್ರಕೃತಿ ಚಿಕಿತ್ಸೆ ಇನ್ನೂ ಅನೇಕವುಗಳಲ್ಲಿ ಜನಪದ ವೈದ್ಯವು ಬಹಳ ಪ್ರಧಾನವಾದ್ದು. ಶಿಷ್ಟ, ಪ್ರೌಢ, ಆಧುನಿಕ ವೈಜ್ಞಾನಿಕ ಇನ್ನೂ ಅನೇಕ ತೆರನಾಗಿರುವಂತ ವಸ್ತುಗಳಿಗೆ ಜಾನಪದವೇ ಮೂಲ. ಆದುದರಿಂದ ಜಾನಪದದ ಬ್ರಹ್ಮಾಂಡದೊಳಗೆ ಎಲ್ಲವೂ ಅಡಗಿದೆ. ಜಾನಪದ ಎಂದರೆ ಏಕಮುಖವಾದ ಅಂಶಗಳಿಂದ ಕೂಡಿರುವುದಿಲ್ಲ. ಬಹುರೂಪಿ, ಬಹುಸಂಸ್ಕೃತಿಗಳ ತಾಯಿಬೇರು. ಒಂದಿಲ್ಲೊಂದು ರೀತಿಯಲ್ಲಿ ಎಲ್ಲಾ ಶಿಸ್ತುಗಳು ಜಾನಪದದೊಳಗೆ ಸಂಬಂಧವನ್ನಿರಿಸಿಕೊಂಡಿವೆ. ಆದುದರಿಂದ ವೈದ್ಯಪದ್ಧತಿ, ಕಲೆ, ಸಾಹಿತ್ಯ, ಸಂಸ್ಕೃತಿ, ಊಟೋಪಚಾರ, ವೇಷಭೂಷಣಗಳು, ರಾಗ, ಲಯ, ಭಾಷೆ, ಪುರಾಣ, ಒಗಟು, ರೂಢಿ, ಸಂಪ್ರದಾಯ, ಆಚರಣೆ, ಆಕಾಶ, ಸಸ್ಯ, ನಕ್ಷತ್ರ, ಜಲ ಇನ್ನೂ ಅನೇಕ ಅಂಶಗಳನ್ನು ಒಳಗೊಂಡಿದೆ. ಒಟ್ಟಿನಲ್ಲಿ ಈ ವಿಶ್ವದ ಸೃಷ್ಟಿಯಲ್ಲಿ ಜಾನಪದರ ಬದುಕೇ ಒಂದು ಕಲೆ. ಇದು ವಿಶಾಲ, ವೈವಿಧ್ಯಮಯ, ಕಲಾತ್ಮಕವಾಗಿರುತ್ತದೆ. ಆದುದರಿಂದ ಜಾನಪದ, ಜನಪದ ಪದನಿಷ್ಪತ್ತಿ ಅಲ್ಲದೆ ವಿವಿಧ ವಿದ್ವಾಂಸರು ನೀಡಿದ ಅನೇಕ ವ್ಯಾಖ್ಯಾನಗಳನ್ನು ವಿಶ್ಲೇಷಣೆ ಮಾಡಲಾಗಿದೆ.

'ಜನ' ಎಂದರೆ ಒಂದು ಗುಂಪಿನಲ್ಲಿ ಒಂದಾದರೂ ಸಮಾನವಾದ ಅಂಶವಿರುತ್ತದೆ. ಆ ಸಮಾನ ಅಂಶವೆಂದರೆ ಇಂತದ್ದೇ ಇರಬೇಕೆಂಬ ಕಟ್ಟುಪಾಡು ಅಲ್ಲ. ಯಾವುದಾದರೂ ಆಗಿರಬಹುದು. ಸಮಾನ ಭಾಷೆ, ಧರ್ಮ, ಕಸುಬು, ಜಾತಿ ಇರಬಹುದಾಗಿದೆ. ಇಂತ ಗುಂಪಾಗಿರುವ ಜನಕ್ಕೆ ಒಂದು ಪರಂಪರೆ ಇರುತ್ತದೆ. ಆಗ ಗುಂಪಿನಲ್ಲಿರುವ ಎಲ್ಲರೂ ಬಲ್ಲವರಾಗಿರಬೇಕಾಗಿಲ್ಲ. ಆದರೆ ಆ ಗುಂಪಿನ ಜೀವ ಬಿಂದು, ಕೇಂದ್ರ ಯಾವುದೆಂದು ಹೇಳದಿದ್ದರೂ ಅರಿತಿರುತ್ತಾರೆ. ಆ ಪರಂಪರೆ ಆ ಗುಂಪಿನ ಆಚಾರ-ವಿಚಾರ, ಆರಾಧನೆ, ನಂಬಿಕೆ, ಸಂಪ್ರದಾಯಗಳ ಮೂಲಕ ವ್ಯಕ್ತವಾಗುತ್ತವೆ. ಒಟ್ಟಿನಲ್ಲಿ ಜಾನಪದ ಒಂದು

ಕುಟುಂಬ, ಚಿಕ್ಕಗುಂಪುಗಿರಬಹುದು. ಒಂದು ಕುಟುಂಬ ಅಥವಾ ಗುಂಪಿನ ಆಚರಣೆಗಳು, ನಂಬಿಕೆಗಳು, ಇಲ್ಲಾ ಮೂಢನಂಬಿಕೆಗಳು, ಇನ್ನೂ ಅನೇಕ ಅಂಶಗಳಲ್ಲಿ ಬೇರೆ ಬೇರೆ ವೈರುಧ್ಯಗಳು ಇರಬಹುದಾಗಿದೆ. ಒಂದೇ ತೇರನಾಗಿರಬೇಕಾಗಿಲ್ಲ.

ಜಾನಪದವು ಒಬ್ಬನಿಂದ ಇನ್ನೊಬ್ಬನಿಗೆ, ಮಗದೊಬ್ಬನಿಗೆ ಮೌಖಿಕವಾಗಿ ಬರುತ್ತದೆ. ಹೀಗೂ ಹೇಳಬಹುದು ಅದು ಮನುಷ್ಯನಿಗೆ ಕಲಿಕೆಯಿಂದ ಬಂದ ಸಂಪ್ರದಾಯಗಳ ಮತ್ತು ಅನುವಂಶಿಕ ಪರಂಪರೆಯ ಪ್ರಜ್ಞೆಯ ಪ್ರಮುಖವಾದ ಒಂದು ಭಾಗ. ಆದುದರಿಂದ ಒಬ್ಬ ಅಧ್ಯಯನಕಾರನಿಗೆ ಪೂರ್ವ ಸಿದ್ಧತೆ ಎಷ್ಟು ಮಾಡುತ್ತಾನೋ ಅಷ್ಟು ಒಳ್ಳೆಯದು.

ಸಂಸ್ಕೃತಿಯೊಳಗೆ ಸಾಮಾಜಿಕ, ರಾಜಕೀಯ ಸಂಸ್ಥೆ, ಯಾಂತ್ರಿಕತೆ ಧರ್ಮ. ಅರ್ಥವ್ಯವಸ್ಥೆ, ಕಲೆ, ಸಾಂಸ್ಕೃತಿಕತೆ, ಇನ್ನಿತರ ಅಂಶಗಳು ಇರುತ್ತವೆ. ಜಾನಪದವು ಮುಖ್ಯವಾಗಿ ಕಲೆಗೆ, ಆ ಸಂಸ್ಕೃತಿಯ ಕಲಾತ್ಮಕ ಅಭಿವ್ಯಕ್ತಿಗೆ ಸಂಬಂಧ ಪಟ್ಟಿರುತ್ತದೆ. ಜಾನಪದವನ್ನು ಹೀಗೆ ವಿಶ್ಲೇಷಿಸಬಹುದು. ಜಾನಪದ ಸಂಸ್ಕೃತಿಯ ಒಂದು ಅಂಗ ತೊಂಡಿಯಾಗಿ ಇಲ್ಲವೆ ಮೂಢನಂಬಿಕೆ ಬಣ್ಣಗಾರಿಕೆ, ನಡವಳಿಕೆ, ನೃತ್ಯಗಳಲ್ಲಿನಂತೆ ಮಾದರಿಯಾಗಿ ತಲೆಮಾರಿನಿಂದ ತಲೆಮಾರಿಗೆ ಸಾಗಿಸಲ್ಪಡುವಂತದ್ದು. ಅದು ಲಾವಣಿ, ಕಥೆ, ಪುರಾಣ, ಗಾದೆ, ಒಗಟು, ಹೀಗೆ ಶಾಬ್ದಿಕವಾಗಿ ಯಾವುದೇ ಆಗಿರಬಹುದು. ಶಾಬ್ದಿಕವಲ್ಲದ ಕಲಾರೂಪಗಳು ಅದರಲ್ಲಿದ್ದರೂ ಮುಖ್ಯವಾಗಿ ತೋಂಡಿ ಗುಣ ಧರ್ಮ ಅದರ ಉಸಿರು ಎಂದು ಹೇಳಬಹುದು.

'ಜಾನಪದ' ಪದ ನಿಷ್ಪತ್ತಿ

ಇಂಗ್ಲೀಷ್‌ನ Folklore ಎಂಬ ಪದಕ್ಕೆ ಸಮಾನಾರ್ಥವಾಗಿ ಬಳಸಿರುವ ಕನ್ನಡಪದ "ಜಾನಪದ" "Folklore" ಎನ್ನುವುದು 'Folk' ಮತ್ತು 'Lore' ಎಂಬ ಎರಡು ಪ್ರತ್ಯೇಕ ಅರ್ಥಗಳನ್ನುಳ್ಳ ಪದಗಳ ಸಂಯೋಗದಿಂದ ಆಗಿದೆ. "Folk" ಎನ್ನುವುದು ಕನ್ನಡದಲ್ಲಿ ಜನಪದ ಎಂತಲೂ, 'Lore'ಗೆ ಜ್ಞಾನ ಎಂತಲೂ ಅರ್ಥವಿದೆ. ಒಟ್ಟಿನಲ್ಲಿ ಇದು ಜನಪದರ ಜ್ಞಾನ ಅಥವಾ 'ಜನಪದ ಜ್ಞಾನ' ಎಂದಾಗುತ್ತದೆ. ಸೌಲಭ್ಯ, ಸಂಕ್ಷಿಪ್ತತೆ ಹಾಗೂ ವೈಜ್ಞಾನಿಕ ಅಧ್ಯಯನಕ್ಕೆ ಸೂಕ್ತವೆಂಬ ದೃಷ್ಟಿಯಿಂದ "ಜನಪದ ಜ್ಞಾನ" ಎಂಬ ಈ ವಿಷಯಕ್ಕೆ ಡಾ.ಹಾ.ಮಾ. ನಾಯಕರು ಕನ್ನಡದಲ್ಲಿ 'ಜಾನಪದ' ಎಂಬ ಶಬ್ದವನ್ನು ಬಳಸಿರುತ್ತಾರೆ. ಜನಪದರ ಜ್ಞಾನವೇ 'ಜಾನಪದ'.

ಜನಪದದ ಅರ್ಥ : ಫೋಕ್ +ಲೋರ್ = ಫೋಕ್ ಲೋರ್ ಎಂದರೆ ಜನಪ್ರಿಯ ನಡಾವಳಿಗಳು (popular Antiquities) ಎಂಬುದಕ್ಕೆ ಬದಲಾಗಿ ವಿಲಿಯಂ ಜಾನ್ ಥಾಮ್ಸ್ ಎಂಬ ಪ್ರಾಚೀನಾನ್ವೇಷಕನು ೧೮೪೬ರಲ್ಲಿ 'Folklore' ಪದವನ್ನು ಸೃಷ್ಟಿಸಿ ಚಲಾವಣೆಗೆ ತಂದಿರುತ್ತಾನೆ. 'Folk' ಮತ್ತು 'Lore' ಎರಡು ಪದಗಳಿವೆ. 'Lore' ಎಂದರೆ ಜ್ಞಾನ. 'Folk' ಎಂದರೆ 'ಜನರು ಎಂದು ಸಾಮಾನ್ಯ ಅರ್ಥವಿದೆ. ಆದರೆ ಫೋಕ್ ಲೋರ್ ಜ್ಞಾನದಲ್ಲಿ ವಿಶಿಷ್ಟವಾದ, ನಿರ್ದಿಷ್ಟವಾದ ಅರ್ಥದಲ್ಲಿ ಆದಿವಾಸಿಗಳ, ಅನಕ್ಷರಸ್ಥರ, ಗ್ರಾಮೀಣರ, ನಾಗರೀಕ ಸಮಾಜದ ಸಾಮಾನ್ಯಜನರ ಗುಂಪಿಗೆ ಮಾತ್ರ ಬಳಕೆಯಾಗುತ್ತದೆ. ಇಂತಹ ಫೋಕಿನ ನಂಬಿಕೆ, ಪದ್ಧತಿ, ಗಾದೆ, ಒಗಟು, ಗೀತೆ, ಕತೆ, ವೈದ್ಯ, ದಂತಕತೆ, ಪುರಾಣ, ಧಾರ್ಮಿಕಾಚರಣೆ ನೃತ್ಯ, ಸಂಗೀತ, ಮಾಟ, ಮಂತ್ರ ಇತ್ಯಾದಿಯಾಗಿ ಯಾವುದು ಅವರನ್ನು ಆಳುವುದೋ, ಯಾವುದು ಅವರ ಆಚರಣೆಯಲ್ಲಿ ಉಂಟೋ ಅವುಗಳೆಲ್ಲವನ್ನು ಕುರಿತ ಲೋರ್ ಜ್ಞಾನ ಅಥವಾ ಕಲಿಕೆಯೇ ಫೋಕ್ ಲೋರ್. ಈ ಫೋಕ್ ಲೋರಿನ ಕುರಿತು ನಮ್ಮ ದೇಶದವರ ಗಮನಹರಿಸಿದಾಗಿನಿಂದ ಫೋಕ್ ಲೋರ್ ಪದಕ್ಕೆ ಸಂವಾದಿಯಾದ ಪದವೊಂದನ್ನು ಸೃಷ್ಟಿಸಿಕೊಳ್ಳಲು ವಿವಿಧ ವಿದ್ವಾಂಸರು ಪ್ರಯತ್ನ ಪಡುತ್ತಾ ಬಂದಿದ್ದಾರೆ. ಲೋಕಾಯನ, ಲೋಕವಿಜ್ಞಾನ, ಲೋಕವಾಙ್ಮಯ ಹೀಗೆ ಅನೇಕ ಪದಗಳನ್ನು ಸೂಚಿಸಿರುತ್ತಾರೆ. ಫೋಕ್ ಎಂಬ ಪದಕ್ಕೆ 'ಲೋಕ' ಎಂದು; ಅರಿವು, ಕಲಿಕೆ ಎಂದರ್ಥದ ಲೋರ್ ಎಂಬುದಕ್ಕೆ ಆಯನ, ವಿಜ್ಞಾನ, ವಾಙ್ಮಯ ಎಂಬ ಪದಗಳನ್ನು ಬಳಸಿರುವುದನ್ನು ಗುರುತಿಸಬಹುದಾಗಿದೆ.

ನಮ್ಮ ಮುಂದಿರುವ ಪ್ರಶ್ನೆ ಎಂದರೆ ಜಾನಪದ ಎಂದರೇನು? ಇದರ ಬಗ್ಗೆ ವಿದ್ವಾಂಸರಲ್ಲಿ ಖಚಿತವಾದ ಅಥವಾ ಒಮ್ಮತ ಇನ್ನೂ ಮೂಡಿಬಂದಿಲ್ಲ. ಮಾನವಶಾಸ್ತ್ರದ ನೆಲೆಯಲ್ಲಿ, ಮತ್ತೆ ಕೆಲವರು ಸಾಹಿತ್ಯ ದೃಷ್ಟಿಯಿಂದ, ಇನ್ನೂ ಕೆಲವರು ಬೇರೆ ಬೇರೆ ಶಾಸ್ತ್ರೀಯ ದೃಷ್ಟಿಯಲ್ಲಿ ವಿವರಣೆ ನೀಡಿದ್ದಾರೆ.

ಜಾನಪದದ ಸಂಗ್ರಹ, ನಿರೂಪಣೆ, ವಿಶ್ಲೇಷಣೆಯ ಬಗ್ಗೆ ಪಾಶ್ಚಾತ್ಯ ದೇಶಗಳಲ್ಲಿ ಐನೂರು ವರ್ಷಗಳಿಂದಲೂ ಕೆಲಸ ನಡೆಯುತ್ತಿದ್ದರೂ ಆ ಶಾಸ್ತ್ರಕ್ಕೆ ಹೊಸ ಹೆಸರೊಂದು ಬಂದದ್ದು ಕಳೆದ ಶತಮಾನದಲ್ಲಿ ಜನಪ್ರಿಯ ಪಳೆಯುಳಿಕೆಗಳು (Popular Antiquities) ಮತ್ತು ಜನಪ್ರಿಯ ಸಾಹಿತ್ಯ (popular Literature) ಎಂದು ಕರೆಯುತ್ತಿದ್ದ ವಿಷಯಗಳಿಗೆ Folklore ಎಂಬ ಪದವನ್ನು ಮೊಟ್ಟಮೊದಲ ಬಾರಿಗೆ ಡಬ್ಲ್ಯು.ಜೆ.ಥಾಮ್ಸ್ ೧೮೪೬ರಲ್ಲಿ ಸೃಷ್ಟಿಸಿರುತ್ತಾನೆ. ಈ ಹೆಸರಿನ ಸೃಷ್ಟಿ ಇತ್ತೀಚಿನದಾದರೂ ಜಾನಪದ ಮಾನವನ ಉದಯದಷ್ಟೇ ಪ್ರಾಚೀನವಾದುದು.

ಜಾನಪದ ಶಾಸ್ತ್ರವನ್ನು ಒಂದು ಅಥವಾ ಕೆಲವು ವಾಕ್ಯಗಳಲ್ಲಿ ವ್ಯಾಖ್ಯಾನಿಸಲು ಕಳೆದ ೫೦ ವರ್ಷಗಳಿಂದ ಅನೇಕ ವಿದ್ವಾಂಸರು ಪ್ರಯತ್ನ ಪಟ್ಟಿದ್ದಾರೆ. ಈ ಹೇಳಿಕೆಗೆ ಪುಷ್ಟಿಕರಿಸಬೇಕಾದರೆ Standard Dictionary, of Folklore Mythology and legend ಎಂಬ ಆಂಗ್ಲ ಶಬ್ದಕೋಶ ಉದಾಹರಿಸಬಹುದಾಗಿದೆ. ಅದರಲ್ಲಿ ಮುಖ್ಯವಾಗಿ ೨೧ ವಿದ್ವಾಂಸರು ತಮ್ಮ ದೃಷ್ಟಿಕೋನದಿಂದ ನೋಡಿದ ಅಥವಾ ನೋಡಿದಂತಹ ಜಾನಪದದ ಮಾತುಗಳಾಗಿವೆ. ಯೂರೋಪು ಮತ್ತು ಅಮೆರಿಕೆಯ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಮತ್ತು ಉನ್ನತ ಶಿಕ್ಷಣ ಕೇಂದ್ರಗಳಲ್ಲಿ ಜಾನಪದಾಧ್ಯಯನಕ್ಕೆ ವಿಶೇಷ ಮಹತ್ವ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಅವು ಕಾಲ ಕಾಲಕ್ಕೆ ಪ್ರಕಟಿಸುತ್ತಿರುವ ವಿದ್ವತ್ ಪತ್ರಿಕೆಗಳು ಮತ್ತು ನಿಯತ ಕಾಲಿಕೆಗಳಲ್ಲಿ ವಿಶ್ವವಿಖ್ಯಾತರಾದ ಜಾನಪದ ವಿದ್ವಾಂಸರು ಲೇಖನಗಳನ್ನು ಪ್ರಕಟಿಸಿ ಆ ವಿಷಯದ ಬಗೆಗೆ ನಿರಂತರ ಚರ್ಚೆ, ವಿವೇಚನೆಗಳನ್ನು ನಡೆಸುತ್ತ ಬಂದಿದ್ದಾರೆ.

ಅಂಥ ಅಂಶಗಳತ್ತ ಕನ್ನಡ ಜಾನಪದಾಸಕ್ತರ ಗಮನ ಸೆಳೆಯುವಂತಹ ಕೆಲಸ ಕನ್ನಡದಲ್ಲಿ ಹೆಚ್ಚಾಗಿ ನಡೆದಿಲ್ಲ. ಉದಾಹರಣೆಗೆ ಜಾನಪದವೆಂದರೇನು? ಅದರಿಂದೇನು ಪ್ರಯೋಜನ? ನಾಲ್ವರು ತಜ್ಞರ ಹೇಳಿಕೆಗಳೊಂದಿಗೆ ತಿಳಿಸಿ ಎಂದು ಜಾನಪದಾಧ್ಯಯದಲ್ಲಿ ತೊಡಗಿರುವಂಥವರನ್ನೇ ಕೇಳಿದಾಗಲೂ ಸರಳ ಸಮರ್ಪಕ ಉತ್ತರ ದೊರೆಯಲಾರದು. ಏಕೆಂದರೆ ಈ ವಿಷಯ ಎಲ್ಲಾರಿಗೂ ದೊರೆಯುವಂತದು ಅಥವಾ ಗೊತ್ತಿರುವಂಥದ್ದು ತಾನೆ? ಎಂಬ ಔದಾಸೀನ್ಯ ಕಾರಣವಿದ್ದಿರಬೇಕು.

ಜೋನಸ್ ಬಾಲಿಸ್

ಜಾನಪದ ಎಂಬುದು ಪಾರಂಪರಿಕ ಆಕ್ಷೀಯ ಮತ್ತು ನಾಗರಿಕ ಜನತೆಯ ಸೃಷ್ಟಿಕ್ರಿಯಾತ್ಮಕ ಅಂಶಗಳನ್ನು ಒಳಗೊಂಡಿರುತ್ತದೆ. ಈ ಸೃಷ್ಟಿಯನ್ನು ಛಂದೋಬದ್ಧ ಪದ್ಯಗಳ ಮುಖಾಂತರವೂ ಗದ್ಯದ ಮುಖಾಂತರವೂ ಸಾಧಿಸಲಾಗುತ್ತದೆ. ಈ ಕ್ರಿಯೆಯು ಜನಪದ ನಂಬಿಕೆಗಳು ಅಥವಾ ಮೂಢನಂಬಿಕೆಗಳು ಸಂಪ್ರದಾಯಗಳು ಮತ್ತು ಪ್ರದರ್ಶನಗಳು ನೃತ್ಯಗಳು ಮತ್ತು ನಾಟಕಗಳು. ಇದನ್ನೆಲ್ಲ ಒಳಗೊಳ್ಳುತ್ತದೆ ಜೊತೆಗೆ ಜಾನಪದವೆಂಬುದು ಒಂದು ಜನತೆಯನ್ನು ಕುರಿತು ವಿಜ್ಞಾನವಾಗಿರುವುದಷ್ಟೆ ಅಲ್ಲದೆ ಅದು ಪಾರಂಪರಿಕ ಜಾನಪದ ವಿಜ್ಞಾನವು ಜನಪದ ಕಾವ್ಯ ವಿಜ್ಞಾನ ಕ್ಷೇತ್ರವೂ ಆಗಿರುತ್ತದೆ.

ಮೇರಿಯಸ್ ಬಾರ್ಬೋ

ಕೂಸಿಗೆ ಜೋಗುಳ ಹಾಡಿದಾಗ ಒಂದು ಚುಟುಕವನ್ನು ಒಂದು ಒಗಟನ್ನು ಒಂದು ನಾಲಿಗೆ ತೊಡರನ್ನು ನುಡಿದಾಗ ಅಥವಾ ಪಾಠಶಾಲೆಯಲ್ಲಿ ಮಗ್ಗಿ ಹೇಳಿದಾಗ ಸಾಮತಿಗಳು ಗಾದೆಗಳು ಪ್ರಾಣಿ ಕಥೆಗಳು, ದಂತಕಥೆಗಳು ಮೊದಲಾದವನ್ನು ಮತ್ತೆ ಮತ್ತೆ ಹೇಳುವಾಗ

ಜನಪದರು ಅಭ್ಯಾಸ ಬಲದಿಂದಲೋ ಅಥವಾ ಸ್ವಯಂ ಸ್ಫೂರ್ತಿಯಿಂದಲೋ ಗೀತೆ ಮತ್ತು ನೃತ್ಯಗಳಲ್ಲಿ, ಪಾರಂಪರಿಕ ಆಟಪಾಟಗಳಲ್ಲಿ ತಮಾಷೆಗಳಲ್ಲಿ ಹಬ್ಬಹರಿದಿನಗಳಲ್ಲಿ ಅಥವಾ ವಾರ್ಷಿಕೋತ್ಸವ, ಜಾತ್ರಾದಿಗಳಲ್ಲಿ ತೊಡಗಿದಾಗ ತಾಯಿ ಮಗಳಿಗೆ ಹೊಲಿಯಲು ನೂಲಲು ನೇಯಲು ಕಸೂತಿ ಹಾಕಲು ದಿಂಬು ಹೊಲಿಯಲು ಸಂಪ್ರದಾಯಕವಾಗಿ ರೊಟ್ಟಿ ಸುಡಲು ಕಲಿಸುವಾಗ; ರೈತ ತನ್ನ ಪಿತ್ರಾರ್ಜಿತ ಸ್ವತ್ತಿನಲ್ಲಿ ಮಗನಿಗೆ ಪಾರಂಪರಿಕ ಬೇಸಾಯ ಪದ್ಧತಿಯನ್ನು ಕಲಿಸುವಾಗ, ನಕ್ಷತ್ರಗಳು, ಮಳೆಗಳು ಮತ್ತು ಮೋಡಗಳ ಬಗೆಗೆ ತಿಳಿಯ ಹೇಳುವಾಗ, ಮಳೆ, ಕುರ್ತೇಟಿನಂತೆ ಕಾರಾರುವಕ್ಕಾಗಿ ನಿರೀಕ್ಷಿಸುವಾಗ, ಬಿತ್ತುವ ಮತ್ತು ಕೊಯ್ಲಿನ ಹದ ಬೆದೆಗಲನ್ನು ಇತರರಿಗೆ ಬೋಧಿಸುವಾಗ

ಒಬ್ಬನು ಗ್ರಂಥಗಳ ಅಥವಾ ಶಾಲಾ ಮಾಸ್ತರರ ನೆರವಿಲ್ಲದೆಯೆ ಕಲಿತಂತಹ ತನ್ನ ಜ್ಞಾನ ಅನುಭವ, ವಿವೇಕ ಪರಿಣತೆ ಪೂರ್ವಾಭ್ಯಾಸಗಳು ಮತ್ತು ಸಂಪ್ರದಾಯಗಳೇ ಆದಿಯಾದ ಹಿಂದಿನ ತಲೆಮಾರಿನ ಸಂಗತಿಗಳನ್ನು ಸೂಕ್ತನಿದರ್ಶನ ಅಥವಾ ಮಾತಿನ ಮುಖಾಂತರ ಮುಂದಿನ ಪೀಳಿಗೆಗೆ ವರ್ಗಾಯಿಸುವಾಗ

ವಿಲಿಯಂ ಆರ್.ಬಾಸ್ಕಂ

ಜಾನಪದ ವಿಜ್ಞಾನ ಎಂಬ ಪದವನ್ನು ಮಾನವ ಶಾಸ್ತ್ರನ್ವಯವಾಗಿ ಪರಿಶೀಲಿಸಿದಾಗ ಪುರಾಣಗಳು, ಐತಿಹ್ಯಗಳು, ಜನಪದ ಕಥೆಗಳು, ಗಾದೆಗಳು ಒಗಟುಗಳು ಗೀತೆ ಹಾಗೂ ವಾಗ್ಮಾಧ್ಯಮದ ಮೂಲಕ ಅಭಿವ್ಯಕ್ತವಾಗುವಂತಹ ಇನ್ನೂ ಹಲವು ಬಗೆಯಾದ ಕಲಾಪ್ರಕಾರಗಳನ್ನು ಅದು ಒಳಗೊಳ್ಳುತ್ತದೆ. ಎಂತಲೇ ಜಾನಪದವೆಂಬುದು ವಾಕ್ಕಲೆ ಎಂದು ಸೂತ್ರೀಕರಿಸಿ ಬಿಡುವಂತೆ ಅದರ ಸ್ವರೂಪವಿದೆ.

ಜಾನಪದ ತಜ್ಞರೆಂದು ಪ್ರಸಿದ್ಧಿ ಹೊಂದಿದ ತಂಡದ ಸದಸ್ಯರು ಜನತೆಯ ಸಂಪ್ರದಾಯಗಳು, ನಂಬಿಕೆಗಳು, ಕಲೆಗಳು ಮತ್ತು ಕೈಗಾರಿಕೆಗಳು ಉಡುಪು ತೊಡವುಗಳು ಗೃಹಮಾದರಿಗಳು ಮತ್ತು ಅಡುಗೆಯ ಹಲವು ಬಗೆಯ ಭಕ್ಷ್ಯ ಭೋಜ್ಯಪಾನೀಯಗಳು ಮುಂತಾದವುಗಳ ಬಗೆಗೆ ತೀವ್ರಾಸಕ್ತರಾಗಿರುವ ಸಂಗತಿಯನ್ನು ಮಾನವಶಾಸ್ತ್ರಜ್ಞರು ಮನಗಂಡಿದ್ದಾರೆ.

ಜಾನಪದ ಕ್ಷೇತ್ರವನ್ನು ಅದರ ಸಮಸ್ಥ ರೂಪಗಳನೆಲ್ಲವನ್ನೂ ಒಳಗೊಂಡಂತೆ ಸಮಷ್ಟಿಯಾಗಿ ಸೂತ್ರೀಕರಿಸುವುದಾದರೆ, ಅದು ಅನಿವಾರ್ಯವೆಂಬಂತೆ ಗ್ರಂಥಸ್ಥ ಶಿಷ್ಟ ಸಾಹಿತ್ಯಕ್ಕೇ ಜೋತುಬೀಳುವಂತೆ ತೋರುತ್ತದೆ ಆದರೆ ಜಾನಪದ ವಿಜ್ಞಾನವನ್ನು ಅಕ್ಷರಸ್ಥ ಸಮಾಜದಲ್ಲಿಯಾದರೂ ಯಾರೂ

ಬರೆದಿಟ್ಟಿರುವುದಿಲ್ಲ ಹಾಗೆಯೇ ಜಾನಪದ ವಿಜ್ಞಾನವು ಗ್ರಂಥ ಪರಂಪರೆಯೇ ಇರದ ಸಮಾಜಗಳಲ್ಲಿ ಕೂಡ ಅಸ್ತಿತ್ವದಲ್ಲಿರಬಲ್ಲದು.

ಬಿ.ಎ.ಬೋಟ್ಕಿನ

ಒಂದು ಶುದ್ಧ ವಾಕ್ಸಂಸ್ಕೃತಿಯಲ್ಲಿ ಸಮಸ್ತವೂ ಜಾನಪದವೇ. ಆಧುನಿಕ ಸಾಮಾಜಿಕ ಸಂದರ್ಭದಲ್ಲಿಯಾದರೆ ಜಾನಪದ ಕ್ಷೇತ್ರವನ್ನು ಒಂದು ಸಾಂಸ್ಕೃತಿಯ ಇತರಾಂಶಗಳಿಂದ ಪ್ರತ್ಯೇಕಗೊಳಿಸುವ ಮುಖ್ಯಾಂಶ ಇದು ಪ್ರೌಢ ಪಾಂಡಿತ್ಯಾಂಶ ಮತ್ತು ಪಾರಂಪರಿಕ ಜನಪ್ರಿಯ ಕಲ್ಪಶಾಂಶ ಇವುಗಳಿಗಿರುವ ಅಂತರ.

ವಾಕ್ಪರಂಪರೆಯನ್ನು ಗ್ರಂಥಸ್ಥಗೊಳಿಸಿ ಮುದ್ರಿಸಿದಾಕ್ಷಣಕ್ಕೆ ಆದರ ಜಾನಪದೀಯ ಮೌಲ್ಯವನ್ನೆ ನಾಶಗೊಳಿಸಿದಂತೆ ಆಗಲಾರದು ಬದಲಾಗಿ ಅದು ತನ್ನ ಸ್ವರೂಪವನ್ನು ಹರಳು ಗಟ್ಟಿಸಿಕೊಳ್ಳುತ್ತ ಅಥವಾ ನಿಖರಗೊಳಿಸುತ್ತ ವಾಸ್ತವದಲ್ಲಿ ಸ್ಥಳೀಕರಲ್ಲದಿರುವ ಅನ್ಯ ಜಾನಪದ ಕ್ಷೇತ್ರದ ವಸ್ತುಗಳು ಬಹುಮಟ್ಟಿಗೆ ಸಾಮಾಜಿಕ ಮಾನವ ಕ್ಷೇತ್ರದ ವಸ್ತು ಸಂಗತಿಗಳೇ ಆಗಿರುತ್ತಿದ್ದು, ಅವನ್ನು ಜಗತ್ತಿನ "ಮೃಗೀಯ" ಮತ್ತು "ಅನಾಗರಿಕ" ಪ್ರದೇಶಗಳಿಂದ ಸಂಗ್ರಹಿಸುವಂತೆಯೇ "ನಾಗರಿಕ" ದೇಶಗಳ ಅಕ್ಷರಸ್ಥರಿಂದಲೂ ಗ್ರಾಮೀಣ ಪ್ರದೇಶಗಳಿಂದಲೂ ಕಲೆ ಹಾಕಲಾಗುತ್ತದೆ. ಅವನ್ನು ಈಗೆಲ್ಲ ಮಾನವಶಾಸ್ತ್ರೀಯ ಅಂಕಿ ಅಂಶಗಳನ್ನಾಧರಿಸಿ ಪಡೆದುಕೊಳ್ಳುವುದು ರೂಢಿ. ಅವನ್ನು ಮಾನವ ಶಾಸ್ತ್ರಜ್ಞರಂತೆಯೇ ಜಾನಪದ ತಜ್ಞರೂ ಸಂಗ್ರಹಿಸಿದ್ದಾರೆ.

ಖಚಿತವಾಗಿ ಹೇಳಬೇಕೆಂದರೆ, ಜಾನಪದ ವಿಜ್ಞಾನ ನಂಬಿಕೆಗಳು, ಸಂಪ್ರದಾಯಗಳು ಮೂಢ ನಂಬಿಕೆಗಳು, ನಾಣ್ಣುಡಿಗಳು ಹಾಡುಗಳು ಐತಿಹ್ಯಗಳು, ಪೂರಾಣಗಳು ಕಥೆಗಳು ಧಾರ್ಮಿಕಾಚರಣೆಗಳು, ಮಂತ್ರ ಮಾಟ ಮತ್ತು ಪುರಾಕೃತರ ಅನಕ್ಷರಸ್ಥರ ಹಾಗೂ ನಾಗರಿಕರ ನಡುವಣ "ಜನಸಾಮಾನ್ಯರ" ಇತರೆಲ್ಲ ಬಗೆಯ ನಂಬಿಕೆಗಳು ಮತ್ತು ಆಚರಣೆಗಳೆಲ್ಲವನ್ನೂ ಒಳಗೊಳ್ಳುತ್ತದೆ.

ಜಾನಪದ ಕ್ಷೇತ್ರದ ಬೇರುಗಳು ತುಂಬ ಆಳಕ್ಕೆ ಇಳಿದಿದ್ದು. ಆದರ ಚಿಹ್ನೆಗಳು ಉತ್ತುಂಗ ಸಂಸ್ಕೃತಿ ಶ್ರೇಣಿಯವರಲ್ಲಿಯೂ ಸದಾ ಕಾಣಿಸುತ್ತದೆ. ಜಾನಪದ ವಿಜ್ಞಾನ ಪುರಾಕೃತ ಮಾನವನ ಮನಸ್ಸಿನ ಸತ್ಯ ಹಾಗೂ ನೇರ ಅಭಿವ್ಯಕ್ತಿ ಎಂತಲೂ ಹೇಳಬಹುದು.

ಜಾನಪದ ವಿಜ್ಞಾನವೆಂಬುದು ಜಾನಪದೀಯ ವಸ್ತು ಸಂಗತಿಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ ವರ್ಗೀಕರಿಸಿ, ಅಧ್ಯಯನಕ್ಕೆ ಒಳಪಡಿಸುವಂತಹ ಯುಗಾಂತರಾವಧಿಯ ಜನತೆಯ ಜೀವನ ಮತ್ತು ಸಂಸ್ಕೃತಿಗಳನ್ನು ವ್ಯಾಖ್ಯಾನಿಸುವ ಉದ್ದೇಶವನುಳ್ಳ ಮಾನವ ಜ್ಞಾನ ಕ್ಷೇತ್ರದ ಒಂದು ಶಾಕೆ.

ಜಾರ್ಜ್ ಎಂ. ಫಾಸ್ಟರ್

'ಜಾನಪದ ವಿಜ್ಞಾನ ವಿಷಯಗಳು' ಎಂಬ ಅಭಿದಾನದಲ್ಲಿ ಪ್ರಕಟವಾಗಿರುವ ಸಂಗತಿಗಳ ಸಮೀಕ್ಷೆಯಿಂದ ಆ ಕ್ಷೇತ್ರ ಒಬ್ಬ ವ್ಯಕ್ತಿ ಆ ವಿಷಯದ ಬಗೆಗೆ ಕಲ್ಪಿಸಿಕೊಳ್ಳಬಹುದಾದಕ್ಕಿಂತ ತುಂಬ ವಿಸ್ತಾರವಾಗಿರುವುದುದರ ಅರಿವಾಗುತ್ತದೆ. ನಾನಾದರೆ ಒಂದು ಪರಿಮಿತ ಸೂತ್ರವನ್ನು ಅನುಮೋದಿಸುತ್ತೇನೆ. ಹಾಗೆಂದು ಒಂದು ಸಾಂಪ್ರದಾಯಿಕ ಹೇಳಿಕೆ ನೀಡಲು ಕೂಡ ನಾನು ಪ್ರಯತ್ನಿಸಲಾರೆ. ಇಂಥ ನನಗೆ "ಜಾನಪದ" ಎಂಬ ಪದವನ್ನು ಅನಕ್ಷರಸ್ಥರು ಅಕ್ಷರಸ್ಥರು ಎನ್ನದೆ, ಸಮಸ್ತ ಜನತೆಯ ಅಲಿಖಿತ ಪಾತ್ಸಾಹಿತ್ಯತ ಸಾಧನಗಳೆಲ್ಲವಕ್ಕೂ ಅನ್ವಯಿಸಿದರೆ ಅದು ತುಂಬ ಅರ್ಥಪೂರ್ಣವೆನ್ನಿಸುತ್ತದೆ.

ಥಿಯೋಡರ್ ಎಚ್. ಗ್ಯಾಸ್ಟರ್

ಉದ್ದೇಶಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ಆದರೂ ಸರಿ ಸಂರಕ್ಷಿಸಲಾದ ನಂಬಿಕೆ ಮತ್ತು ಆಚರಣೆಯಲ್ಲಿ ಸಂಪ್ರದಾಯ ಹಾಗೂ ರೂಢಿಗತ ಪದ್ಧತಿಗಳಲ್ಲಿ ಪುರಾಣಗಳಲ್ಲಿ ಐತಿಹ್ಯಗಳಲ್ಲಿ ಜನಪ್ರಿಯ ಕಥೆಗಳಲ್ಲಿ ಮತ್ತು ವೈಯಕ್ತಿಕ ಪರಿಣತೆಯ ಪ್ರಕಾಶನದ ಬದಲಿಗೆ ಒಂದು ಜನ ಸಮುದಾಯದ ಒಟ್ಟು ಕಲಾ ಪ್ರಕಾರಗಳಲ್ಲಿ ಮತ್ತು ಕೈಗಾರಿಕೆಯಲ್ಲಿ ಅಭಿವ್ಯಕ್ತಗೊಳ್ಳುವಂತಹ ಒಂದು ಇಡೀ ಜನಸಮೂಹದ ಸಂಸ್ಕೃತಿಯ ಅಂಗವಾಗಿಯೇ ಅದರ ಜಾನಪದ ಕ್ಷೇತ್ರವೂ ಅಸ್ತಿತ್ವದಲ್ಲಿರುತ್ತದೆ.

ಏಕೆಂದರೆ ಜಾನಪದ ಕ್ಷೇತ್ರ ಜನಪ್ರಿಯ ಪರಂಪರೆಗಳ ಉಗ್ರಾಣವಾಗಿರುವಂತೆಯೇ ಜನಪ್ರಿಯ 'ವಾತಾವರಣ'ದ ಅವಿಭಾಜ್ಯ ಅಂಶವೂ ಆಗಿರುವುದರಿಂದ ಅದು ಶಿಷ್ಟ ಸಾಹಿತ್ಯ ಕಲೆಗಳಿಗೆ ನಿರಂತರ ಸ್ಫೂರ್ತಿ ಮೂಲವೂ ಆಕರ ಸಂಪದವೂ ಆಗಿರುತ್ತಿದೆ. ಆದರೂ ಜಾನಪದ ಕ್ಷೇತ್ರ ಮೂಲಭೂತವಾಗಿ ಜನತೆಯದೇ ಆದ, ಜನತೆಯಿಂದಲೇ ಆದ ಹಾಗೂ ಜನತೆಗಾಗಿಯೇ ಸೃಷ್ಟಿಯಾದ ಅಂಶದಲ್ಲಿ ಮಾತ್ರ ಇದು ಶಿಷ್ಟ ಪ್ರಕಾರದಿಂದ ವಿಭಿನ್ನವಾಗುತ್ತದೆ.

ಎಂ.ಹಾರ್ಮನ್

ಜಾನಪದೀಯತೆಯು ಯಾವುದೇ ವಿಷಯದಲ್ಲಿ ಯಾವುದೇ ಸಮುದಾಯದಲ್ಲಿ ಅಥವಾ ಯಾವುದೇ ವ್ಯಕ್ತಿಯಲ್ಲಿ ಯಾವುದೇ ಸಮಯದಲ್ಲಿ ಯಾವುದೇ ಸ್ಥಳದಲ್ಲಿ ಕಾಣಿಸಿಕೊಳ್ಳಬಲ್ಲದು ಎಂದಂತಾಯಿತು. ಹಾಗೆಯೇ ತಾನು ಹುಟ್ಟಿ ಬೆಳೆದ ಪರಿಸ್ಥಿತಿಗೆ ತಕ್ಕಂತೆ ಒಬ್ಬ ವ್ಯಕ್ತಿ ಅನಿವಾರ್ಯವಾಗಿ ಹೊಂದಿಸಿಕೊಂಡು ರೂಢಿಸಿಕೊಳ್ಳುವಂತಹ ಅಂಶಗಳಾದ ಸರ್ವಸಾಮಾನ್ಯ ಜ್ಞಾನ ಕೌಶಲ್ಯಗಳು ಕಲ್ಪನೆಗಳು ಉತ್ಪನ್ನಗಳು ಇವೇ ಮೊದಲಾದುವನ್ನು ಒಳಗೊಳ್ಳುವಂಥದೂ ಜಾನಪದಾಂಶವೇ ಎಂದಂತಾಯಿತು.

ಒಂದು ಜನಸಮುದಾಯವು ಪಾರಂಪರಿಕ ನಿರಂತರತೆಯನ್ನುಳ್ಳ ಘಟಕವಾಗಿರುವ ಕಡೆಯಲ್ಲೆಲ್ಲ ಜಾನಪದಾಂಶ ತುಂಬ ನಿಚ್ಚಳವಾಗಿ ತನಿಯಾಗಿ ಕಂಡುಬರುತ್ತದೆ. ಅಂತಹ ಒಂದು ಜನಸಮುದಾಯದ ಐಕ್ಯವನ್ನು ಭೇದಿಸಿ ಛಿದ್ರ ಮಾಡಬಲ್ಲಂತಹ ಸಾರಿಗೆ, ಸಂಪರ್ಕ ಮಾಧ್ಯಮಗಳು ಜ್ಞಾನದ ವಿವಿಧ ಶಾಖೆಗಳು ವೃತ್ತಿಪರಿಣತಿಗಳು ಇವೇ ಮೊದಲಾದವು ಆಯಾ ಜನತೆಯ ಜಾನಪದೀಯ ಜಾಯಮಾನವನ್ನು ಅಸ್ತವ್ಯಸ್ತಗೊಳಿಸುವ ಸಾಧನಗಳಾಗುತ್ತವೆ ಎಂಬುದು ದಿಟ.

ಆದರೂ ನಾವು ಇವೆಲ್ಲ ಜಾನಪದೀಯತೆಗೆ ಸಂಪೂರ್ಣ ಗಂಡಾಂತರಕಾರಕಗಳೆಂದೇ ಭಾವಿಸ ಬೇಕಾಗಿಲ್ಲ. ಏಕೆಂಧರೆ ಅವುಗಳ ಪ್ರಭಾವದಿಂದಲೂ ತಪ್ಪಿಸಿಕೊಂಡು ಜಾನಪದ ಬದುಕಬಲ್ಲದಾಗಿರುತ್ತದೆ. ಹಾಗೆಯೇ ಜನಸಮುದಾಯಗಳನ್ನು ಅವುಗಳ ಪಾರಂಪರಿಕ ಜನಾಂಗಿಕ ಅಥವಾ ಭೌಗೋಳಿಕ ಪರಿಮಿತಿಯೊಳಗಡೆಯೇ ಪರಿಗಣಿಸುವಂತೆಯೂ ಇರುವುದಿಲ್ಲ. ಏಕೆಂದರೆ ಅವನ್ನು ಅವುಗಳ ಜನರ ವೃತ್ತಿ ವಯಸ್ಸು ಲಿಂಗ ಆರ್ಥಿಕತೆ, ವಿದ್ಯಾಭ್ಯಾಸ ಆಸಕ್ತಿ ಮುಂತಾದವುಗಳ ಹಿನ್ನಲೆಯಿಂದ ಕೂಡ ಅಧ್ಯಯನಿಸ ಬಹುದು.

ಜೊತೆಗೆ ಒಂದು ಸಂಕೀರ್ಣ ಸಮಾಜದಲ್ಲಿ ಹೊಸ ಹೊಸ ಗುಂಪುಗಳು ರೂಪುಗೊಳ್ಳುತ್ತಲೇ ಇರುತ್ತವೆ. ಅಂತಹ ಗುಂಪಿನ ಗುಣ ಲಕ್ಷಣಗಳನ್ನುಳ್ಳದಾದ ಜಾನಪದ ಕ್ಷೇತ್ರದಲ್ಲಿ, ಸಮಾಜದಲ್ಲಿ ಒಬ್ಬ ವ್ಯಕ್ತಿ ತನ್ನ ಸಹವಾಸಿಗಳ ಸರ್ವಸಾಮಾನ್ಯ ಸಾರ್ವತ್ರಿಕ ಸಂಗತಿಗಳ ಸಹವರ್ತಿಯೂ ಪಾಲುಗಾರನೂ ಆಗಿರುತ್ತಾನೆ. ಕಣ್ಣುಗಳು ಕೈಗಳು ಮತ್ತು ಭಾಷೆ ಮುಂತಾದವು ಸರ್ವರಿಗು ಇರುವಂತೆಯೇ ಆ ಸಮುದಾಯದ ಚಟುವಟಿಕೆಗಳು ಜನರ ವೈಯಕ್ತಿಕತೆಗೆ ಪ್ರತಿಕೂಲವಾಗಿರುವುದಿಲ್ಲ. ಬದಲಾಗಿ ಅವನ ಸಾಮೂಹಿಕ ಬದುಕಿಗೆ ಸಹಕಾರಿಯಾಗಿಯೇ ಒದಗುತ್ತದೆ.

ಹೀಗೆ ಸಮುದಾಯದಲ್ಲಿ ಆಯಾ ವ್ಯಕ್ತಿಯನ್ನು ಆಯಾ ಗುಂಪಿನೊಂದಿಗೆ ಅವಿನಾಬಾಂಧವ್ಯ ಹೊಂದುವಂತೆ ಬೆಸೆಯತಕ್ಕ ಅಂಶವೇ ಜಾನಪದೀಯತೆ, ಎಂಬುದಾಗಿ ಸೂತ್ರೀಕರಿಸಲು ಸಾಧ್ಯ ಎನಿಸುತ್ತದೆ. ಜನರ ನಡುವೆಯೂ ಅದು ಜೀವಾಂತವಾಗಿದ್ದುಕೊಂಡು ವ್ಯಾಪಿಸಲು ಸಹಾಯಕವಾಗುವುದುಂಟು ತಮ್ಮ ವರ್ಣಮಯವೂ ವಿಶಿಷ್ಟವೂ ಆದ ಗುಣಲಕ್ಷಣಗಳಿಂದ ಜನಪದಗೀತೆ ಮತ್ತು ಜನಪದ ಕಥಾ ಪ್ರಕಾರಗಳು ಜಾನಪದ ವಿಜ್ಞಾನದ ಹೃದಯ ಸ್ಥಾನದಲ್ಲಿರುವಂತೆ ಪ್ರಮುಖವಾಗಿ ತೋರುತ್ತವೆಂಬುದು ಸತ್ಯ. ಆದರೆ ಆಕ್ಷೇತ್ರ ಕೇವಲ ಅವಕ್ಕಷ್ಟೇ ಸೀಮಿತಗೊಂಡಂಥಲ್ಲ. ಬದಲಾಗಿ ಒಬ್ಬ ವ್ಯಕ್ತಿಯ ಜೀವನದಲ್ಲಿ ಸಾಮಾಜಿಕ ಒಡನಾಟದ ಫಲವಾಗಿ ಭಾವನಾತ್ಮಕ ತುಮುಲದ ಘಟನೆಗಳಾಗಿ ಒದಗತಕ್ಕಂತಹ

ಜನನ ಅಕ್ಷರಾಭ್ಯಾಸ ಯೌವನಾವಸ್ಥೆ ವಿವಾಹ, ಅಂತ್ಯಸಂಸ್ಕಾರವೇ ಆದಿಯಾದ ಮುಖ್ಯ ಸಂದರ್ಭಗಳಲ್ಲಿ ಜಾನಪದದ ಅಂತರಾಳ ಅಭಿವ್ಯಕ್ತವಾಗುವಂತೆ ಜನಪದ ಗೀತೆ ಅಥವಾ ಕಥೆಗಳಲ್ಲಿ ಅಭಿವ್ಯಕ್ತವಾಗದು.

ಮೂರ್ತ ವಾರೆನ್ ಬೆಕ್ವಿತ್ ಅವರು ೧೯೩೧ರ ತಮ್ಮ 'ಅಮೆರಿಕೆಯ ಜಾನಪದ ಎಂಬ ಗ್ರಂಥದ ೫ನೆಯ ಪುಟದಲ್ಲಿ ಸೂಚಿಸಿರುವ ಹಾಗೆ ಅಂತಹ ಹಲವಾರು ಸಂಗತಿಗಳನ್ನು ವಿದ್ಯಾವಂತರೂ ಶಿಷ್ಟರೂ ಸಂಕೀರ್ಣ ಗುಣಸ್ವಭಾವದವರೂ ಆದಜನ ಅನಕ್ಷರಸ್ಥರೂ ಮುಗ್ಧರೂ ಸರ್ವಸಾಮಾನ್ಯರೂ ಆದಂತಹ ಜಾನಪದರೊಂದಿಗೆ ಹಂಚಿಕೊಳ್ಳುವುದುಂಟು.

ಜನಪದ ಸಂಸ್ಕೃತಿ ಅಥವಾ ಜನಪದ ಕಲೆ ಎಂಬ ಈ ಎರಡೂ ಸ್ತರಗಳಲ್ಲಿಯೂ ಜಾನಪದ ವಿಜ್ಞಾನ ತನ್ನ ಐಕ್ಯ ಮತ್ತು ಬದುಕಿನ ಚೈತನ್ಯಗಳನ್ನು ಸಾಮೂಹಿಕ ಅನುಭವದಲ್ಲಿನ ಸಹಭಾಗಿತ್ವ ಮತ್ತು ವೈಯಕ್ತಿಕತೆಯನ್ನು ಸಾಮಾನ್ಯ ಪ್ರಜ್ಞೆಯೊಂದಿಗೆ ಸಂಲಗ್ನಗೊಳಿಸುವಿಕೆಯ ಮುಖಾಂತರ ಗಳಿಸಿಕೊಳ್ಳುತ್ತದೆ.

ಓರೇಲಿಯೋ ಎಂ. ಎಸ್ಪಿನೋಜ

ಜಾನಪದ ವಿಜ್ಞಾನ ಅಥವಾ ಜನಪ್ರಿಯ ಜ್ಞಾನ ಎಂಬುದು ಮಾನವ ಕೋಟಿಯು ಯುಗಾಂತರಗಳಿಂದ ಅನುಭವಿಸಿದ, ಕಲಿತ ಮತ್ತು ಆಚರಣೆಗೆ ತಂದಂತಹ ಸಾಮಾನ್ಯವಾಗಿ ಜನಪ್ರಿಯ ಹಾಗೂ ಪಾರಂಪರಿಕ ಜ್ಞಾನವೆಂದು ಪರಿಗಣಿತವಾಗುವ ಜ್ಞಾನಭಂಡಾರ. ಇದು ವೈಜ್ಞಾನಿಕ ಭಂಡಾರ ಎನ್ನಲಾಗುವ ಜ್ಞಾನ ಕ್ಷೇತ ಸದಾ ನಿರ್ದಿಷ್ಟವಾಗಿರದು.

ಎಂ.ಜೆ. ಹಸ್ಕೂರ್ವಿಟ್ಸ್

ಇವೊತ್ತಿನ ಜೀವಂತ ಪ್ರಾಚೀನ "ಆದಿಮ" ಜನರ ಸಂಪ್ರದಾಯಗಳನ್ನು ಪಾಶ್ಚಾತ್ಯ ಐರೋಪ್ಯ ರಾಷ್ಟ್ರಗಳ ಐತಿಹಾಸಿಕ ಮೂಲ ಪುರುಷರ ಸಂಪ್ರದಾಯಗಳೊಂದಿಗೆ ಸಂಮೀಕರಿಸುವುದು ತರವಲ್ಲ. ಇದನ್ನು ಇನ್ನಷ್ಟು ವ್ಯವಸ್ಥಿತವಾಗಿ ಹೇಳುವುದಾದರೆ "ಆದಿಮಾನವ" ಅವನು ಎಲ್ಲಾದರೂ ಇದ್ದರಲಿ ಆತ ಎಂದಿಗೂ ಸಮಕಾಲೀನ ಪಿತೃ ಆಗಲಾರ.

ಈ ಅಂಶಗಳನ್ನು ಒಪ್ಪಿದ್ದರ ಪರಿಣಾಮವಾಗಿಯೇ ರೈತಾಪಿ ಜನರ ಸಾಂಸ್ಕೃತಿಗಳ ಇತರ ಪ್ರಾಚೀನ ಸಂಪ್ರದಾಯಗಳ ಮತ್ತು ಸೃಜನಾತ್ಮಕ ಕಲೆಗಳ ಅಧ್ಯಯನದಲ್ಲಿ ಪ್ರಗತಿಯಾಯಿತು. ಈ ಬಗೆಯ ಅಧ್ಯಯನ ಜಾನಪದಾಧ್ಯಯನಕ್ಕಿಂತ ವಿಭಿನ್ನವಾದ ಒಂದು ಶಿಸ್ತಾಗಿ ರೂಪುಗೊಂಡಿತು.

ಈ ನವಾಧ್ಯಯನ ಶಿಸ್ತು ತನ್ನ ಕ್ಷೇತ್ರ ಹಾಗೂ ಸಂಶೋಧನಾ ಮಾರ್ಗಗಳನ್ನು ವಿಮರ್ಶಾತ್ಮಕವಾಗಿ ಖಚಿತವಾಗಿ ಸೂತ್ರೀಕರಿಸುವುದರ ಮುಖಾಂತರ ಜಾನಪದ ತಜ್ಞರನ್ನು ಈ ಕ್ಷೇತ್ರದಿಂದ ಬಿಡುಗಡೆ ಮಾಡಿ,

ಜಗತ್ತಿನ ಎಲ್ಲೆಡೆಯ ಜನತೆಯಲ್ಲಿಯೂ ಸಾಮಾನ್ಯವಾಗಿ ಕಾಣಬರುವಂತಹ ಒಂದು ಗ್ರಂಥಸ್ಥ ಭಾಷೆಯನ್ನುಳ್ಳ ಅಥವಾ ಅದಿರದ ಜನಸಮುದಾಯಗಳಲ್ಲಿ ಇರುವಂತಹ ಜನಪ್ರಿಯ ಸಾಹಿತ್ಯ ಪ್ರಕಾರಗಳನ್ನು ಈ ಜಾನಪದ ತಜ್ಞರು ಅಧ್ಯಯನ ಮಾಡುವಂತೆ ಪ್ರೇರೇಪಿಸಿತು.

ಮೇಲಾಗಿ ಜನಪದ ಕಥೆಗಳ ಮೂಲ ಸ್ವರೂಪ ಮತ್ತು ಅವುಗಳ ಮೂಲ ನೆಲೆಯಾದ ಜನ್ಮ ಸ್ಥಳಗಳನ್ನು ಪತ್ತೆ ಹಚ್ಚುವುದಕ್ಕೆ ಮಾತ್ರವಲ್ಲದೆ ಈ ಜನಪ್ರಿಯ ಪ್ರಕಾರಗಳು ಸೂಚಿಸುವಂತಹ ಅವುಗಳ ನಂಬಿಕಾರ್ಯ ಗುಣ ಕಲ್ಪನೆಗಳು ಮತ್ತು ಸಮಸ್ಯೆಗಳು ಗುರುತಿಸುವ ಉದ್ದೇಶದಿಂದ ಕೂಡ ಈ ವಿಶ್ಲೇಷಣೆಯನ್ನು ಮುಂದುವರಿಸಬೇಕಾಗಿದೆ.

ಜಾರ್ಜ್ ಹರ್ಸೋಗ್

ತುಂಬ ವಿಶಾಲಾರ್ಥವನ್ನುಳ್ಳ "ಜನಪದ ಜೀವನ" ಎಂಬ ಪದ ಯುರೋಪು ಮತ್ತು ಲ್ಯಾಟಿನ್ ಅಮೆರಿಕಾ ಖಂಡಗಳಲ್ಲಿ ತುಂಬಾ ಬಳಕೆಯಲ್ಲಿದೆ. ಅದು ಒಂದು 'ಜನಪದ' ಸಮುದಾಯದ ಸಮಸ್ತ ಸಂಸ್ಕೃತಿಯನ್ನೂ ಒಳಗೊಳ್ಳುತ್ತದೆ. ಅಂತಹ ಸಾಮಾನ್ಯವಾಗಿ ಗ್ರಾಮಸ್ಥರ ಒಂದು ಗುಂಪಾಗಿದ್ದು, ಅದರ ಜೀವನ ರೀತಿ ನೀತಿಗಳು ಆ ಸಮುದಾಯದ ಮಿಕ್ಕರ್ಧ ಭಾಗವಾದ ನಗರ ಜೀವನ ಕ್ರಮಗಳಿಗಿಂತ ವಿಭಿನ್ನವಾಗಿರುತ್ತವೆ.

'ಜನಪದ'ದ ಕಲ್ಪನೆಯನ್ನಾಧರಿಸಿ ರೂಪುಗೊಂಡಂತಹ ಈ ಬಗೆಯ ವಿಶಾಲಾರ್ಥವನ್ನು 'ಆದಿಮ' ಅಥವಾ ಅಕ್ಷರತಾಪೂರ್ವಯುಗದ ಜನಸಮುದಾಯಗಳ ಅಧ್ಯಯನ ಸಂದರ್ಭಗಳಲ್ಲಿ ಅನ್ವಯಿಸುವಂತಿಲ್ಲ. ಈ ಅಧ್ಯಯನಗಳ ವಿಷಯದಲ್ಲಿ ಸಮಾಜ ವಿಜ್ಞಾನ ಮತ್ತು ಭಾಷಾ ವಿಜ್ಞಾನಗಳನ್ನು ಕುರಿತಂತೆ ಮಾನವ ಶಾಸ್ತ್ರಜ್ಞರವು ಸ್ಥಳೀಯ ಸಾಂಸ್ಕೃತಿಗಳ ಸಮಗ್ರ ಅಧ್ಯಯನ ಸಂದರ್ಭದಲ್ಲಿ ಅತ್ಯನಿವಾರ್ಯವೆನಿಸುತ್ತದೆ. ಹಾಗೆಯೇ ವಾಗ್ಜಾನಪದದ ಕ್ರಿಯಾತ್ಮಕತೆ ಮತ್ತು ಅದರ ಇತಿಹಾಸ ಕುರಿತ ಫಲಪ್ರದ ಮೌಲ್ಯ ಮಾಪನ ಕ್ರಿಯೆಯಲ್ಲಿಯೂ ಅದು ಸಹಾಯಕವಾಗುತ್ತದೆ.

ಈ ಬಗೆಯ ವೈವಿಧ್ಯತೆಯಲ್ಲಿ ಅಪೇಕ್ಷಣೀಯವಾಗುವ ಆಸಕ್ತಿ ಮತ್ತು ಶ್ರಮದ ವಿಭಜನಾ ವಿಧಾನ, ಒಬ್ಬಾತ ಮಾನವ ಶಾಸ್ತ್ರಜ್ಞನಿರಲಿ ಗ್ರಾಮೀಣ ಸಮಾಜ ಶಾಸ್ತ್ರಜ್ಞನಿರಲಿ ಅಥವಾ ಸಾಮಾಜಿಕ ಮನಶಾಸ್ತ್ರಜ್ಞನೇ ಆಗಿದ್ದಿರಲಿ, ಆಸಂಸ್ಕೃತಿ ಮತ್ತು ಸಮಾಜಾಧ್ಯಯನಕಾರ ವಿವಿಧ ಅಭಿರುಚಿಗಳನ್ನು ಮತ್ತು ವಿಭಿನ್ನ ಅಧ್ಯಯನ ಮಾರ್ಗಗಳನ್ನು ಅನುಸರಿಸುವಂತೆ ಪ್ರೇರೇಪಿಸಿದೆ. ಹಾಗೆಯೇ ಈ ಕ್ರಮ ಜಾನಪದ ತಜ್ಞನನ್ನು ಸಾಹಿತಿಯನ್ನಾಗಿಯೂ ರೂಪಿಸಿದೆ.

ಹೀಗೆ ಪರಸ್ಪರರ ಅಧ್ಯಯನ ಕ್ರಮಗಳು ದೃಷ್ಟಿ ಧೋರಣೆಗಳು. ಜ್ಞಾನ ಮತ್ತು ಒಳನೋಟಗಳ ವಿಷಯದಲ್ಲಿ ಆ ಪರಿಣತರು ಹೆಚ್ಚು ಹೆಚ್ಚಾಗಿ ಅರಿತು ನುರಿತಂತೆಲ್ಲ. ಹಾಗೆ ನುರಿತಾಗ ಮಾತ್ರವೇ, ಪರಸ್ಪರವಾಗಿ ಸಂಪೂರ್ಣ ಲಾಭ ಪಡೆಯಬಲ್ಲರು ಎಂಬುದರಲ್ಲಿ ಅನುಮಾನವಿಲ್ಲ.

ಆರ್.ಡಿ.ಜೇಮ್ಸ್‌ನ್

ಜಾನಪದ ಕ್ಷೇತ್ರದ ಅಂಗೋಪಾಂಗಗಳು ಮಾನವ ಸ್ವಭಾವದ ಅತಿ ನಿಕಟವಾದ ಹಾಗೂ ಅತಿ ಪ್ರಬಲವಾದ ಸಾಕ್ಷ್ಯಧಾರಗಳಾಗಿವೆ. ವಿಶೇಷವಾಗಿ ಮಾನವ ತನ್ನ ಭೀತಿ ಮತ್ತು ಆಶೋತ್ತರಗಳನ್ನು ಗೆಲ್ಲಬೇಕಾದ ಸಂದರ್ಭಗಳಲ್ಲಿ ಹಾಗೂ ಮಾಯಾಮೃಗದಂತೆ ಸದಾ ನುಣುಚಿಕೊಳ್ಳತಕ್ಕ ಧೋರಣೆಯು ತನ್ನ ಭದ್ರ ಆತ್ಮರಕ್ಷಣೆಯ ಶೋಧದಲ್ಲಿ ತೊಡಗುವ ಕಾಲದಲ್ಲಿ ಅವು ನೆರವಾಗುತ್ತವೆ.

ಜಾನಪದಾಧ್ಯಯನವನ್ನೇ ತಮ್ಮ ಮುಖ್ಯ ಗುರಿಯಾಗಿರಿಸಿಕೊಂಡು ಜನಾಪದ ತಜ್ಞರು ಕೂಡ ಹಲವು ಬಾರಿ ಅಧ್ಯಯನವನ್ನು ಬದಿಗಿರಿಸಿ ಜಾನಪದದ ಸೃಷ್ಟಿಕಾರ್ಯದಲ್ಲಿ ತೊಡಗಿ ಬಿಡುವುದೂ ಉಂಟು.

ಜಾನಪದ ವಿಜ್ಞಾನದ ಅಧ್ಯಯನ ಕ್ರಮಗಳು ಹೀಗಿವೆ.

- ಜಾನಪದೀಯ ವಸ್ತು ವಿಷಯಗಳನ್ನು ಅವುಗಳ ಮೂಲ ಸ್ವರೂಪದಲ್ಲಿಯೇ ಸಂಗ್ರಹಿಸುವುದು. ಹೀಗೆ ಮಾಡುವಾಗ ಸಾಧ್ಯವಾದಷ್ಟರ ಮಟ್ಟಿಗೂ ಜಾನಪದ ತಜ್ಞನು ತನ್ನ 'ಸ್ವಂತ ಪುರಾಣ' ಸೃಷ್ಟಿ ಸಾಮರ್ಥ್ಯ ಕೌಶಲಗಳ ಮೂಲಭೂತ ಪ್ರವೃತ್ತಿಯನ್ನೂ ಅತಿಕ್ರಮಣದ ಆವೇಶವನ್ನು ಅದುಮಿಟ್ಟುಕೊಂಡು, ವೈಜ್ಞಾನಿಕವಾಗಿ ವ್ಯವಹರಿಸುವುದು.
- ವಿಭಿನ್ನ ಜನವರ್ಗಗಳಲ್ಲಿ ರೂಢಿಯಲ್ಲಿರುವ ಜಾನಪದೀಯವಸ್ತು, ವಿಷಯಗಳಲ್ಲಿ ಕಾಣಬರುವ ಸಾಮ್ಯ ಹಾಗೂ ವೈಷಮ್ಯಾಂಶಗಳನ್ನು ಯಾವ ಬಗೆಯವೆಂದು ನಿರ್ಧರಿಸುವ ಸಲುವಾಗಿ ಸಂಗ್ರಹಿತ ಮಾಹಿತಿಯನ್ನು ತೌಲನಿಕ ವಿವೇಚನೆಗೆ ಒಳಪಡಿಸುವುದು;
- ಆಯಾ ಹಿಲೆಯಲ್ಲಿ ಸೂಚಿತವಾದ ನಂಬಿಕೆಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸುವುದು.
- ಆ ವಸ್ತು, ಸಂಗತಿಗಳ ಸೃಷ್ಟಿಗೆ ಮೂಲಕಾರಣಗಳಾಗಿರುವ ಸಾಮಾಜಿಕ ಹಾಗೂ ಮನೋವೈಜ್ಞಾನಿಕ ಪ್ರೇರಣೆಗಳನ್ನು ಪರೀಕ್ಷೆಗೆ ಗುರಿಪಡಿಸುವುದು, ಮತ್ತು
- ಜಾನಪದ ಕ್ಷೇತ್ರವು ವ್ಯಕ್ತಿಗಳಿಗೆ ಮತ್ತು ಸಾಮಾಜಿಕ ಸಮುದಾಯಗಳಿಗೆ ಕ್ರಿಯಾಶೀಲವಾಗಿ ಹೇಗೆ ಸಹಕಾರಿಯಾಗುತ್ತದೆ ಎಂಬುದನ್ನು ಗುರುತಿಸುವುದು.

ಗೆಟ್ರೋರ್ಡ್ ಪಿ.ಕುರತ್

ಜಾನಪದ ಕ್ಷೇತ್ರ ಮೂಲಭೂತವಾಗಿ ಒಂದು ಸಾಮುದಾಯಕ ಸರಕಾಗಿದ್ದು, ಅದನ್ನು ಪರಂಪರೆಯಾಗಿ ಮುಂದುವರಿಸಿಕೊಂಡು ಬರಲಾಗಿರುತ್ತದೆ. ಅಂಥದನ್ನು ನುರಿತ ಪರವೀಕ್ಷಕರು ಬರೆಹಕ್ಕಿಳಿಸಿ ದಾಖಲೆಗೊಳಿಸುತ್ತಾರೆ.

ಜನಪದ ಕಥೆ ಪೌರಾಣಿಕ ಕಥೆಗಿಂತಲೂ ಭಿನ್ನವಾದುದು ಎಂಬ ಅಂಶವನ್ನು ಅದರ ಶಿಥಿಲಗೊಂಡ ಧಾರ್ಮಿಕತೆಯ ಹಿನ್ನಲೆಯಿಂದ ನಿರ್ಣಯಿಸಲಾಗುತ್ತದೆ ಅದರ ಪ್ರಭಾವ ಪ್ರಮಾಣಿಕತೆಗಳು ಎಷ್ಟೇ ಅಸ್ಪಷ್ಟವಾಗಿದ್ದರೂ ಕೂಡ ಒಂದು ಜನಪದ ಕಥೆಯನ್ನು ಕಿನ್ನರ ಕಥೆಯಿಂದ ಪ್ರತ್ಯೇಕಿಸಿ ನೋಡುವುದು ಸಾಧ್ಯ. ಇದೇ ರೀತಿಯಲ್ಲಿ ಜನಪದ ನೃತ್ಯ ಮತ್ತು ಜನಪದ ಸಂಗೀತಗಳನ್ನು ಅವುಗಳ ಸಧ್ಯದ ಕ್ರಿಯಾಹೀನತೆಯ ಆಧಾರದಿಂದ ಅವನ್ನು ತತ್ಸಂಬಂಧಿತ ಧಾರ್ಮಿಕ ವಿಧಿ ವಿಧಾನಗಳಿಂದ ಬೇರ್ಪಡಿಸಲಾಗಿದೆ ಏಕೆಂದರೆ ಅವುಗಳ ಅಜ್ಞಾತ ಹುಟ್ಟು, ಪರಂಪರೆ ಮತ್ತು ಜಾನಪದೀಯ ಶೈಲಿಯಲ್ಲಿ ಅವು ಮೂಲತಃ ವ್ಯಕ್ತಿಗತವಾಗಿ ರೂಪುಗೊಂಡ ಬಗೆ ಹಾಗೂ ಅವುಗಳ ಪುನರುದ್ಧಾರ ಕಾರ್ಯ ಇವುಗಳನ್ನು ಆಧರಿಸಿ ಅದನ್ನು ಪ್ರತ್ಯೇಕಿಸಲಾಗುತ್ತದೆ.

ಮ್ಯಾಕ್ ಎಡ್ವರ್ಡ್ ಲೀಚ್

ಜಾನಪದ ವಿಷಯ ಕುರಿತ ಫೋಕಲೋರ್ ಎಂಬ ಶಬ್ದವು ಸಂಪ್ರದಾಯಗಳು, ನಂಬಿಕೆಗಳು ಪರಂಪರೆಗಳು ಕಥೆಗಳು ಮಾಂತ್ರಿಕ ಆಚರಣೆಗಳು, ಗಾದೆಗಳು ಗೀತೆಗಳು ಮುಂತಾದುವನ್ನೆಲ್ಲ ಗುರುತಿಸುವ ಸಲುವಾಗಿ ಬಳಸಲಾಗಿರುವ ಒಂದು ಸಾಮಾನ್ಯಾರ್ಥಕ ಶಬ್ದ.

ಒಟ್ಟಿನ ಮೇಲೆ, ಪರಸ್ಪರ ಒಳಬಾಂಧವ್ಯ ಹೊಂದಿದಂತಹ ಸ್ಥಳೀಯ ಸರಳ ಅಮಾಯಕ ಜನರ ಪರಸ್ಪರ ಭೌತಿಕ ಹಾಗೂ ಭಾವನಾತ್ಮಕ ಬಂಧನಗಳಿಂದ ಒಗ್ಗೂಡಿಸಲ್ಪಟ್ಟ ಜನತೆಯ ತಮ್ಮ ಪ್ರತಿಯೊಂದು ಅಭಿವ್ಯಕ್ತಿಯೂ ಬಣ್ಣಗೊಂಡು ಅದಕ್ಕೆ ಏಕತೆ ಮತ್ತು ವೈಯಕ್ತಿಕ ಪ್ರತಿಷ್ಠೆಯನ್ನು ತಂದುಕೊಡಬಲ್ಲಂತಹ ಧೋರಣೆಯುನ್ನುಳ್ಳ ಜನತೆಯ ಬದುಕಿನ ಸಮಸ್ತಾಂಶವೂ ಜಾನಪದ ವಿಷಯವೆನ್ನಿಸುತ್ತದೆ.

ಮೂಲತಃ ಪ್ರಿಯಶಃ ವ್ಯಕ್ತಿಗತ ಸಾಧನೆಗಳಾಗಿರುವಂತಹ ಜಾನಪದೀಯವಾದ ಸಮಸ್ತ ಅಂಶಗಳನ್ನು ಇತರ ಜನ ಸಾಮಾನ್ಯರೂ ಸ್ವೀಕರಿಸಿ, ಪುನರ್ ಸೃಷ್ಟಿಕ್ರಿಯೆಗೆ ಗುರಿಮಾಡಿದ್ದರ ಫಲವಾಗಿ, ಅವು

ಕ್ರಮೇಣವಾದ ನಿರಂತರ ವ್ಯತ್ಯಯಗಳು ಮತ್ತು ಪುನರುಕ್ತಿಯ ಕಾರಣದಿಂದ ಒಂದು ಇಡೀ ಸಮುದಾಯದ ಸ್ವತ್ತಾಗಿಬಿಡುತ್ತವೆ.

ಕ್ಯಾಥರಿನ್ ಲುಮಾಲ

ಇವೊತ್ತು ಪ್ರಚಲಿತವಿರುವ ಪೋಕ್ ಲೋರ್ ಎಂಬ ಪದ ಸಂದಿಗ್ಧತೆಯಿಂದ ಕೂಡಿದೆ. ಏಕೆಂದರೆ ಆ ಶಬ್ದದ ಬಳಕೆಗಾರ ಅದನ್ನು ಪುರಾತನರ ಸಮಸ್ತ ಅಲಿಖಿತ ಕಥನಗಳೆಲ್ಲವಕ್ಕೂ ಅನ್ವಯಿಸಿದಂತೆ ಬಳಸಿ ಆ ಮೂಲಕ ಪುರಾತನರ ಸಮಸ್ತ ಆಲಿಖಿತ ಕಥನಗಳೆಲ್ಲವಕ್ಕೂ ಅನ್ವಯಿಸಿದಂತೆ ಬಳಸಿ ಆ ಮೂಲಕ ಪುರಾತನರ ಹಾಗೂ ಆಧುನಿಕರ ಸಾಹಿತ್ಯದ ನಡುವೆ ಒಂದು ಗೆರೆ ಕೊಯ್ದು ಬೇರ್ಪಡಿಸಿ ಬಳಸುತ್ತಾನೋ ಅಥವಾ ಆ ಶಬ್ದವನ್ನು ಪುರಾಣಶಾಸ್ತ್ರದಿಂದ ಪ್ರತ್ಯೇಕಿಸಲ್ಪಟ್ಟ ಹಾಗೂ ತುಂಬ ಸಡಿಲಾರ್ಥದಲ್ಲಿ ಸೂತ್ರೀಕರಿಸಲಾದ ಕಥೆಗಳನ್ನು ಕುರಿತಂತೆ ಬಳಸುತ್ತಾನೋ ಎಂಬುದು ಅಸ್ಪಷ್ಟವಾಗಿದೆ.

ಇಂತಹ ಗೊಂದಲಕ್ಕೆ ಪೋಷಕವಾಗಬಲ್ಲಂತಹ ಮತ್ತೊಂದು ಪ್ರಸಂಗವೆಂದರೆ, ಈ ಮೊದಲು ಯೂರೋಪು ಖಂಡದಲ್ಲಿ ರೈತಾಪಿ ಜನರ ಮಾನವಶಾಸ್ತ್ರ ಸಂಬಂಧಿತ ಸಂಪ್ರದಾಯಗಳು ನಂಬಿಕೆಗಳು ಮತ್ತು ಕಥನಗಳು ಮುಂತಾದವಕ್ಕೆ ಅನ್ವಯಿಸಿದಂತೆಯೂ ಬಳಕೆಗೊಂಡ ಈ ಪೋಕ್ ಲೋರ್ ಎಂಬ ಶಬ್ದಪ್ರಯೋಗ ಮತ್ತು ಅದರಿಂದುಂಟಾದ ಸಂದಿಗ್ಧತೆ.

ಜಾನ್ ಎಲ್.ಮಿಶ್

ನಾಗರಿಕ ಸಮಾಜಗಳಲ್ಲಿ ಕಡಿಮೆ ಶಿಕ್ಷಣ ಹೊಂದಿದ ಜನರಲ್ಲಿ ಇವೊತ್ತು ಕೂಡ ಉಳಿದುಬಂದಿರುವ ಪ್ರಾಚೀನ ಜನಪ್ರಿಯ ನಂಬಿಕೆಗಳು, ಸಂಪ್ರದಾಯಗಳು ಮತ್ತು ಪರಂಪರೆಗಳು ಮುಂತಾದ ಸಮಸ್ತಾಂಶಗಳನ್ನು ಜಾನಪದಾಂಶಗಳೆಂದು ಕರೆಯಲಾಗಿದೆ. ಹೀಗಾಗಿ ಜಾನಪದಕ್ಷೇತ್ರ ಕಿನ್ನರ ಕಥೆಗಳು, ಪುರಾಣಗಳು ಮತ್ತು ಐತಿಹ್ಯಗಳು, ಮೂಢನಂಬಿಕೆಗಳು, ಹಬ್ಬಹರಿದಿನಗಳ ಧಾರ್ಮಿಕ ವಿಧಿಗಳು, ಪಾರಂಪರಿಕ ಸಾಂಪ್ರದಾಯಕ ಆಟಪಾಟಗಳು ಜನಪದ ಗೀತೆಗಳು ಇತರ ಎಲ್ಲಾ ಅಂಶಗಳನ್ನು ಅದು ಒಳಗೊಳ್ಳುತ್ತದೆ.

ಚಾರ್ಲ್ಸ್‌ಫ್ರಾನ್ಸಿಸ್ ಪಾಟರ್

ಜಾನಪದವೆಂಬುದು ಸಾಯಬಯಸುವ ಜೀವಂತ ಪಳೆಯುಳಿಕೆ. ಇದು ಶತಶತಮಾನಗಳ ಮತ್ತು ಯುಗಾಂತರಗಳ ದೀರ್ಘಾವಧಿಯಲ್ಲಿ ಗಳಿಸಿಕೊಂಡಂತಹ ಹಾಗೂ ಆಯಾ ಯುಗಧರ್ಮಾನುಸಾರವಾಗಿ ಬದಲಾಗದೆ ಹಿಂದೆ ಬಿದ್ದಂತಹ ಮಾನವಾನುಭವ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಹಿಂಜರಿಕೆಯ ಫಲ.

ಹಿಂದಿನ ಕಾಲದಲ್ಲೆಲ್ಲ ಬದಲಾವಣೆಯು ಮಂದಗತಿಯದಾಗಿ ಮತ್ತೆ ಮತ್ತೆ ತಲೆದೋರುತ್ತಿದ್ದುದರ ಫಲವಾಗಿ ಪ್ರಾಚೀನ ಸಂಪ್ರದಾಯಗಳು ಮತ್ತು ನಂಬಿಕೆಗಳು ರೂಪುಗೊಳ್ಳಲು ದೀರ್ಘಾವದಿ ಹಿಡಿಯುತ್ತಿತ್ತು. ಹಾಗೂ ಅವು ಜನಾಂಗಿಕ ಸುಪ್ತ ಪ್ರಜ್ಞೆಯೊಳಗೆ ಆಳವಾಗಿ ಬೇರೂರಲು ಸಮಯ ಬೇಕಾಗುತ್ತಿತ್ತು.

ಈ ಬಗೆಯ ಪುರಾತನ ನಮೂನೆಗಳು ಮತ್ತು ಮಂಡಲಗಳೂ ಕೈಯಿಂದ ನುಣುಪುಗೊಳಿಸಲ್ಪಟ್ಟ ಮರಗೆಲಸದ ಸಲಕರಣೆಗಳಂತೆ ಪರಿಪಕ್ವತೆ ಮತ್ತು ಮೃದುತ್ವಗಳನ್ನು ಪಡೆದಿದ್ದು, ಅನಂತರದ ನಾಗರಿಕತೆಯ ತೀವ್ರತರ ನಯ ಆಘಾತಗಳನ್ನು ಸಹಿಸಿಕೊಂಡು ಅವು ಉಳಿದುಬಂದಿರುತ್ತವೆ. ಅವನ್ನು ನಾವು ಆಕಸ್ಮಾತ್ತಾಗಿ ಪತ್ತೆ ಹಚ್ಚಿದಾಗ ತಮ್ಮ ಅಪೂರ್ವ ಸೌಂದರ್ಯದಿಂದ ನಮ್ಮನ್ನು ಬೆರಗುಗೊಳಿಸತಕ್ಕ ವಸ್ತು ಸಂಗತಿಗಳು ಅವಾಗಿರುತ್ತವೆ.

ಅವನ್ನು ಪ್ರಕೃತಿಗೆ ಸಮೀಪತಮವಾಗಿ ಸಾವಧಾನದಿಂದ ರೂಪಿಸಿದ್ದರ ಕಾರಣದಿಂದಾಗಿ, ಅವು ಸುಂದರವಾಗಿರುವುದರ ಜೊತೆಗೆ ಪ್ರಕೃತಿಯ ಸಮಧಾತು ಸ್ಥಿತಿ ಮತ್ತು ಸರಳತೆಗಳನ್ನು ಒಡಮೂಡಿಸಿಕೊಂಡು ಇರುತ್ತವೆ. ಹೀಗಾಗಿ ಜಾನಪದ ವಿಷಯವು ಒಂದು ದೃಷ್ಟಿಯಿಂದ ಹಿಂದೆ ಪುರಾತನ ಸಂಗಡಿಗಳನ್ನು ನಾವು ಹೇಗೆ ಬಳಸುತ್ತಿದ್ದೆವು ಮತ್ತು ಈಗ ಹೇಗೆ ಅವನ್ನು ಬಳಸಬಹುದು ಎಂಬುದನ್ನು ಕುರಿತದ್ದೇ ಆಗಿದೆ ಎನ್ನಿಸುತ್ತದೆ. ಎಂತಲೇ ಜಾನಪದ ಕ್ಷೇತ್ರ ಮಕ್ಕಳ ರಸೋಲ್ಲಾಸ ಕ್ಷೇತ್ರವಾಗಿದೆ. ಏಕೆಂದರೆ ಅದು ಒಂದು ಜನಾಂಗದ ಬಾಲ್ಯಾವಸ್ಥೆಯ ಕಾವ್ಯಾತ್ಮಕ ವಿವೇಕವಾಗಿರುತ್ತದೆ. ಹಾಗೆಯೇ ಹಿರಿಯರು ತಮ್ಮ ಜೀವನಚಕ್ರವನ್ನು ಪೂರ್ಣಗೊಳಿಸುವಲ್ಲಿ ತುಂಬ ಸರಳತೆಯ ಮೂಲಕ ತಮ್ಮಯೌವನವನ್ನು ಪುನರುಜ್ಜೀವಿಸುವಲ್ಲಿ, ಜಾನಪದ ಕ್ಷೇತ್ರವು ಆನಂದದಾಯಕವಾಗಿರುತ್ತದೆ. (ಇದು ಆ ಬಾಲ ವೃದ್ಧರಿಗೂ ಅಚ್ಚು ಮೆಚ್ಚಿನದಾಗಿದೆ.)

ಬಾಲಕರ ಜೊತೆಗೆ ಪ್ರಬಲವಾದ ಸ್ತ್ರೀ ಲಕ್ಷಣ ಕೂಡ ಜಾನಪದ ಕ್ಷೇತ್ರದಲ್ಲಿ ನಿಚ್ಚಳವಾಗಿದೆ. ಹೇಗೆಂದರೆ ಈ ಕ್ಷೇತ್ರದ ಉಗಮ ಮಾನವನಲ್ಲಿ ವೈಚಾರಿಕತೆ ಮೊಳೆಯುವ ಪೂರ್ವದಲ್ಲಿಯೇ ಆಗಿರುತ್ತಿದ್ದು, ಅದು ಮಾನವನ ಮೂಲ ಪ್ರೇರಣೆ ಮತ್ತು ಪ್ರತಿಭಾವಲಯಗಳಿಗೆ ಸಂಬಂಧಿಸಿರುತ್ತದೆ. ಜಾನಪದ ಕ್ಷೇತ್ರ ಅತ್ಯಂತ ಅತಾರ್ಕಿಕವೂ ತುಂಬ ಭಾವುಕವೂ ಆದಂಥದ್ದು; ಎಂತಲೇ ಅದರ ಬಹುಪಾಲನ್ನು ಅಜ್ಜಿಯ ಕಥೆಗಳು'' ಎಂದು ಕರೆದಿರುವುದು ಸಮಂಜಸವಾಗಿದೆ. ಏಕೆಂದರೆ ಸ್ತ್ರೀಯರು ನಂಬಿಕೆಗಳು, ಧಾರ್ಮಿಕಾಚಾರಣೆಗಳು. ಮೂಢನಂಬಿಕೆಗಳು ಮತ್ತು ಸಂಪ್ರದಾಯಗಳು ಮೊದಲಾದ ಪಾರಂಪರಿಕ ಸಂಗತಿಗಳ ಸದಾ ಸಂರಕ್ಷಕರೂ ವಾರಸುದಾರರೂ ಅವುಗಳ ಮೂಲರೂಪ

ಸಂಗೋಪನಾಸಕ್ತಿಯರೂ ಆಗಿದ್ದಾರೆ. ಅನುಭವಿಕ ಜಾನಪದ ತಜ್ಞನೊಬ್ಬನು ಎಂದಿಗೂ ಪ್ರಾಚೀನ ಜೀವನುಸಂಧಾನ ಮಾರ್ಗದ ಪೋಷಕನಾಗಲಾರನು.

ಮೇರಿಯನ್ ಡಬ್ಲ್ಯು. ಸ್ಮಿತ್

ಜಾನಪದ ಕ್ಷೇತ್ರದ ಎರಡನೆಯ ಸೂತ್ರವಾದರೂ ಜಾನಪದೀಯ ವಾಕ್ಪರಂಪರೆ ಮತ್ತು ಲಿಖಿತ ಸಾಹಿತ್ಯ ಪರಂಪರೆಗಳಿಗೆ ಇರುವಂತಹ ವ್ಯತ್ಯಾಸಗಳನ್ನು ಅವಲಂಬಿಸಿ ಹುಟ್ಟಿಕೊಂಡಿದೆ. ಶಿಷ್ಟ ಸಾಹಿತ್ಯ ಪರಂಪರೆಯು ಕಾದಂಬರಿಗಳು, ಕಾವ್ಯ, ಧಾರ್ಮಿಕ ಪವಿತ್ರ ಗ್ರಂಥಗಳು ಮೊದಲಾದವುಗಳ ಸೃಷ್ಟಿ ಕ್ರಯೆಯನ್ನು ಪ್ರತಿನಿಧಿಸುತ್ತದೆ. ಅಕ್ಷರ ಸಾಹಿತ್ಯ ಪರಂಪರೆಯನ್ನುಳ್ಳ ಶಿಷ್ಟ ಜನಸಮುದಾಯಗಳಲ್ಲಿ ಸಂಗ್ರಹಿತವಾದಂತಹ ಸಾಹಿತ್ಯಕ ವಿಷಯಗಳನ್ನಾಧರಿಸಿ, ಹಲವು ಜಾನಪದೀಯ ವಿಶ್ಲೇಷಣೆಗಳು ಹುಟ್ಟಿಕೊಂಡಿರುತ್ತವೆ. ಆದರೆ ಮೂಲತಃ ಲಿಪಿ ಸೌಲಭ್ಯವಿರದೆ ಇದ್ದಂತಹ ಅಮೆರಿಕೆಯ ಇಂಡಿಯನ್ ಜನರು ಹಾಗೂ ಅಂತಹ ಇತರ ಸಾಮಾಜಿಕ ಪರಿಸ್ಥಿತಿಯ ವಿಷಯದಲ್ಲಿಯಾದರೆ ವಾಕ್ಪರಂಪರೆ ಮತ್ತು ಲಿಪಿ ಪರಂಪರೆಗಳ ನಡುವಣ ತದ್ವಿರುದ್ಧ ಗುಣ ಸ್ವರೂಪಾದಿಗಳನ್ನು ಅವಲಂಬಿಸಿ ರೂಪುಗೊಂಡಂಥ ಜಾನಪದೀಯ ಸೂತ್ರವು ತನ್ನ ಉದ್ದೇಶದಲ್ಲಿ ಸಂಪೂರ್ಣವಾಗಿ ವಿಫಲಗೊಳ್ಳುತ್ತದೆ.

ಇವೆರಡೂ ಬಗೆಯ ಸೂತ್ರಗಳು ನಮ್ಮನ್ನು ತಪ್ಪುದಾರಿಗೆ ಎಳೆದೊಯ್ಯುತ್ತವೆಯಾದ್ದರಿಂದ, ಆ ಅಪಾಯದಿಮದ ಪಾರಾಗುವ ಸಲುವಾಗಿ ನಾವು "ಜಾನಪದ ಶಾಸ್ತ್ರ ಎಂಬುದು ಅನಂತ ವೈವಿಧ್ಯತೆಗಳನ್ನೊಳ್ಳ ವಾಕ್ಸಾಮಗ್ರಿಗಳ ಅಧ್ಯಾಯನ ಎಂಬುದಾಗಿ ಸರಳವಾಗಿ ಸೂತ್ರೀಕರಿಸುವುದು ತುಂಬ ವಿವೇಕದ ಕೆಲಸವೆನ್ನಿಸುತ್ತದೆ. ಹೀಗೆ ಸೂತ್ರೀಕರಿಸಿದಾಗ, ತಾಂತ್ರಿಕವಾದ ಭಾಷಾಶಾಸ್ತ್ರ, ಸಂಗಿತ ನೃತ್ಯ ಹಾಗೂ ರೇಖಾತ್ಮಕ ಮತ್ತು ದೃಶ್ಯಾತ್ಮಕ ಕಲೆಗಳೇ ಮೊದಲಾದವುಗಳೆಲ್ಲವೂ ಪರಸ್ಪರ ನಿಕಟವಾಗುತ್ತದೆ ಎಂಬುದು ಸತ್ಯ. ಆದರೂ ವಿಶ್ಲೇಷಣೆಯ ದೃಷ್ಟಿಯಿಂದ ಅವು ಪರಸ್ಪರ ವಿಭಿನ್ನವಾದ ಕ್ಷೇತ್ರಗಳಾಗಿಯೇ ಮುಂದುವರಿಯುತ್ತವೆ.

ಪ್ರಕೃತ ಚಾಲ್ತಿಯಲ್ಲಿರುವ ಮೂರು ಮುಖ್ಯ ಪ್ರಸಿದ್ಧ ಜಾನಪದೀಯ ಪಂಥಗಳ ಬಗೆಗೆ ವಿವೇಚಿಸುವುದರ ಮೂಲಕ ಒಬ್ಬ ಜಾನಪದ ತಜ್ಞನು ಎದುರಿಸಬೇಕಾಗಿ ಬರುವಂತಹ ಸಮಸ್ಯೆಗಳ ಸ್ವರೂಪವನ್ನು ಮನದಟ್ಟು ಮಾಡಿಕೊಳ್ಳಲು ಸಾಧ್ಯ.

ಆರ್ಚರ್ ಟೆಯ್ಲರ್

ಸಾಮೂಹಿಕ ಪುನಃ ಸೃಷ್ಟಿಕಾರ್ಯವು ಸಾಮಾನ್ಯವಾಗಿ ತರ್ಕಬದ್ಧ ನಿಯಮದಂತೆ ನಡೆಯುವುದರ ಬದಲಿಗೆ ತನ್ನ ವಿಶಿಷ್ಟ ಸಂಸರ್ಗೀಯ ಗುಣಾನುಸಾರಿಯಾಗಿ ನಡೆದುಹೋಗುತ್ತದೆ. ಹೀಗೆ ಪಾರಂಪರಿಕವಾಗಿ

ಸಾಗಿಬಂದ ಸಾಮಗ್ರಿಗಳು ಚೌತವಸ್ತುಗಳೋ ಯೋಜನೆಗಳೋ ಆಗಿದ್ದಿರಬಹುದು ಅಥವಾ ಶಬ್ದಗಳಾಗಿದ್ದಿರಲೂಬಹುದು.

ಭೌತವಸ್ತುಗಳನ್ನು ಕುರಿತು ಜಾನಪದಶಾಸ್ತ್ರವು ಅವುಗಳ ರೂಪ ವಿನ್ಯಾಸಗಳು ಉಪಯೋಗಗಳು ಮುಂತಾದುವನ್ನು ಕುರಿತು ವಿವೇಚಿಸುತ್ತದೆ. ಇದೇ ರೀತಿಯಲ್ಲಿ ಒಡವೆ ವಸ್ತ್ರಗಳು ಗ್ರಾಮಗಳು ಮತ್ತು ಅವುಗಳ ಮನೆಗಳ ರೂಪುರೇಖೆಗಳು ಇವೇ ಮೊದಲಾದ ಅಂಶಗಳನ್ನು ಆ ಶಾಸ್ತ್ರವು ಒಳಗೊಳ್ಳುತ್ತದೆ. ಸಂಜ್ಞೆ ಮತ್ತು ಆಟ ಪಾಠಗಳನ್ನು ಕುರಿತ ಜಾನಪದವಾದರೆ ಭೌತವಸ್ತು ಆಧಾರಿತ ಜಾನಪದ ಮತ್ತು ಯೋಜನಾಧಾರಿತ ಜಾನಪದೀಯ ಸ್ತರಗಳ ನಡುವಣ ಮಧ್ಯಮ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಜಾನಪದ ಕ್ಷೇತ್ರದವು ಎಂಬುದಾಗಿ ಜನಜನಿತವಾಗಿರುವಂತಹ ಹಲವಾರು ವಿಚಿತ್ರ ವಿನೂತನ ಹಾಗೂ ವಿಲಕ್ಷಣವಾದ ಭಾವನೆಗಳು ಮಾನವ ಜೀವನದ ಮಹತ್ವದ ಘಟನೆಗಳಾದ ಜನನ, ವಿವಾಹ ಮತ್ತು ಮರಣ ಸಂಬಂಧಿತ ಆಚರಣೆಗಳಿಗೆ ಹೊಂದಿದಂತೆ ಹುಟ್ಟಿ ಪ್ರಚಾರದಲ್ಲಿರುತ್ತವೆ. ಹಾಗೆಯೇ ಅವು ಜೀವನದ ಆ ಮಹತ್ವದ ಸಾಧಾರಣ ಸಂಗತಿಗಳಾದ ರೋಗ ಮತ್ತು ವ್ರಣಾದಿಗಳಿಗೆ ತಕ್ಕ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದರಲ್ಲಿ ವ್ಯವಸಾಯ ವ್ಯಾಪಾರ ಮತ್ತು ಇತರ ವೃತ್ತಿಗಳಲ್ಲಿ ಧಾರ್ಮಿಕ ಜೀವನ ಸಂದರ್ಭಗಳಲ್ಲಿ ಅದರಲ್ಲೂ ವಿಶೇಷವಾಗಿ. ಕ್ರೈಸ್ತರ ಕ್ರಿಸ್ ಮಸ್ , ಈಸ್ಟರ್ ಮತ್ತಿತರ ಅಂತಹ ಪವಿತ್ರದಿನಗಳಲ್ಲಿ ಅಥವಾ ಸಾಧು ಸಂತರ ಜನ್ಮದಿನಾವರಣೆಗಳ ಸಂದರ್ಭಗಳಲ್ಲಿ ಆ ಭಾವನೆಗಳೆಲ್ಲ ಒಡದು ತೋರುತ್ತದೆ.

ವಾಗ್ಜಾನಪದ ಕ್ಷೇತ್ರವು ಸ್ವಯಂ ಶ್ರೇಷ್ಠವೆಂದು ಪರಿಗಣಿತವಾದ ಕೆಲವು ಶಬ್ದಗಳನ್ನೂ ಇತರ ವಿಷಯ ಸಂಬಂಧಿಯಾದ ಕೆಲವು ಸಾಧಾರನ ಶಬ್ದಗಳನ್ನೂ ಒಳಗೊಳ್ಳುತ್ತದೆ. ಜಾನಪದ ತಜ್ಞನು ಅಂಥ ಕೆಲವು ಶಬ್ದ ಪ್ರಯೋಗದ ಬಗೆಗೆ ಮಹತ್ವವೇನನ್ನೂ ಕೊಡದೆಯೇ ಅಭ್ಯಾಸ ಮಾಡುತ್ತಾನೆ. ಅಂಥವುಗಳ ಪೈಕಿ ಸ್ಥಳನಾಮ ಮತ್ತು ಕೌಟುಂಬಿಕ ಹಾಗೂ ಧರ್ಮಸಂಬಂಧಿ ಹೆಸರುಗಳನ್ನು ಒಳಗೊಂಡಂತಹ ವ್ಯಕ್ತಿನಾಮಗಳು ಮತ್ತು ಅಡ್ಡ ಹೆಸರುಗಳು ಮುಂತಾದವು ಸೇರುತ್ತವೆ. ಸಾವಯವ ಸಂಬಂಧ ಹೊಂದಿದಂತಹ ಜಾನಪದದಲ್ಲಿ ವಿವಿಧ ಬಗೆಯ ಕಥೆಗಳು, ಪ್ರಾಣಿ ಕಥೆಗಳು ಹಾಸ್ಯ ಕಥೆಗಳು, ಪುರಾಣ ಕಥೆಗಳು ಸಂಚಯಿತ ಸಮ್ಮಿಶ್ರ ಕಥೆಗಳು ತರ್ಕ ಮತ್ತು ನೀತಿ ಕಥೆಗಳು ಇತ್ಯಾದಿಗಳು ಇರುವಂತೆಯೇ ಬ್ಯಾಲಡ್ ಗಳು, ಜನಪದ ಭಾವಗೀತೆಗಳು ಶಿಶುಗೀತೆಗಳು ಮಂತ್ರೋಚ್ಚಾರಗಳು, ಗಾದೆಗಳು, ಒಗಟುಗಳು ಮುಂತಾದ ಪ್ರಕಾರಗಳೆಲ್ಲವೂ ಅಲ್ಲಿರುತ್ತವೆ.

ಜಾನಪದಾಧ್ಯಯನವು ಇಂಥ ಪಾರಂಪರಿಕ ಸಾಮಗ್ರಿಗಲ ಸಂಗ್ರಹಣೆ, ವರ್ಗೀಕರಣ ಮತ್ತು ವ್ಯಾಖ್ಯಾನಗಳನ್ನು ಒಳಗೊಳ್ಳುತ್ತದೆ. ವರ್ಗೀಕರಣವು ಕೆಲವು ಮಟ್ಟಿನ ವ್ಯಾಖ್ಯಾನವನ್ನು ಅವಲಂಬಿಸಿರುತ್ತದೆ. ಆ ವ್ಯಾಖ್ಯಾನವಾದರೂ ಆ ಸಾಮಾಗ್ರಿಗಳ ಮೂಲ ಅರ್ಥ ಪ್ರಯೋಜನ ಮತ್ತು ಇತಿಹಾಸಗಳನ್ನು ಸಂಶೋಧಿಸ ಬಯಸುತ್ತದೆ. ಆ ಮುಖಾಂತರ ಅವುಗಳ ಪ್ರಸಾರ ಮತ್ತು ಶೈಲೀಕೃತ ವೈಲಕ್ಷ್ಯಣ್ಯಗಳನ್ನು ವಿವರಿಸಿ ವ್ಯಾಖ್ಯಾನಿಸಲು ಆಪೇಕ್ಷಿಸುತ್ತದೆ.

ಸ್ಮಿತ್ ಥಾಮ್ಸನ್

ಜಾನಪದ ಶಾಸ್ತ್ರ ಎಂಬ ಶಬ್ದವು ಒಂದು ಶತಮಾನಕ್ಕಿಂತಲೂ ಹೆಚ್ಚು ಹಿಂದಿನದು. ಆದರೂ ಅದರ ಅರ್ಥವ್ಯಾಪ್ತಿಯ ಬಗೆಗೆ ಒಂದು ದೃಢ ನಿರ್ಧಾರಕ್ಕೆ ಬರುವುದು ಇವೊತ್ತಿನವರೆಗೂ ಸಾಧ್ಯವಾಗಿಲ್ಲ. ಆಕ್ಷೇತ್ರದ ಬಗೆಗೆ ಸರ್ವಸಾಮಾನ್ಯವಾದ ಇಂಥದೊಂದು ಅಭಿಪ್ರಾಯವಿದೆ : ಅದೆಂದರೆ ಅದು ಪರಂಪರೆಗೆ ಸಂಬಂಧಿಸಿದುದು ಅದು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ತಲೆಮೊರೆಯಾಗಿ ಪಾರಂಪರಿಕವಾಗಿ ವರ್ಗಾವಣೆಗೊಂಡು ಬಂದಂತಹ ವಸ್ತು ಮತ್ತು ಸಂಗತಿಗಳಿಗೆ ಸಂಬಂಧಿಸಿದ ಒಂದು ಶಾಸ್ತ್ರ ಆ ಶಾಸ್ತ್ರವು ಲಿಖಿತ ದಾಖಲೆಗಳಿಗೆ ಬದಲಾಗಿ ಸ್ಮೃತಿ ಮತ್ತು ಆಚರಣೆಗಳ ಮೂಲಕ ಸಂರಕ್ಷಿಸಲ್ಪಟ್ಟಂತಹ ಅಂಶಗಳನ್ನು ಅಧ್ಯಯನ ಮಾಡುತ್ತದೆ.

ಇಂತಹ ಜಾನಪದಶಾಸ್ತ್ರವು ನೃತ್ಯಗಳು, ಗೀತೆಗಳು, ಕಥೆಗಳು, ಪುರಾಣಗಳು, ಸಂಪ್ರದಾಯಗಳು ನಂಬಿಕೆಗಳು ಹಗೂ ಮೂಢನಂಬಿಕೆಗಳು. ಇವುಗಳನ್ನು ಒಳಗೊಳ್ಳುವಂತೆಯೇ ಜಗತ್ತಿನ ಎಲ್ಲೆಡೆಯ ಜನತೆಯ ಗಾದೆಗಳೇ ಆದಿಯಾದವನ್ನೂ ಒಳಗೊಳ್ಳುತ್ತದೆ. ಜೊತೆಗೆ ಅದು ಸಂಪ್ರದಾಯಗಳ ಅಧ್ಯಯನಗಳು, ಪಾರಂಪರಿಕ ಬೇಸಾಯದ ಮತ್ತು ಗೃಹಕೃತ್ಯದ ಅಭ್ಯಾಸಗಳ ಅಧ್ಯಯನಗಳು, ಪಾರಂಪರಿಕ ಬೇಸಾಯದ ಮತ್ತು ಗೃಹಕೃತ್ಯದ ಅಭ್ಯಾಸಗಳು. ಕಟ್ಟಡಗಳ ಮತ್ತು ಪಾತ್ರೆ ಪಡಗಗಳ ವಿನ್ಯಾಸ ಮತ್ತು ಬಗೆಗಳು ಸಾಮಾಜಿಕ ಸಂಘಟನೆಗಳ ಪಾರಂಪರಿಕ ಅಂಶಗಳು ಇವೆಲ್ಲವನ್ನು ಒಳಗೊಳ್ಳುತ್ತದೆ.

ಈ ಜಾನಪದ ಶಾಸ್ತ್ರವನ್ನು ಕುರಿತಂತೆ ಈ ಮೊದಲು ಸೂಚಿಸಿದಂತಹ ಕೆಲವು ಅಂಶಗಳನ್ನು ಹೊರತು ಪಡಿಸಿ, ಮಿಕ್ಕಂತೆ ಒಂದು ಪ್ರಾಚೀನ ಅಥವಾ ಕ್ಷರ ಪೂರ್ವ ಯುಗದ ಸಮಾಜಗಳಲ್ಲಿ ಉಳಿದು ಬಂದಂತಹ ಅಂಶಗಳನ್ನು ಪರಿಗಣಿಸಿ ಅಧ್ಯಯನಿಸುವ ವಿಧಾನಗಳನ್ನು ಜಾನಪದಾಧ್ಯಯನದ ತಕ್ಕೆಗೆ ಒಳಪಡಿಸಿದೆ. ಅದನ್ನು ಮಾನವಶಾಸ್ತ್ರೀಯ ಅಧ್ಯಯನವೆಂದು ಪರಿಗಣಿಸುವುದು ಸೂಕ್ತ ಎಂಬ ನಿರ್ಣಯದ ಬಗೆಗೆ ಸಾಮಾನ್ಯ ಸಮ್ಮತಿ ಇದ್ದಾಂತಿದೆ.

ಆದರೆ ಇಂತಹ ವಿಭಾಗೀಕರಣವು ಒಂದು ಅನುಕೂಲ ಸಿಂಧು ಕ್ರಮವಾಗಿದೆಯೇ ವಿನಾ ಅದನ್ನು ಸಾರ್ವತ್ರಿಕವಾಗಿ ಅಂಗೀಕರಿಸಲಾಗಿಲ್ಲ. ಏಕೆಂದರೆ ಆ ಅಂಶಗಳೆಲ್ಲವೂ ವಾಸ್ತವವಾಗಿ ಪಾರಂಪಾರಿಕವಾದುವೇ ಆಗಿರುವುದರಿಂದ, ಕನಿಷ್ಠ ಪಕ್ಷ ಅನಕ್ಷರಸ್ಥ ಜನಸಮುದಾಯಗಳಲ್ಲಿಯಾದರೂ ಅವೆಲ್ಲವೂ ಜಾನಪದೀಯದೆಂದೇ ಪರಿಗಣಿತವಾಗಿವೆ.

ಎರ್ಮಿನಿ ಡಬ್ಲ್ಯು. ವೊಗೆಲಿನ್

ಯಾವುದೇ ಒಂದು ಅಕ್ಷರ ಪೂರ್ವಯುಗೀಯ ಸಾಂಸ್ಕೃತಿಯ ಒಂದು ಭಾಗಕ್ಕಷ್ಟೇ ಅನ್ವಯಿಸುವಂತೆ ಬಳಸಲಾಗುತ್ತಿರುವ ಹಲವು ಶಾಬ್ದಿಕ ಪರಿಮಿತಿಯನ್ನುಳ್ಳುದಾದ ಜಾನಪದ ಅಧ್ಯಯನ ಕ್ಷೇತ್ರವು ಯಾರೋ ಅಮೆರಿಕೆಯ, ಐರೋಪ್ಯರ ಹಾಗೂ ಇನ್ನಿತರ ಪ್ರದೇಶಗಳ ಜನಪದ ಹಾಗಾ ರೈತಾಪಿ ಜನರ ಸಾಂಸ್ಕೃತಿಗಳನ್ನು ಅಧ್ಯಯನ ಮಾಡುವಂತಹ ಅಭ್ಯರ್ಥಿಗಳು ಸಾಂಪ್ರದಾಯಿಕವಾಗಿ ಬಳಸುವಂತಹ "ಜಾನಪದ ಶಾಸ್ತ್ರ" ಎಂಬ ಶಬ್ದ ಪ್ರಯೋಗ ವಿಧಾನದಿಂದ ಸಂಪೂರ್ಣವಾಗಿ ಇದು ವಿಭಿನ್ನವಾಗಿದೆ. ಒಂದು ಜನಪದ ಸಂಸ್ಕೃತಿಯ ಬೃಹತ್ ಸಮಾಜದ ಇಡೀ ಸಂಸ್ಕೃತಿಯ ಒಂದು ಬಿಡಿಭಾಗವಷ್ಟೆ ಆಗಿದ್ದರೂ ಅದರ ಬಹುಭಾಗವು ವಾಕ್ಯಾಧನದ ಮುಖಾಂತರವೇ ಚಲಾವಣೆಗೊಳ್ಳುತ್ತದೆ. ಹೀಗೆ ಸರ್ವಸಾಮಾನ್ಯವಾಗಿ ಪ್ರಸರಣಗೊಳ್ಳುವಂತಹ ಎಲ್ಲ ಬಗೆಯ ವಿಷಯ ಮತ್ತು ಸಾಮಗ್ರಿಗಳನ್ನು ಮಾನವತಾವಾದಿಗಳು ಸರಳವಾಗಿ ಜಾನಪದ ಕ್ಷೇತ್ರದ ಸಂಗತಿಗಳೆಂದು ಪರಿಗಣಿಸಿದ್ದಾರೆ.

ಇಂತಹ ವಿಸ್ತೃತಾರ್ಥದಲ್ಲಿ ಜಾನಪದ ಕ್ಷೇತ್ರ ಎಂಬುದು ಪಾರಂಪರಿಕವಾದಂತಹ ಸಮಸ್ತ ಗದ್ಯ ಮತ್ತು ಪದ್ಯ ಪ್ರಕಾರಗಳನ್ನಷ್ಟೇ ಅಲ್ಲದೆ, ಪಾರಂಪರಿಕವಾಗಿ ಕಲಿತು ಬಂದಂತಹ ಸಮಸ್ತ ಕಲೆಗಳನ್ನು ಕರಕುಶಲ ವಸ್ತುಗಳನ್ನೂ ಮತ್ತೂ ವಿಸ್ತಾರ ವ್ಯಾಪ್ತಿಯನ್ನುಳ್ಳ ಸಾಮಾಜಿಕ ಹಾಗೂ ಧಾರ್ಮಿಕ ನಂಬಿಕೆಗಳು ಮತ್ತು ಸಂಪ್ರದಾಯಗಳು ಮೊದಲಾದುವನ್ನೂ ಮಾವನ ಶಾಸ್ತ್ರಜ್ಞರು ಎಥ್ನೊಲಜಿ ಎಂದು ಕರೆಯುವಂತಹ ಆ ಕ್ಷೇತ್ರ ಸಂಬಂಧಿಯಾದ ಸಮಸ್ತ ವಿಷಯಗಳನ್ನು ಜಾನಪದ ಕ್ಷೇತ್ರ ಶಾಸ್ತ್ರವೆಂಬ ಶಬ್ದವು ಆಲಿಂಗಿಸಿಕೊಳ್ಳುತ್ತದೆ.

ಅಲಿಖಿತ ಸಾಹಿತ್ಯ ಅಥವಾ ಪ್ರಾಚೀನ ಸಾಹಿತ್ಯ ಅಥವಾ ಆ ಬಗೆಯದಾದ ಇತರ ಸಾಹಿತ್ಯ ಪ್ರಕಾರಗಳನ್ನು ಈಗ್ಗೆ ಒಂದು ದಶಕದ ಹಿಂದೆ ಕೂಡ ಜಾನಪದ ಶಾಸ್ತ್ರವೆಂಬುದಾಗಿ ಹೆಸರಿಸಿದ ಸಂದರ್ಭಗಳಿವೆ. ಅಂತಹ ಸಾಹಿತ್ಯದ ವಸ್ತು ವಿಷಯಗಳನ್ನು ಈಗ ಖಚಿತವಾಗಿ ಜಾನಪದೀಯವಾದವೆಂದು ವಾಮ ನಿರ್ದೇಶನ ಮಾಡುವ ಬಹು ಮಹತ್ವದ ಧೋರಣೆ ಸಾಂಸ್ಕೃತಿಕ ಮಾನವ ಶಾಸ್ತ್ರಜ್ಞರಲ್ಲಿ ಈಚೆಗೆ

ಬೆಳೆದು ಬರುತ್ತಿದೆ. ಜನಪದ ಸಾಂಸ್ಕೃತಿಗಳ ಪಾರಂಪರಿಕ ಅಧ್ಯಯನದ ಬಗೆಗೆ ಈಚಿನ ವರ್ಷಗಳಲ್ಲಿ ಮಾನವತಾವಾದಿಗಲು ಹೆಚ್ಚು ಹೆಚ್ಚಾಗಿ ಗಮನ ಹರಿಸುತ್ತಿರುವುದರ ಫಲವಾಗಿ ಹೊಸ ಹೊಸ ಶಬ್ದಗಳು ರೂಪುಗೊಂಡು ನಾಣ್ಯತನ ಮತ್ತು ಚಲಾವಣೆಗಳನ್ನು ಪಡೆಯುತ್ತಿವೆ. ಹಾಗೆಯೇ ಮಾನವತಾವಾದಿಗಳು ಬಳಸುತ್ತಿರುವಂತಹ ಜಾನಪದಶಾಸ್ತ್ರ ಎಂಬ ಶಬ್ದದ ಜೊತೆಗೆ, ಮಾನವಶಾಸ್ತ್ರಜ್ಞರು ಬಳಸುವಂತಹ ಅದೇ ಶಬ್ದವು ಸಮಾನಾರ್ಥಕವಾಗಿ ಪ್ರಯೋಗಗೊಳ್ಳುವಂತಹ ಸಾಧ್ಯತೆಗಳು ಬಹಳಷ್ಟಿವೆ ಎಂಬುದಾಗಿ ಧಾರಾಳವಾಗಿ ಹೇಳಬಹುದು.

ರಿಚರ್ಡ್ ಎಂ. ವಾಟರ್ ಮ್ಯಾನ್

ವಿವಿಧ ಜನವರ್ಗಗಳಲ್ಲಿ ರೂಢಿಯಲ್ಲಿರುವ ಕಥೆಗಳು, ಗಾಧೆಗಳು, ಸೂಕ್ತಿಗಳು, ಸೂಳ್ನುಡಿಗಳು, ಗೀತೆಗಳು, ಮಂತ್ರೋಚ್ಚಾರಗಳು ಮತ್ತು ವಾಗ್ರೂಪಿ ಭಾಷೆಯ ಇತರ ಸಾಂಪ್ರದಾಯಿಕ ನುಡುಗಟ್ಟುಗಳೇ ಆದಿಯಾದವನ್ನು ವಾಗ್ರೂಪೀ ಭಾಷೆಯ ಮುಖಾಂತರ ಅಭಿವ್ಯಕ್ತಗೊಳಿಸತ್ಕ ಒಂದು ಕಲಾಪ್ರಕಾರವೇ ಜಾನಪದ ಶಾಸ್ತ್ರ.

ಈ ಬಗೆಯ ಜಾನಪದೀಯ ಸೂತ್ರ ವ್ಯಾಖ್ಯಾನಗಳ ಬಗೆಗೆ ವಿವೇಚಿಸುವಾಗ ಪ್ರಸಿದ್ಧ ಜಾನಪದ ತಜ್ಞರಾದ ಫ್ರಾನ್ಸಿಸ್ ಲೀ ಅಟ್ಲಿ ಅವರ ಕೆಲವು ವ್ಯಾಖ್ಯಾನ ಮತ್ತು ಅಭಿಪ್ರಾಯಗಳನ್ನು ಗಮನಿಸುವುದು ಲಾಭದಾಯಕ. ಅವರ ಕೆಲವು ಮುಖ್ಯ ವಾಕ್ಯಗಳು ಹೀಗಿವೆ.

ಮರಿಯ ಲೀಚ್ ಅವರ ಸುಪ್ರಸಿದ್ಧ ಜಾನಪದ ಶಬ್ದಕೋಶದಲ್ಲಿ ಸೇರ್ಪಡೆಗೊಂಡಿರುವ ಸೂತ್ರಪಾಯವಾದ ೨೧ ಜಾನಪದೀಯ ಲೇಖನಗಳ ಕರ್ತೃಗಳೆಲ್ಲರೂ ಅಮೆರಿಕೆಯ ವಿದ್ವಾಂಸರೇ ಆಗಿದ್ದಾರೆ. ಈ ಬರಹಗಳು ಆಗಿನ ವೃತ್ತಿ ನಿರತ ಜಾನಪದ ತಜ್ಞರ ಅಂದಾದುಂದಿನ ವಿಭಿನ್ನ ಅಭಿಪ್ರಾಯಗಳಿಗೆ ಸಾಕ್ಷಿ ನುಡಿಯುತ್ತಿರುವಂತೆ ಇವೆ.

ಜಾನಪದ ಶಾಸ್ತ್ರವೆಂದು ಹೆಸರಿಸಲಾದ ಆ ವಿಷಯ ಕುರಿತು ಈ ಎಲ್ಲಾ ಲೇಖಕರ ನಿರೂಪಣೆಯಲ್ಲಿ ಸರ್ವ ಮಾನ್ಯವಾಗುವಂತಹ ತಿರುಳೇನಾದರೂ ಇದೆಯೇ? ಎಂಬುದಾಗಿ ನಾನು ವಿವೇಚಿಸಿದಾಗ ಕಂಡುಬಂದಂತಹ ಫಲಿತಾಂಶಗಳ ಸಾರಾಂಶವನ್ನು ಇಲ್ಲಿ ತೊಡಬಯಸುತ್ತೇನೆ.

ಈ ಮೇಲಿನ ಅಂಶಗಳನ್ನಿಟ್ಟುಕೊಂಡು ಇಂದಿನ ವೈದ್ಯಪದ್ಧತಿಯ ಬಹಳ ಮುಖ್ಯವಾದ ಉದ್ದೇಶವನ್ನು ಅವಲೋಕಿಸಬಹುದಾಗಿದೆ. ಜನಪದ ವೈದ್ಯಪದ್ಧತಿಯ ಸಂಪೂರ್ಣ ಇತಿಹಾಸದಲ್ಲಿ ವೈಜ್ಞಾನಿಕ ದೃಷ್ಟಿಕೋನ ಇಟ್ಟುಕೊಂಡು ಸಂಶೋಧನೆಗಳು ಆರಂಭವಾಗಿವೆ. ಆದರೆ ಇವು ಕ್ಷೇತ್ರಕಾರ್ಯಕ್ಕಷ್ಟೇ

ಸೀಮಿತವೇ? ಇಲ್ಲಾ, ಆಯುರ್ವೇದ, ಅಲೋಪತಿ, ಹೋಮಿಯೋಪತಿಗಳಿಗೆ ಜನಪದ ವೈದ್ಯಪದ್ಧತಿ ಮೂಲವೆಂದು ಸ್ಪಷ್ಟಪಡಿಸಬಹುದು. ಉದಾ : ಆದೀಮ ಸಂಸ್ಕೃತಿಯ ಕಾಲದಲ್ಲಿ ಶರೀರದ ಯಾವುದೇ ಒಂದು ಅಂಗಾಂಗಳಿಗೆ ಮುಳ್ಳು, ಗುಟ ಅಥವಾ ಯಾವುದೇ ಒಂದು ಸಾಮಗ್ರಯಿಂದ ಚುಚ್ಚಿದಾಗ ತೆಗೆಯಬೇಕಾಗುತ್ತದೆ. ಆ ಸಂದರ್ಭದಲ್ಲಿ ನೋವು ಮರೆಯುವಂತೆ ಮಾಡಲು ಗಿಡಮೂಲಿಕೆಯ ಔಷಧಿಕೊಟ್ಟು ಆ ಮುಳ್ಳನ್ನು ತೆಗೆಯುತ್ತಿದ್ದರು. ಆದರೆ ಅದೇ ವೈಜ್ಞಾನಿಕವಾಗಿ ಅನಸ್ಥೆಸಿಯವನ್ನು ಕೊಟ್ಟು ಅವನಿಗೆ ಜ್ಞಾನ ತಪ್ಪಿಸಿ ಮನುಷ್ಯನ ಶರೀರಕ್ಕೆ ಅಪರೇಷನ್ ವೈದ್ಯ ಮಾಡುವನು.

ಈ ವಿಷಯಕ್ಕೆ ಪೂರಕವಾಗಿ ಪ್ರಸ್ತುತ ಅಧ್ಯಯನದ ಮೂಲಕ ಗಿಡಮೂಲಿಕೆಗಳ ಶೋಧನೆ, ಆವಿಷ್ಕಾರ, ವಿಶ್ಲೇಷಣೆಯ ಕಾರ್ಯವನ್ನು ಮಾಡಲಾಗಿದೆ. ಇಂತವುಗಳಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಅಧ್ಯಯನಗಳ ಸಮನ್ವಯದಿಂದ ಹೊಸ ತೆರನಾದ ಆಯಾಮಗಳು ಸಾಧ್ಯವಾಗುತ್ತವೆ. ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಜನಪದರಲ್ಲಿರುವ ವೈದ್ಯಪದ್ಧತಿಯನ್ನು ಕ್ಷೇತ್ರಕಾರ್ಯ ಮಾಡಿ ಸಸ್ಯ, ಪ್ರಾಣಿ, ಆಹಾರ, ಜಲ, ಪ್ರಕೃತಿಯ ಇತರ ವಸ್ತುಗಳನ್ನು ವೈಜ್ಞಾನಿಕ ದೃಷ್ಟಿಯಲ್ಲಿ ಅಧ್ಯಯನ ಕೈಗೊಂಡು ಮೂಡನಂಬಿಕೆಗಳಲ್ಲೂ ವೈಜ್ಞಾನಿಕವಾದ ಅಂಶಗಳಿವೆ ಎಂಬುದೇ ಈ ಅಧ್ಯಯನದ ಉದ್ದೇಶವಾಗಿದೆ.

ಕರ್ನಾಟಕವನ್ನು ದಕ್ಷಿಣ ಮತ್ತು ಉತ್ತರಕರ್ನಾಟಕವೆಂದು ವಿಭಜಿಸಲಾಗಿದೆ. ಉತ್ತರ ಕರ್ನಾಟಕದಲ್ಲಿ ಬಹಳ ಪ್ರಧಾನವಾದ ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯೂ ಒಂದು. ಇಲ್ಲಿ ಅರಸು ಮನೆತನಗಳು ಹೆಸರಾಗಿದ್ದವು. ಜೊತೆಗೆ ಅನೇಕ ಜಾತಿ, ವರ್ಗ, ವರ್ಣ, ಅಲೆಮಾರಿಗಳು ಬುಡಕಟ್ಟಿನ ಜನರು ಅಲ್ಲದೆ ಅನೇಕ ಸಮುದಯದ ಜನರು ನೆಲೆ ನಿಂತಿದ್ದಾರೆ. ಇಲ್ಲಿ ತಮ್ಮದೇ ಭಾಷೆ, ಸಾಹಿತ್ಯ, ವೇಷ ಭೂಷಣ, ಕಲೆ, ಸಂಪ್ರದಾಯ, ಆಚರಣೆ, ವೈದ್ಯಪದ್ಧತಿ ಮುಂತಾದ ಸಾಂಸ್ಕೃತಿ ಪರಂಪರೆಯನ್ನು ಹೊಂದಿದ್ದು ವೈಶಿಷ್ಟಪೂರ್ಣವಾಗಿವೆ. ಈ ಜಿಲ್ಲೆ ಮ್ಯಾಂಗನೀಸ್ ಹಾಗೂ ಕಬ್ಬಿಣ ಖನಿಜಗಳಿಂದ ವಿಶ್ವವಿಖ್ಯಾತಿಯನ್ನು ಪಡೆದಿದೆ. ಒಟ್ಟಾರೆಯಾಗಿ ಇಲ್ಲಿನ ನೈಸರ್ಗಿಕ ಸಂಪತ್ತನ್ನು ಕುರಿತು ಬ್ರೂಸ್ ಅವರು 'ಇತಿಹಾಸ ಪೂರ್ವಿಕರು' ಈ ಜಿಲ್ಲೆಯಲ್ಲಿ ಶ್ರೀಮಂತವಾಗಿದ್ದಾರೆ ಎಂದಿದ್ದಾರೆ.

ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯ ಉತ್ತರದಲ್ಲಿ ರಾಯಚೂರು ಜಿಲ್ಲೆ ಇದೆ. ಪಶ್ಚಿಮದಲ್ಲಿ ಧಾರವಾಡ ಜಿಲ್ಲೆಯಿದೆ. ದಕ್ಷಿಣದಲ್ಲಿ ಚಿತ್ರರ್ಗು ಜಿಲ್ಲೆ ಮತ್ತು ಪೂರ್ವದಲ್ಲಿ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯಿಂದ ಸುತ್ತವರಿದಿದೆ. ಇಲ್ಲಿನ ಪ್ರಧಾನ ನದಿ ತುಂಗಭದ್ರಾ. ಇದು ಪಶ್ಚಿಮ ಹಾಗೂ ಉತ್ತರ ಮೇರೆಯಾಗಿ ಹರಿಯುತ್ತಿದೆ. ಈ ಜಿಲ್ಲೆಯ ವಿಸ್ತೀರ್ಣ ೯೮೮೫ ಚದರ ಕಿಲೋಮೀಟರ್ ಗಳಷ್ಟಿದೆ.

ಸುಮಾರು ೭ ತಾಲೂಕುಗಳಿವೆ. ಈ ಮಹಾಪ್ರಬಂಧವು ಏಳು ಅಧ್ಯಾಯನಗಳನ್ನು ಅಡಕಗೊಳಿಸಲಾಗಿದೆ. ಜನಪದ ವೈದ್ಯ ಪದ್ಧತಿಗೆ ಸಂಬಂಧಿಸಿದಂತೆ ಆಚರಣೆ, ರೂಢಿ, ಸಂಪ್ರದಾಯ ವಿಧಿವಿಧಾನಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ಜಿಲ್ಲೆಯಲ್ಲಿ ಕಪ್ಪು ಮಣ್ಣಿನ ಪ್ರದೇಶವಿದ್ದು, ಪ್ರತಿಯೊಂದು ತಾಲೋಕುಗಳಲ್ಲಿ ವೈವಿದ್ಯಮಯವಾದ ಕುರುಚಲುಗಿಡಗಳು, ಕಲ್ಲು ಮತ್ತು ಬೆಣಚು ಕಲ್ಲುಗಳಿಂದ ಮಿಶ್ರತವಾಗಿದೆ. ಆದುದರಿಂದ ಜನಪದರು ತಲತಲಾಂತರದಿಂದ ರೂಢಿಸಿಕೊಂಡು ಬಂದಿರುವ ಹಿನ್ನಲೆಯಲ್ಲಿ ಅಧ್ಯಯನ ಮಾಡಿ ಪರಿಶೀಲನೆಗೆ ಒತ್ತು ನೀಡಲಾಗಿದೆ. ಬರೀ ಪ್ರದೇಶವನ್ನು ಒಳಗೊಂಡಿದ್ದರೂ ಒಂದು ಸಂಸ್ಕೃತಿಯ ಬೆನ್ನಲ್ಲೆ ಹಮ್ಮಿಕೊಂಡು ಬಂದಿರುವ ಅಂಶಗಳಷ್ಟು ಗಮನ ಹರಿಸಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಮಾಡುವಾಗ ಅನೇಕ ಸಂದಿಗ್ಧತೆ ಕಂಡುಬಂದರೂ ಎಡೆಬಿಡದೆ ಪ್ರಯತ್ನಿಸಿ ಸುತ್ತಾಡಿದಾಗ ಕೆಲವು ವೈದ್ಯ ಪದ್ಧತಿಯಲ್ಲಿ ಸಾಮ್ಯತೆ ಕಂಡುಬಂದವು. ಮತ್ತೆ ಕೆಲವು ಭಿನ್ನವಾಗಿದ್ದವು. ಅಂತಹ ವೈವಿಧ್ಯಮಯವಾಗಿದ್ದವುಗಳನ್ನು ಕ್ಷೇತ್ರಾಧ್ಯಯನದ ಆಧಾರಗಳಿಂದ ಇಲ್ಲಿ ವಿವರಿಸಲಾಗಿದೆ. ಅನುಭವವಿರುವ ಹಿರಿಯ ನಾಟಿ ವೈದ್ಯರನ್ನು ಸಂದರ್ಶನ ಮಾಡಿ ಅವರ ಸ್ಫೂರ್ತಿ ಹಾಗೂ ಪ್ರೇರಣೆಯಿಂದ ಮಾಹಿತಿಯ ವಿವರಣೆಯನ್ನು ನೆನಪು ಮಾಡಿಕೊಳ್ಳಬಹುದಾಗಿದೆ.

ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯನ್ನು ಜನಪದ ವೈದ್ಯದ ಹಿನ್ನಲೆಯಿಂದ ಆಯ್ದುಕೊಂಡ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಿಸ್ಮಯ ಹಾಗೂ ಸಂತಸವಾದ ಘಟನೆಗಳು ಏಕಕಾಲಕ್ಕೆ ಘಟಿಸಿವೆ. ಬಹುತೇಕವಾಗಿ ಜನಪದವೈದ್ಯರು ತಮ್ಮ ವೈದ್ಯ ಪದ್ಧತಿಯನ್ನು ಹೇಳಿದರೆ ನಮ್ಮನ್ನು ದೇವರು ಕ್ಷಮಿಸುವುದಿಲ್ಲ. ಜೊತೆಗೆ ನಾಟಿಪದ್ಧತಿ ಮರೆತು ಹೋಗುತ್ತದೆ ಎಂಬ ಭೀತಿ ಹುಟ್ಟಿ ನಾಪತ್ತೆಯಾಗುತ್ತಿದ್ದರು. ಅನೇಕ ಬಾರಿ ಅವರ ಹತ್ತಿರ ಹೋಗಿ ಕಾಡಿಬೇಡಿ ಅವರನ್ನು ಸಂತೈಸಿ ಅವರ ಫೋಟೀ ಗಿಡಮೂಲಿಕೆ ಫೋಟೋ ತೋರಿಸಿ, ನೀವು ಮುಂದಿನ ಪೀಳಿಗೆಯವರಿಗೆ ಮಾರ್ಗವಾಗುವಿರಿ ಎಂದು ಮನನ ಮಾಡಿಕೊಟ್ಟಾಗ ಅವರು ಆನಂದ ವ್ಯಕ್ತಪಡಿಸಿರುವುದನ್ನು ಸ್ಮರಿಸಬಹುದಾಗಿದೆ. ಒಬ್ಬ ನಾಟಿ ವೈದ್ಯ ನಿಮ್ಮಂತವರು ಬಂದು ನಮ್ಮ ಮೂಲವಿದ್ಯೆಯಿಂದ ಅನ್ನ ಕಸಿದುಕೊಳ್ಳುತ್ತಿರಿ ನೀವು ನನ್ನ ಹತ್ತಿರ ಬಂದರೆ ಪರಿಣಾಮ ಎದುರಿಸಬೇಕಾಗುವುದು ಎಂದು ಭೀತಿ ಉಂಟು ಮಾಡಿದ. ಆದರೆ ಆತನು ಕೊಟ್ಟ ಮಾಹಿತಿಯಿಂದ ಇಂದಿನ ಡಾಕ್ಟರ್ ಗಳು ನಿಮ್ಮ ನೀತಿಯನ್ನು ಅನುಸರಿಸುವರು ಎಂದು ವಿವರಿಸಿದಾಗ ಸಮಾಧಾನಗೊಂಡು ತಬ್ಬಿಕೊಂಡು ಅವನ ಎಲ್ಲಾ ಜನಪದ ವೈದ್ಯದ ಮಾಹಿತಿ ನೀಡಿ ಆನಂದಿಸಿದ. ಒಟ್ಟಿನಲ್ಲಿ ಈ ತೆರನಾದ ಅಧ್ಯಯನದಿಂದ ಆಳವಾದ ಮಾಹಿತಿಯನ್ನು ಅರಿವು ಮಾಡಿಕೊಂಡ ನನಗೆ ಸಂತಸ ತಂದಿದೆ.

ಅಧ್ಯಾಯ ೨

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಸಂಕ್ಷಿಪ್ತತತೆ

೨

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಸಂಕ್ಷಿಪ್ತತೆ

ಬಳ್ಳಾರಿ ಪದದ ವಿವೇಚನೆ ಹಾಗೂ ಸ್ವರೂಪ

ಬಳ್ಳಾರಿ ಎಂಬ ಹೆಸರು ತುಂಬಾ ಕುತೂಹಲಕರ ಮತ್ತು ವೈಶಿಷ್ಟ್ಯಪೂರ್ಣವಾದುದಾಗಿದೆ. ಇದು ಕರ್ನಾಟಕ ರಾಜ್ಯದ ಜಿಲ್ಲಾ ಕೇಂದ್ರವಾಗಿ ಗುಲ್ಬರ್ಗಾ ವಿಭಾಗದಲ್ಲಿ ವಿಲೀನವಾಗಿದೆ. ಈ ಭಾಗವು 'ಗಂಡು ಮೆಟ್ಟಿನ ನಾಡು' ಎಂದು ಕರೆಯಲ್ಪಟ್ಟಿದೆ. ಇದರಿಂದ ಈ ನಾಡಿನ ಜನತೆ, ವೀರರು, ಧೀರರು, ಪರಾಕ್ರಮಶಾಲಿಗಳಾಗಿ, ಎದುರಾಳಿಗಳಿಗೆ ಸಿಂಹಸ್ವಪ್ನರಾಗಿದ್ದರು. ಇದರೊಂದಿಗೆ ಸದ್ಗುಣಿಗಳು, ಸರಳ ಸ್ವಭಾವದ ವ್ಯಕ್ತಿಗಳಾಗಿದ್ದರೆಂಬ ಪ್ರತೀತಿಯಿದೆ. ಇದಕ್ಕೆ ಪ್ರತೀಕವೆಂಬಂತೆ ಕ್ರಿ.ಶ.೧೪೧೧ರ ಪ್ರೌಢದೇವರಾಯನ ಕಾಲದ ಲಕ್ಷ್ಮೀಧರ ಅಮಾತ್ಯನ ಶಾಸನವು ದೊರೆಯುತ್ತದೆ.

ಬಳ್ಳಾರಿ ಪದದ ನಿಷ್ಪತ್ತಿ ಬೆಳವಣಿಗೆಯನ್ನು ಗಮನಿಸುವುದಾದರೆ ಲಭ್ಯವಿದ್ದ ಗೆಝೆಟಿಯರ್ ನ ಉಲ್ಲೇಖದಂತೆ The Name Bellary with Godess Durugamma whose temple in Gandhinagar Bellary in Poet Jann'S Yashobhar Charita the word Balari 'ಬಳ್ಳಾರಿ' is used mean a Godess and town is said hall derived its name from this word because Durugamma had manifested herself in this town the old district Gazzatter. (ಗ್ಯಾಝಿಟಿಯರ್ ೧೯೯೪)

ಮೇಲೆ ಸೂಚಿಸಿದಂತೆ ಬಳ್ಳಾರಿ ಎಂಬ ಪದವು ಜನ್ನನ 'ಯಶೋಧರ ಚರಿತೆ' ಕೃತಿಯಲ್ಲಿ ಬಳಕೆಯಾಗಿದೆ. ಇದಕ್ಕಿಂತಲೂ ಪೂರ್ವದ ಜನಪದಗೀತೆ ಕಾವ್ಯ ಶಾಸನಗಳಲ್ಲೂ 'ಬಳಾರಿ' ಬಳರಿ ಎಂಬುದು ಪ್ರಸ್ತಾಪವಾಗಿದೆ. ಇದನ್ನು ಗಮನಿಸುವುದಕ್ಕಿಂತ ಮುಂಚೆ ಕಿಟೆಲ್ ಕೋಶದಲ್ಲಿ ಬಳರಿ, ಬಳಾರಿ ಪದದ ಅರ್ಥವ ಬಳಹರಿ ಬಾಳಾರಿ ಎಂಬುದು The demon Balari or Mahakali ಎಂದಿದೆ. ಇಲ್ಲಿ ವಿವರಿಸಿದ ಮಹಾಕಾಳಿ ಕುರಿತಾಗಿ ಹೆನ್ರಿವೈಟ್ ಹೆಡ್ ರವರು The demon Balari or Mahakali

ಎಂದಿದೆ. ಇಲ್ಲಿ ವಿವರಿಸಿದ ಮಹಾಕಾಳಿ ಕುರಿತಾಗಿ ಹೆನ್ರಿವೈಟ್ ಹೆಡ್ ರವರು The south Indian village Gods "Durga is one of the many names of Kali, The wife of siva" ಎಂದು ತಿಳಿಸಿದ್ದಾರೆ. ಇದರಿಂದಲೇ ಶಿವನ ಹೆಂಡತಿಯಾದ ಪಾರ್ವತಿಯ ಹಲವು ಅವತಾರಗಳಲ್ಲಿ ಈ ಬಳರಿ ಒಂದಾಗಿದೆ. ಬಳರಿ ಬಳಾರಿಯು ಸಂಸ್ಕೃತಪದ ಎನ್ನುವುದಾದರೆ ಪದವನ್ನು ವಿಭಜಿಸಿದಾಗ ಬಲೌಅರಿ ಅಥವಾ Bala+Ari= enemy of demon (ಬಳ್ಳಾರಿ ಗೆಝೆಟಿಯರ್ ಪು.೨; ೧೯೭೨) ಎಂದು ಅರ್ಥೈಸುವುದಾದರೆ ಹೆಣ್ಣು ದೇವತೆ ಎಂಬ ಅರ್ಥ ನೀಡಲಾರದು. ಇಲ್ಲಿ ಬಲ ಎಂಬ ರಾಕ್ಷಸನನ್ನು ಇಂದ್ರನು ಕೊಂದ ಇಲ್ಲವೆ ರಾಕ್ಷಸನ ವೈರಿ ಎಂದು ಸೂಚಿಸುತ್ತದೆ. ಆದರೆ 'ಬಳರಿ' ಎಂಬ ಪದವು ತುಂಬಾ ಪ್ರಾಚೀನವೆಂಬುದಂತೂ ಸ್ಪಷ್ಟ. ಇದು ಸಂಸ್ಕೃತಕ್ಕಿಂತಲೂ ಕನ್ನಡದ ಸಹಜ ನಾಮವೇ ಆಗಿರಬೇಕು.

'ಬಳರಿ' ಪದವು ಈ ರೀತಿ ಬಳಕೆಗೊಂಡಿರಬೇಕು. ಅದು ಇಂತಿದೆ : ಭಟಾರಿ> ಭಡಾರಿ> ಭಳಾರಿ>ಬಳರಿ>ಬಳರಿ>ಬಳ್ಳಾರಿ ಎಂದಾಗಿರಬೇಕು. ಮೇಲೆ ಸೂಚಿಸಿದಂತೆ ಕೇಶಿರಾಜನ ಶಬ್ದಮಣಿದರ್ಪಣ ಕೃತಿಯಲ್ಲಿಯ ಸೂತ್ರದಂತೆ ಟ ಕಾರವು ಡ ಕಾರ ಆದೇಶವಾಗಿ ಬಳಸಲ್ಪಟ್ಟಿರಬೇಕು. ನಂತರ ಡ್ ಳ ಅಂದರೆ "ಡಕಾರಂ ಬೆಟ್ಟಿತ್ತಾಗಿ ಉಚ್ಚರಿಸಿದೊಡೆ 'ಳ' ಕಾರಂಬರೆಗುಂ" ಎಂದಂತೆ ಡ > ಳ ಆಗಿರಬೇಕು. ಗ್ರಾಮೀಣ ಜನರಲ್ಲಿ ಭಡಾರಿ ಶಬ್ದವು ಸರ್ವೇಸಾಮಾನ್ಯವಾಗಿದೆ. ಭಡಾರಿಯಂತಿರುವವಳು. ಭಡಾಯಿ ಕೊಚ್ಚಿಕೊಳ್ಳುವವಳು, ಸ್ವಸಾಮರ್ಥ್ಯದಂತೆ ನಿಲುವು ಕೈಕೊಳ್ಳುವವಳು ಎಂದಾಗುತ್ತದೆ. ಇದಲ್ಲದೆ ಊರಿನ ಹೆಸರು ದೇವತೆಗಳ ಹೆಸರಿನಿಂದ ಆರಂಭವಾದಂತೆ ಉದಾಹರಣೆಗೆ ಬಸವನದುರ್ಗ, ಅನಂತಶಾಯನಗುಡಿ ಆದಂತೆ ಇಲ್ಲಿ ಬಳರಿ ದೇವತೆಗಳ ಹೆಸರಿನಿಂದ ಆರಂಭವಾದಂತೆ ಉದಾಹರಣೆಗೆ ಬಸವನದುರ್ಗ, ಅನಂತಶಯನಗುಡಿ ಆದಂತೆ ಇಲ್ಲಿ ಬಳರಿ ದೇವತೆಗಳ ಹೆಸರಿನಿಂದ ಆರಂಭವಾದಂತೆ ಉದಾಹರಣೆಗೆ ಬಸವನದುರ್ಗ, ಅನಂತಶಯನಗುಡಿ ಆದಂತೆ ಇಲ್ಲಿ ಬಳರಿ ದೇವತೆಗೆ ಸಂಬಂಧಿಸಿದಂತೆ 'ಬಳ್ಳಾರಿ ದುರ್ಗಮ್ಮ' ಎಂದು ಈಚೆಗೆ ಬಳಸಲಾಗುತ್ತಿದೆ. ಬಹುಶಃ ಬಳರಿಯು ಉಗ್ರ ಸ್ವರೂಪದವಳು ಆದಂತೆ ದುರ್ಗೆಯ ಉಗ್ರಸ್ವರೂಪದವಳು ಎಂಬ ಸಾಮ್ಯತೆಯಂತೆ ಇಲ್ಲಿ ಕೂಡಲಸಂಗಮ, ಚಪ್ಪನ್ನ ಐವತ್ತಾರು ಎಂದು ಕರೆಯುವಂತೆ ಬಳ್ಳಾರಿ ದುರ್ಗಮ್ಮ ಎಂದು ಪ್ರಸ್ತುತದಲ್ಲಿ ಎನಿಸುತ್ತದೆ.

ಬಳ್ಳಾರಿ ಪದದ ಉಲ್ಲೇಖವು ತುಂಬಾ ಸ್ವಾರಸ್ಯಕರವಾಗಿದೆ. ಇದರ ಉತ್ಪತ್ತಿ ಕಾವ್ಯಗಳಲ್ಲಿ ಶಾಸನಗಳಲ್ಲಿ ಜನಪದ ಗೀತೆ ಹಾಗೂ ದಂತಕಥೆಗಳಲ್ಲಿ ಉಲ್ಲೇಖಗೊಂಡಿದೆ. ಸ್ಕಂದ ಪುರಾಣದಲ್ಲಿ

ಬಳ್ಳಾರಿ ಪ್ರದೇಶವನ್ನು 'ಲೋಹಾಚಲ' ಎಂದು ಕರೆಯಲಾಗಿದೆ. ಇತರೆ ಪ್ರಾಚೀನ ಕಾವ್ಯಗಳಲ್ಲಿ 'ಜಂಬೂದ್ವೀಪ' ಎಂದು ಕರೆಯುತ್ತಿದ್ದರು. ಬಳ್ಳಾರಿ ಪದವು ಉಗ್ರ ಸ್ತ್ರೀ ಸೂಚಕ. ವ್ಯಕ್ತಿಸೂಚಕ, ರಾಕ್ಷಸಸೂಚಕ, ಶಿವಶರಣರ ಸೂಚಕವಾಗಿ ಬಳಕೆಯಾಗಿದೆ.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬಳರಿ-ಬಳಾರಿ ಪದದ ಬಳಕೆಯಾಗಿದೆ. ಅವುಗಳಲ್ಲಿ ಕ್ರಿ.ಶ.೧೦೪೦ರ ಚಂದ್ರರಾಜನ ಮದನ ತಿಲಕವೆಂಬ ಕಾಮಶಾಸ್ತ್ರ ಗ್ರಂಥದಲ್ಲಿ ಈ ರೀತಿ ನಿರೂಪಿತವಾಗಿದೆ.

ಬಳರಿಯ ನೋಂಪಿಗೆ ಬೀದಿಗೆ
ಮುಳಿವರ ಮನೆಗಳ್ಗೆ ಮದ್ಯ ಪೀಗಳಲ್ಲಿಗೆ
ಕೋಮಳೆಯಂ ಪೋಗಲಿತ್ತಡೆ
ಬಳರಿಗೆ ಪುಯ್ಯಲಿಡವೋದ ಕುರಿಯಂತಕ್ಕುಂ (ಮದನತಿಲಕ)

ಗೌರವಸ್ಥ ಸ್ತ್ರೀಯರು ಉಗ್ರಸ್ವರೂಪದ ಬಳರಿಯ ಕಂಡು ಭೀತಿಗೊಳಗಾಗಬಹುದೆಂದು ಬಳರಿ ನೋಂಪಿಗೆ ಹೋಗಕೂಡದೆಂದು ಮೇಲಿನ ಪದ್ಯದಿಂದ ಬಳಾರಿಯ ಬಗ್ಗೆ ಆಗಲೇ ಜನಸಾಮಾನ್ಯರ ದೇವತೆಯಾಗಿ ಪರಿಚಿತಳಿದ್ದಳು ಹಾಗೂ ಅಲ್ಲಿ ಜರುಗುವ ಕುರಿಬಲಿಯನ್ನು ಕವಿಯು ಗಮನಿಸಿರಬೇಕೆಂದು ತಿಳಿಯುತ್ತದೆ. ಇದರಿಂದಲೇ ಕುಲವಧುವನ್ನು ಬಳರಿ ನೋಂಪಿಗೆ ಹೋಗಕೂಡದೆಂದು ನಿಷೇಧಿಸಿರುವುದು ವ್ಯಕ್ತವಾಗುತ್ತದೆ.

ಕ್ರಿ.ಶ.೧೧೦೦ರ ಬ್ರಹ್ಮಶಿವ ಸಮಯಪರೀಕ್ಷೆ ಎಂಬ ಕೃತಿಯಲ್ಲಿ ಬಳರಿ ಎಂಬುದು ಅನೇಕ ಬಾರಿ ಬಳಕೆಯಾಗಿದೆ. ಈ ಪದ್ಯದಲ್ಲಿ ಬನದ ಬಳಾರಿ ಎಂತಲೂ ಬಳಸಲಾಗಿದೆ.

ಎಕ್ಕಲದೇವಿಗಮಮಾ
ಲಕ್ಕನಿಗಂ ಬನದ ಬಳರಿಗಂ ಮೈಲಾರಂ
ಗಳ್ಕದೆ ಜಾತ್ರೆಯನಾಳ್ವಂ
ಮಕ್ಕಳಗಂ ಜೈನನಲ್ಲನೆಂತು ಕಾಳಂ

(ಉದ್ಧೃತ : ತಗಯ್ಯ, ಜೆ.ಎಂ. ಪು.೩ ೧೯೯೧)

ಈ ಪದ್ಯದಲ್ಲಿ ಬಳಸಿದ ಎಕ್ಕಲದೇವಿಗೆ ಮಾಲಕ್ಕನಿಗೆ, ಬನದ ಬಳರಿಗೆ ಮೈಲಾರಿಗೆ ಅಳುಕದೆ ಜಾತ್ರೆಯನ್ನು ಮಾಡುವವರಿಗೆ ಬ್ರಹ್ಮಶಿವನು ಖಂಡಿಸಿದ್ದಾನೆ. ಬ್ರಹ್ಮಶಿವನ ಇದೇ ಕೃತಿಯಲ್ಲಿ ಬಂಧುವರ್ಮನನ್ನು ಸ್ತುತಿಸಿದ್ದರಿಂದ ಆತನ ಜೀವನ ಸಂಶೋಧನೆಯಲ್ಲಿ 'ಗಿರಿವಾಸಿ'ನಿ ಎಂಬ ಉಕ್ತಿ

ಕಂಡುಬರುತ್ತದೆ. ಇದರಿಂದ ಪ್ರೇರಣೆಗೊಂಡ ಬ್ರಹ್ಮಶವನು ಗಿರಿವಾಸಿನಿಯು ಗಿರಿವಾಸದಲ್ಲಿರುವವಳು ಎಂಬಂತೆ ಅರ್ಥೈಸಿ ಬನದ ಬಳಾರಿಯಾಗಿ ಬಳಸಿರಬೇಕೆನಿಸುತ್ತದೆ.

ಅನಂತರದ ಕ್ರಿ.ಶ.೧೨೩೦ರ ಜನ್ನನ ಯಶೋಧರ ಚರಿತೆಯಲ್ಲಿ ಪ್ರಸ್ತಾಪಿತವಾದಂತೆ ರಾಜಪುರ ಪಟ್ಟಣದ ದಕ್ಷಿಣ ದಿಕ್ಕಿನಲ್ಲಿ ಜೀವಹತಿಯಿಂದ ಸುಖಪಡುವ ಪಾಪಕುಳಾ ಪಂಡಿತೆ ಚಂಡಮಾರಿದೇವತೆ ಇದ್ದಳು. ಆಶ್ವಯುಜಚೈತ್ರಮಾಸದಲ್ಲಿ ಜಾತ್ರೆ ಮಾಡದಿದ್ದರೆ ಊರ ಜನರನ್ನೇ ನಾಶಮಾಡುತ್ತಿದ್ದಳು. (ಹಿರೇಮಠದ ಎಸ್.ಎಸ್.ಸಾಧನೆ-ತ್ರೈಮಾಸಿಕ ೧೯೭೮). ಕಾವ್ಯದಲ್ಲಿಯೇ ಮುಂದುವರೆದು ಹೇಳುವ ಜನ್ನನು ಚಂಡಕರ್ಮನೆಂಬ ತಳಾರನು ರಾಜನ ಅಪ್ಪಣೆಯಂತೆ ಉತ್ತಮ ಲಕ್ಷಣದ ಮಾನವ ಜೋಡಿಯನ್ನು ಬಲಿನೀಡಲು 'ಬಳರಿಯ ಬನದಿಂದ ಪೊನಮಟ್ಟನು' ಎಂದಿದೆ. ಇದಲ್ಲದೆ ಬಳಿ ನೀಡದೇ ಇದ್ದದ್ದಕ್ಕೆ ಹಿಟ್ಟಿನ ಕೋಳಿಯನ್ನು ಬಲಿ ನೀಡಿದ ಪ್ರಸಂಗವು ಕಾಣಸಿಗುತ್ತದೆ.

ಕ್ರಿ.ಶ.೧೩೬೯ರ ಭೀಮಕವಿಯ ಬಸವಪುರಾಣದಲ್ಲಿ 'ದಿಟ್ಟ ಬಳಹರಿ ಮಾರಿಗೆ' ಎಂದಿದ್ದರೆ, ಕ್ರಿ.ಶ.೧೪೫೦ರ ಚತುರಾಸ್ಯ ನಿಘಂಟುವಿನಲ್ಲಿ ಬಳಾರಿ-ಮಹಾಕಾಳಿ ಎಂದು ಬಳಸಲಾಗಿದೆ. ಕ್ರಿ.ಶ.೧೬೫೦ರ ರಾಜಶೇಖರ ವಿಳಾಸ ಕೃತಿಯಲ್ಲಿ ಒಬ್ಬ ಸೂಳೆಯು ಮೋಸ ಮಾಡಿದ ವ್ಯಕ್ತಿಯೊಬ್ಬನಿಗೆ ಬಲಿಕಟ್ಟಿ ಮನ್ಮಥ ಬಳಾರಿಗೆ ದೊಡ್ಡ ಕುರಿಮಾಡಿ ಕಡಿಯುತ್ತೇನೆ.... ಇಲ್ಲಿ ಬಳರಿಗೆ ಕುರಿ ಬಲಿಕೊಟ್ಟಂತೆ ಕಡಿಯಬೇಕು ಎಂಬುದರ ಜೊತೆಗೆ 'ಮನ್ಮಥ ಬಳರಿ' ಎಂಬ ವಿಶೇಷ ಪದದ ಬಳಕೆ ಕಂಡುಬರುತ್ತದೆ.

೨.೧. ಭೌಗೋಳಿಕತೆ

ರಾಜ್ಯದ ನಕ್ಷೆ ಪ್ರಕಾರ ಈ ಜಿಲ್ಲೆಯು ಪೂರ್ವಭಾಗದ ಮಧ್ಯದಲ್ಲಿದ್ದು ನಂದಿ ಆಕಾರದಲ್ಲಿರುವಂತೆ ಗೋಚರಿಸುತ್ತದೆ. ಈ ಜಿಲ್ಲೆಯ ಪಶ್ಚಿಮಕ್ಕೆ ಧಾರವಾಡ, ಉತ್ತರಕ್ಕೆ ರಾಯಚೂರು, ದಕ್ಷಿಣಕ್ಕೆ ಚಿತ್ರದುರ್ಗ, ಪೂರ್ವಕ್ಕೆ ಆಂಧ್ರಪ್ರದೇಶಗಳಿವೆ. ಪೂರ್ವಪಶ್ಚಿಮ ಭಾಗವು ೧೬೧.೮ ಕಿ.ಮೀ ಉದ್ದ, ಉತ್ತರ-ದಕ್ಷಿಣ ೮೩; ೭೮ ಕಿ.ಮೀ. ಅಗಲವಾಗಿದೆ. ನೈರುತ್ಯ-ಈಶಾನ್ಯ ೧೮೭.೮ ಕಿ.ಮೀ. ಉದ್ದವಾಗಿದ್ದು ಪೂರ್ವ ರೇಖಾಂಶವು ೭೫ ಡಿಗ್ರಿ ೪೦-೭೦'೧೧' ಹಾಗೂ ಉತ್ತರ ರೇಖಾಂಶ ೧೪ ಡಿಗ್ರಿ ೩೦-೧೫'೫೦' ನಡುವ ಇದೆ (ಕರ್ನಾಟಕ ಗೆಝೆಟಿಯರ್). ಪ್ರಮುಖವಾಗಿ ಬಳ್ಳಾರಿ ಹೊಸಪೇಟೆ ಎಂಬ ಎರಡು ಉಪವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಮದರಾಸು ಪ್ರಾಂತಕ್ಕೆ ಸೇರಿದ ಬಳ್ಳಾರಿಯಲ್ಲಿ ಆದೋನಿ, ಆಲೂರು ಮತ್ತು ರಾಯದುರ್ಗ ತಾಲೂಕುಗಳು ಸೇರ್ಪಡೆಯಾಗಿದ್ದವು.

೧೯೫೩ರಂದು ಆಂಧ್ರಪ್ರದೇಶವು ಭಾಷಾವಾರು ಪ್ರಾಂತದಿಂದ ವಿಭಜನೆಗೊಂಡಾಗ ಈ ಮೂರು ತಾಲೂಕುಗಳು ಆಂಧ್ರಪ್ರದೇಶಕ್ಕೆ ಸೇರಿದವು. ಇವುಗಳನ್ನು ಕಳೆದುಕೊಂಡು ಬಳ್ಳಾರಿ ಜಿಲ್ಲೆಯು ಬಡವಾಯಿತು. ಈಗಿರುವ ಎಂಟು ತಾಲ್ಲೂಕುಗಳಲ್ಲಿ (ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಶಿರುಗುಪ್ಪ, ಸಂಡೂರು, ಹರಪನಹಳ್ಳಿ). ಹರಪನಹಳ್ಳಿಯ ದಾವಣಗೆರೆಗೆ ಸೇರಿದ್ದರಿಂದ ಏಳು ತಾಲ್ಲೂಕುಗಳು ಹಾಗೂ ೧೧ ಪಟ್ಟಣಗಳು ಮತ್ತು ೬೨೩ ಗ್ರಾಮವನ್ನೊಳಗೊಂಡ ಜಿಲ್ಲೆ ಇದಾಗಿದೆ. ಈ ಜಿಲ್ಲೆಯು ೯೮೮೮ ಕಿ.ಮೀ ವಿಸ್ತೀರ್ಣದಲ್ಲಿ ೧೧,೨೨, ೬೮೬ ಜನಸಂಖ್ಯೆಯನ್ನು ಹೊಂದಿದೆ.

ಈ ಜಿಲ್ಲೆಯ ಪಶ್ಚಿಮ, ವಾಯುವ್ಯ, ಉತ್ತರ ಮತ್ತು ಈಶಾನ್ಯದ ಗಡಿಭಾಗದಿಂದ ತುಂಗಭದ್ರಾ ನದಿಯ ಹರಿವು ಇದೆ. ಪಶ್ಚಿಮಕ್ಕೆ ಧಾರವಾಡ ಹಾಗೂ ಉತ್ತರಕ್ಕೆ ರಾಯಚೂರು ಜಿಲ್ಲೆಯಲ್ಲಿ ಈ ನದಿಯು ಬೇರ್ಪಡುತ್ತದೆ. ಆದರೆ ವಾಯುವ್ಯದಿಂದ ಆಗ್ನೇಯದವರೆಗೂ ಹಬ್ಬಿರುವ ಸಂಡೂರು ಬೆಟ್ಟಗಳು ಜಿಲ್ಲೆಯನ್ನು ಪೂರ್ವಪಶ್ಚಿಮವಾಗಿ ಎರಡು ಪ್ರಮುಖ ಭೌಗೋಳಿಕ ವಿಭಾಗಗಳಾಗಿ ವಿಂಗಡಿಸಿವೆ. ಬಳ್ಳಾರಿಯ ಪೂರ್ವಭಾಗವು ಸಿರುಗುಪ್ಪ ತಾಲ್ಲೂಕನ್ನು ಒಳಗೊಂಡಿದೆ. ಸಮತಟ್ಟಾದ ಪ್ರದೇಶದಲ್ಲಿ ಹತ್ತಿ ಬೆಳೆಯಲು ಯೋಗ್ಯವಾದ ಕಪ್ಪುಮಣ್ಣಿನ ಬಯಲಲ್ಲಿ ಮರಗಿಡಗಳ ಸಂಖ್ಯೆ ಕಡಿಮೆ ಇವೆ. ಅಲ್ಲಲ್ಲಿ ಕಲ್ಲುಬೆಟ್ಟಗಳು ಯಥೇಚ್ಛವಾಗಿ ಕಾಣಸಿಗುತ್ತವೆ. ಪಶ್ಚಿಮಭಾಗದಲ್ಲಿ ಕಪ್ಪುಮಣ್ಣಿನ ಬಯಲು ಮತ್ತು ಅಧಿಕಭಾಗದ ಕಪ್ಪು ಕೆಂಪುಮಿಶ್ರಿತ ಮಣ್ಣು ಇಲ್ಲಿದೆ. ಈ ಪ್ರದೇಶದ ಹಡಗಲಿ ತಾಲ್ಲೂಕು ಬಿಟ್ಟರೆ ಉಳಿದೆಡೆ ಕಾಡು ಮತ್ತು ಬೆಟ್ಟ ಗುಡ್ಡಗಳಿವೆ.

ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗವು ಪೂರ್ವಭಾಗಕ್ಕಿಂತಲೂ ಎತ್ತರವಾಗಿದ್ದು ಇಲ್ಲಿ ಮಳೆಯು ಅಧಿಕವಾಗಿ ಬೀಳುತ್ತದೆ. ತುಂಗಭದ್ರಾನದಿಯ ಮಲ್ಲಾಪುರಂ ಬಳಿಯವರೆಗೂ ಸಂಡೂರು ಬೆಟ್ಟದ ಸಾಲು ಹಬ್ಬಿದೆ. ಆಗ್ನೇಯದ ಕಡೆಗೆ ಸುಮಾರು ೪೮ ಮೀ. ದೂರ ವಿಸ್ತಾರವಾಗಿದೆ. ಈ ಬೆಟ್ಟದ ಮಧ್ಯಭಾಗದಲ್ಲಿ ನಾರಿಹಳ್ಳದ ಎರಡು ಕಮರಿಗಳಿವೆ. ಸಂಡೂರಿಗೆ ಮುಕುಟ ಪ್ರಾಯವಾಗಿರುವ ಕುಮಾರಸ್ವಾಮಿ ದೇವಾಲಯವು ಬೆಟ್ಟದ ಸಮುದ್ರ ಮಟ್ಟದಿಂದ ೧೦೩೬ ಮೀ. ಎತ್ತರದಲ್ಲಿದೆ. ಇದರ ಮಧ್ಯದಲ್ಲಿರುವ ರಾಮನ ಮಲೈ ೯೯೨ ಮೀ. ಹಾಗೂ ಜಂಬುನಾಥ ಬೆಟ್ಟವು ೯೦೮ ಮೀ. ಎತ್ತರದಲ್ಲಿವೆ.

ಸಂಡೂರಿನ ಪೂರ್ವಭಾಗದಲ್ಲಿರುವ ವಾಯುವ್ಯದಿಂದ ಆಗ್ನೇಯದವರೆಗೆ ಹಬ್ಬಿರುವ ಸುಗ್ಗಮಹದೇವಬೆಟ್ಟ ಅಥವಾ ತಾಮ್ರಪರ್ವತ ಶ್ರೇಣಿಯು ದರೋಜಿ ಕೆರೆಯವರೆಗೂ ೪೨ ಕಿ.ಮೀಗಳಷ್ಟು ಉದ್ದವಿದೆ. ಇದರ ಎತ್ತರವು ೧೦,೦೦೨ ಮೀ ಇದೆ. ಈ ಭಾಗದ ನೈಋತ್ಯಕ್ಕೆ ೪೮ ಕಿ.ಮೀ.

ದೂರದಲ್ಲಿರುವ ಮಲ್ಲಪ್ಪನ ಗುಡ್ಡದ ಶ್ರೇಣಿಯು ಹಡಗಲಿ, ಹರಪನಹಳ್ಳಿಯವರೆಗೂ ವ್ಯಾಪಿಸಿದೆ. ತುಂಗಭದ್ರಾ ಬಳಿ ಹೊನ್ನೂರಿನ ಹತ್ತಿರ ಆರಂಭವಾಗಿ ಆಗ್ನೇಯದವರೆಗೂ ಹಬ್ಬಿ ಸುಮಾರು ೪೦ ಕಿ.ಮೀ ದೂರವನ್ನು ಹೊಂದಿದೆ. ಇದು ಮುಂದೆ ಚಿಕ್ಕಹಗರಿ ಕಣಿವೆ ಬಳಿ ಕಡಿದು ಹೋಗಿ ಮುಂದೆ ೧೧ ಕಿ.ಮೀ ದೂರದಲ್ಲಿ ಕಾಣಿಸಿಕೊಂಡು ಚಿತ್ರದುರ್ಗ ಜಿಲ್ಲೆಯುವರೆಗೂ ಹಬ್ಬಿದೆ.

ಮಲ್ಲಪ್ಪನಗುಡ್ಡ ಶ್ರೇಣಿಯ ಎತ್ತರವು ಮೀ. ಇದ್ದು ಇದರ ನೈರುತ್ಯಕ್ಕೆ ೧೩-೧೬ ಕಿ.ಮೀ ಅನತಿ ದೂರದಲ್ಲಿ ವಾಯುವ್ಯದಿಂದ ಆಗ್ನೇಯಕ್ಕೆ ಕಲ್ಲಹಳ್ಳಿ ಗುಡ್ಡದವರೆಗೂ ಈ ಶ್ರೇಣಿಯಿದೆ. ಇಲ್ಲಿರುವ ಅತಿದೊಡ್ಡದಾದ ಕಲ್ಲಹಳ್ಳಿ ಗುಡ್ಡವು ೮೫೩ ಮೀ. ಎತ್ತರವಿದೆ. ಇದು ೧೪ ಕಿ.ಮೀ. ದೂರದಲ್ಲಿ ಕವಲೊಡೆದು ತೆಲಗಿ ಗುಡ್ಡದವರೆಗೂ ಮಾರ್ಪಟ್ಟು ಇದು ಮುಂದೆ ಹರಪನಹಳ್ಳಿಯ ದಕ್ಷಿಣ ಗುಡ್ಡದವರೆಗೂ ಹಬ್ಬಿದೆ. ಈ ಗುಡ್ಡಗಳಲ್ಲಿ ನರಸಿಂಹದೇವರ ಗುಡ್ಡವು ೭೭೫ ಮೀ. ಎತ್ತರವಿದೆ. ಈ ಶ್ರೇಣಿಯ ದಕ್ಷಿಣ ಭಾಗದ ಉಚ್ಚಂಗಿ ದುರ್ಗದ (೮೧೫ ಮೀ.)ವರೆಗೂಕ ತಲುಪಿದೆ. ಕೂಡ್ಲಿಗಿ ಬೆಟ್ಟದ ಶ್ರೇಣಿಯು ಉತ್ತರ ಮತ್ತು ಪೂರ್ವಭಾಗದಲ್ಲಿ ಹಾದುಹೋಗುತ್ತದೆ. ಇದರಲ್ಲಿ ಅನೇಕಲ್ ದುರ್ಗವು (೭೨೪ ಮೀ) ಮತ್ತು ಜರಿಮಲೆ ದುರ್ಗವು ೮೩೮ ಮೀ. ಒಳಗೊಂಡಿದೆ. ಸಂಡೂರಿನ ಚೋರನೂರು ಸಮೀಪದ ಗುಡಿಕೋಟೆ ಶ್ರೇಣಿಯಿಂದ ಆರಂಭವಾಗಿ ಕೂಡ್ಲಿಗಿ ತಾಲ್ಲೂಕಿನ ಗುಡೆಕೋಟೆದುರ್ಗದ ಉತ್ತರದವರೆಗೂ ಹಬ್ಬಿ ಚೆನ್ನಹಗರಿ ಕಣಿವೆ ದಾಟಿ ಚಿತ್ರದುರ್ಗದ ಸೆರಗಿನಲ್ಲಿ ಹಾಯುತ್ತದೆ. ಇದರ ದಕ್ಷಿಣ ಭಾಗದಲ್ಲಿರುವ ಕೈಲಾಸಕೊಂಡ ಶಿಖರವು ೯೧೭ ಮೀ. ಎತ್ತರವಿದೆ. ಈ ಭಾಗವು ಹೆಚ್ಚು ಅರಣ್ಯಭರಿತವಾಗಿದೆ. ಈ ಜಿಲ್ಲೆಯ ಉತ್ತರ ಭಾಗದಲ್ಲಿ ಆಲೂರು ಗುಡ್ಡವಿದೆ. ಮತ್ತೊಂದು ಶ್ರೇಣಿ ಸುತ್ತಮುತ್ತಗುಡ್ಡ ಸಮೂಹಗಳಾಗಿ ಮಾರ್ಪಟ್ಟಿದೆ. ಈ ಭಾಗದ ಇನ್ನಿತರೆ ಗುಡ್ಡಗಳಲ್ಲಿ ದರೋಜಿ, ಕಂಪ್ಲಿ ಮತ್ತು ಕುರುಗೋಡು ಬಳಿಯ ಗುಡ್ಡಗಳು ಪ್ರಮುಖವಾದವುಗಳಾಗಿವೆ.

ಈ ಜಿಲ್ಲೆಗೆ ತುಂಗಭದ್ರಾನದಿ ವರದ ಪ್ರತಿರೂಪವಾಗಿದೆ. ಹಗರಿ ಅಥವಾ ವೇದಾವತಿ ಮತ್ತು ಚಿಕ್ಕಹಗರಿಗಳು ತುಂಗಭದ್ರಾನದಿಯ ಉಪನದಿಗಳಾಗಿವೆ. ಪಶ್ಚಿಮ ಮತ್ತು ಉತ್ತರದಂಚಿಗೆ ಗಡಿರೇಖೆಯಾಗಿ ಈ ನದಿಯು ಹರಿಯುತ್ತಿದೆ. ಇದು ಹರಪನಹಳ್ಳಿಯ ಕಡತಿ ಗ್ರಾಮದಿಂದ ಪ್ರವೇಶಿಸಿ ಹರಪನಹಳ್ಳಿ, ಹಡಗಲಿ, ಹೊಸಪೇಟೆ ಮತ್ತು ಸಿರುಗುಪ್ಪ ತಾಲ್ಲೂಕುಗಳ ಉತ್ತರದ ಎಲ್ಲೆಯಾಗಿ ೩೨೨ ಕಿ.ಮೀ ದೂರ ಹರಿಯುತ್ತದೆ. 'ತುಂಗಾಪಾನಂ ಗಂಗಾಸ್ನಾನಂ' ಎಂಬ ನಾಣ್ಣುಡಿಯನ್ನು ಈ ನದಿ ಸಾರ್ಥಕಗೊಳಿಸಿದೆ. ಮಲ್ಲಾಪುರ ಎಂಬ ಊರಿನಲ್ಲಿ ತುಂಗಭದ್ರಾ ಅಣೆಕಟ್ಟು ನಿರ್ಮಿತವಾಗಿದೆ. ಇದು ಮೊದಲು ಉಪತಾಲ್ಲೂಕು ಆಗಿತ್ತು. ದೇಶನೂರು ದ್ವೀಪವು ೯.೫ ಕಿ.ಮೀ. ಉದ್ದ ಇದ್ದು ಇದು ನದಿಯ ಮಧ್ಯಭಾಗದಲ್ಲಿದೆ.

ಹಗರಿ ಹೊಳೆಯು ತುಂಗಭದ್ರಾನದಿಯ ಉಪನದಿಯಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮುಳ್ಳಯ್ಯನ ಗಿರಿಯಲ್ಲಿ ಹುಟ್ಟಿ ಅನಂತರ ಚಿತ್ರದುರ್ಗ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಕೂಡ್ಲಿಗಿ, ಹಡಗಲಿ ತಾಲ್ಲೂಕುಗಳಲ್ಲಿ ಹರಿದು ತುಂಗಭದ್ರಾನದಿಯನ್ನು ಕೂಡುತ್ತದೆ. ಚಿಕ್ಕ ಹಗರಿಯು ಕೂಡ್ಲಿಗಿ ತಾಲ್ಲೂಕಿನಿಂದ ಹರಿದು ಹಗರಿಗೆ ಸೇರುತ್ತದೆ. ಇದಲ್ಲದೆ ಸಣ್ಣಪುಟ್ಟ ತೊರೆಗಳಿಂದ ನೀರಾವರಿಗೆ ತುಂಬಾ ಉಪಯುಕ್ತವಾಗಿದೆ. ಇಲ್ಲಿರುವ ತೊರೆಗಳಲ್ಲಿ ಹಗ್ಗನೂರು ತೊರೆ, ಹಂಪಸಾಗರ ಹೊಳೆ, ಚೆಲ್ಲ ಹುಣಸಿಹೊಳೆ, ಗೌರೀಪುರ ಹೊಳೆ, ನಾರಿಹಳ್ಳಗಳಿವೆ. ಇದರೊಂದಿಗೆ ೨೨ ದೊಡ್ಡ ಕೆರೆಗಳು, ೧೭೦ ಕೆರೆಗಳು ಈ ಜಿಲ್ಲೆಯಲ್ಲಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಉಷ್ಣತೆ ಅಧಿಕ. ಸಂಡೂರು ತಾಲ್ಲೂಕಿನ ಅರಣ್ಯ ಪ್ರದೇಶಗಳಲ್ಲಿ ಬಿಟ್ಟರೆ ಉಳಿದಂತೆ ಹೆಚ್ಚು ಮಳೆ ಬೀಳುವ ಸಂಭವ ಕಡಿಮೆ. ಏಕೆಂದರೆ ಇಲ್ಲಿ ಮರಗಿಡಗಳು ತುಂಬಾ ವಿರಳವಾಗಿವೆ. ಈ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶವು ೧೬೧೮.೭೫ ಕಿ.ಮೀಗಳು ಇಲ್ಲಿರುವ ಕುರುಚಲು ಕಾಡಿನಲ್ಲಿಯ ಮರಗಳು ಎಲೆ ಉದುರುವ ಸ್ಥಿತಿ ಕಾಣುತ್ತದೆ.

ಸಂಡೂರು ಬೆಟ್ಟ ಶ್ರೇಣಿಗಳಲ್ಲಿ ಶ್ರೀಗಂಧ ಮತ್ತು ಬೀಟೆ ಮರಗಳು ಅಧಿಕವಾಗಿವೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಈಚಲು ಮರಗಳಿವೆ. ಈ ಅರಣ್ಯಗಳಲ್ಲಿ ಕಾಡುಹಂದಿ. ಜಿಂಕೆ, ಕಡವೆ, ಚಿರತೆಗಳಿವೆ. ಇಲ್ಲಿ ಜೇನು ಮತ್ತು ದಿಂಡಿಗದ ಅಂಟು ದೊರೆಯುವುದು. ಸಂಡೂರು ಸುತ್ತಮುತ್ತಲಿನ ಬೆಟ್ಟಗಳಲ್ಲಿ ಹುಲಿಗಳಿದ್ದರೆ ದರೋಜಿ ಮತ್ತು ಕೂಡ್ಲಿಗಿಯ ಅಡವಿ ಪ್ರದೇಶಗಳಲ್ಲಿ ಕರಡಿಗಳಿವೆ. ಅಲ್ಲದೆ ಜಿಂಕೆ, ತೋಳ, ಕತ್ತೆ ಕಿರುಬ ಈ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಕಾಣಸಿಗುತ್ತವೆ. ತುಂಗಾನದಿಯಲ್ಲಿ ಮೊಸಳೆಗಳಿವೆ. ಈ ಪ್ರದೇಶದ ಆಸುಪಾಸಿನಲ್ಲಿ ಜೊತೆಗೆ ನವಿಲು, ಹದ್ದು, ಪಾರಿವಾಳ, ಗಿಡುಗ ಮೊದಲಾದ ಪಕ್ಷಿಗಳು ಹಾಗೂ ನಾಗರಹಾವು, ಹೆಬ್ಬಾವು, ಕಟುಗದ ಹಾವುಗಳು ಕಂಡುಬರುತ್ತವೆ.

೨.೨. ಇತಿಹಾಸ

ಇತಿಹಾಸವನ್ನು ಹುಡುಕಿಕೊಳ್ಳದ ಜನಾಂಗವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಈ ಕ್ರಿಯೆ ಜಗತ್ತಿನಾದ್ಯಂತ ಜರುಗುತ್ತ ಬಂದಿದೆ. (ಕಲಬುರ್ಗಿ ಎಂ.ಎಂ. ಪ್ರಸ್ತಾವನೆ; ೧೯೮೪) ಎಂಬುದು ಪ್ರಸ್ತುತದಲ್ಲಿ ಗೊಂದಲಕ್ಕೀಡು ಮಾಡುವ ಸಂಗತಿಯಾದರೂ ಸಹ ಇದನ್ನೇ ಅಳವಡಿಸಿಕೊಂಡಿರುವುದು ಗಮನಕ್ಕೆ ಬರುತ್ತದೆ. ಅಂತೆಯೇ ಬಳ್ಳಾರಿ ಪ್ರದೇಶವು ಐತಿಹಾಸಿಕ ಮಹತ್ವವನ್ನು ಹೊಂದಿದೆ. ಪ್ರಾಚ್ಯಸಂಶೋಧನದ ಫಲಿತದಿಂದ ದೊರೆತ ಮಾಹಿತಿಗಳಿಂದ ಹಳೆಯ ಶಿಲಾಯುಗದಿಂದ ಕಬ್ಬಿಣಯುಗದವರೆಗಿನ ಪಳೆಯುಳಿಕೆಗಳು ಜಿಲ್ಲೆಯ

ಕಪ್ಪುಗಲ್ಲು, ಸಂಗನಕಲ್ಲು, ತೆಕ್ಕಲಕೋಟೆ, ಗಾದಿಗನೂರು, ಹಂಪೆ ಮುಂತಾದೆಡೆ ಆಗಿನ ಮಾನವನಿಗೆ ಸಂಬಂಧಿಸಿದ ಶಿಲಾಯುಧಗಳು, ಮಡಿಕೆ-ಕುಡಿಕೆ, ಗವಿ ವರ್ಣಚಿತ್ರಗಳು ಹಾಗೂ ಬೂದಿ ಗುಡ್ಡಗಳು ಬೆಳಕಿಗೆ ಬಂದಿವೆ. ಈಚೆಗೆ ನನ್ನ ಕ್ಷೇತ್ರ ಕಾರ್ಯದಲ್ಲಿ ಬೈಲುವದ್ದಿಗೇರಿ, ಗುಂಡ್ಲವದ್ದಿಗೇರಿ ಕಾಕುಬಾಳು, ಧರ್ಮದ ಗುಡ್ಡ ಹಾಗೂ ಕಮಲಾಪುರದ ವಿದ್ಯಾರಣ್ಯದಲ್ಲಿ ಶಿಲಾಯುಧ, ವರ್ಣಚಿತ್ರ ಮತ್ತಿತರ ಅವಶೇಷಗಳು ದೊರೆತಿವೆ.

ಮಹಾಕಾವ್ಯಗಳು, ಸ್ಥಳ ಪುರಾಣ ಹಾಗೂ ಐತಿಹ್ಯಗಳ ಹಿನ್ನೆಲೆಯಲ್ಲಿ ಹಂಪೆಗೆ ತನ್ನದೇ ಆದ ಚರಿತ್ರೆಯಿದೆ. ಮೊದಲಿಗೆ ಹಂಪೆಯು ರಾಮಾಯಣ ಕಾಲದಲ್ಲಿ ಕಿಷ್ಕಿಂಧೆ ಎಂಬ ಹೆಸರು ಪಡೆದಿತ್ತು. ಅಲ್ಲದೆ ಹಲವು ಮಹಾಕಾವ್ಯಗಳಲ್ಲಿ ಹೇಮಕೂಟ. ಮಾತಂಗಪರ್ವತ, ವಿರೂಪಾಕ್ಷಪುರ, ಪಂಪಾಪುರ, ಪಂಪಾಸರೋವರ, ಪಂಪಾತೀರ್ಥ ಎಂದು ಕರೆಯಲಾಗಿದೆ. ಪಂಪಾ ಮಹಾತ್ಮೆಯ ಸ್ಥಳಪುರಾಣದ ಉಲ್ಲೇಖದಂತೆ ಬ್ರಹ್ಮನ ಮಗಳಾದ ಪಂಪಾಬಿಕೆಯು ಹಂಪೆಯಲ್ಲಿ ತಪಸ್ಸು ಮಾಡಿ ವಿರೂಪಾಕ್ಷನನ್ನು ಒಲಿಸಿಕೊಂಡ ಸ್ಥಳಕ್ಕೆ ಪಂಪಾಕ್ಷೇತ್ರ ಎಂದು ಕರೆಯುತ್ತಿದ್ದರು. ಇಲ್ಲಿರುವ ತುಂಗಭದ್ರಾ ನದಿಯನ್ನು ಮೊದಲು ಪಂಪಾತೀರ್ಥವೆಂದು ಕರೆಯಲಾಗಿದೆ. ಪಂಪಾಂಬಿಕ ಪಂಪಾವತಿಯರ ವಿವಾಹದ ಸ್ಥಳವು ಹಂಪೆಯಲ್ಲಿರುವ ಹೇಮಕೂಟವೆಂದು ಹೇಳಲಾಗಿದೆ.

ಶಾಸನಗಳು ಒಂದು ಪ್ರದೇಶದ ಪ್ರಾಚೀನ ಇತಿಹಾಸವನ್ನು ಸಂಸ್ಕೃತಿಯನ್ನು ತಿಳಿಸುವಲ್ಲಿ ಮೂಕ ಸಾಕ್ಷಿಗಳಾಗಿವೆ. (ನಾಗಯ್ಯ ಜಿ.ಎಂ. ಪು.೬.೧೯೯೯) ಅಂದರೆ ಶಾಸನಗಳಿಂದ ಐತಿಹಾಸಿಕ ಅಂಶಗಳು ಲಭ್ಯವಾಗುತ್ತವೆ. ಕ್ರಿ.ಪೂ.೩ನೇ ಶತಮಾನದಲ್ಲಿ ಈ ಪ್ರದೇಶವು ಮೌರ್ಯರ ಆಳ್ವಿಕೆಗೆ ಒಳಗಾಗಿರುತ್ತೆಂದು ಹೇಳಬಹುದು. ಅಶೋಕನಿಗೆ ಸಂಬಂಧಿಸಿದ ಶಾಸನಗಳು ಬಳ್ಳಾರಿ ಜಿಲ್ಲೆಯ ಉದೇಗೊಳಂ ಮತ್ತು ನಿಟ್ಟೂರಿನಲ್ಲಿ ದೊರೆತಿವೆ. ಇವರ ನಂತರ ಶಾತವಾಹನರು ಈ ಪ್ರದೇಶವನ್ನಾಳುತ್ತಾರೆ. ನಂತರ ಈ ಜಿಲ್ಲೆ ಪಲ್ಲವರ ಆಳ್ವಿಕೆಗೆ ಒಳಗಾಯಿತು. ಇವರನ್ನು ಹಿರೇಹಡಗಲಿಯಲ್ಲಿ ದೊರೆತ ತಾಮ್ರಶಾಸನದಲ್ಲಿ 'ಶಾತವಾಹನಿರಟ್ಟ' ಎಂದು ಕರೆಯಲಾಗಿದೆ. ಇತ್ತೀಚೆಗೆ ಹಂಪೆಯ ಉತ್ಖನನಗಳಲ್ಲಿ ಕ್ರಿ.ಶ.೧-೨ನೇ ಶತಮಾನದ ಪ್ರಾಕೃತ ಶಾಸನಗಳು ಹಾಗೂ ಭೌದ್ಧ ಶಿಲ್ಪ ಫಲಕಗಳು ದೊರೆತಿವೆ. ಇವರ ನಂತರ ಆಳ್ವಿಕೆ ನಡೆಸಿದ ಬನವಾಸಿಯ ಕದಂಬರು ಈಗಿನ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗವನ್ನು ಉಪರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು.

ಶಾಸನಗಳಲ್ಲಿ ನಮೂದಿತವಾದಂತೆ ಉಚ್ಚಂಗಿಯು ಬನವಾಸಿ ೧೨೦೦ ರಲ್ಲಿ ಸೇರ್ಪಡೆಯಾಗಿತ್ತು. ಅನಂತರ ಬಾದಾಮಿ ಚಾಳುಕ್ಯರು. ರಾಷ್ಟ್ರಕೂಟರು, ನೊಳಂಬರು, ಗಂಗರು, ಹೊಯ್ಸಳರು ಮತ್ತು ಸೇವುಣರು ಈ ಪ್ರದೇಶವನ್ನಾಳಿದರು. ಕ್ರಿ.ಶ.೭೧೫ನೆಯ ಶಾಸನವೊಂದರಲ್ಲಿ ದುಗ್ಗಮಾರ ಎರೆಯಾಪ್ಪನ್ .... ಕಂಪಲಿಗೆ ಪಡೆವೋದಲ್ಲಿ ಪಾಂಡಪ್ಪನೆಂಬುನನು ಕಾಳೆಗದೊಳ್ ಸತ್ತಲ್ಲಿ' ಎಂದಿದೆ. (ಹೆರೆಂಜೆ ಕೃಷ್ಣಭಟ್ ಪು.೯೧೫; ೧೯೯೫) ಶ್ರೀಪುರುಷನ ಮಗನಾದ ದುಗ್ಗಮಾರನು ಸತ್ತ ಪಾಂಡಪ್ಪನಿಗೆ ದತ್ತಿ ನೀಡಿದನೆಂದಿದೆ. ಕ್ರಿ.ಶ.೧೦೨೨ರ ಶಾಸನದಂತೆ ಜಗದೇಶಮಲ್ಲನೆಂಬ ನೊಳಂಬ ಪಲ್ಲವರಾಜನು 'ಕಪಿಲಿಯ ಲಾಪನಂ ಗೆಯ್ದು ರಾಜ್ಯಂಗೈಯುತ್ತಿರಲು ಎಂದಿದೆ' ಇಲ್ಲಿ ಬಳಕೆಯಾದ ಕಪಿಲಿಯೇ ಬಳ್ಳಾರಿ ಜಿಲ್ಲೆಯ ಕಂಪಲಿಯೆಂಬ ಊರಾಗಿದೆ (ಹೆರೆಂಜೆ ಕೃಷ್ಣಭಟ್ ಪು.೯೧೫; ೧೯೯೫) ಕ್ರಿ.ಶ.೧೦೫೫ರ ಕೋಗಳಿಯ ಶಾಸನವು ಗಂಗದೊರೆ ದುರ್ವಿನೀತನು ಬಸದಿಯನ್ನು ನಿರ್ಮಿಸಿದನೆನ್ನುತ್ತದೆ. ಕ್ರಿ.ಶ.೧೦೪೫ರ ಮೋರಿಗೇರಿ ಶಾಸನವು ತ್ರೈಲೋಕ್ಯಮಲ್ಲನನ್ನಿನೊಳಂಬನು ಬಲ್ಲಕುಂದೆ ೩೦೦, ಕೋಗಳಿ ೫೦೦, ಕದಂಬಳಿಗೆ ೧೦೦೦ ಕುಡಿಹಾರ ೭೦ನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಕ್ರಿ.ಶ.೯೮೭ರ ಬಾಗಳಿ ಶಾಸನ, ಕ್ರಿ.ಶ.೧೦೭೧ರ ಹೂವಿನ ಹಡಗಲಿಯ ಶಾಸನ ಹಾಗು ಕ್ರಿ.ಶ. ೧೧೦೬ರ ಶಾಸನಗಳಿಂದ ಕದಂಬರು ಈ ಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದರೆಂಬುದು ಸುಸ್ಪಷ್ಟ. ಪಲ್ಲವರು ಸಹ ಬಳ್ಳಾರಿಯನ್ನು ನೊಳಂಬವಾಡಿಯ ಭಾಗವನ್ನಾಗಿ ಮಾಡಿಕೊಂಡು ಆಳುತ್ತಿದ್ದರು. ಈ ಎಲ್ಲಾ ಶಾಸನಗಳು ಬಳ್ಳಾರಿ ಪ್ರದೇಶವನ್ನು ಆಳಿದ ರಾಜಮನೆತನಗಳನ್ನು ಕುರಿತು ಮಾಹಿತಿ ನೀಡುತ್ತವೆ.

ಕುಮ್ಮಟದುರ್ಗದ ಕಂಪಿಲದೇವನು ಜಿಲ್ಲೆಯ ರಾಮನ ಮಲೆದುರ್ಗವನ್ನು ಮತ್ತೊಂದು ರಾಜಧಾನಿಯನ್ನಾಗಿ ಮಾಡಿಕೊಂಡು ಈ ಪ್ರದೇಶವನ್ನು ಆಳಿದನು. ಇವನ ಮಗನಾದ ಕುಮಾರ ರಾಮನು ತನ್ನ ಶೌರ್ಯದಿಂದಾಗಿ ದೇವತ್ವವನ್ನು ಪಡೆದಿದ್ದಾನೆ. ಈಗಲೂ ಈತನ ಹೆಸರಿನ ದೇವಾಲಯಗಳು ಕಂಡುಬರುತ್ತವೆ. ಕುಮಾರರಾಮನು ತುಘಲಕ್ ಸೈನ್ಯದೊಂದಿಗೆ ಹೋರಾಡಿ ಮೃತಪಟ್ಟನು. ಈತನಿಗೆ ಸಂಬಂಧಪಟ್ಟಂತೆ ವೀರಗಲ್ಲು, ಶಾಸನ ಹಾಗೂ ದೇವಾಲಯವೊಂದು ಸಂಡೂರಿನ ರಾಮನಮಲೆ ದುರ್ಗದಲ್ಲಿ ಕಂಡುಬರುತ್ತದೆ.

ಕುಮ್ಮಟದುರ್ಗದ ಅವಸಾನವು ಬೃಹತ್ ವಿಜಯನಗರ ಸಾಮ್ರಾಜ್ಯದ ಹುಟ್ಟಿಗೆ ಕಾರಣವಾಯಿತು. ಇದಕ್ಕೆ ಹೊಯ್ಸಳರ ಉದಾರವಾದ ಪ್ರೋತ್ಸಾಹ ಸಹಕಾರಗಳೇ ಕಾರಣ. ವಿಜಯನಗರ ಸಾಮ್ರಾಜ್ಯವು 'ವಿಜಯನಗರ'ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ೩೦೦ ವರ್ಷಗಳ ಕಾಲ ನಾಲ್ಕು ವಂಶಸ್ಥರು

ಆಳ್ವಿಕೆ ನಡೆಸಿದರು. ಇದು ಕ್ರಿ.ಶ.೧೫೬೫ರ ರಕ್ಕಸತಂಗಡಿ ಯುದ್ಧದಿಂದ ಪತನವಾಯಿತು. ನಂತರದ ಕಾಲದಲ್ಲಿ ಹರಪನಹಳ್ಳೀ ಮೊದಲುಗೊಂಡು ಅನೇಕ ಪಾಳೆಯಗಾರರ ಆಳ್ವಿಕೆಯಲ್ಲಿ ಹಂಚಿ ಹೋಯಿತು. ಷಾಯಿಸುಲ್ತಾನರನ್ನು ಹೊಡೆದೋಡಿಸಿದ ಕುರುಬರ ಹಂಡೆ ಹನುಮಪ್ಪನಾಯಕನಿಗೆ ಬಳ್ಳಾರಿ ಪ್ರಾಂತವು ದೊರೆಯಿತು. ಆಗ ನಿರ್ಮಿಸಿದ ಬಾವಿ ಹಾಗೂ ದೇವಾಲಯಗಳು ಇಂದಿಗೂ ಕಾಣಬರುತ್ತವೆ. ತರುವಾಯ ಮೊಗಲರು ಮತ್ತು ಮರಾಠರು ಈ ಭಾಗವನ್ನು ವಶಪಡಿಸಿಕೊಂಡು ಆಳಿದರು.

ನಂತರದ ಶತಮಾನದಲ್ಲಿ ಮೈಸೂರಿನ ಹೈದರಾಲಿ ಮತ್ತು ಅವನ ಮಗ ಟಿಪ್ಪು ಸುಲ್ತಾನನು ಬಳ್ಳಾರಿಯನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಆಳ್ವಿಕೆ ನಡೆಸಿರು. ಟಿಪ್ಪು ಪತನವಾದ ನಂತರ ಬಳ್ಳಾರಿ ಪ್ರಾಂತವು ಬ್ರಿಟಿಷರ ವಶವಾಯಿತು. ಹೀಗೆ ಬ್ರಿಟಿಷರ ವಶವಾದ ಬಳ್ಳಾರಿ ಪ್ರದೇಶವು ಮದರಾಸು ಪ್ರಾಂತದಲ್ಲಿ ವಿಲೀನವಾಯಿತು. ೧೯೫೩ರ ಸುಮಾರಿನಲ್ಲಿ ಪ್ರಾಂತೀಯ ವಿಂಗಡಣೆಯಿಂದ ಬಳ್ಳಾರಿ ಜಿಲ್ಲೆಯಲ್ಲಿದ್ದ ಆದವಾನಿ, ಆಲೂರು, ರಾಯದುರ್ಗ ತಾಲ್ಲೂಕುಗಳು ಆಂಧ್ರಪ್ರದೇಶಕ್ಕೆ ಸೇರ್ಪಡೆಯಾದವು. ಆಗ ಬಳ್ಳಾರಿಯು ೮ ತಾಲ್ಲೂಕುಗಳನ್ನುಳ್ಳ ಜಿಲ್ಲೆಯಾಯಿತು. ಅವುಗಳೆಂದರೆ ಬಳ್ಳಾರಿ, ಶಿರುಗುಪ್ಪ, ಸಂಡೂರು, ಹೊಸಪೇಟೆ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ, ಮಲ್ಲಾಪುರ. ಮಲ್ಲಾಪುರ ತಾಲ್ಲೂಕು ಹೊಸದಾಗಿ ರಚನೆಗೊಂಡ ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ಸೇರಿಕೊಂಡಿತು. ಈಚಿನ ಬೆಳವಣಿಗೆಗಳಲ್ಲಿ ಹರಪನಹಳ್ಳಿ ತಾಲ್ಲೂಕು ದಾವಣಗೆರೆ ಜಿಲ್ಲೆಗೆ ಸೇರಿಕೊಂಡು ಈಗ ಏಳು ತಾಲ್ಲೂಕುಗಳಷ್ಟೆ ಈ ಬಳ್ಳಾರಿ ಜಿಲ್ಲೆಗೆ ಸೇರಿವೆ. ಬಳ್ಳಾರಿ ಪ್ರದೇಶವು ಚಾರಿತ್ರಿಕವಾಗಿ ಇಡೀ ದಕ್ಷಿಣ ಭಾರತದಲ್ಲೆ ಮಹತ್ವದ ಸ್ಥಾನ ಪಡೆದಿದೆ. ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಕಾಲಗಳಲ್ಲಿ ತನ್ನದೇ ಆದ ಚಾರಿತ್ರಿಕ ಘಟನಾವಳಿಗಳಿಂದ ಚರಿತ್ರಕಾರರ ಗಮನ ಸೆಳೆದಿದೆ.

೨.೩. ಪೌರಾಣಿಕತೆ

ಬಳ್ಳಾರಿ ಜಿಲ್ಲೆಯು ಸಾಕಷ್ಟು ಪೌರಾಣಿಕ ಘಟನಾವಳಿಗಳನ್ನು ಹೊಂದಿದೆ. ಇಲ್ಲಿ ದೇವಿಪುರಾಣದ ಚಿತ್ರಣ. ರಾಮಾಯಣ-ಮಹಾಭಾರತದ ಪ್ರಸಂಗವು ಕಂಡುಬರುತ್ತದೆ. ದೇವಿಪುರಾಣಕ್ಕೆ ಸಂಬಂಧಿಸಿದಂತೆ ಬಳ್ಳಾರಿಯ ದುರ್ಗ(ದುಗುಗಮ್ಮ) ದೇವಿಯ ಒಂದು ಅವತಾರವಾಗಿ ಪರಿಣಮಿಸಿದೆ. ಇದರಿಂದಲೇ ಬಳರಿಯು ಒಂದು ಉಗ್ರದೇವತೆಯಂತೆ ಕಂಡುಬರುತ್ತದೆ. ಇದಲ್ಲದೆ ಬನದೇವತೆ ಎಂಬ ಉಲ್ಲೇಖದಂತೆ ಈಗಿರುವ ದುರ್ಗಾದೇವಾಲಯದ ಸ್ಥಳವು ಬನದ ಸ್ಥಳವಾಗಿತ್ತೆಂದು ದೃಢಪಡಿಸುತ್ತದೆ.

ರಾಮಾಯಣದ ಚಿತ್ರಕ್ಕೆ ಸಂಬಂಧಿಸಿದಂತೆ ಇಡೀ ಹಂಪೆಯು ಅಂದರೆ ಇಲ್ಲಿರುವ ಕಿಷ್ಕಿಂದಾ ಸ್ಥಳವು ಪ್ರಮುಖವಾಗಿದೆ. Sugreeva later deiveen out by his brother Vali was the Vanara King at the time and kishkindha, which has been generally acknowledged to have been near the present Hampi, in Hospet(Talukಎ). (ಗೆಝುಟಿಯರ್) ಈ ಪ್ರದೇಶವು ರಾಮಾಯಣ ಮಹಾಕಾವ್ಯದಲ್ಲಿ ಕಂಡುಬರುವ ಕಿಷ್ಕಿಂದೆಯಾಗಿದೆ ಎಂದು ನಂಬಲಾಗಿದೆ. ಈ ಕಿಷ್ಕಿಂದೆಯಲ್ಲಿ ರಾಮ ಇಲ್ಲಿಗೆ ಬರುವುದಕ್ಕೆ ಮುಂಚಿತವಾಗಿ ಇಲ್ಲಿ ವಾಲಿ-ಸುಗ್ರೀವ, ಹನುಮಂತ, ಮತಂಗ ಜಾಂಬವಂತ ಮುಂತಾದ ವಾನರ ವೀರರು ಈ ಸ್ಥಳದ ಸುತ್ತಮುತ್ತಲೂ ಜೀವಿಸಿದ್ದರೆಂದು ತಿಳಿದುಬರುತ್ತದೆ.

ಇದಕ್ಕಿಂತ ಪೂರ್ವದಲ್ಲಿ ಹಂಪಿಯ ಪಂಪಾದೇವಿಯ ಹಿನ್ನೆಲೆ ತಿಳಿಯುವುದು ಉಚಿತವೆನ್ನಿಸುತ್ತದೆ. ಇದರ ನಂತರದಲ್ಲಿ ರಾಮಾಯಣ-ಮಹಾಭಾರತ ಕಾವ್ಯವನ್ನು ಗಮನಿಸಬಹುದು. ಹಂಪೆಯಲ್ಲಿ ಶಿವಪಾರ್ವತಿಯರು ತಪಸ್ಸು ಮಾಡಿದ್ದು ಶಿವನನ್ನು ಮನವೊಲಿಸಲು ಪಾರ್ವತಿ ತಪಸ್ಸು ಮಾಡಿದ್ದು ಅಲ್ಲದೆ ಇಲ್ಲಿಯೇ ಶಿವ-ಪಾರ್ವತಿಯರ ವಿವಾಹ ಹಾಗೂ ಮನ್ಮಥನನ್ನು ಶಿವನು ತನ್ನ ಹಣೆಗಣ್ಣಿನಿಂದ ಸುಟ್ಟು ಭಸ್ಮ ಮಾಡಿದ್ದ ಸ್ಥಳ ಇದಾಗಿದೆ. ಈಗಿರುವ ಶಿವನ ದೇವಾಲಯಕ್ಕಿಂತ ಬೆಟ್ಟದ ತುದಿಯಲ್ಲಿ ಮೂಲ ವಿರೂಪಾಕ್ಷನ ಗುಡಿ ಇತ್ತೆಂದು ಅಲ್ಲದೆ ಆ ಗುಡಿಯ ಎದುರಿಗೆ ಮನ್ಮಥ ಹೊಂಡ ಇದೆಯೆಂದು ತಿಳಿದುಬರುತ್ತದೆ. ಇಲ್ಲಿ ಪ್ರಸ್ತಾಪವಾಗಿರುವ ಪಂಪಾ ವಿಷ್ಣುವಿನ ಮೊಮ್ಮಗಳೂ, ಬ್ರಹ್ಮನ ಮಗಳೂ ಸತ್ಯ ಗೋತ್ರೋದ್ಭವಳೂ ಪಂಪಾ ಹೆಸರಿನ ಕನ್ಯೆಯನ್ನು ಸದಾಶಿವನ ಮೊಮ್ಮಗನೂ ಮಹೇಶ್ವರನ ಮಗನೂ ಆದ ಹೇಮಕೂಟಸ್ಥನೂ ಸದ್ಯೋಜಾತ ಸುಗೋತ್ರದವನೂ ಆದ ವಿರೂಪಾಕ್ಷನೆಂಬುದಕ್ಕೆ ಜನಪದ ಐತಿಹ್ಯವಲ್ಲದೆ ಅನೇಕ ಕೃತಿಗಳಲ್ಲಿ ಹೇಮಕೂಟ, ಕಿಷ್ಕಿಂದಾ, ಪಂಪಾ, ವಿರೂಪಾಕ್ಷ, ಪಂಪಾಸರೋವರ ಎಂಬ ಹೆಸರುಗಳು ಪ್ರಸ್ತಾಪವಾಗಿವೆ. ಪಂಪಾಂಬಿಕೆಯ ತವರೂರು ಹೊಸಪೇಟೆಯ ಚಿಲಕನಹಟ್ಟಿಯಾಗಿತ್ತು. ಈ ಊರಿನ ಜನರು ಹಂಪೆಯ ಜಾತ್ರೆ, ಫಲಪೂಜಾದಿನವನ್ನು ನಿಶ್ಚಿತಾರ್ಥದ ದಿನ, ವಿವಾಹ ದಿನವನ್ನಾಗಿ ಆಚರಿಸುವುದು ಕಂಡುಬರುತ್ತದೆ.

ಇದರ ನಂತರ ರಾಮಾಯಣದ ಘಟನೆ ಅಂದರೆ ರಾಮನು ೧೪ ವರ್ಷ ವನವಾಸದ ಸಮಯದಲ್ಲಿ ರಾವಣನು ಸೀತೆಯನ್ನು ಕದ್ದೊಯ್ದ ಮೇಲೆ ಆಕೆಯನ್ನು ಹುಡುಕುತ್ತಾ ಹಂಪೆಯ ಕಿಷ್ಕಿಂದಾ ಸ್ಥಳಕ್ಕೆ ಬಂದಿದ್ದನೆಂಬ ಬಗ್ಗೆ ಸ್ಥಳ ಪುರಾಣಗಳು ತಿಳಿಸುತ್ತವೆ. ಆಗ ಕಿಷ್ಕಿಂದೆಯಲ್ಲಿ ವಾಲಿ-ಸುಗ್ರೀವ ಹನುಮಂತ ಎಂಬ ವಾನರರು ಹಾಗೂ ಜಾಂಬುವಂತರ ನೆಲೆವೀಡಾಗಿತ್ತು. ಅವರ ಸ್ನೇಹವಾದ ಬಳಿಕವೇ ವಾಲಿ-

ಸುಗ್ರೀವರ ಯುದ್ಧಕ್ಕೆ ರಾಮನೆ ಅಣಿಗೊಳಿಸಿ ವಾಲಿಯನ್ನು ಕೊಲ್ಲುವ ಘಟನೆ ಇಲ್ಲಿಯೇ ಜರುಗಿತ್ತೆಂದು ತಿಳಿದುಬರುತ್ತದೆ. ನಂತರ ಅವರೆಲ್ಲರ ನೆರವಿನಿಂದ ರಾವಣನನ್ನು ಕೊಂದು ಸೀತೆಯನ್ನು ಕರೆದು ತರುತ್ತಾನೆ. ಅನಂತರ ಸೀತೆಗೆ ಕಿಷ್ಕಿಂದಾ ಸ್ಥಳದ ಮಹತ್ವದ ಬಗ್ಗೆ ತಿಳಿಸುತ್ತಾ ಕೋದಂಡರಾಮ ದೇವಸ್ಥಾನದಲ್ಲಿ ಕೆಲವು ದಿನ ತಂಗಿದ್ದರೆಂದು ತಿಳಿಯುತ್ತದೆ. ಅನಂತರ ಸಂಡೂರಿನ ರಾಮಘಡಕ್ಕೂ ಹೋಗಿದ್ದರೆಂದು ತಿಳಿದುಬರುತ್ತದೆ. ಈ ಕಿಷ್ಕಿಂದಾ ಪ್ರದೇಶದಲ್ಲಿ ವಾಲಿ ವಾಸವಾಗಿದ್ದರಿಂದ ವಾಲಿ ಭಂಡಾರವೆಂಬ ಗುಹೆಗಳು ಈಗಲೂ ಇರುವುದರ ಬಗ್ಗೆ ಆಧಾರಗಳು ಸಿಗುತ್ತವೆ. ಇವುಗಳನ್ನು ಗಮನಿಸಿದ ಎಂ.ಎಂ. ಕಲುಬುರ್ಗಿಯವರು ವಾಲೆಗಳನ್ನು ಇಡುವ ಭಂಡಾರವಾಗಿರಬೇಕೆಂಬ ಅಭಿಪ್ರಾಯವನ್ನು ನೀಡಿದ್ದಾರೆ. ಜೊತೆಗೆ ಸೀತೆಯನ್ನು ರಾವಣ ಕದ್ದೊಯ್ದು ಬಗ್ಗೆ ಕೆಲವು ಸಂಗತಿಗಳನ್ನು ತಿಳಿಸುತ್ತಾರೆ. ಆವೆಂದರೆ ಕಿಷ್ಕಿಂದಾ ಮಾರ್ಗದಲ್ಲಿ ರಾವಣ ಸೀತಿಯನ್ನು ಕರೆದೊಯ್ಯುವಾಗ ಆಕೆ ಧರಿಸಿದ ಆಭರಣವು ಪಂಪಾಸರೋವರದಲ್ಲಿ ಬಿದ್ದಿರುವುದು ಹಾಗೂ ಈಗಲೂ ಗಮನಿಸುವ ಬಂಡೆಯ ಮೇಲೆ ಗೋಚರವಾಗುವ ಪಟ್ಟಿಯಾಕಾರದ ಗುರುತು ಬಿದ್ದಿರುವ ಸೀತೆ ಸೆರಗಿನ ಗುರುತು ನಿತ್ಯವು ರಾಮಾಯಣದ ಘಟನೆಯನ್ನು ತಿಳಿಸುತ್ತವೆ. ಆದರೆ ಇದು ಲಾವಾರಸದ ಕಲ್ಲಿನ ಪದರದ ಹೆಗ್ಗುರುತಾಗಿರಬೇಕೆಂದು ಭೂವಿಜ್ಞಾನಿಗಳ ಅಭಿಪ್ರಾಯವಾಗಿದೆ. ಅಲ್ಲದೆ ಇಲ್ಲಿಯೇ ಮತಂಗ ಮುನಿಯು ತಂಗಿದ್ದನಂತೆ. ಆತನು ಬೃಹದ್ದೇಶಿ ಎಂಬ ಕೃತಿಯನ್ನು ಇಲ್ಲಿಯೇ ರಚಿಸಿರಬೇಕು. ಜೊತೆಗೆ ಮತಂಗಮುನಿಯ ಮಗಳಾದ ಈಗ ಸ್ತ್ರೀ ದೇವತೆಯಾಗಿ ಪೂಜೆಗೆ ಅರ್ಹಳಾಗಿದ್ದಾಳೆ. ಈ ಮುನಿಯಿಂದಲೆ ಮತಂಗಪರ್ವತ ಎಂದು ಈಗಲೂ ಕರೆಯುತ್ತಾರೆ.

ಜಾಂಬವಂತನು ತನ್ನ ಅವಸಾನದ ಅಂಚಿನಲ್ಲಿ ರಾಮನಿಗೆ ತಿಳಿಸಿ ತನಗೆ ಯೋಗ್ಯವಾದ ಸ್ಥಳವನ್ನು ಸೂಚಿಸಿದರೆ ತಪಸ್ಸು ಮಾಡಲು ತೆರಳುವೆನು ಎಂದು ಸೂಚಿಸಿದಾಗ ರಾಮನು ಜಾಂಬವಂತನಿಗೆ ಹಂಪೆಯ ದಕ್ಷಿಣಾದೆಸೆಯೊಳು ಜಂಬೂದ್ವೀಪ' ಸ್ಥಳವಿದೆ. ಅಲ್ಲಿಗೆ ಹೋಗಿ ತಪಸ್ಸು ಮಾಡಲು ತಿಳಿಸುವನು. ಅಂತೆಯೇ ಜಾಂಬವಂತನು ಜಂಬೂದ್ವೀಪ ಅಂದರೆ ಈಗಿರುವ ಜಂಬೂನಾಥ ಬೆಟ್ಟವೆ ಜಾಂಬುವಂತನು ತಪಸ್ಸು ಮಾಡಿದ ಸ್ಥಳವೆಂಬುದು ಐತಿಹ್ಯಗಳಿಂದ ತಿಳಿದುಬರುತ್ತದೆ.

ಇನ್ನು ಮಹಾಭಾರತಕ್ಕೆ ಸಂಬಂಧಿಸಿದಂತೆ ಹೆಚ್ಚು ಘಟನೆಗಳು ಜರುಗಿಲ್ಲ. ಆದರೂ ಪ್ರಾಸಂಗಿಕವಾಗಿ ಹೊಸಪೇಟೆ ತಾಲ್ಲೂಕಿನ ನಾಗೇನಹಳ್ಳಿ ಹತ್ತಿರದ ಧರ್ಮದಗುಡ್ಡದ ಗುಹೆಗಳಲ್ಲಿ ಧರ್ಮರು (ಪಾಂಡವರು) ವಾಸವಾಗಿದ್ದರೆಂದು ತಿಳಿಯುತ್ತದೆ. ಹಂಪೆಯ ಪಂಪಾಸರೋವರ ದಾಟಿ ಬಂದಾಗ ವಿರಾಟಪರ್ವದ ದಿನದಲ್ಲಿ ಅಲೆದಾಡಿಕೊಂಡು ಇಲ್ಲಿಗೆ ಬಂದಿರುತ್ತಾರಂತೆ. ಈ ಗುಡ್ಡದಲ್ಲಿ ತಂಗಿದ್ದಾಗ ಪೂಜಾರಿಗೂ,

ಮೊಸರು ಮಾರುವ ಭಕ್ತನಿಗೂ ಕಾಣಿಸಿಕೊಂಡ ಬಗ್ಗೆ ಸ್ಥಳ ಐತಿಹ್ಯ ಮಾಹಿತಿ ನೀಡುತ್ತದೆ. ಈ ಧರ್ಮದ ಗುಡ್ಡದಲ್ಲಿ ಕೆಲವು ದಿನ ತಂಗಿದ್ದರೆಂತಲೂ ಇದರ ಎದುರಿಗೆ ಇದ್ದ ಬನ್ನಿ ಗಿಡದಲ್ಲಿ ಅರ್ಜುನನು ಆಯುಧಗಳನ್ನು ಇಟ್ಟು ಬಂದಿದ್ದನಂತೆ. ಅಲ್ಲದೆ ಧರ್ಮದ ಗುಡ್ಡದಲ್ಲಿ ಈಗಲೂ ಕೆಲವು ಪುರಾವೆಗಳು ಪಾಂಡವರು ಇದ್ದರೆಂಬುದರ ಬಗ್ಗೆ ಸ್ಪಷ್ಟ ದಾಖಲೆ ನೀಡುತ್ತವೆ. ಅವೆಂದರೆ ಅರ್ಜುನನು ಈ ಭಾಗದಲ್ಲಿ ನೀರು ಸಿಗದೆ ಇದ್ದಾಗ ತನ್ನ ಬಾಣದಿಂದ ಕಲ್ಲಿನ ಸಮೂಹದಲ್ಲಿ ಬಾಣ ಬಿಟ್ಟು ನೀರನ್ನು ತರಿಸಿದನಂತೆ. ಅದು ಈಗಲೂ ಬತ್ತದ ಬಾವಿಯಾಗಿದೆ. ಅಲ್ಲದೆ ಭೀಮನ ಡೋಣಿ, ಪಗಡೆ ಕಲ್ಲು ಹಾಗೂ ಪಾಂಡವರು ಗುಂಡುಕಲ್ಲಿನ ಮೇಲೆ ಕೃಷಿ ಮಾಡಿದ ಗೆರೆಗಳು ವಿಸ್ಮಯಕಾರಿ ಸಂಗತಿಗಳಾಗಿವೆ. ಇದರಿಂದಲೇ ಪ್ರತಿವರ್ಷವೂ ದಸರಾ ಹಬ್ಬದಲ್ಲಿ ಊರು ಬನ್ನಿಗಿಂತ ಹಿಂದಿನ ದಿನ ಇಲ್ಲಿ ಗುಡ್ಡದ ಬನ್ನಿ ಎಂಬ ಆಚರಣೆ ಮಾಡುತ್ತಾರೆ. ಆ ದಿನ ಅಕ್ಕಪಕ್ಕದ ಊರಿನ ಜನರು ಗ್ರಾಮದೇವತೆಗಳನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಬಂದು ಬನ್ನಿ ಮುಡಿದು ಹೋಗುತ್ತಾರೆ. ಈ ಗುಹೆಯಲ್ಲಿ ತುಂಬಾ ಸುಂದರವಾದ ಕಪ್ಪು ಕಲ್ಲಿನ ಬಸವ, ಗಣಪ, ವೀರಭದ್ರ, ಲಿಂಗ ಹಾಗೂ ಸರ್ಪ, ಕಾಳಿಯರುಂಡ ಎನ್ನುವ ಗುಂಡುಕಲ್ಲುಗಳು ಕಾಣಸಿಗುತ್ತವೆ. ಇದಲ್ಲದೆ ಈ ಭಾಗದ ಯಾವುದೇ ಹಳ್ಳಿಯಲ್ಲಿ ಕರೆಕಲ್ಲು (ಕಪ್ಪುಕಲ್ಲು) ಸಮೂಹದ ಬೆಟ್ಟ ಇದ್ದರೆ ಅಲ್ಲಿ ಪಾಂಡವರು ನಡೆದು ಬಂದದ್ದಕ್ಕೆ ಅವರ ಸ್ಪರ್ಶದಿಂದ ಕಪ್ಪು ಕಲ್ಲಾಗಿದೆ ಎಂದು ತಿಳಿಸುತ್ತಾರೆ. ಇದೇನೇ ಇರಲಿ ಈ ಭಾಗದಲ್ಲಿ ಪೌರಾಣಿಕ ಅಂಶಗಳ ಮಾಹಿತಿಯಿಂದ ತನ್ನದೇ ಆದ ಪ್ರಾಮುಖ್ಯತೆ ಪಡೆದಿದೆ ಎಂದು ತಿಳಿದುಬರುತ್ತದೆ.

೨.೪. ಸಾಹಿತ್ಯ ಸಂಕ್ಷಿಪ್ತತೆ

ಬಳ್ಳಾರಿ ಜಿಲ್ಲೆಯ ಸಾಹಿತ್ಯವು ವಿಪುಲವಾಗಿಯೂ ಉತ್ಕೃಷ್ಟವಾಗಿಯೂ ಬೆಳೆದು ಪ್ರಸಿದ್ಧಿ ಪಡೆದಿದೆ. ಇದರಿಂದ ರಾಜ್ಯಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದೆ. ಇಲ್ಲಿ ಸಂಸ್ಕೃತ-ಕನ್ನಡ ಕೃತಿಗಳ ರಚನೆಗೆ ಕೈಹಾಕಲಾಗಿದೆ. ಜೊತೆಗೆ ತೆಲುಗು ಸಾಹಿತ್ಯವು ಬೆಳೆದು ಬಂದದ್ದು ಕಾಣಸಿಗುತ್ತದೆ. ಸಂಸ್ಕೃತದ ಕವಿಗಳಲ್ಲಿ ಮತಂಗಮುನಿಯ 'ಬೃಹದ್ದೇಶಿ'ಯನ್ನು ಗುರುತಿಸಬಹುದು. ಈತನ ಕಾಲಾವಧಿಯ ಬಗ್ಗೆ ಸ್ಪಷ್ಟತೆ ಇಲ್ಲ. ಕ್ರಿ.ಶ.೮೫೦ ರಿಂದ ೧೨೨೦ ರವರೆಗೂ ಎಳೆದಾಡಿದ್ದಾರೆ. ಪ್ರಸಿದ್ಧವಾದ ಐತಿಹಾಸಿಕ ಸ್ಥಳವಾದ ಹಂಪೆಯಲ್ಲಿ ಈ ಕೃತಿ ರಚನೆಯಾಗಿರಬೇಕೆಂದು ಕಂಡುಬರುತ್ತದೆ. ತದನಂತರ ಕನ್ನಡದಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯ ವಿಭಾಗ ಕ್ರಮದಲ್ಲಿ ಹಲವಾರು ಸಾಹಿತಿಗಳು ಕಾಣಸಿಗುತ್ತಾರೆ. ಹಳಗನ್ನಡ ಸಾಹಿತ್ಯದಲ್ಲಿ ಮೊದಲ ಗದ್ಯಕವಿಯೆಂಬ ಖ್ಯಾತಿಗೆ ಗುರಿಯಾದ ಶಿವಕೋಟ್ಯಾಚಾರ್ಯರು ಬಳ್ಳಾರಿಯ

ಕೋಗಳಿನಾಡಿನವರು. ಈಗ ಬರೆದ 'ವಡ್ಡಾರಾಧನೆ' ಗದ್ಯಕೃತಿಯು ತುಂಬಾ ಉತ್ಕೃಷ್ಟವಾದುದು. ಈತನೇ ಜಿಲ್ಲೆಯ ಪ್ರಥಮ ಕನ್ನಡ ಕವಿಯೆನ್ನಬಹುದು. ಈತನನ್ನು ಕೆಲವು ವಿದ್ವಾಂಸರು ಕೋಗಳಿನಾಡಿನಲ್ಲವೆಂದು ಟೀಕಿಸುತ್ತಾರೆ. ಆದರೂ ವಡ್ಡಾರಾಧನೆ ಕೃತಿಯಲ್ಲಿ ಬಳ್ಳಾರಿ ಭಾಷೆಯ ಸೊಗಡು, ಸಂಸ್ಕೃತಿ ವಿಚಾರ, ಜನಪದೀಯ ಕಥನ ಶೈಲಿ, ಗದ್ಯಶೀಲಿ, ಈ ಭಾಗದ ಹೆಸರುಗಳು ಬಳಸಿರುವುದು ಉಲ್ಲೇಖಾರ್ಹ.

ನಂತರ ಕ್ರಿ.ಶ.೧೧೪೦ರ ಕಾಲಾವಧಿಯಲ್ಲಿದ್ದನೆಂದು ಹೇಳಲಾದ ಶಿವಶರಣ ಬಳ್ಳೇಶ ಮಲ್ಲಯ್ಯನು ಆದ್ಯ ವಚನಕಾರನೆಂದು ಗುರುತಿಸಲಾಗಿದೆ. ಈ ವಚನಕಾರನ ಕೆಲವೆ ವಚನಗಳು ಲಭ್ಯವಾಗಿವೆ. ಅವುಗಳಲ್ಲಿ 'ಬಳ್ಳೇಶ್ವರ' ಎಂಬ ನಾಮಾಂಕಿತವಿದೆ. ಈತನ ಹೆಸರಿನಿಂದಲೇ ಬಳ್ಳಾರಿ ಎಂಬ ಹೆಸರು ಬಂದಿರಬೇಕೆಂಬ ಐತಿಹ್ಯವೊಂದು ಪ್ರಚಲಿತದಲ್ಲಿದೆ. ಬಸವಪೂರ್ವಯುಗದಲ್ಲಿದ್ದ ಈ ಬಳ್ಳೇಶನಿಂದಲೂ ಹಲವಾರು ಶರಣರು ಜಿಲ್ಲೆಯಲ್ಲಿ ಗುರುತಿಸಬಹುದಾಗಿದೆ. "ಕ್ರಿ.ಶ.೧೦೪೦ ರಿಂದ ೨೦ ನೇ ಶತಮಾನದ ದಮ್ಮೂರ ವೆಂಕಟಪ್ಪನವರೆಗೂ ೬೮ ಶಿವಶರಣರನ್ನು ಶಾಂತರಸರು ಗುರುತಿಸಿದ್ದಾರೆ." (ಶಾಂತರಸ, ಪು.೧೧; ೧೯೭೫) ಬಸವಯುಗದ ಕಾಲಘಟ್ಟದಲ್ಲಿ ಸಾಹಿತ್ಯವಲಯದಲ್ಲಿ ಕ್ರಾಂತಿ ಮಾಡಿದ ಇಬ್ಬರು ಕವಿಗಳು ಕಂಡುಬರುತ್ತಾರೆ. ಇವರು ಧಾರ್ಮಿಕ ಕೃತಿರಚನೆಗೆ ಕೈಹಾಕಿ, ವಿಜಯನಗರದಲ್ಲಿದ್ದುಕೊಂಡೆ ಸಾಹಿತ್ಯ ರಚಿಸಿದರು. ಆ ಕವಿಗಳೆಂದರೆ ಹರಿಹರ ಮತ್ತು ರಾಘವಾಂಕರು. ಇವರಲ್ಲಿ ಹರಿಹರನು ತನ್ನ 'ರಗಳೆ'ಯಲ್ಲಿ ರಾಘವಾಂಕನು 'ಷಟ್ಪದಿ' ಪ್ರಕಾರದಲ್ಲಿ ಕೃತಿ ರಚಿಸಿದರು. ಹರಿಹರನು ಬಸವರಾಜದೇವರ ರಗಳೆ, ಗಿರಿಜಾಕಲ್ಯಾಣ, ರಕ್ಷಾಶತನಕನ್ನು ಪಂಪಾಶತಕಗಳ ರಚಿಸಿದರೆ, ರಾಘವಾಂಕನು ಹರಿಶ್ಚಂದ್ರ ಕಾವ್ಯ, ಸಿದ್ದರಾಮಪುರಾಣಗಳನ್ನು ಬರೆದನು. ನಂತರ ೧೪ನೇ ಶತಮಾನದಲ್ಲಿ ಮಂಗರಾಜನ ಖಗೇಂದ್ರಮಣಿ ದರ್ಪಣವು ಕಂಡುಬರುತ್ತದೆ.

ವಿಜಯನಗರ ಸಾಮ್ರಾಜ್ಯದಲ್ಲಿ 'ಪ್ರೌಢದೇವರಾಯ'ನ ಆಳ್ವಿಕೆಯಲ್ಲಿ ೧೦೧ ವಿರಕ್ತರು ಇದ್ದರು. ಅವರಲ್ಲಿ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ಚಾಮರಸನ ಪ್ರಭುಲಿಂಗಲೀಲೆ ಪ್ರಮುಖವಾದವುಗಳು. ಕಲ್ಲುಮಠದ ಪ್ರಭುದೇವನ ಲಿಂಗಲೀಲಾ ವಿಲಾಸ, ಬತ್ತಲೇಶ್ವರನ ರಾಮಾಯಣ, ಕರಸ್ಥಲನಾಗಿದೇವನ 'ತ್ರಿಪದಿ', ಹಾಗು ಚಂದ್ರಕವಿಯ 'ಗುರುಮೂರ್ತಿ ಶತಕ' ಮುಂತಾದವು ರಚನೆಯಾಗಿವೆ. ಇದಲ್ಲದೆ ಬುಕ್ಕರಾಯನ ಮಗ ಕೆಂಪರಾಯನ (ಕಂಪಣ್ಣ) ಹೆಂಡತಿ ಗಂಗಾದೇವಿಯು ಸಂಸ್ಕೃತದಲ್ಲಿ ಮಧುರಾ ವಿಜಯ ಅಥವಾ ವೀರ ಕಂಪಣರಾಯ ಚರಿತ್ರಂ ಬರೆದಿದ್ದಳು. ಇವಳೇ ಮೊಟ್ಟ ಮೊದಲು ಸಂಸ್ಕೃತದಲ್ಲಿ ಕೃತಿ ರಚಿಸಿದ ಮಹಿಳಾ ಲೇಖಕಿಯರಲ್ಲಿ ಒಬ್ಬಳೆನ್ನಬಹುದು. ಕೃಷ್ಣದೇವರಾಯನ ಆಳ್ವಿಕೆಯಲ್ಲಿ

ಅಷ್ಟದಿಗ್ಗಜ ಸಾಹಿತಿಗಳು ಇದ್ದರು. ಇದರೊಂದಿಗೆ ರಾಜನೆ ಕೆಲವು ಕೃತಿಗಳನ್ನು ರಚಿಸಿದ್ದನು. ಅವುಗಳಲ್ಲಿ ಅಮುಕ್ತಮಾಲ್ಯದ, ರಸಮಂಜರಿ, ಮದಾಲಸ ಚರಿತ್ರಂ, ಜ್ಞಾನ ಚಿಂತಾಮಣಿ, ಸತ್ಯವಧೂ ಸಾಂತ್ವಾನ ಹಾಗೂ ಜಾಂಬವತಿ ಕಲ್ಯಾಣವನ್ನು ನೋಡಬಹುದು. ಈತನ ಆಸ್ಥಾನದ ಕವಿಗಳಲ್ಲಿ ಪ್ರಮುಖರಾದವರೆಂದರೆ ಅಲ್ಲಸಾನಿಪೆದ್ದಣ್ಣ. ನಂದಿತಿಮ್ಮಣ್ಣ ದೂರ್ಜಟಿ, ರಾಮಭಕ್ತಕವಿ, ಪೊನ್ನ ವೀರಭದ್ರ, ಡಿಂಡಿಮ ರಾಜನಾಥ, ತಿಮ್ಮರಸು, ನಾಟ್ಯಾಚಾರ್ಯ, ಪಿಂಗಳಸೂರನ್ನ ಮುಂತಾದವರು. ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣ ಅಲ್ಲದೆ ವಿದ್ಯಾರಣ್ಯ, ವ್ಯಾಸರಾಯ, ಶ್ರೀಪಾದರಾಯರು, ಪುರಂದರದಾಸರು, ಕನಕದಾಸರು, ಸರ್ಪಭೂಷಣ ಶಿವಯೋಗಿಗಳು ಕಂಡುಬರುತ್ತಾರೆ. ಇವರಲ್ಲಿ ವ್ಯಾಸರಾಯರು, ಕನಕದಾಸರು, ಪುರಂದರದಾಸರು ಹೊರಗಿನವರಾದರೂ ಹಂಪೆಯಲ್ಲಿ ಕೃತಿರಚನೆಗೆ ತೊಡಗಿದರು. ಇವರು ದಾಸಸಾಹಿತ್ಯ ಕಾಣಸಿಗುತ್ತಾರೆ.

೧೬ನೇ ಶತಮಾನದಲ್ಲಿ ಅಚ್ಚುತರಾಯನ ಆಸ್ಥಾನದಲ್ಲಿ ಕೃಷ್ಣದೇವರಾಯನ ಮಗಳಾದ ತಿರುಮಲಾಂಬಿಕೆಯು 'ವರದಾಂಬಿಕಾ ಪರಿಣಯ' ಎಂಬ ಚಂಪೂಕಾವ್ಯ ರಚಿಸಿದಳು. ಇದೇ ಅವಧಿಯಲ್ಲಿ ಮಧುರವಾಣಿ ಎಂಬ ಕವಿಯಿತ್ರಿ ಇದ್ದಳು. ಚಾಟುವಿಠಲನಾಥನ ಭಾಗವತ, ಅದೃಶ್ಯ ಕವಿಯ ಪ್ರೌಢರಾಯಕಾವ್ಯ, ದೇವರಾಜನ ಸೊಬಗಿನ ಸೋನೆ, ಅಮರಶತಕಗಳು ರಚನೆಯಾದದ್ದು ಕಂಡುಬರುತ್ತದೆ.

೧೭ನೇ ಶತಮಾನದಲ್ಲಿ ಯಾವುದೇ ಕೃತಿ ರಚನೆಯಾಗಿಲ್ಲ. ಆದರೆ ೧೮ನೇ ಶತಮಾನದಲ್ಲಿ ಶಂಕರಕವಿಯ 'ಚೋರಬಸವ ಚರಿತ' ರಾಮಭಟ್ಟನ ಕೃಷ್ಣ ರಚನೆಯಾಗಿರುವುದು ತಿಳಿದು ಬರುತ್ತದೆ.

೧೯ನೇ ಶತಮಾನದಲ್ಲಿ ಕನ್ನಡ ತೆಲುಗು ಸಾಹಿತ್ಯ ಕೃತಿಗಳು ಬೆಳಕಿಗೆ ಬಂದವು. ಇವರಲ್ಲಿ ಆಂಧ್ರ ಕರ್ನಾಟಕ ಪಿತಾಮಹ ಎನಿಸಿದ ಕೃಷ್ಣಮಾಚಾರಲು, ಕೋಲಾಚಲಂ ಶ್ರೀನಿವಾಸರಾವ್ ಹಾಗೂ ಕೆ.ಎಂ.ಕರಿಬಸವಪ್ಪ ಶಾಸ್ತ್ರಿಗಳನ್ನು ಗಮನಿಸಬಹುದು. ಈ ಸಮಯದಲ್ಲಿ ಅನೇಕ ಶಿವಶರಣರು ಅನುಭಾವಿಗಳಾದ ಹಲವಾರು ಅವದೂತರು ಇಲ್ಲಿದ್ದರು. ಅವರಲ್ಲಿ ಚಿದಾನಂದ ಅವದೂತ, ಚೆನ್ನವೀರೇಶ, ಕುರುಗೋಡು ಬಸವ, ಕುರುಗೋಡು ನೀಲಮ್ಮ, ಗದ್ದಿಕೇರಿ ದೊಡ್ಡ ಬಸಪ್ಪ, ಮೈಲಾರ ಬಸವಲಿಂಗಗಳು, ಚಿತ್ರವಾಡ್ಗಿ ಕಲ್ಮರೇಶ್ವರ, ಕಾನಾಮಡಗು ಶರಣಪ್ಪ, ಗೂಳ್ಯಂ, ಗಾದಿಲಿಂಗಪ್ಪ, ಕುಡಿತಿನಿ ನಯನಸ್ವಾಮಿ, ಬಸವಣ್ಣ, ಬಳ್ಳಾರಿ ಎರ್ರಿತಾತ, ಆದವಾನಿ ಲಕ್ಷ್ಮಣ, ಶಿವರಾಮ ಅವದೂತ, ಗಡಿಗಿ ಪರಪ್ಪ, ದಮ್ಮೂರ ವೆಂಕಪ್ಪ ಗೋಣಿ ಬಸವೇಶ್ವರ ಮುಂತಾದವರನ್ನು ಗುರುತಿಸಲಾಗುತ್ತಿದೆ. ಬಳ್ಳಾರಿಯ ರಾಘುವಾಂಕಸ್ವಾಮಿ ಮುಂತಾದವರು ೨೦ನೇ ಶತಮಾನದ ಕಾಲಾವಧಿಯಲ್ಲಿದ್ದರು. ಈ ಶತಮಾನದ ಅಂತ್ಯದಲ್ಲಿ ಹರಪನಹಳ್ಳಿ

ಭೀಮವ್ವ, 'ಭೀಮೇಶಕೃಷ್ಣ' ಎಂಬ ಅಂಕಿತದಿಂದ ಕೀರ್ತನೆ ಹಾಗೂ ಗೀತೆಗಳನ್ನು ರಚಿಸಿದ್ದಾರೆ. ಇಂತಹ ಒಬ್ಬ ವ್ಯಕ್ತಿಯ ಬಗ್ಗೆ ಮಹಾಪ್ರಬಂಧ ರಚಿಸುವಷ್ಟು ಸಾಹಿತ್ಯವಿರುವುದು ಕಂಡುಬರುತ್ತದೆ. ಅವರ ಹಾಡುಗಳಲ್ಲಿಯ ವೈಶಿಷ್ಟತೆ ನಾಟಕೀಯ ಅಂಶ ಒಳಗೊಂಡಿವೆ. ಈಕೆಯಂತೆಯೇ ಓರುವಾಯಿ ಲಕ್ಷ್ಮಮ್ಮ ಎಂಬುವರು ಭಕ್ತಿಪೂರ್ವಕವಾಗಿ ಹಾಡುಗಳನ್ನು ರಚಿಸಿದ್ದರೆಂದು ತಿಳಿದುಬರುತ್ತದೆ.

೨೦ನೇ ಶತಮಾನದ ಆರಂಭದಲ್ಲಿ ಅನೇಕ ಪಂಡಿತರ ಬಳುವಳಿಯೇ ಆಗಮಿಸಿದಂತಾಯಿತು. ಆ ಅವಧಿಯಲ್ಲಿ ವೈ.ನಾಗೇಶಶಾಸ್ತ್ರೀ. ಸರ್ವದರ್ಶನ ತೀರ್ಥರು ಕನ್ನಡ, ಮರಾಠಿ, ತೆಲುಗು, ಹಿಂದಿ, ಬಂಗಾಲಿ, ಇಂಗ್ಲೀಷ್ ನಲ್ಲಿ ಕೃತಿ ರಚನೆ ಮಾಡತೊಡಗಿದರು. ಅವರ ಗವಿಸಿದ್ದೇಶ್ವರ ಪುರಾಣ, ಷಟ್ ಸ್ಥಲ ಸಿದ್ಧಾಂತ, ಅರ್ಧನಾರೀಶ್ವರ ಪುರಾಣ, ವಿಜಯನನ ಅಭ್ಯುದಯ (ನಾಟಕ), ನೀತಿ ಚಿಂತಾಮಣಿ ಕೃತಿಗಳನ್ನು ಬರೆದರು. ಬೈಲೂರಿನ ಗುರುಸಂಗಮೇಶ್ವರ ಶಾಸ್ತ್ರಿಗಳು ಕನ್ನಡ ಪಂಡಿತರಾಗಿ ಇಂಗ್ಲೀಷ್, ತೆಲುಗು ಸಾಹಿತಿಗಳಾಗಿದ್ದರು. ಪಿ.ಶ್ಯಾಮರಾಯರು ಆದಿಶಂಕರಾಚಾರ್ಯರ ಆನಂದಲಹರಿಯನ್ನು ಅನುವಾದಿಸಿದ್ದರು.

ಬಳ್ಳಾರಿ ಜಿಲ್ಲೆಯ ಹಾಸ್ಯ ಸಾಹಿತಿಯೆಂದೆ ಹೆಸರುಪಡೆದ ಆರ್ .ಭೀಮಸೇನ್ ರಾವ್ ರವರು ಬೀಚಿ ಎಂಬ ಕಾವ್ಯನಾಮದಿಂದ ಸಾಹಿತ್ಯರಚನೆಯಲ್ಲಿ ತೊಡಗಿದರು. ಇವರ ತಿಮ್ಮನ ಪದಗಳು ಇಂದಿಗೂ ಮಾದರಿಯಾಗಿವೆ. ಅಲ್ಲದೆ ಇವರ ಕನ್ನಡ ಎಮ್ಮೆ ಹಾಗೂ ಹಲವಾರು ಹಾಸ್ಯ ಪ್ರಸಂಗಗಳ ತುಣುಕುಗಳಂತು ಮನಪುಳಕಿತವಾಗುವಂತೆ ಮಾಡುತ್ತವೆ. ಶ್ರೇಷ್ಠ ನಾಟಕಕಾರರು, ಗಮಕಿಗಳೂ ಆದ ಜೋಳದರಾಶಿ ದೊಡ್ಡನ ಗೌಡರು ಕನ್ನಡ, ಸಂಸ್ಕೃತಗಳೆರಡರಲ್ಲಿ ಅಪಾರ ಪಾಂಡಿತ್ಯ ಗಳಿಸಿದ್ದರು. ಇವರು ಬಳ್ಳಾರಿ ಜಿಲ್ಲೆಯ ಜೋಳದರಾಶಿಯವರು. ಇದರೊಂದಿಗೆ ಕಪ್ಪಗಲ್ ಸಂಜೀವ ಮೂರ್ತಿ, ಕೊಟ್ರಬಸಯ್ಯ, ಸೋಗಿ ಭಾಸ್ಕರಾಚಾರ್ಯರು, ಕೆ.ವಿರೂಪಾಕ್ಷಗೌಡ, ಹಿ.ಮ.ನಾಗಯ್ಯ, ರಮಾಶಾಸ್ತ್ರಿಗಳು, ಕೋಚೆ ಮುಂತಾದ ಸಾಹಿತಿಗಳು ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಇವರಲ್ಲದೆ ಭಾರತದ ರಾಷ್ಟ್ರಾಧ್ಯಕ್ಷರಾದ ಬಿ.ವಿ.ಗಿರಿಯವರ ಪತ್ನಿ ಸರಸ್ವತಿ ಬಾಯಿಗಿರಿಯವರು ಬಳ್ಳಾರಿಯ ಸಂಪರ್ಕವಿಟ್ಟುಕೊಂಡವರು. ಇವರು ಹಲವಾರು ತೆಲುಗು ಭಕ್ತಿಗೀತೆಗಳನ್ನು ರಚಿಸಿದ್ದರು. ಇದರೊಂದಿಗೆ ಬೀಜಾಕ್ಷರಮಾಲೆ, ಶೈವಸ್ತುತಿ, ಜೀವಿತಸ್ವರ್ಗ ಭೀಮ ಮೊದಲಾದವನ್ನು ಬರೆದರು. ಅಲ್ಲದೆ ಬೆಳಗೆರೆ ಜಾನಕಮ್ಮನವರು ಕಥೆ, ಕಾವ್ಯ ರಚಿಸಿದರೆ ಬಳೇಗಾರ ಲಕ್ಕಮ್ಮ, ಮಹಿಳಾ ಲೇಖಕಿಯರಾಗಿದ್ದರು. ರಾಮಸಾಗರದ ಸಾಲಿ ವೆಂಕಣ್ಣನವರು ಪಂಡಿತರಾಗಿದ್ದರು. ಈಚೆಗೆ ಹಲವಾರು ಸಾಹಿತಿಗಳು ಕೃತಿಗಳನ್ನು ರಚಿಸುತ್ತಿದ್ದಾರೆ.

ಈ ಜಿಲ್ಲೆಯು ಕರ್ನಾಟಕ ಸಂಗೀತ, ನಾಟಕರಂಗ, ಪತ್ರಿಕೋದ್ಯಮ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಖ್ಯಾತಿ ಪಡೆದಿದೆ. ೧೪೫೦ ರಲ್ಲಿದ್ದ ಸಾರಂಗದೇವನ ಸಂಗೀತ ರತ್ನಾಕರ ಇವರೊಂದಿಗೆ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ರಾಘವೇಂದ್ರಸ್ವಾಮಿಗಳ ದೊಡ್ಡಪ್ಪನವರಾದ ಕೃಷ್ಣಭಟ್ ರವರು ವಿದುಷಿಗಳಲ್ಲೊಬ್ಬರು. ಇವಲ್ಲದೆ ಶ್ರೀಪಾದರಾಯರು, ವ್ಯಾಸರಾಯರು, ಪುರಂದರದಾಸರು, ಕನಕದಾಸರು ಹಂಪೆಯಲ್ಲಿ ಉಳಿದುಕೊಂಡು ಕರ್ನಾಟಕ ಸಂಗೀತ ಸೇವೆ ಸಲ್ಲಿಸಿದರು. ಸುಭದ್ರಮ್ಮ ವೆಂಕಟಪ್ಪ, (ವೀಣಾವಾದನ), ಜಿ.ಮರಿಯಣ್ಣ (ಮೃದಂಗ), ಕೆ.ಸೀತಾರಾಮಶಾಸ್ತ್ರಿ(ವಾದಕ), ಜಯರಾಮಚಂದ್ರಯ್ಯನವರು ರೇಡಿಯೋ ಆಕಾಶವಾಣಿ ಕಲಾವಿದರಾಗಿದ್ದರು.

ನಾಟಕ ಸಾಹಿತ್ಯಕ್ಕೆ ಬಂದರೆ ಬಳ್ಳಾರಿಯ ಕುಡಿತಿನಿ ಭೀಮೇಶನನ್ನು ನೆನೆಯದೆ ಇದ್ದರೆ ಸಾರ್ಥಕವಾಗೊಲ್ಲ ಎಂಬ ಮಾತಿಗೆ ಪ್ರಾಯರಾಗಿದ್ದರು. ಇಲ್ಲಿ ನಾಟಕ ಸಾಹಿತ್ಯದಲ್ಲಿ ಕೃಷಿ ನಡೆದಿದೆ. ಪ್ರಮುಖ ನಾಟಕಕಾರರಲ್ಲಿ ರಾಮಸಾಗರದ ಸಾಲಿ ವೆಂಕಣ್ಣ, ತೆಲಿಗಿ ವೀರಣ್ಣ, ದೊಡ್ಡ ಕವಿ ಕುರುಗೋಡು ಕೃಷ್ಣಮಾಚಾರ್, ಟಿ.ರಾಘವಾಚಾರ್, ಬಲಕುಂದಿ ಓಬಳಾಶಾಸ್ತ್ರಿ, ದೊಡ್ಡನಗೌಡ ಟಿ. ಮುಂತಾದವರನ್ನು ಗುರುತಿಸಬಹುದು. ೧೮೯೦ರಲ್ಲಿ ಸರಸಾವಿನೋದಿನಿ ಸಭಾಸ್ಥಾಪನೆ. ೧೯೧೨ರಲ್ಲಿ ವೀರಭದ್ರ ಬಸವೇಶ್ವರ ನಾಟಕ ಮಂಡಳಿ ಸ್ಥಾಪನೆ, ಬೆಂಗಳೂರಿನ ಅಮೆಚೂರ್ ನಾಟಕ ಅಸೋಸಿಯೇಷನ್ ೧೯೬೪ರಂದು ಬಳ್ಳಾರಿಯಲ್ಲಿ ರಾಘವ ಕಲಾಮಂದಿರ ಸ್ಥಾಪಿಸಿದರು. ಈ ಭಾಗದಲ್ಲಿದ್ದ ಮಹಿಳಾ ನಾಟಕಕಾರರಲ್ಲಿ ಕೆ.ನಾಗರತ್ನಮ್ಮ, ಓಂಕಾರಮ್ಮ, ಪದ್ಮಮ್ಮ ಮುಂತಾದವರು ಕಂಡುಬರುತ್ತಾರೆ. ಇವರಲ್ಲದೆ ಕೂಡ್ಲಿಗಿಯಲ್ಲಿ ನಾಟಕ ಆಡುವ ಕಲಾವಿದರು ಅಧಿಕ ಸಂಖ್ಯೆಯಲ್ಲಿದ್ದಾರೆ. ಈಗಲೂ ಹಬ್ಬ-ಹುಣ್ಣಿಮೆ-ಆಚರಣೆ-ಉತ್ಸವ ಸಂದರ್ಭಗಳಲ್ಲಿ ಮಹಾಭಾರತ, ರಾಮಾಯಣದ ಘಟನೆಗಳನ್ನಾಧರಿಸಿದ ಬಯಲಾಟಗಳನ್ನು ಆ ಗ್ರಾಮದ ಜನರೆ ಪಾಲ್ಗೊಂಡು ನಾಟಕ ನಡೆಸಿಕೊಡುವರು.

೨.೫. ಸಾಮಾಜಿಕ ಬದುಕು

ಬಳ್ಳಾರಿಯ ಅನೇಕ ಗ್ರಾಮಗಳನ್ನು ಒಳಗೊಂಡ ಜಿಲ್ಲೆ. ಗ್ರಾಮೀಣ ಪರಿಸರಕ್ಕೆ ಒಗ್ಗಿಕೊಂಡ ಹಲವಾರು ಜನರು ಅವಿಭಕ್ತ ಕುಟುಂಬದಲ್ಲಿ ಜೀವನ ಸಾಗಿಸುವುದು ಕಾಣಸಿಗುತ್ತದೆ. ಇಲ್ಲಿ ಪುರಾತನ ಧರ್ಮಪಾಲನೆ ಇತ್ತು. ಅದರಲ್ಲೂ ಬಾಲ್ಯ ವಿವಾಹ, ಬಹು ಪತ್ನಿತ್ವ, ದೇವದಾಸಿ ಪದ್ಧತಿ, ಬಸವಿ ಪದ್ಧತಿ ರೂಢಿಯಲ್ಲಿತ್ತು. ಇದು ಈಗಲೂ ಅತ್ಯಂತ ಕೆಳವರ್ಗದ ಜನರಲ್ಲಿ ಕಂಡುಬರುತ್ತದೆ. ಈ ಭಾಗದ ಜನತೆ ವಾಸಿಸುವ ಮನೆಗಳನ್ನು ಜೋಳದ ದಂಟು, ಗಿಡಗಳ ಕೊಂಬೆ-ರೆಂಬೆ-ಬೊಂಬುಗಳೇ ಆಶ್ರಯತಾಣಗಳಿಗೆ

ಬಳಸುವ ಸಾಮಗ್ರಿಗಳು. ಇಂತಹ ಕಟ್ಟಿಗೆಯಿಂದ ಗೋಡೆಗಳನ್ನು ನಿರ್ಮಿಸಿ, ಹಸಿಮಣ್ಣನ್ನು ಮೆತ್ತಿ ಗೋಡೆ ನಿರ್ಮಿಸಿ ಗುಡಿಸಲುಗಳನ್ನೂ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇನ್ನೂ ಹಲವರು ಮಣ್ಣಿನ ಇಟ್ಟಿಗೆಗಳನ್ನು ಬಳಸಿ ದೇಶಿ ಹಂಚುಗಳಿಂದ ಮೇಲ್ಛಾವಣಿಯನ್ನು ಮುಚ್ಚಿದ್ದಾರೆ. ನಿಸರ್ಗದಿಂದಲೇ ದೊರೆಯುವ ಮರ-ಮುಟ್ಟುಗಳಿಂದ ಬಾಗಿಲುಗಳನ್ನು ರಚಿಸಿಕೊಂಡು ಕನಿಷ್ಠ ಮಟ್ಟದ ಸೌಕರ್ಯಗಳನ್ನು ಬಳಸಿಕೊಂಡು ಜೀವನ ಸಾಗಿಸುತ್ತಿರುವುದು ಕಂಡುಬರುತ್ತದೆ. ಪಟ್ಟಣದ ಜನತೆಯು ಸಿಮೆಂಟ್ , ಇಟ್ಟಿಗೆ, ಕಲ್ಲುಗಳಿಂದ ಆರ್ .ಸಿ.ಸಿ. ಕಡಪ ಕಲ್ಲುಗಳಿಂದ ಮನೆಗಳನ್ನು ಕಟ್ಟಿಕೊಂಡು ಅವುಗಳಿಗೆ ಸಾಕಷ್ಟು ವಿಶಾಲ ಕೋಣೆಗಳು ಮತ್ತು ಗಾಳಿ-ಬೆಳಕಿಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಈ ಜನರ ಉಡುಗೆ-ತೊಡುಗೆಯು ಸಾಮಾನ್ಯವಾಗಿವೆ. ಪಟ್ಟಣದ ಶೈಲಿಯ ಸೋಗಿಗೆ ಮಾರುಹೋದ ಅನೇಕ ಹಳ್ಳಿಗಳು ಇಂದು ಮಾರ್ಪಾಡು ಹೊಂದಿವೆ. ಮೊದಮೊದಲು ಲುಂಗಿ, ಜುಬ್ಬಾ, ಒಳ ಅಂಗಿ, ಪೂರ್ತಿ ಬುಜ್ಜಾ, ಹೆಗಲಮೇಲೆ ಶಲ್ಯೆ ಹಾಕುತ್ತಿದ್ದರು. ಈಗ ಆಧುನಿಕ ಶೈಲಿಯ ಜೀನ್ಸ್ ಪ್ಯಾಂಟ್, ಟಿ-ಷರ್ಟುಗಳನ್ನು ಹೆಣ್ಣು-ಗಂಡುಗಳು ಧರಿಸುತ್ತಿದ್ದಾರೆ. ತೀರಾ ಹಳೆಯದಾದ ಬೆಲ್ ಬಾಟಮ್ ಪ್ಯಾಂಟ್ ಇಂದು ಫ್ಯಾಷನ್ ಮಾದರಿಯಾಗಿದೆ. ಮಹಿಳೆಯರು ಧರಿಸುವ ಉಡುಪುಗಳಲ್ಲಿ ವಾಯಿಲ್ , ಜಾರ್ಜೆಟ್ , ಟೆರಿಲೀನ್ , ಶಿಫಾನ್ , ರೇಷ್ಮೆ ಬಟ್ಟೆಗಳನ್ನು ದೈನಂದಿನ ಉಡುಗೆಯಾಗಿ ಬಳಸುತ್ತಿದ್ದಾರೆ. ಹಾಗೆಯೇ ಬೆಳಗಿನ ಹೈ ಹೀಲ್ಡ್ ಪಾದರಕ್ಷೆಗಳನ್ನು ಮೆಟ್ಟುತ್ತಿದ್ದಾರೆ.

ಇಲ್ಲಿ ಸಸ್ಯಹಾರಿ ಮಾಂಸಹಾರಿಗಳಿದ್ದಾರೆ. ಹೆಚ್ಚಾಗಿ ಹಳ್ಳಿಗಾಡಿನ ಕೃಷಿ ಕಸುಬುದಾರರು, ಕೆಲವು ಮೇಲ್ವರ್ಗದವರು ಮಾಂಸ ಸೇವಿಸುವವರು. ಮೊದಲು ಜೋಳದ ಹಿಟ್ಟಿನ ರೊಟ್ಟಿ, ಅಕ್ಕಿ, ರಾಗಿ, ಮುದ್ದೆ ಉಪಯೋಗಿಸುತ್ತಿದ್ದರು.

ಸಾಮಾಜಿಕ ಜೀವನದಲ್ಲಿ ಜನಸಂಖ್ಯೆಯು ತುಂಬಾ ಮಹತ್ವವಾದ ಅಂಶವಾಗಿದೆ. ಆರ್ಥಿಕ ಅಭಿವೃದ್ಧಿಯ ಹಿನ್ನಡೆಗೆ ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆಯು ಪ್ರಮುಖ ಕಾರಣ. ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯ ಜನಸಂಖ್ಯೆಯ ದೃಷ್ಟಿಯಿಂದ ೧೧ನೇ ಸ್ಥಾನವನ್ನು ಪಡೆದಿದೆ. ೧೯೦೧ ರಿಂದಲೂ ಜನಸಂಖ್ಯೆಯು ಪ್ರತಿ ಹತ್ತು ವರುಷಗಳಿಗೊಮ್ಮೆ 'ಜನಗಣತಿ'ಯಲ್ಲಿ ಸೂಚಿಸಿದಂತೆ ಅಧಿಕವಾಗುತ್ತಾ ಸಾಗಿದೆ. ಆದರೆ ೧೯೨೦ ರಲ್ಲಿ ಮಾತ್ರಸಂಖ್ಯೆ ಏರಿಕೆ ಪ್ರಮಾಣದಲ್ಲಿ ಕಡಿಮೆಯಾಗಿರುವುದು ಅಂಕಿ ಅಂಶಗಳಿಂದ ಕಂಡುಬರುತ್ತದೆ. ಬಳ್ಳಾರಿ ಮತ್ತು ಹೊಸಪೇಟೆಯ ತಾಲ್ಲೂಕುಗಳಲ್ಲಿ ಶೇ.೪೩ರಷ್ಟು ಮಾತ್ರ ಜನಸಂಖ್ಯೆ ಸೇರ್ಪಡೆಯಾಗಿರುವುದು ಕಾಣುತ್ತದೆ.

ಈ ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನಸಂಖ್ಯೆಯು ೧೯೯೧ರಲ್ಲಿ ಈ ರೀತಿಯಿತ್ತು. ಪರಿಶಿಷ್ಟ ಜಾತಿಯ ಮಹಿಳೆ ೧,೫೪,೩೦೮ ಹಾಗು ಪುರುಷರು ೧,೫೬,೯೪೪ ಇದ್ದು ಒಟ್ಟು ಜನಸಂಖ್ಯೆ ೦೩,೧೧,೨೫೨ ಇತ್ತು. ಪರಿಶಿಷ್ಟ ಪಂಗಡ ಮಹಿಳೆ ೭೩,೪೬೭ ಇದ್ದರೆ ಪುರುಷರು ೭೪,೪೦೨ ದಷ್ಟಿದ್ದಾರೆ. ಒಟ್ಟು ಜನಸಂಖ್ಯೆ ೧,೪೭,೮೬೯ರಷ್ಟಾಗಿತ್ತು. ಇಲ್ಲಿ ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆಗೆ ವಲಸೆ ಬರುತ್ತಿರುವವರ ಸಂಖ್ಯೆಯೂ ಕಾರಣವಾಗಿದೆ. ಅಲ್ಲದೆ ತಲಾವರಮಾನವು ೧೯೯೫-೯೬ರಲ್ಲಿ ೦೮,೫೪೪ ರೂಪಾಯಿ ಇತ್ತು. ಜಿಲ್ಲಾ ವರಮಾನವು ೦೧, ೧೨೬ ಕೋಟಿ ರೂ.ಗಳಷ್ಟಾಗಿತ್ತೆಂದು ದಾಖಲೆಗಳು ತಿಳಿಸುತ್ತವೆ. ೧೯೦೧ ರಿಂದ ೧೯೯೧ರ ವರೆಗಿನ ಜನಸಂಖ್ಯೆಯ ಕೋಷ್ಟಕವನ್ನು ಅನುಬಂಧದಲ್ಲಿ ನೀಡಲಾಗಿದೆ.

ವಿದ್ಯಾಭ್ಯಾಸ

ವಿದ್ಯಾಭ್ಯಾಸ ನೀಡುವ ಕಾರ್ಯವು ಪವಿತ್ರವಾದ ಕೆಲಸ ಕಾರ್ಯಗಳಲ್ಲಿ ಒಂದು. ಈ ಮೊದಲು ದೇವಾಲಯಗಳಲ್ಲಿ, ಅಗ್ರಹಾರಗಳಲ್ಲಿ ಶಿಕ್ಷಣ ಪ್ರಸಾರ ನಡೆಯುತ್ತಿತ್ತು. ಇದಕ್ಕೆ ಶಾಸನಗಳೇ ಪ್ರಮುಖ ಆಧಾರಗಳು. ರಾಜರ ಆಳ್ವಿಕೆಯ ಸಂದರ್ಭದಲ್ಲಿ ಬಾಗಳಿ, ಕುರುವತ್ತಿ, ಹೊಳಲು, ಹಿರೇಹಡಗಲಿ, ಹೂವಿನಹಡಗಲಿ, ತಿಮ್ಮಲಾಪುರ, ನೀಲಗುಂದ, ನಾಗೇನಹಳ್ಳಿಗಳು ಅಗ್ರಹಾರಗಳಾಗಿಯೂ ಮೋರಿಗೇರಿ ಘಟಿಕಾಸ್ಥಾನವಾಗಿಯೂ ಪರಿಣಮಿಸಿದ್ದವು. ಚಾಲುಕ್ಯ ಪೂರ್ವದಿಂದ ಹಿಡಿದು ವಿಜಯನಗರ ಸಾಮ್ರಾಜ್ಯ ಹಾಗೂ ಸಣ್ಣ ಪುಟ್ಟ ಪಾಳೆಯಗಾರರವರೆಗೂ ದೇವಾಲಯಗಳನ್ನು ಕಟ್ಟಿಸಿ ಕಲೆಗೆ, ವಾಸ್ತುಶಿಲ್ಪಕ್ಕೆ ಮಾದರಿಯಾಗಿ ನಿಲ್ಲುವಂತೆ ಮಾಡಿದ ಕಾರ್ಯ ಶ್ಲಾಘನೀಯವಾಗಿದೆ. ಈ ಭಾಗದಲ್ಲಿ ಹಂಪಿ ಹಾಗೂ ಸಂಡೂರಿನ ಕಾರ್ತಿಕೇಯ ದೇವಸ್ಥಾನಗಳು ಅತ್ಯುತ್ತಮವಾದವುಗಳಾಗಿವೆ. ಹರಪನಹಳ್ಳಿಯಲ್ಲಿ ಚಾಲುಕ್ಯರ ದೇವಸ್ಥಾನಗಳಿವೆ. ಬಾದಾಮಿ ಚಾಲುಕ್ಯರಿಗೆ ಸಂಬಂಧಿಸಿದಂತೆ ಸಂಡೂರಿನ ಪಾರ್ವತಿ ದೇವಾಲಯವಿದೆ. ಹಂಪೆಯ ಕಿಷ್ಕಿಂದಾ ಜೈನರ ಬಸದಿಗಳ ಸಮೂಹ ಸ್ಥಳವಾಗಿದೆ. ಹೊಯ್ಸಳ ದೇವಾಲಯಗಳು ಅಂಬಳಿ, ಸೋಗಿ, ಕುಡಿತಿನಿ ಪ್ರದೇಶಗಳಲ್ಲಿ ದ್ರಾವಿಡ ಶೈಲಿಯಲ್ಲಿ ರಚನೆಯಾಗಿವೆ. ಚಿತ್ರಕಲೆ, ಸಂಗೀತಕ್ಷೇತ್ರ ಸಾಧನೆಗಳು ಬಳ್ಳಾರಿ ಜಿಲ್ಲೆಗೆ ಕೊಡುಗೆಯಾಗಿ ಪರಿಣಮಿಸಿದೆ. ನಮ್ಮಲ್ಲಿ ದಾಸರಿಂದ ಹಿಡಿದು ಇಲ್ಲಿಯವರೆಗೂ ಅನೇಕ ಸಂಗೀತ ವಿದ್ವಾಂಸರು ಬಾಳಿದ್ದು ಕಂಡುಬರುತ್ತದೆ. ಇವರಲ್ಲಿ ವ್ಯಾಸ, ಪುರಂದರದಾಸ, ಕನಕದಾಸ ಮುಂತಾದವರುಗಳು ಕಂಡುಬರುತ್ತಾರೆ.

ಹಬ್ಬಗಳು

ಹಿಂದುಗಳಲ್ಲಿ ಪ್ರತಿವರ್ಷಕ್ಕೊಮ್ಮೆ, ತಿಂಗಳಿಗೊಮ್ಮೆ ಹಬ್ಬಗಳ ಆಚರಣಾ ಕ್ರಮವಿದೆ. ಇವರು ವ್ರತ ಉಪವಾಸಾದಿಗಳನ್ನು ಕೈಗೊಳ್ಳುವರು. ಯಾವುದೇ ಹಬ್ಬಗಳಲ್ಲಿ ಭೇದಭಾವ ಎಣಿಸದೆ ಸಾಮೂಹಿಕವಾಗಿ ಬೆರೆಯುತ್ತಿದ್ದರು. ಈ ರೀತಿಯಾಗಿ ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ಹಬ್ಬಗಳನ್ನು ವಿಜೃಂಭಣೆಯಿಂದ ಮಾಡುವರು. ಅವುಗಳಲ್ಲಿ ಯುಗಾದಿಯು ಹೊಸವರ್ಷದ ಪ್ರತೀಕವಾಗಿ, ಕಾರಹುಣ್ಣಿಮೆ, ಗಣೇಶ ಚತುರ್ಥಿ, ದಸರಾ, ದೀಪಾವಳಿ, ಹುತ್ತರಿಹಬ್ಬ, ಹನುಮಂತ ಜಯಂತಿ, ಮಹಾಶಿವ ರಾತ್ರಿ, ಹೋಳಿ ಇವುಗಳೊಂದಿಗೆ ರಾಷ್ಟ್ರೀಯ ಹಬ್ಬಗಳಾದ ಜನವರಿ ೨೬ ಗಣರಾಜ್ಯ ದಿನವಾಗಿಯೂ, ಆಗಸ್ಟ್ ೧೫ ಭಾರತಕ್ಕೆ ಸ್ವಾತಂತ್ರ ಲಭಿಸಿದ್ದಕ್ಕಾಗಿಯೂ, ಅಕ್ಟೋಬರ್ ೨೬ ಗಾಂಧಿಜಯಂತಿಯಾಗಿಯೂ ಆಚರಣೆಗೊಳ್ಳುತ್ತಿವೆ.

ಮುಸ್ಲಿಂ ಜನಾಂಗವು ತಮ್ಮ ಹಬ್ಬಗಳನ್ನು ಆಚರಿಸುತ್ತದೆ. ಅವುಗಳಲ್ಲಿ ಈದ್ -ಉಲ್ -ಫೀತರ್ (ರಮಾಸನ್, ರಂಜಾನ್) ಇದ್ -ಉಲ್ -ಝುಅ (ಬಕ್ರೀದ್), ಮಿಲಾದ್ - ಉನ್ ನಬಿ-ಪೈಗಂಬರರ ಜನ್ಮದಿನದ ಅಂಗವಾಗಿಯೂ ಹಬ್ಬ ಕೈಕೊಳ್ಳುವುದು ಕಂಡುಬರುತ್ತದೆ. ಕ್ರೈಸ್ತರು ಸಹ ವರ್ಷದಲ್ಲಿ ಡಿಸೆಂಬರ್ ೨೫ ರಂದು ಗುಡ್ ಫ್ರೈಡೆಗಳ ಜೊತೆಗೆ ಸಂತಮೇರಿಯನ್ನರ ಆಚರಣೆಯನ್ನು ಮೂರು ದಿನಗಳ ಕಾಲ ಜರುಗಿಸುವರು. ಜೈನರು ಯುಗಾದಿಯನ್ನೂ ಆದಿತೀರ್ಥಕರನಾದ ವೃಷಭನ ದಿಗ್ವಿಜಯ, ಮಹಾವೀರ ಜಯಂತಿ ಹಾಗೂ ಮಹಾವೀರನ ಮಹಾಪರಿ ನಿರ್ವಾಣವಾದ ದಿನವನ್ನು ದೀಪವಾಳಿಯಲ್ಲಿ ಆಚರಿಸುವರು. ಧರ್ಮದವರು ಕಾರ್ತಿಕ ಪೂರ್ಣಿಮೆಯಂದು ಗುರುನಾನಕ್‌ರ ಹಬ್ಬವನ್ನು ಮಾಡುವರು.

ಜಾತ್ರೆ-ಉರುಸ್ ಗಳು ಬಳ್ಳಾರಿ ಜಿಲ್ಲೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಇದರಲ್ಲಿ ಕೆಲವು ಧಾರ್ಮಿಕ ಯಾತ್ರಾಸ್ಥಳಗಳಾಗಿವೆ. ಅದರಲ್ಲಿ ಪ್ರಮುಖವಾಗಿ ಬಳ್ಳಾರಿ ದುರ್ಗಮ್ಮ, ಹಂಪಿಯ ವಿರೂಪಾಕ್ಷ ಮೈಲಾರ, ಸವದತ್ತಿ ಎಲ್ಲಮ್ಮ ಮುಂತಾವುಗಳನ್ನು ಹೆಸರಿಸಬಹುದು. ಈ ಜಾತ್ರೆಗಳಲ್ದೆ ಮುಸ್ಲಿಮ್ ಸಂತರು ಹಿಂದೂ ಅವದೂತರಿಗೆ ಸಂಬಂಧಿಸಿದಂತೆ ಉರುಸು ನಡೆಯುತ್ತದೆ. ಪ್ರತಿ ತಾಲ್ಲೂಕುಗಳಲ್ಲಿ ೧೦-೧೫ ಜಾತ್ರೆ ಹಾಗೂ ಉರುಸುಗಳು ಜರುಗುವವು. ಹೆಚ್ಚಿನ ವಿವರಗಳನ್ನು ಹೊಂದಿದ ಪಟ್ಟಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

೨.೬. ಧಾರ್ಮಿಕತೆ

ಬಳ್ಳಾರಿ ಧರ್ಮಸಾಮರಸ್ಯಕ್ಕೆ ಪ್ರತೀಕವಾಗಿದೆ. ಇಲ್ಲಿ ಎಲ್ಲಾ ಧರ್ಮಗಳ ಜನರು ವಾಸವಾಗಿದ್ದಾರೆ. ಯಾವುದೇ ಧರ್ಮದಲ್ಲಿ ಧಾರ್ಮಿಕ ವೈಷಮ್ಯ ಮಾತ್ರ ಇರಲಿಲ್ಲ. ಒಂದು ಧರ್ಮದವರು ಇನ್ನೊಂದು

ಧರ್ಮದ ದೇವಾಲಯಗಳಿಗೆ ದಾನ-ದತ್ತಿಯನ್ನು ಬಿಟ್ಟಿದ್ದಾರೆ. ಹೀಗಾಗಿ ಸರ್ವಧರ್ಮ ಸಮನ್ವಯವನ್ನು ಇಲ್ಲಿ ಕಾಣುತ್ತೇವೆ.(ನಾಗಯ್ಯ ಜೆ.ಎಂ. ೧೯೯೧ ಪು.೪೬) ಅಲ್ಲದೆ ವಿಜಯನಗರ ಆಸ್ಥಾನದಲ್ಲಿ ಎಲ್ಲಾ ಧರ್ಮದವರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟಿತ್ತು ಎಂದು ತಿಳಿದುಬರುತ್ತದೆ. ಅಲ್ಲಿ ಜೈನ, ಶೈವ, ವೈಷ್ಣವ, ಮುಸ್ಲಿಮರಿಗೆ ಸಂಬಂಧಿಸಿದ ಗುಡಿ-ಗುಡಾರಗಳನ್ನು ಕಟ್ಟಿಸಿದ್ದರು. ರಾಜರು ಧರ್ಮಕ್ಕೆ ವಿಶೇಷ ಪ್ರೋತ್ಸಾಹ, ಉತ್ತೇಜನ ಕಲ್ಪಿಸಿರುವುದು ಕಂಡುಬರುತ್ತದೆ. ಬೌದ್ಧಧರ್ಮದ ಬಗ್ಗೆ ಖಚಿತ ಆಧಾರ ದೊರೆಯದಿದ್ದರೂ ಸಹ ಅಶೋಕನ ಆಳ್ವಿಕೆಯಿಂದ ಆತನು ಭೌದ್ಧಧರ್ಮ ಪ್ರಸಾರಕ್ಕಾಗಿ ಕೈಕೊಂಡ ಯಾತ್ರೆ ಹಾಗೂ ದೊರಕಿದ ಶಾಸನಗಳಿಂದ ಬೌದ್ಧಧರ್ಮ ಪ್ರಸಾರವು ಮುಂಚೂಣಿಯಲ್ಲಿತ್ತೆಂದು ತಿಳಿಯುತ್ತದೆ.

ನಂತರ ಬೆಳೆದುಬಂದ ಜೈನ ಧರ್ಮಕ್ಕೆ ರಾಜಾಶ್ರಯ ದೊರಕಿತು. ಅಲ್ಲದೆ ಅದರ ವಿಸ್ತರಣೆ ಅನುಪಮವಾದುದಾಗಿದೆ. ಈ ಧರ್ಮದ ಪ್ರಸಾರವು ಬಳ್ಳಾರಿಯಲ್ಲಿತ್ತು ಎಂಬುದಕ್ಕೆ ಕ್ರಿ.ಶ.೧೧೫೫ರ ಕೋಗಳಿ ಶಾಸನ ಹೇಳುತ್ತದೆ. ಗಂಗರ ಅರಸನಾದ ದುರ್ವಿನೀತನು ಬಸದಿಯನ್ನು ಕಟ್ಟಿಸಿದ್ದನೆಂಬುದಕ್ಕೆ ಈ ಶಾಸನ ಆಧಾರವಾಗಿದೆ. ಬಾಗಳಿ, ಸಂಡೂರು, ಕುರುಗೋಡು ಯರಬಳ್ಳಿ, ಮೋರಿಗೇರಿ, ನಂದಿಬೇವೂರು, ಹೇಮಕೂಟದಲ್ಲಿರುವ ಜಿನ ಬಸದಿಗಳು ಕಾಣಸಿಗುತ್ತವೆ. ಕುರುಗೋಡಿನ ಕ್ರಿ.ಶ.೧೫೪೫ರ ಶಾಸನವೊಂದು ಜಿನಬಸದಿಗಾಗಿ ದಾನ ನೀಡಿದ ವಿವರಗಳನ್ನೊಳಗೊಂಡಿದೆ.

ಶೈವಧರ್ಮವು ಇತರೆ ಧರ್ಮಗಳಿಗಿಂತಲೂ ಅಧಿಕ ಪ್ರಸಾರವನ್ನು ಹೊಂದಿತ್ತು. ಅಲ್ಲದೆ ಪ್ರಭಾವಯುತವಾಗಿತ್ತು. ಇಲ್ಲಿ ಲಕುಲೇಶ ಪಾಶುಪತರು, ಕಾಪಾಲಿಕರು, ಅಘೋರಿಗಳು ತಮ್ಮ ತಾಣವನ್ನಾಗಿಸಿಕೊಂಡಿದ್ದರೆಂಬುದಕ್ಕೆ ಕ್ರಿ.ಶ.೧೦೪೫ರ ಮೋರಿಗೇರಿ ಶಾಸನ ದಾಖಲೆ ನೀಡುತ್ತದೆ. ಕಾಳಾಮುಖರಿಗೆ ಸಂಬಂಧಿಸಿದ ಅನೇಕ ಮಠಗಳು ಇಲ್ಲಿ ಇದ್ದವು. ಅವುಗಳಲ್ಲಿ ಕ್ರಿ.ಶ.೧೧೧೧ಕ್ಕೆ ಸಂಬಂಧಪಟ್ಟ ಶಾಸನದಲ್ಲಿ ಕಾಲಮುಖಸ್ಥಾನ ಕರ್ತಾರ ಮಠ ಎಂದಿದೆ. ಇದರೊಂದಿಗೆ ಹಿರೇಕುರುವತ್ತಿಯು ಶೈವಕೇಂದ್ರವಾಗಿತ್ತು. ಇದಲ್ಲದೆ ಸಿರುಗುಪ್ಪ, ಕೂಡ್ಲಿಗಿ, ಉಜ್ಜಿನಿಯ ಕೇಂದ್ರಗಳು ಈಗಲೂ ಶೈವರಿಗೆ ಸಂಬಂಧಿಸಿದ ಗುಡಿಗಳನ್ನು ಹೊಂದಿವೆ. ಉಜ್ಜಿನಿಯ ಪಂಚಪೀಠಗಳಲ್ಲಿ ಒಂದಾದ ಕೇಂದ್ರವಾಗಿದೆ. ನಂತರ ವಿಜಯನಗರದ ಅರಸರಲ್ಲಿ ಇಮ್ಮಡಿ ದೇವರಾಯನ ಆಸ್ಥಾನದಲ್ಲಿ ೧೦೧ ವಿರಕ್ತರು ಇದ್ದರೆಂದು, ಅವರೆಲ್ಲರೂ ಶರಣರ ಕುರಿತಾಗಿ ಕೃತಿರಚನೆಗೆ ತೊಡಗಿದ್ದ ವಿಷಯ ಕಾವ್ಯಗಳಿಂದ ತಿಳಿದುಬರುತ್ತದೆ. ಕೊಟ್ಟೂರಿನ ಕೊಟ್ಟೂರೇಶ್ವರ, ಕೋಲಶಾಂತಯ್ಯ, ಗೋಣಿಬಸವೇಶ್ವರ ಸ್ಥಳಗಳು ಪವಿತ್ರ ಶೈವ

ಆರಾಧನಾ ಸ್ಥಳಗಳಾಗಿವೆ. ವೈಷ್ಣವ ಧರ್ಮವು ಆರಂಭದಲ್ಲಿ ಪ್ರಬಲ್ಯ ಪಡೆಯಲಿಲ್ಲ. ಇದಕ್ಕೆ ವಿಜಯನಗರ ಸಾಮ್ರಾಜ್ಯದಲ್ಲಿ ಉತ್ತಮ ಸ್ಥಾನ ದೊರಕಿತು. ಆದರೂ ಅಲ್ಲಲ್ಲಿ ಕೆಲವು ಶಾಸನಗಳು ವೈಷ್ಣವ ಧರ್ಮಕ್ಕೆ ಉತ್ತೇಜನ ನೀಡಿ ದೇವಾಲಯ ನಿರ್ಮಿಸಿದ್ದಕ್ಕೆ ಸಾಕ್ಷಿ ನೀಡುತ್ತವೆ. ಕ್ರಿ.ಶ.೧೧೨೧ರ ಸೋಗಿಯಲ್ಲಿ ದೊರೆತ ಶಾಸನದಿಂದ ಕೇಶವದೇವರನ್ನು ಪ್ರತಿಷ್ಠಾಪಿಸಿ ಭೂಮಿದಾನ ದತ್ತಿಯಾಗಿ ಬಿಟ್ಟರೆಂದು ತಿಳಿಸುತ್ತದೆ. ಕಮಲಾಪುರದ ಕ್ರಿ.ಶ.೧೫೧೮ರ ಶಾಸನವೊಂದರಲ್ಲಿ ಕೃಷ್ಣದೇವರಾಯನ ಪಟ್ಟಮಹಾದೇವಿಯಾದ ತಿರುಮಲದೇವಿಗೆ ಪುಣ್ಯವಾಗಲೆಂದು ತಿರುಮಲರಾಯದೇವಾಲಯವನ್ನು ಕಟ್ಟಿಸಿ, ಭೂದಾನ ನೀಡಲಾಗಿದೆ ಎಂದು ಉಲ್ಲೇಖವಿದೆ. ಹಾಗೆಯೇ ನಾಗೇಹಳ್ಳಿಯ ಶಾಸನವೊಂದರಲ್ಲಿ ಶೇಷಶಯನ ದೇವಾಲಯ ನಿರ್ಮಿಸಿ ಆ ಊರನ್ನು ಅಗ್ರಹಾರವನ್ನಾಗಿ ಪರಿವರ್ತಿಸಿದನೆಂದು ತಿಳಿದುಬರುತ್ತದೆ.

ವಿಜಯನಗರ ಸಾಮ್ರಾಜ್ಯ ಸರ್ವಧರ್ಮ ಸಮನ್ವಯಕ್ಕೆ ಪ್ರಮುಖ ನೆಲೆಯಾಗಿತ್ತು ಎಂಬ ಹೇಳಿಕೆಯಂತೆ ಇಲ್ಲಿ ಘಟ್ಟದ ಕೆಳಗಿನ ಘೋರಿ ಎಂಬ ಸ್ಥಳದಲ್ಲಿ ಹೆಚ್ಚಾಗಿ ಮುಸ್ಲಿಂ ಗೋರಿಗಳು ಇರುವುದು ಗಮನಕ್ಕೆ ಬರುತ್ತದೆ. ಅಲ್ಲದೆ ಇಮ್ಮಡಿ ದೇವರಾಯನು ಮುಸ್ಲಿಂ ಕುರಾನ್ ಪ್ರಕಟಿಸಿ ಅದರ ತತ್ವದಂತೆ ಪಾಲಿಸಲು ತಿಳಿಸುತ್ತಿದ್ದನು. ಅಲ್ಲದೆ ಹೊಸಪೇಟೆಯ ಎ.ಸಿ.ಬಂಗಲೆಯ ಹತ್ತಿರ ಕಡ್ಡಿರಾಂಪುರದ ಹತ್ತಿರ ಬೃಹತ್ ಗೋರಿಗಳು ನೋಡಸಿಗುತ್ತವೆ. ಇವುಗಳನ್ನು ವಿಜಯನಗರದ ಆಸ್ಥಾನದ ರಾಜರು ನಿರ್ಮಾಣ ಮಾಡಿದರೆಂದು ತಿಳಿದುಬರುತ್ತದೆ. ಈಗಲೂ ಹಂಪೆಗೆ ಸರ್ವಧರ್ಮದವರು ಆಗಮಿಸುತ್ತಿದ್ದಾರೆ.

೨.೬. ರಾಜಕೀಯ

ಬಳ್ಳಾರಿಯು ರಾಜಕೀಯ ರಂಗದಲ್ಲಿ ಪ್ರಮುಖ ಪಾತ್ರವಹಿಸಿದೆ. ಇಲ್ಲಿ ಆಳಿದ ರಾಜವಂಶಗಳಲ್ಲಿನಂದರು, ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಗಂಗ, ಕಲ್ಯಾಣಿ ಚಾಲುಕ್ಯರು, ಪಾಂಡ್ಯ, ಕಲಚೂರಿ, ಹೊಯ್ಸಳ, ಸೇವುಣ, ಕುಮ್ಮಟದುರ್ಗದ ಅರಸರು ಆಳ್ವಿಕೆ ನಡೆಸಿದಂತೆ ಕಂಡುಬರುತ್ತದೆ. ಇವರ ನಂತರವೇ ವಿಜಯನಗರ ಸಾಮ್ರಾಜ್ಯವು ವೈಭವಯುತವಾಗಿ ಆಡಳಿತ ನಡೆಸಿತು. ಇಡೀ ದಕ್ಷಿಣ ರಾಜ್ಯಗಳಲ್ಲಿ ಪ್ರಮುಖ ರಾಜಮನೆತನವಾಗಿ ವಿದೇಶಿ ವಿದ್ವಾಂಸರಿಂದಲೂ ಪ್ರಶಂಸೆಗೊಳಗಾಗಿ ಸುವರ್ಣಯುಗವೆಂಬ ಖ್ಯಾತಿ ಪಡೆಯಿತು. ಈ ಸಾಮ್ರಾಜ್ಯವು ಪತನವಾದ ನಂತರವೇ ಸಣ್ಣ-ಪುಟ್ಟ ಪಾಳೆಯಗಾರರ ಆಳ್ವಿಕೆ ಕಂಡುಬಂದರೂ ಸಹ ಸುಲ್ತಾನರ ದಬ್ಬಾಳಿಕೆಯಿಂದ ಎಲ್ಲಾ ಪಾಳೆಯಗಾರರು ತತ್ತರಿಸಿಹೋಗಿದ್ದರು. ಬಿಜಾಪುರದ ಸುಲ್ತಾನರಿಂದ ಕ್ರಿ.ಶ.೧೬೦೪ರಲ್ಲಿ ಬಳ್ಳಾರಿ, ಆದವಾನಿ ಕೋಟೆಗಳನ್ನು

ಶಿವಾಜಿಗೆ ಬಳುವಳಿಯಾಗಿ ನೀಡಲಾಯಿತು(ಮ್ಯಾಕಲೀನ್-೧೮೮೫) ಎಂದು ತಿಳಿದು ಬರುತ್ತದೆ. ಶಿವಾಜಿಯ ಮರಣದ ಬಳಿಕವೇ ಕ್ರಿ.ಶ.೧೬೮೦ ಔರಂಗಜೇಬನ ಆಳ್ವಿಕೆಯು ಪ್ರಬಲಸ್ಥಿತಿಯಲ್ಲಿತ್ತು. ಈ ಭಾಗದ ಪಾಳೆಯಗಾರರು ಬಲಶಾಲಿಗಳಾಗಿದ್ದರು.

ನಂತರ ಕ್ರಿ.ಶ.೧೮೬೮ರ ಹೊತ್ತಿಗೆ ಹೈದರಾಲಿಯು ಬಳ್ಳಾರಿಯನ್ನು ವಶಪಡಿಸಿಕೊಂಡರೆ ಈತನ ಮಗ ಟಿಪ್ಪುಸುಲ್ತಾನನು ಕ್ರಿ.ಶ.೧೭೮೬ರಲ್ಲಿ ಆದವಾನಿಯವರೆಗೂ ತನ್ನ ಆಡಳಿತವನ್ನು ವಿಸ್ತರಿಸಿದನು. ಈತನ ಕಾಲಾವಧಿಯಲ್ಲೇ ೧೮ನೇ ಶತಮಾನದಲ್ಲಿ ಬ್ರಿಟಿಷರು ಕ್ರೈಸ್ತ ಮಿಷನರಿಗಳ ಮೂಲಕ ಆಗಮಿಸಿದರು. ಇವರು ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿದರು. ನಿಜಾಮರು ಮರಾಠರೊಂದಿಗೆ ಬಾಂಧವ್ಯ ಬೆಳೆಸಿದ ಬ್ರಿಟಿಷರು ಟಿಪ್ಪುವಿನ ಮೇಲೆ ಆಕ್ರಮಣ ಮಾಡಿ ಕ್ರಿ.ಶ.೧೭೯೨ರಲ್ಲಿ ಸೋಲಿಸಿದರು. ಈ ಭಾಗದ ಪಾಳೆಯಗಾರರಿಗೆ ಹರಪನಹಳ್ಳಿ, ರಾಯದುರ್ಗ, ಸಂಡೂರುಗಳನ್ನು ನೀಡಿ ಉಳಿದ ಪ್ರದೇಶವನ್ನೆಲ್ಲಾ ನಿಜಾಮರು ಆಳತೊಡಗಿದರು. ಬಳ್ಳಾರಿ, ಅನಂತಪುರ, ಕರ್ನೂಲ್, ಕಡಪಗಳು ಇಂಗ್ಲಿಷರ ಅಧೀನದಲ್ಲಿದ್ದವು. ನಿಜಾಮರು-ಮರಾಠರು ಆಳತೊಡಗಿದರು. ಬಳ್ಳಾರಿ, ಅನಂತಪುರ, ಕರ್ನೂಲ್, ಕಡಪಗಳು ಇಂಗ್ಲೀಷರ ಅಧೀನದಲ್ಲಿದ್ದವು. ನಿಜಾಮರು-ಮರಾಠರು ಸಹಾಯಕ ಸೈನ್ಯ ಪದ್ಧತಿ ಒಪ್ಪಿಕೊಂಡು ಇಂಗ್ಲೀಷರಿಗೆ ಸಂಭಾವನೆಯನ್ನು ನೀಡತೊಡಗಿದರು. ಇದರಿಂದ ಬಳ್ಳಾರಿಯನ್ನು ೧೪೭ ವರ್ಷಗಳ ಕಾಲ ಇಂಗ್ಲೀಷರು ಆಳಿದರು. ಇದೇ ಸುಮಾರಿನಲ್ಲಿ ಸಂಡೂರನ್ನು ಸಿದ್ದೋಜಿರಾವ್ ಘೋರ್ಪಡೆಯ ವಶಕ್ಕೆ ನೀಡಲಾಯಿತು. ಅಂದಿನಿಂದ ಕ್ರಿ.ಶ.೧೯೪೯ರ ವರೆಗೂ ಈ ಮನೆತನದ ಸಂಸ್ಥಾನದವರು ರಾಜ್ಯಭಾರ ಮಾಡಿದರು. ಆಗ ಸರ್ ಥಾಮಸ್ ಮನ್ರೋ ಕಲೆಕ್ಟರ್ ಆಗಿ ನೇಮಕವಾಗಿದ್ದನು.

ಬ್ರಿಟಿಷರ ದಬ್ಬಾಳಿಕೆಯಿಂದ ಬೇಸತ್ತ ಜನತೆ ಅಲ್ಲಲ್ಲಿ ಚಳುವಳಿ ನಡೆಸತೊಡಗಿದರು. ಚಳುವಳಿಯ ನೇತೃತ್ವವನ್ನು ಗಾಂಧೀಜಿಯವರು ವಹಿಸಿಕೊಂಡಿದ್ದರೂ ಸಹ ಅನೇಕ ಸ್ವಾತಂತ್ರ ಹೋರಾಟಗಾರರು ಚಳುವಳಿಯಲ್ಲಿ ಭಾಗವಹಿಸಿದ್ದರು. ಬಳ್ಳಾರಿಯ ಸುತ್ತಮುತ್ತಲೂ ಅನೇಕ ಚಳುವಳಿಗಾರರು ಭಾಗವಹಿಸಿದ್ದರು. ಇವರಲ್ಲಿ ಬಾದನಹಟ್ಟಿ ವೆಂಕೋಬರಾವ್, ಬೆಲ್ಲದ ಚೆನ್ನಪ್ಪ, ಪತ್ತಿಕೊಂಡ ಗುರುನಾಥಶೆಟ್ಟಿ, ಡಾ.ಆರ್ .ನಾಗನಗೌಡ, ಅಲ್ಲಂ ಕರಿಬಸಪ್ಪ, ಹಿ.ಮ.ನಾಗಯ್ಯ ಮುಂತಾದವರು ಪಾಲ್ಗೊಂಡಿದ್ದರು. ಸ್ವತಂತ್ರ ಸಿಕ್ಕ ನಂತರ ರಾಜ್ಯ ವಿಂಗಡಣೆಯ ಸಂದರ್ಭದಲ್ಲಿ ೮ ತಾಲ್ಲೂಕುಗಳುಳ್ಳ ಪ್ರಾಂತವನ್ನು ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಕ್ರಿ.ಶ.೧೮೮೨ರಲ್ಲಿ ೧೫ ಜಿಲ್ಲೆಗಳನ್ನಾಗಿ ವಿಭಜಿಸಲಾಯಿತು.

೧೯ನೇ ಶತಮಾನದಲ್ಲಿ ಬಳ್ಳಾರಿ ಮದ್ರಾಸ್ ಪ್ರಾಂತೀಯ ಸರಕಾರಕ್ಕೆ ಸೇರಿತು. ಕ್ರಿ.ಶ.೧೯೫೭ರಲ್ಲಿ ಬಳ್ಳಾರಿ ಕೊಪ್ಪಳವನ್ನು ಏಕಸದಸ್ಯ ಪಾರ್ಲಿಮೆಂಟಾಗಿ ಪರಿವರ್ತಿಸಲಾಯಿತು. ಆಗ ಸಾರ್ವಜನಿಕ ಮತದಾನದ ಪ್ರಕ್ರಿಯೆ ಆರಂಭವಾಯಿತು.

೨.೮. ನೈಸರ್ಗಿಕತೆ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಸಂಡೂರು ನಿಸರ್ಗ ಸಂಪತ್ತಿನಿಂದ ಕೂಡಿದ್ದು ವಿಶ್ವಮಾನ್ಯತೆ ಪಡೆದಿದೆ. ಈ ಭಾಗದಿಂದ ವಿದೇಶಕ್ಕೆ ರಫ್ತಾಗುವ ವಸ್ತುಗಳಲ್ಲಿ ಕಬ್ಬಿಣದ ಅದಿರು ಮುಖ್ಯವಾಗಿದೆ. ಇಲ್ಲಿ ಮ್ಯಾಂಗನೀಸ್ ಹೇರಳವಾಗಿ ದೊರೆಯುತ್ತದೆ. ಇದರೊಂದಿಗೆ ಗ್ರ್ಯಾನೈಟ್ , ಮ್ಯಾಗ್ನಸೈಟ್, ಕ್ಯಾಲ್ಸೈಟ್, ಕಾವಿಮಣ್ಣು, ಸೇವಿನಕಲ್ಲು, ಜೇಡಿಮಣ್ಣು, ಬೆಣಚುಕಲ್ಲು, ಕಲ್ನಾರು, ಕುರಂಗದ ಕಲ್ಲು, ತಾಮ್ರ, ಸೀಸದ ಅದಿರು, ಜಿಪ್ಸಮ್ ಮುಂತಾದ ಭೂಗರ್ಭ ಸಂಪನ್ಮೂಲಗಳಿವೆ. ಸಂಡೂರು ಬೆಟ್ಟಗಳಲ್ಲಿ ಅಧಿಕವಾಗಿ, ಕೂಡ್ಲಿಗಿ ಮತ್ತು ಹರಪನಹಳ್ಳಿ ತಾಲ್ಲೂಕುಗಳ ಅರಣ್ಯದಲ್ಲಿ ಕಬ್ಬಿಣದ ಅದಿರು ಸಾಮಾನ್ಯವಾಗಿ ದೊರೆಯುತ್ತದೆ. ಉಳಿದೆಡೆಗಳಲ್ಲಿ ಅಲ್ಲಲ್ಲಿ ಕುರುಚಲು ಗಿಡಗಳಿರುವ ಗುಡ್ಡಗಳಿವೆ. ಇಡೀ ಜಿಲ್ಲೆಯಲ್ಲಿಯೇ ೧೦೦೦ ರಿಂದ ೧೨೫೦ ಮಿಲಿಯನ್ ಟನ್ ನಷ್ಟು ಕಬ್ಬಿಣದ ನಿಕ್ಷೇಪ ಇದೆ ಎಂದು ಗುರುತಿಸಲಾಗಿದೆ. ಹರಪನಹಳ್ಳಿ, ಸಂಡೂರು, ಹೊಸಪೇಟೆ ಬಳಿ ಮ್ಯಾಂಗನೀಸ್ ಅದಿರು ಇದೆ. ಹೊಸಪೇಟೆ, ಹರಪನಹಳ್ಳಿಯ ಚಿಗಟೇರಿ, ಕೊನಗನ ಹೊಸೂರು ಮತ್ತು ಕಲ್ಲಹಳ್ಳಿ ಹತ್ತಿರ ಚಿನ್ನದ ನಿಕ್ಷೇಪ ಇರುವುದು ಈಚೆಗೆ ಬೆಳಕಿಗೆ ಬಂದಿದೆ. ತಾಮ್ರದ ಅದಿರು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆಯ ಅರಣ್ಯ ಪ್ರದೇಶದ ವಿಸ್ತೀರ್ಣವು ೧೧೯.೨೪೭ ಹೆಕ್ಟೇರುಗಳಷ್ಟಿದೆ. ಅರಣ್ಯದಿಂದ ಉರುವಲಿಗೆ ಕಟ್ಟಿಗೆ, ಪೀಠೋಪಕರಣಗಳಿಗೆ ಬಿದಿರು ಮುಂತಾದವುಗಳನ್ನು ಪಡೆಯಬಹುದಾಗಿದೆ. ಕಾಡಿನಲ್ಲಿ ದೊರೆಯುವ ಪ್ರಮುಖ ವಸ್ತುಗಳೆಂದರೆ ಜೇನುತುಪ್ಪ, ಎಣ್ಣೆ, ಅಂಟು ಮುಂತಾದ ಸಾಮಾಗ್ರಿಗಳು ದೊರೆಯುವವು. ಅರಣ್ಯ ಮಾನವನೊಂದಿಗೆ ನಿಕಟ ಸಂಬಂಧವನ್ನು ಪಡೆದಿದೆ. ನಗರೀಕರಣ ಬೆಳೆದಂತೆಲ್ಲಾ ಕಾಡು ವಿನಾಶದತ್ತ ಸಾಗುತ್ತಿದೆ. ಈ ಕಾರಣಕ್ಕಾಗಿ ಸರಕಾರವು ೧೯೮೪ರಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಅರಣ್ಯರಕ್ಷಣೆ ಹಾಗೂ ಬೆಳೆಯುವ ಯೋಜನೆಯೊಂದನ್ನು ಕೈಗೆತ್ತಿಕೊಂಡಿತು. ೧೯೮೯-೯೦ರಲ್ಲಿ ಜಿಲ್ಲೆಯಲ್ಲಿ ೭೩ ಲಕ್ಷ ಸಸಿಗಳನ್ನು ನೆಡಲಾಯಿತು. ಇಂತಹ ಸಸಿಗಳನ್ನು ಶಾಲಾ ಕಾಲೇಜು, ರಸ್ತೆಬದಿ, ಮನೆಮುಂದೆ ಬೆಳೆಸಲು ಪ್ರಚೋದಿಸಲಾಯಿತು.

ಇಡೀ ಜಿಲ್ಲೆಯ ಅರ್ಧದಷ್ಟು ವಿಸ್ತೀರ್ಣ ಪ್ರದೇಶವನ್ನು ಕೃಷಿಗೆ ಬಳಸಲಾಗಿದೆ. ೩೮೦೪೭೮ ಹೆಕ್ಟೇರುಗಳಲ್ಲಿ ಆಹಾರ ಬೆಳೆಯಲು, ೨೪೦೬೨೮ ಹೆಕ್ಟೇರು ಪ್ರದೇಶದಲ್ಲಿ ಆಹಾರೇತರ ಬೆಳೆ ಬೆಳೆಯಲಾಗಿದೆ. ಇದರಲ್ಲಿ ಭತ್ತವು ೨೧,೮೭೬, ರಾಗಿ ೧೭೫೩೨, ಸಜ್ಜೆ ೧೫೦೦೩, ಜೋಳ ೧೭೦೧೪, ಕಡಲೆಕಾಯಿ ೫೮,೩೦೦೦, ದ್ವಿದಳಧಾನ್ಯ ೪೦೨,೮೨, ಕಬ್ಬು ೧೦,೪೪೨, ತೆಂಗು ೪೬೫, ಹತ್ತಿ ೪೬೯೦೨ ಹೆಕ್ಟೇರುಗಳಲ್ಲಿ ಬೆಳೆಯುತ್ತಾರೆ. ಮೆಣಸಿನ ಕಾಯಿ, ಈರುಳ್ಳಿ, ಬದನೆಕಾಯಿ, ಟೊಮ್ಯಾಟೋ, ೪೯೭೧ ಹೆಕ್ಟೇರುಗಳಲ್ಲಿ ಬೆಳೆದರೆ ನಿಂಬೆ, ಬಾಳೆ ಬೆಳೆಗಾಗಿ ೫೮೦೫ ಹೆಕ್ಟೇರು ಪ್ರದೇಶಗಳಲ್ಲಿ ಬೆಳೆಯುತ್ತಿರುವುದು ಕಾಣಸಿಗುತ್ತದೆ.

ಈ ಜಿಲ್ಲೆಯು ಅಧಿಕವಾದ ನೀರಾವರಿ ಸೌಕರ್ಯ ಪಡೆದಿದೆ. ಇಲ್ಲಿ ತುಂಗಭದ್ರಾ ಜೀವನಾಡಿಯಂತೆ ಪರಿಣಮಿಸಿ ಅಭಿವೃದ್ಧಿಗೆ ನೆರವಾಗಿದ್ದಾಳೆ. ಈ ನದಿಯ ಪಶ್ಚಿಮ ಮತ್ತು ಉತ್ತರ ಭಾಗದ ಮೇರೆಯಾಗಿ ಹರಿದು ಕರ್ನೂಲು ಹತ್ತಿರದ ಕೃಷ್ಣಾನದಿ ಸೇರುತ್ತದೆ. ಈ ಹಿಂದೆ ಇದಕ್ಕೆ 'ಪಂಪಾ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಈ ತುಂಗಭದ್ರಾ ನದಿಗಳ ಸಂಗಮವಾಗಿ 'ತುಂಗಭದ್ರಾ' ಆಗಿದೆ. ಚಿಕ್ಕಮಗಳೂರು ಜಿಲ್ಲೆಯ ವರಾಹಾ ಪರ್ವತದಲ್ಲಿ ಇವೆರಡೂ ನದಿಗಳು ಉಗಮವಾಗುತ್ತವೆ. ಇವುಗಳು ಶಿವಮೊಗ್ಗ ಜಿಲ್ಲೆಯ 'ಕೂಡಲ' ಎಂಬ ಸ್ಥಳದಲ್ಲಿ ನದಿಗಳು ಕೂಡುತ್ತವೆ. ಇದರ ಪ್ರಸ್ತಾಪವು ಪುರಾಣ, ಪುಣ್ಯಕಥೆಗಳಲ್ಲಿ ಬಂದಿದೆ.

ಈ ನದಿಯು ಕಡತಿ ಗ್ರಾಮದಿಂದ ಬಳ್ಳಾರಿಯನ್ನು ಪ್ರವೇಶಿಸಿ ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಶಿರುಗುಪ್ಪ ತಾಲ್ಲೂಕುಗಳ ಮೂಲಕ ಸುಮಾರು ೩೨೦ ಕಿ.ಮೀ. ಉದ್ದವಾಗಿ ಹರಿವು ಇದೆ. ಈ ನದಿಯಲ್ಲಿ ಮರದ ದಿಮ್ಮಿ-ತೇಪೆಗಳ ಮೂಲಕ ಸಂಚರಿಸುವುದು ಕಂಡುಬರುತ್ತದೆ. ಕಂಪ್ಲಿ ಬಳಿ ದೊಡ್ಡ ಸೇತುವೆ, ಶಿರುಗುಪ್ಪದ ಹತ್ತಿರ ರಸ್ತೆ ಸೇತುವೆ ಇದೆ. ಅಣೆಕಟ್ಟು ಕೆಳಭಾಗದಲ್ಲಿ ಎರಡು ಸೇತುವೆಗಳಿವೆ. ಈ ಸೇತುವೆಯನ್ನು ರಸ್ತೆಯಾಗಿ ಬಳಸಲಾಗಿದೆ. ಹಗರಿ-ಚಿನ್ನಹಗರಿಗಳು ತುಂಗಭದ್ರಾ ನದಿಯ ಉಪನದಿಗಳು. ಇಲ್ಲಿ ಕಂಡುಬರುವ ಪ್ರಮುಖನದಿಗಳೊಂದಿಗೆ ದೊಡ್ಡ ದೊಡ್ಡ ಹಳ್ಳಿಗಳಿವೆ. ಇದರಲ್ಲಿ ಸಂಡೂರಿನ ನಾರಿಹಳ್ಳ, ಇದಕ್ಕೆ ಆಣೆಕಟ್ಟು ಕಟ್ಟಲಾಗಿದೆ. ಹಗ್ಗರನೂರು ಹಳ್ಳ, ಹಂಪಾಸಾಗರ ಹಳ್ಳ, ಹಂಪಾಪಟ್ಟಣ, ಚೆಲ್ಲದ ಹುಣಸಿಹಳ್ಳ, ಗೌರಿಪುರಹಳ್ಳಗಳ ಹರಿವಿನಿಂದ ರೈತರ ಕೃಷಿಗೆ ಅನುಕೂಲ ಕಲ್ಪಿಸಿದಂತಾಗಿದೆ.

ಈಚೆಗೆ ದೊರೆತ ವೀರಗಲ್ಲಿನಿಂದ ಇಲ್ಲಿ ಕೃಷಿಕ ಜನಾಂಗವೊಂದು ನೆಲೆನಿಂತಿತ್ತು ಎಂಬ ಅಂಶ ಬೆಳಕಿಗೆ ಬಂದಿದೆ. ಇದು ಹೊಸಪೇಟೆಯ ಬಸವನದುರ್ಗದ ಹಳ್ಳಿಯ ಹೊಲವೊಂದರಲ್ಲಿ ಅಪ್ರಕಟಿತ

ವೀರಗಲ್ಲುವಿನಿಂದ ಪತ್ತೆಯಾಗಿದೆ (ಗೋವಿಂದ, ಹಸ್ತಪ್ರತಿ). ೧೯೫೩ರಲ್ಲಿ ತುಂಗಭದ್ರಾ ಯೋಜನೆ ಆರಂಭವಾದಾಗ ಹಸಿರು ಕ್ರಾಂತಿಯೇ ಆದಂತಾಯಿತು. ೧೯೮೦-೮೯ರಲ್ಲಿ ನೀರಾವರಿ ಪ್ರದೇಶದ ವಿಸ್ತೀರ್ಣವು ೨೧೨,೭೯೦ ಹೆಕ್ಟೇರುಗಳಿಗೆ ವಿಸ್ತರಣೆಯಾಯಿತು. ಆಗ ೧೯೭೦-೭೧ರ ಹೊತ್ತಿಗೆ ೧,೮೧,೩೩೬ ಎಕರೆ ಪ್ರದೇಶಗಳಿಗೆ ನೀರು ಕಲ್ಪಿಸಲಾಯಿತು. ತುಂಗಾಭದ್ರಾ ಯೋಜನೆಯಿಂದಲೇ ೯೧,೭೯೭ ಎಕರೆ ಮತ್ತು ೧,೦೦,೦೦೦ ಎಕರೆ ಸೌಲಭ್ಯ ಪಡೆಯಿತು. ವಿಜಯನಗರ ನಾಲೆಗಳಿಂದ ೧೭೬೯, ಹಗರಿಬೊಮ್ಮನ ಹಳ್ಳಿಯ ಯೋಜನೆಗಳಿಂದ ೫೨೪೭ ಹಾಗೂ ಬಾವಿ ನೀರಾವರಿಗಳಿಂದ ೨೫,೧೫೦ ಹಳೆಯ ಕೆರೆಗಳಿಂದ ೧೮೦೫೨, ಹೊಸಕೆರೆಗಳಿಂದ ೫,೧೧೩ ಮತ್ತಿತರೆ ಸಾಧನಗಳಿಂದಲೂ ೨೪೦೩ ಎಕರೆಗಳಿಗೆ ನೀರು ಒದಗಿಸಿದೆ.

ಇದರಿಂದ ತುಂಗಭದ್ರಾ ಆಣೆಕಟ್ಟಿನಿಂದ ನೂರಾರು ಹಳ್ಳಿಗಳು ಫಲವತ್ತಾದ ಭೂಮಿ ಮುಳುಗಡೆಯಾಯಿತು. ಬಹುಶಃ ನದಿಯಲ್ಲಿ ಈ ಕಡೆ ೩೩ ಆ ಕಡೆ ೩೩ ಹಳ್ಳಿಗಳು ಮುಳುಗಿವೆ ಎಂದು ಆ ಗ್ರಾಮಗಳಲ್ಲಿದ್ದ ಕೆಲವರನ್ನು ಸಂದರ್ಶಿಸಿದಾಗ ತಿಳಿದುಬಂದಿದೆ. ಮೊದಲು ಇದ್ದ ಕೆಲವು ಊರು ಹೆಸರುಗಳೆ ಈಗಲೂ ಹಾಗೆ ವಾಡಿಕೆಯಲ್ಲಿವೆ. ಇನ್ನು ಕೆಲವು ಮಾರ್ಪಾಡಾಗಿವೆ. ಆಗ ಇದ್ದ ಮುಲ್ಲಾಪುರ ಎಂಬ ತಾಲ್ಲೂಕು ಹಗರಿಬೊಮ್ಮನ ಹಳ್ಳಿಯಲ್ಲಿ ಸೇರ್ಪಡೆಯಾಗದೆ. ಈ ಗ್ರಾಮಗಳ ಪುನರ್ವಸತಿಗಾಗಿ ೩೦ ಕೋಟಿ ರೂಪಾಯಿ ವೆಚ್ಚಮಾಡಲಾಯಿತು. ೩೯ ಪುನರ್ ವಸತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. ತುಂಗಭದ್ರಾ ಆಣೆಕಟ್ಟಿನ ಈಗಿನ ನೀರಿನ ಸಂಗ್ರಹ ಸಾಮರ್ಥ್ಯವು ೧೩೩ ಟಿ.ಎಂ.ಸಿ. ಗಳಷ್ಟಾಗಿದ್ದು, ೧೬೩೩ ಅಡಿಗಳ ಆಳವಿದೆ. ನಂತರ ಹಗರಿಬೊಮ್ಮನಹಳ್ಳಿ ಯೋಜನೆ, ನಾರಿಹಳ್ಳ ಯೋಜನೆಯನ್ನು ಜಾರಿಗೆ ತರಲಾಯಿತು. ಚಿಕ್ಕಹಗರಿಗೆ ಅಡ್ಡಲಾಗಿ ೫೮೫೦ ಅಡಿ ಉದ್ದ ಹಾಗೂ ೫೦ ಅಡಿ ಎತ್ತರದ ಅಣೆಕಟ್ಟೆಯನ್ನು ಮಾಲವಿ ಎಂಬ ಹಳ್ಳಿಯ ಹತ್ತಿರ ನಿರ್ಮಿಸಲಾಗಿದೆ. ಇದು ೨೫೦ ಕೋಟಿ ರೂ. ವೆಚ್ಚದಲ್ಲಿ ೭೦೦೦ ಎಕರೆ ಪ್ರದೇಶಗಳಿಗೆ ನೀರು ಒದಗಿಸುತ್ತಿದೆ. ಇದರೊಂದಿಗೆ ನಾರಿಹಳ್ಳ ಯೋಜನೆ ೧೯೭೨ರಲ್ಲಿ ಆರಂಭವಾಗಿ ೧೯೮೩ರಲ್ಲಿ ಪೂರ್ಣಗೊಂಡಿತು. ಈ ಅಣೆಕಟ್ಟಿನ ಉದ್ದ ೨೯೫ ಮೀಟರ್, ೩೦,೯೨ ಮೀಟರ್ ಎತ್ತರವಿದೆ. ಇದು ಸಣ್ಣ ಪ್ರಮಾಣದ ನೀರಾವರಿ ಯೋಜನೆಯಾಗಿದೆ. ಇದರಿಂದ ತಾರಾಪುರ, ಗೌರಿಪುರ, ಗಂಗಲಾಪುರ, ನಾಗಲಾಪುರ, ತಾಳೂರು, ಬನ್ನಿಹಟ್ಟಿಗಳಿಗೆ ನೀರು ಒದಗಿಸುತ್ತಿದೆ.

ಜಿಲ್ಲೆಯ ಕೆರೆ ಕಾಲುವೆಗಳ ನಿರ್ಮಾಣದಲ್ಲಿ ರಾಜ-ಮಹಾರಾಜರ ಪಾತ್ರವೂ ಹಿರಿದಾದುದು. ತುಂಗಭದ್ರಾ ಆಣೆಕಟ್ಟು ನಿರ್ಮಿಸುವುದಕ್ಕಿಂತ ಪೂರ್ವದಲ್ಲಿ ವಿಜಯನಗರದ ಕಾಲುವೆಗಳು ಈ ಕೆಳಗಿನಂತೆ

ಹೆಸರು ಪಡೆದಿದ್ದವು ಮತ್ತು ಅವು ನೀರುಣಿಸುವ ವಿಸ್ತೀರ್ಣಗಳ ವಿವರವನ್ನು ಅನುಬಂಧದಲ್ಲಿ ಕೊಡಲಾಗಿದೆ.

ಇಲ್ಲಿ ವರ್ಷದಲ್ಲಿ ಹೆಚ್ಚಾಗಿ ಒಣಹವೆ ಇರುತ್ತದೆ. ಮಾರ್ಚ್‌ನಿಂದ ಮೇ ತಿಂಗಳವರೆಗೆ ಬೇಸಿಗೆಯ ತಾಪ ಅಧಿಕವಾಗಿರುತ್ತದೆ. ಜೂನ್ ನಿಂದ ನವಂಬರ್ ವರೆಗೆ ಮಳೆಗಾಲವಿರುತ್ತದೆ. ಡಿಸೆಂಬರ್ ನಿಂದ ಫೆಬ್ರವರಿಯವರೆಗೆ ಒಣ ಹವಾಗುಣವು ತಂಪಾಗಿರುತ್ತದೆ. ಡಿಸೆಂಬರ್ ತಿಂಗಳಲ್ಲಿ ಸುಮಾರು ೨೯.೭ ಡಿಗ್ರಿ ಸೆಲ್ಸಿಯಸ್ ಗರಿಷ್ಟ ಉಷ್ಣಾಂಶವಿದ್ದರೆ, ಮಧ್ಯಮ ಕನಿಷ್ಟ ಉಷ್ಣಾಂಶವು ೧೬.೭ ಸೆಂಟಿಗ್ರೇಡ್ ಇರುವುದು. ಏಪ್ರೀಲ್ ತಿಂಗಳಲ್ಲಿ ೩೯.೨ ಸೆಂಟಿಗ್ರೇಡ್ ಗರಿಷ್ಟ ಉಷ್ಣಾಂಶ ಹಾಗೂ ಕನಿಷ್ಟ ಉಷ್ಣಾಂಶ ೨೫.೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಮಳೆಯು ಸಹ ಸಮಪ್ರಮಾಣದಲ್ಲಿ ಬೀಳಲಾರದ ಈ ಜಿಲ್ಲೆಯ ವಾರ್ಷಿಕ ಮಳೆಯ ಪ್ರಮಾಣವು ೫೧೪ ಮಿ.ಮೀ. ಆಗಿರುತ್ತದೆ. ೧೯೭೧ರಲ್ಲಿ ಸಿರುಗುಪ್ಪ ತಾಲ್ಲೂಕಿನಲ್ಲಿ ಬಿದ್ದ ಮಳೆ ೭೪೩.೪ ಮಿ.ಮೀ.ನಷ್ಟಿತ್ತು ಮತ್ತು ಮಲ್ಲಾಪುರ ಎಂಬಲ್ಲಿ ೩೯೬.೪ ಮಿ.ಮೀ.ನಷ್ಟು ಮಳೆಯಾಗಿತ್ತು.

ಕಳೆದ ೩೭ ವರ್ಷಗಳಿಂದಲೂ ಮಳೆ ಪ್ರಮಾಣವು ೪೦೦ ಮಿ.ಮೀ.ಗಳಷ್ಟುನಿಂದ ೭೦೦ ಮಿ.ಮೀಗಳಷ್ಟು ಆಗಾಗ ಬಂಗಾಳ ಕೊಲ್ಲಿಯಿಂದ ಬೀಸಿರುವ ಚಂಡಮಾರುತದ ಪರಿಣಾಮದಿಂದ ಅದರಲ್ಲೂ ಅಕ್ಟೋಬರ್ -ನವಂಬರ್ ತಿಂಗಳಲ್ಲಿ ಅತಿ ಹೆಚ್ಚು ಬಿರುಸಾದ ಮಳೆಗಾಳಿ ಆಗುತ್ತದೆ. ವ್ಯವಸಾಯಕ್ಕೆ ಸಂಬಂಧಿಸಿದಂತೆ ಸಂಶೋಧನಾ ಕೇಂದ್ರ ಹಾಗೂ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅದರಲ್ಲಿ ೧೯೫೪ರಂದು ಕೇಂದ್ರ ಸರ್ಕಾರವು ದಾಕ್ಷಿಣಾತ್ಯ ಪ್ರಾದೇಶಿಕ ಮಣ್ಣು ಸಂರಕ್ಷಣಾ ಸಂಶೋಧನ ಉಪಕೇಂದ್ರ ವ್ಯವಸಾಯ ತರಬೇತಿಯನ್ನು ಬಳ್ಳಾರಿಯಲ್ಲಿ ಸ್ಥಾಪಿಸಿ ಹೊಸಪೇಟೆಯ ಕಂಪ್ಲಿ ಗ್ರಾಮದಲ್ಲಿ ವ್ಯವಸಾಯ ತರಬೇತಿ ಶಾಲೆ ಹಾಗೂ ೧೯೦೬-೦೭ರಲ್ಲಿ ಮದರಾಸು ಸರಕಾರವು ಹಗರಿ ಮತ್ತು ಸಿರುಗುಪ್ಪ ಬಳಿ ವ್ಯವಸಾಯ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿತು. ವ್ಯವಸಾಯ ಇಲಾಖೆ ಇತರೆ ಸಂಘ ಸಂಸ್ಥೆ ಹಾಗೂ ತೋಟಗಾರಿಕೆ ಇಲಾಖೆಯೊಂದಿಗೆ ಸೇರಿ ವ್ಯವಸಾಯ ರಂಗದಲ್ಲಿ ವೈಜ್ಞಾನಿಕತೆಯನ್ನು ಅಳವಡಿಸಿಕೊಳ್ಳುವಲ್ಲಿ ಸಫಲವಾಗುತ್ತಿವೆ. ೧೯೭೦-೭೧ರಲ್ಲಿ ಒಣಭೂಮಿ ವ್ಯವಸಾಯ ರಂಗದಲ್ಲಿ ವೈಜ್ಞಾನಿಕತೆಯನ್ನು ಅಳವಡಿಸಿಕೊಳ್ಳುವಲ್ಲಿ ಸಫಲವಾಗುತ್ತಿವೆ. ೧೯೭೦-೭೧ರಲ್ಲಿ ಒಣಭೂಮಿ ವ್ಯವಸಾಯ ಅಭಿವೃದ್ಧಿಯೋಜನೆಯನ್ನು ಜಾರಿಗೆ ತರಲಾಗಿದೆ. ಇವೆಲ್ಲವುಗಳಿಂದ ಉತ್ಪಾದನೆಯಲ್ಲಿ ಪ್ರಗತಿ ಸಾಧಿಸಲು ಸಹಾಯಕಾರಿಯಾಗಿವೆ.

ತುಂಗಭದ್ರಾ ಜಲಾಶಯದಿಂದ ಮೀನಿನ ಸಾಕಾಣಿಕೆ ಹಾಗೂ ಉತ್ಪಾದನೆ ಪ್ರಕ್ರಿಯೆ ಅತ್ಯುತ್ತಮವಾಗಿದೆ. ಇಲ್ಲಿ ೬೦೦ ಮೆಟ್ರಿಕ್ ಟನ್ ಮೀನನ್ನು ಹಿಡಿಯಲಾಗುತ್ತದೆ. ವಾರ್ಷಿಕ ಉತ್ಪಾದನೆಯು ೧೯೭೧ರಲ್ಲಿ

೭೫೫೦ ಮೆಟ್ರಿಕ್ ಟನ್‌ಗೆ ತಲುಪಿತ್ತು. ಇದರಿಂದಲೇ ಮೀನುಗಾರಿಕೆಗೂ ಅವಕಾಶವನ್ನು ಕಲ್ಪಿಸಿಕೊಟ್ಟಂತಾಗಿದೆ. ಈ ಭಾಗದಲ್ಲಿದ್ದ ಕೆರೆಗಳಿಂದಲೂ ಮೀನು ಹಿಡಿದು ಮಾರಾಟ ಮಾಡಲಾಗುತ್ತಿದೆ.

ಸಂಡೂರು ತಾಲ್ಲೂಕಿನ ಕುರೇಕುಪ್ಪದಲ್ಲಿ ಮದರಾಸು ಸರ್ಕಾರವು ೧೯೪೮-೪೯ರಲ್ಲಿ ಕುರಿ ದನದ ಸಂಯುಕ್ತ ಫಾರಂನ್ನು ಆರಂಭಿಲಾಯಿತು. ಇದರೊಂದಿಗೆ ಕೋಳಿ ಸಾಕಾಣಿಕೆ ವಿಸ್ತರಣಾ ಘಟಕವು ಈ ಭಾಗದಲ್ಲಿ ಸ್ಥಾಪಿತವಾಗಿದೆ. ಇಲ್ಲಿ ೩೦ ಪಶುವೈದ್ಯಾಲಯಗಳು, ಕೃತಕ ಗರ್ಭಧಾರಣಾ ಕೇಂದ್ರಗಳಿವೆ.

ಬಳ್ಳಾರಿ ಜಿಲ್ಲೆಯ ಪ್ರಮುಖವಾಗಿ ವ್ಯವಸಾಯಕ್ಕೆ ಪ್ರಧಾನವಾಗಿದ್ದರೂ ಸಹ ಕೈಗಾರಿಕಾ ಕ್ಷೇತ್ರದಲ್ಲಿ ಗಣನೀಯ ಬೆಳವಣಿಗೆಯಾಗಿದೆ. ಬಳ್ಳಾರಿ ಹೊಸಪೇಟೆ, ಸಂಡೂರು ತಾಲ್ಲೂಕಿನಲ್ಲಿ ೨೧ ಗಣಿಗಳಿವೆ. ಈ ಗಣಿಗಳಲ್ಲಿ ಕಬ್ಬಿಣ, ಮ್ಯಾಂಗನೀಸ್ ಅದಿರು ಮತ್ತು ರೆಡ್ ಆಕ್ಸೈಡ್‌ಗಳು ಯಥೇಚ್ಛವಾಗಿವೆ. ಸಂಡೂರು ತಾಲ್ಲೂಕಿನಲ್ಲಿ ಅಧಿಕ ಪ್ರಮಾಣದ ಮ್ಯಾಂಗನೀಸ್ ದೊರೆಯುತ್ತದೆ. ಈ ಅದಿರನ್ನು ಕಾರವಾರ ಮರ್ಮಗೋವಾ ಮತ್ತು ಮದರಾಸು ಬಂದರುಗಳಿಗೆ ರವಾನಿಸಲಾಗುತ್ತಿದೆ. ಈ ಉದ್ಯಮದಿಂದಲೇ ಅಧಿಕ ಆದಾಯವು ಸಿಗುತ್ತಿದೆ. ಸಂಡೂರು ತಾಲ್ಲೂಕಿನ ದೋಣಿಮಲೈಯಲ್ಲಿ ೧೯೭೦ ರಲ್ಲಿ ಕಬ್ಬಿಣದ ಅದಿರು ಯೋಜನೆಯೊಂದು ಜಾರಿಗೆ ಬಂದಿತು. ಈ ಯೋಜನೆಯನ್ನು ಎನ್.ಎಂ.ಡಿ.ಸಿ (ರಾಷ್ಟ್ರೀಯ ಖನಿಜ ಅಭಿವೃದ್ಧಿ ಸಂಸ್ಥೆ) ವಹಿಸಿಕೊಂಡಿದೆ. ಇದರಿಂದ ೯೮ ದಶಲಕ್ಷದಷ್ಟು ಕಬ್ಬಿಣದ ಅದರಿ ಉತ್ಪಾದನೆ ಮಾಡುವ ಗುರಿ ಹೊಂದಿತ್ತು. ಇದಕ್ಕೆ ೨೧ ಕೋಟಿ ಬಂಡವಾಳ ವಿನಿಯೋಗಿಸಲಾಗಿತ್ತು. (ಚಂದ್ರಶೇಖರ.ಟಿ.ಆರ್ .ಪು.೪೯ ; ೧೯೯೫) ಎಂದು ತಿಳಿದುಬಂದಿದೆ. ಹೊಸಪೇಟೆ, ಕಂಪ್ಲಿ, ಮುನಿರಾಬಾದ್‌ನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆಯಾದವು. ಈಗ ಪ್ರಸ್ತುತದಲ್ಲಿ ಹೊಸಪೇಟೆ ಸಕ್ಕರೆ ಕಾರ್ಖಾನೆಯೊಂದೆ ಚಾಲನೆಯಲ್ಲಿದೆ. ಇನ್ನೆರಡು ಕಾರ್ಖಾನೆಗಳನ್ನು ಮುಚ್ಚಲಾಗಿದೆ. ಸಕ್ಕರೆ ಕಾರ್ಖಾನೆಯ ಉಪ ಉತ್ಪನ್ನದಿಂದ ಸ್ಪಿರಿಟ್ ಮತ್ತು ಮಾದಕ ಪಾನೀಯಗಳನ್ನು ತಯಾರಿಸುವ ಕಾರ್ಖಾನೆಯ ಕಾರ್ಯಗಾರವೊಂದು ಸ್ಥಾಪನೆಯಾಗಿದೆ. ಇದು ಕರ್ನಾಟಕ-ಆಂಧ್ರ ಮತ್ತು ಕೇಂದ್ರ ಸರ್ಕಾರದೊಂದಿಗೆ ಪಾಲು ಹಂಚಿಕೆಯೊಂದಿಗೆ ನಡೆಯುತ್ತಿದೆ. ಇಲ್ಲಿ ೧೯೬೯-೭೦ ರಲ್ಲಿದ್ದ ವಾರ್ಷಿಕ ಉತ್ಪನ್ನವು ೩೪೯೨ ಮೆಟ್ರಿಕ್ ಟನ್ ರಷ್ಟಿತ್ತು. ಈಚೆಗೆ ಹೊಸಪೇಟೆ ಸಮೀಪದ ಸಂಡೂರು ತಾಲ್ಲೂಕಿನ ತೋರಣಗಲ್ಲಿನಲ್ಲಿ ಜಿಂದಾಲ್ ಸಂಸ್ಥೆಯೊಂದು ನಡೆಸುತ್ತಿರುವ ವಿಜಯನಗರ ಉಕ್ಕಿನ ಕಾರ್ಖಾನೆಯ ಭಾರಿ ಉದ್ಯಮಗಳಲ್ಲಿ ಒಂದಾಗಿದೆ. ಜಿಲ್ಲೆಯ ಬೃಹತ್ ಉದ್ಯಮಗಳಲ್ಲಿ ಒಂದಾಗಿರುವ ಎಂ.ಜಿ.ಆಟೋಮೊಬೈಲ್ಸ್ ಎಂಜಿನಿಯರಿಂಗ್ ಕಂಪನಿಯನ್ನು ೧೯೭೫ರಲ್ಲಿ ಸ್ಥಾಪಿಸಲಾಯಿತು. ಇಲ್ಲಿ ಪ್ರತಿ ತಿಂಗಳಿನಲ್ಲಿ ೩೦ ಬಸ್‌ಗಳಿಗೆ ಮೈಕಟ್ಟುಗಳನ್ನು ನಿರ್ಮಿಸುತ್ತಿದೆ.

ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ೨೪೩ ಕೈಗಾರಿಕೆಗಳಿವೆ. ಒಂದು ಕೈಗಾರಿಕಾ ಎಸ್ಟೇಟ್ ಮತ್ತು ಆರು ಷೆಡ್‌ಗಳಿವೆ. ೧೫ ಎಣ್ಣೆ ಗಿರಿಣಿಗಳಿದ್ದರೆ ೭೧ ಘಟಕಗಳು, ಹತ್ತಿ ಕೈಗಾರಿಕೆಗಳು ಹಾಗೂ ೩೯ ಸಾಮಾನ್ಯ ಎಂಜಿನಿಯರಿಂಗ್ ಉದ್ಯಮಗಳಿವೆ. ಇದಲ್ಲದೆ ಆಹಾರ ಪಾನೀಯ, ಹೊಗೆಸೊಪ್ಪು ಕೈಗಾರಿಕೆಗಳಿವೆ. ಸಣ್ಣ ಹಿಡುವಳಿಗಳಾದ ಚರ್ಮ ಮತ್ತು ರಬ್ಬರ್ ತಯಾರಿಕೆ, ಬೀಡಿ ಕಟ್ಟುವ ಉದ್ಯಮ ಮತ್ತು ಮುದ್ರಣಾಲಯಗಳು ಇಲ್ಲಿವೆ. ೧೯೬೯-೭೦ರಲ್ಲಿ ಬಳ್ಳಾರಿಯಲ್ಲಿ ೬ ಹಾಗೂ ಹೊಸಪೇಟೆಯಲ್ಲಿ ೨ ರಾಸಾಯನಿಕ ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು. ಹತ್ತಿ, ರೇಷ್ಮೆ ಮತ್ತು ಎಣ್ಣೆ ನೇಯುವ ೬೦೦ ಕೈಮಗ್ಗಗಳಿವೆ. ಸಹಕಾರ ಸಂಘಗಳ ನೆರವಿನಿಂದ ಆರಂಭಗೊಂಡ ೯ ಗಾಣದ ಎಣ್ಣೆ ಉತ್ಪಾದನಾ ಘಟಕಗಳಿವೆ. ಇದಲ್ಲದೆ ಮರಕೊಯ್ಯುವ, ಎತ್ತಿನ ಗಾಡಿಗೆ ಲಭ್ಯವಾಗುವ ಸಲಕರಣೆಗಳನ್ನು ತಯಾರಿಸುವ ೨೪ ಘಟಕಗಳು ಹಾಗೂ ಮಡಕೆ, ಚಾಪೆ, ಮೊದಲಾದವನ್ನು ತಯಾರಿಸುವ ಸಣ್ಣ ಪ್ರಮಾಣದ ಆದಾಯ ನೀಡುವ ಉದ್ಯಮಗಳು ತಲೆ ಎತ್ತಿವೆ.

ಈ ಜಿಲ್ಲೆಯಿಂದ ರಫ್ತಾಗುವ ವಸ್ತುಗಳೆಂದರೆ ಹತ್ತಿ, ನೆಲಗಡಲೆ, ಸಕ್ಕರೆ, ಜೋಳ, ಭತ್ತ, ಈರುಳ್ಳಿ, ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಜಮಖಾಲೆಗಳು, ಎಣ್ಣೆ, ಕಂಬಳಿ ಮುಂತಾದವುಗಳು. ಆಮದು ಆಗುವ ವಸ್ತುಗಳೆಂದರೆ ಸಿಮೆಂಟು, ಆಭರಣಗಳು, ಟಿ, ಕಾಫೀ ಬೀಜ, ಮಸಾಲೆ ಸಾಮಾನು, ಗೋಧಿ, ಹತ್ತಿ ಬಟ್ಟೆ, ಯಂತ್ರೋಪಕರಣಗಳು, ಔಷಧಿಗಳು, ಕಾಗದ ಇನ್ನೂ ಮುಂತಾದವುಗಳು, ಹೊಸಪೇಟೆ, ಕೊಟ್ಟೂರು ಬಳ್ಳಾರಿಗಳ ಆಂತರಿಕ ವ್ಯಾಪಾರದ ಕೇಂದ್ರಗಳಿವೆ. ಸಗಟು ವ್ಯಾಪಾರದ ವಸ್ತುಗಳೆಂದರೆ ಹತ್ತಿ, ಕಡಲೆಕಾಯಿ, ಎಣ್ಣೆ, ಜೋಳ, ದ್ವಿದಳ ಧಾನ್ಯ, ಕಂಬಳಿ ಮುಂತಾದವು. ಜಾನುವಾರು ವ್ಯಾಪಾರವು ಪ್ರಮುಖವಾಗಿದೆ. ಜಿಲ್ಲೆಯಲ್ಲಿ ೪೦ ಸ್ಥಳಗಳಲ್ಲಿ ವಾರಕ್ಕೊಮ್ಮೆ ಸಂತೆ ಜಾತ್ರೆ ನಡೆಯುತ್ತದೆ. ಕೆಲವು ಸ್ಥಳಗಳಲ್ಲಿ ನಿಯಂತ್ರಿತ ಮಾರುಕಟ್ಟೆಗಳು ಇರುತ್ತವೆ.

ಇಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ಶಾಖೆಗಳಿವೆ. ಪ್ರಾಥಮಿಕ ಅಭಿವೃದ್ಧಿ ಬ್ಯಾಂಕ್, ಕೃಷಿಸಾಲ ನೀಡಿಕೆ, ಸಹಕಾರ ಸಂಘಗಳು, ವ್ಯವಸಾಯೇತರ ಉದ್ದೇಶಕ್ಕೆ ನೀಡುವ ಸಂಘಗಳ ಆರಂಭವಾಗಿದೆ. ಪ್ರಾಥಮಿಕ ಬಳಕೆದಾರರ ಸಹಾಕಾರಿ ಬ್ಯಾಂಕ್ ಅದರ ಶಾಖೆಗಳು, ಗೃಹ ನಿರ್ಮಾಣ ಸಹಕಾರ ಸಂಘ, ತುಂಗಭದ್ರಾ ವ್ಯವಸಾಯ ಉಪಕರಣ ಸಹಕಾರಿ ಸಂಘ, ೧೯೭೨ ರಲ್ಲಿ ೩೯ ವಾಣಿಜ್ಯ ಬ್ಯಾಂಕುಗಳು ಸ್ಥಾಪಿತವಾಗಿವೆ. ಇವುಗಳು ಹಣಕಾಸು ವ್ಯವಹಾರದ ಕಾರ್ಯಭಾರವನ್ನು ನಿರ್ವಹಿಸುತ್ತಿವೆ.

ಮಾರ್ಗಗಳು

ದಕ್ಷಿಣ ಭಾರತದಲ್ಲೇ ಬಳ್ಳಾರಿಯು ಮಧ್ಯಭಾಗದಲ್ಲಿದೆ. ಬಳ್ಳಾರಿಯಿಂದ ಸಾಗಿಹೋಗುವ ಸಂಪರ್ಕಸಾಧನಗಳಲ್ಲಿ ರಸ್ತೆ ಮಾರ್ಗವು ಒಂದು. ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಪಣಜಿ,

ಮಂಗಳೂರು, ಸೊಲ್ಲಾಪುರ, ಪುಣೆ, ಮುಂಬಾಯಿ, ಹೈದ್ರಾಬಾದ್, ವಿಜಯವಾಡ, ಮದರಾಸು, ಮಚಲಿಪಟ್ಟಣ ಮೊದಲಾದ ಹೆದ್ದಾರಿ ಸ್ಥಳಗಳಾಗಿವೆ. ಕೆಲವು ರಸ್ತೆಗಳು ಇಂತಿವೆ. ಹೊಸಪೇಟೆ-ಸಂಡೂರು ರಸ್ತೆ, ಹೊಸಪೇಟೆ-ಹಗರಿಬೊಮ್ಮನಹಳ್ಳಿ ರಸ್ತೆ, ಹೊಸಪೇಟೆ-ಕಂಪ್ಲಿ ರಸ್ತೆ, ಹರಪನಹಳ್ಳಿ ರಸ್ತೆ, ಕೂಡ್ಲಿಗಿ ರಸ್ತೆ, ಸಂಡೂರು-ಕುರುಗೋಡು ರಸ್ತೆ, ಕೂಡ್ಲಿಗಿ-ಗುಡೇಕೋಟೆ, ರಾಯದುರ್ಗ ರಸ್ತೆ, ಕೂಡ್ಲಿಗಿ ಗೌರಿಪುರ ರಸ್ತೆ, ಬಳ್ಳಾರಿ-ಹೊಸಪೇಟೆ ಹಂಪಸಾಗರ ರಸ್ತೆ, ಬಳ್ಳಾರಿ-ಕಂಪ್ಲಿ ರಸ್ತೆ, ಬಳ್ಳಾರಿ-ಸಿರುಗುಪ್ಪ ರಸ್ತೆ, ಸೋಮನಳ್ಳೀ ರಸ್ತೆ, ರಾಮದುರ್ಗ ಕುಣಿಕಲ್ ರಸ್ತೆ, ತೋರಣಗಲ್ ರಾಯದುರ್ಗ ರಸ್ತೆಗಳು ಕಂಡುಬರುತ್ತವೆ. ಇಂದು ತಾಲ್ಲೂಕಿನ ಹೋಬಳಿ ಹಾಗೂ ಗ್ರಾಮದಲ್ಲಿ ಸಾರಿಗೆ ಸೌಕರ್ಯ ಕಲ್ಪಿಸಿದೆ.

ರೈಲುಮಾರ್ಗ

ರೈಲುಮಾರ್ಗವು ಬಳ್ಳಾರಿ ಜಿಲ್ಲೆಯಲ್ಲಿ ೨೦೯ ಕಿ.ಮೀ ಇದೆ. ಬಳ್ಳಾರಿ ರಾಯದುರ್ಗ ಮಾರ್ಗ, ಗುಂತಕಲ್ಲು ಬಳ್ಳಾರಿ, ಹೊಸಪೇಟೆ, ಹುಬ್ಬಳ್ಳಿ ಮಾರ್ಗ, ಹೊಸಪೇಟೆ ಕೊಟ್ಟೂರು ಮಾರ್ಗ ೧೯೬೬ರಲ್ಲಿ ಹಾಗೂ ಗುಂತಕಲ್ ಹೊಸಪೇಟೆ ಬ್ರಾಡ್ ಗೇಜ್ ಮಾರ್ಗ ನಿರ್ಮಿಸಲಾಯಿತು. ಮುನಿರಾಬಾದ್ ಸಿಕಂದರಬಾದ್ ಬ್ರಾಡ್ ಗೇಜ್ ನಿರ್ಮಾಣ ಕಾರ್ಯಕ್ಕೆ ಶಿಲಾನ್ಯಾಸವನ್ನು ಹಾಕಲಾಯಿತು.

ಇಲ್ಲಿ ಅಂಚೆ ಕಛೇರಿಗಳು ೪೩೨, ತಂತಿ ಕಛೇರಿಗಳು ೪೪ ಇವೆ. ೧೯೭೨ರಲ್ಲಿ ದೂರವಾಣಿ ಸೌಲಭ್ಯ ಕಲ್ಪಿಸಲಾಗಿದೆ. ಈ ಜಿಲ್ಲೆಯಲ್ಲಿ ಆರೋಗ್ಯ ಕೇಂದ್ರಗಳಿವೆ. ಇವುಗಳಲ್ಲಿ ಆಸ್ಪತ್ರೆ, ೩೩ ಔಷಧಾಲಯಗಳು ೧೨ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ೭೬ ಆರೋಗ್ಯ ಉಪಕೇಂದ್ರಗಳು, ೨ ವಿ.ಡಿ.ವೈದ್ಯಾಲಯಗಳೂ, ೧ ಕ್ಷಯ ರೋಗ ಚಿಕಿತ್ಸಾ ಕೇಂದ್ರ, ೧ ರಕ್ತ ಬ್ಯಾಂಕ್ , ೧ ಆರೋಗ್ಯ ಪ್ರಯೋಗವನ್ನು ೧೯೭೪ರಲ್ಲಿ ಸ್ಥಾಪನೆ ಮಾಡಲಾಗಿದೆ.

ಪತ್ರಿಕೋದ್ಯಮ

ಪತ್ರಿಕೋದ್ಯಮವು ಬಳ್ಳಾರಿ ಜಿಲ್ಲೆಗೆ ಮಾಹಿತಿಯನ್ನು ನೀಡಿದೆ. ೧೮೧೫ರಲ್ಲಿ ಮೊಟ್ಟ ಮೊದಲ ಪ್ರಿಂಟಿಂಗ್ ಪ್ರೆಸ್ ಬಳ್ಳಾರಿಯಲ್ಲಿ ಆರಂಭವಾಯಿತು. ಇದು ಲಂಡನ್ನಿನ ಮಿಶನರಿಗಳ ಸಹಯೋಗದೊಂದಿಗೆ ಸ್ಥಾಪಿಸಲಾಯಿತು. ಆಗ ಇದ್ದ ಸೂಪರಿಂಟೆಂಡೆಂಟ್ ಮಿ.ಕೇನೆಯವರ ನೇತೃತ್ವದಲ್ಲಿ ಅಮರಕೋಶ ಹಾಗೂ ಬೈಬಲ್ಲಿನ ಕನ್ನಡಾನುವಾದವು ೧೯ನೇ ಶತಮಾನದಲ್ಲಿ ಪ್ರಕಟವಾದವು. ಈಗಿರುವ ವಾರ್ಡ್ಲಾ ಪ್ರೌಢಶಾಲೆಯಲ್ಲಿ ಅಂದು ಪ್ರಿಂಟಿಂಗ್ ಪ್ರೆಸ್ ನ್ನು ನಡೆಸಲಾಗುತ್ತಿತ್ತು. ಇದರ ನಂತರ ಬೇರೆ ಬೇರೆ

ಭಾಷೆಗಳ ಪತ್ರಿಕೆಗಳು ಬೆಳಕಿಗೆ ಬಂದವು. ೧೯೧೨ರಲ್ಲಿ ಸನ್ಮಾರ್ಗ ವಿಜಯಬೇತಾಳ, ಚಂದ್ರಿಕ ಎಂಬ ತೆಲುಗು ಪತ್ರಿಕೆ ಪ್ರಕಟಿಸಲಾಗಿತ್ತು. ಇದೇ ಅವಧಿಯಲ್ಲಿ ಕೆ.ಎಂ.ಕರಿಬಸವಶಾಸ್ತ್ರಿಗಳ ಸಂಪಾದನೆಯಲ್ಲಿ ಬಳ್ಳಾರಿಯಲ್ಲಿ ಬಳ್ಳಾರಿ ಭಾರತಿಯೆಂಬ ಪತ್ರಿಕೆ ಪ್ರಕಟಿಸುತ್ತಿದ್ದರು.

೧೯೨೪ರಲ್ಲಿ ಕರ್ನಾಟಕ ಬಂಧು ಎಂಬ ವಾರಪತ್ರಿಕೆಯನ್ನು ವೈ.ನಾಗೇಶಶಾಸ್ತ್ರಿ ಹೊರಡಿಸಿದರು. ೧೯೨೮ರಲ್ಲಿ ಎ.ರಂಗನಾಥ ಮೊದಲಿಯಾರ್ ಹಾಗೂ ಡಾ.ಆರ್ .ರಂಗನಗೌಡನವರು ಸೇರಿಕೊಂಡು ಪ್ರಜಾಬಿಂದು ಪತ್ರಿಕೆ ಪ್ರಕಟಿಸಿದರು. ಟಿ.ಎಚ್ .ಎಂ. ಒಳಬಸವಶಾಸ್ತ್ರಿಯವರ ಸಂಪಾದಕತ್ವದಲ್ಲಿ ನವಸಂದೇಶ ಎಂಬ ಮೊಟ್ಟ ಮೊದಲ ವಾರಪತ್ರಿಕೆ ಪ್ರಕಟವಾಯಿತು. ಇದರ ನಂತರ ಪತ್ರಿಕೆಯನ್ನು ಟಿ.ಎಚ್.ಎಂ. ಚಂದ್ರಶೇಖರ ಶಾಸ್ತ್ರಿಗಳು ವಹಿಸಿಕೊಂಡರು.

ಮೊಟ್ಟ ಮೊದಲ ಪತ್ರಿಕೆಯೆನಿಸಿದ 'ಮಂಗಳೂರು ಸಮಾಚಾರ್ ' ಪತ್ರಿಕೆಯು ಬಳ್ಳಾರಿಯಲ್ಲಿ ೧೯೪೪ರಲ್ಲಿ 'ಕನ್ನಡ ಸಮಾಚರ' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ನಂತರ ಸ್ವತಂತ್ರ ಚಳುವಳಿ ನೆಪದಲ್ಲಿ ಹಲವಾರು ಪತ್ರಿಕೆಗಳು ಪ್ರಕಟವಾಗತೊಡಗಿದವು. ಅವುಗಳಲ್ಲಿ ೧೯೩೨ರಲ್ಲಿ ಸತ್ಯಗ್ರಹ ಹಾಗೂ ನವಭಾರತ ಎಂಬ ವಾರಪತ್ರಿಕೆಯನ್ನು ಟಿ.ಬಿ.ಕೇಶವರಾಯರು ಸಂಪಾದಿಸುತ್ತಿದ್ದರು. ೧೯೫೩ರಲ್ಲಿ 'ಸ್ವತಂತ್ರ' ಎಂಬ ಕನ್ನಡ ವಾರಪತ್ರಕೆಯನ್ನು ಹೊಸಪೇಟೆಯ ಎಸ್ .ಎಂ.ಕೊಟ್ರಯ್ಯನವರು ಪ್ರಕಟಿಸಿದರು. ೧೯೫೦ರಲ್ಲಿ 'ನಗರನಗಾರಿ' ಯೆಂಬ ಪತ್ರಿಕೆ ಹೆಚ್ .ಸರ್ವೇಶ್ವರರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು.

ಕನ್ನಡ ದಿನ ಪತ್ರಿಕೆಗಳ ಪಾತ್ರವೂ ಇಂದು ಗಣನೀಯ ಬದಲಾವಣೆಯನ್ನು ತಂದಿದೆ. ಅವುಗಳಲ್ಲಿ ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಕನ್ನಡಪ್ರಭ, ವಿಜಯ ಕರ್ನಾಟಕ, ಜನವಾಹಿನಿ, ಉದಯವಾಣಿ ಎಂಬ ದಿನಪತ್ರಿಕೆಗಳು ಜೊತೆಗೆ ವಾರಪತ್ರಿಕೆಗಳಾದ ಕರ್ಮವೀರ, ಸುಧಾ, ಪ್ರಜಾಮತ, ಕಸ್ತೂರಿ, ಮಲ್ಲಿಗೆ, ಮಯೂರ ಮುಂತಾದವುಗಳು, ಅಲ್ಲದೆ ಇಂಗ್ಲೀಷ್ ಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ , ಇಂಡಿಯನ್ ಎಕ್ಸ್ ಪ್ರೆಸ್ , ಟೈಮ್ಸ್ ಆಫ್ ಇಂಡಿಯಾ ದಿನಪತ್ರಕೆಗಳಿಗೆ ಬಳ್ಳಾರಿ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಓದಗರು ಇದ್ದಾರೆ.

ಶಿಕ್ಷಣ

ಶ್ರೀ ಸಾಮಾನ್ಯನಿಗೂ ಶಿಕ್ಷಣ ಸೌಲಭ್ಯವನ್ನು ಒದಗಿಸುವಲ್ಲಿ ಸರಕಾರಿ ಶಿಕ್ಷಣ ಸಂಸ್ಥೆ, ಖಾಸಗಿ ಶಿಕ್ಷಣ ಸಂಸ್ಥೆ, ಸ್ಥಳೀಯ ಸಂಸ್ಥೆಗಳ ಪಾತ್ರ ಹಿರಿದಾದುದು. ಈ ಹಿಂದೆ ಇಂತಹ ಶಿಕ್ಷಣವನ್ನು

ಗುರುಕುಲಗಳೂ, ಮಠಮಾನ್ಯಗಳು, ದೇವಾಲಯಗಳಲ್ಲಿ ತಿಳಿಸಿಕೊಡುತ್ತಿದ್ದರು. ಈ ಶಿಕ್ಷಣವು ಕೇವಲ ಸೀಮಿತ ಜನರಿಗೆ ಮಾತ್ರ ಅವಕಾಶವಿತ್ತು. ಆಗ ತೀರಾ ಕೆಳವರ್ಗದವರು ಶಿಕ್ಷಣದಿಂದ ವಂಚಿತರಾಗಿದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ಕ್ರಿ.ಶ.೧೯ನೇ ಶತಮಾನದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಸಾಮಾನ್ಯರಿಗೂ ದೊರೆಯುವಂತೆ ಮಾಡಿದವರು ಕ್ರೈಸ್ತ ಮಿಶನರಿಗಳು. ಇವರಲ್ಲಿ ಮೊಗ್ಲಿಂಗ್ ನು ೧೮೩೬ರಲ್ಲಿ ಇಂಗ್ಲೀಷ್ ಶಾಲೆಯನ್ನು ಬಳ್ಳಾರಿಯಲ್ಲಿ ಆರಂಭಿಸಿದನು. ನಂತರದಲ್ಲಿ ಪ್ರತಿ ಗ್ರಾಮದಲ್ಲಿ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇದರೊಂದಿಗೆ ಸರಕಾರವು ಕಡ್ಡಾಯ ಶಿಕ್ಷಣ ಎಂಬ ಯೋಜನೆ ಹಮ್ಮಿಕೊಂಡಿದೆ. ಜೊತೆಗೆ ಅನಕ್ಷರತೆ ನಿವಾರಣೆಗಾಗಿಯೆ ಶಾಶ್ವತ ಅಕ್ಷರ ಕಲಿಕಾ ಕೇಂದ್ರಗಳನ್ನು ತೆರೆಯಲಾಗಿದೆ.

೧೯೯೧-೯೨ರಲ್ಲಿ ಪಟ್ಟಣದ ಪ್ರಾಥಮಿಕ ಶಿಕ್ಷಣವನ್ನು ೫೩೨೩೨ ಬಾಲಕರು ಪಡೆದರೆ ೫೨,೯೯ ಬಾಲಕಿಯರು ಶಿಕ್ಷಣವನ್ನು ಹಾಗೂ ಗ್ರಾಮೀಣ ಪ್ರದೇಶದಲ್ಲಿ ೧,೧೬, ೨೫೩ ಬಾಲಕರು, ೮೩,೯೦೧ ಬಾಲಕಿಯರು ಶಿಕ್ಷಣ ಪಡೆಯುತ್ತಿದ್ದರು. ಇಷ್ಟಾದರೂ ಬರಬರುತ್ತಾ ಅನೇಕ ಹಳ್ಳಿಗಳಲ್ಲಿ ನವೋದಯ ಹಾಗೂ ಮುರಾರ್ಜಿ ದೇಸಾಯಿ ಶಾಲೆಗಳನ್ನು ತೆರೆದು ವಿದ್ಯೆಯನ್ನು ಕಲಿಯಲು ಸರಕಾರವು ಅನುವು ಮಾಡಿಕೊಡುತ್ತಿದೆ. ಕೂಡ್ಲಿಗಿಯ ಹತ್ತಿರದ ಚಿಕ್ಕಜೋಗಿಹಳ್ಳೀಯಲ್ಲಿ ಜವಾಹರ ನವೋದಯ ವಸತಿ ಶಾಲೆಯನ್ನು ತೆರೆಯಲಾಯಿತು. ೧೯೯೧-೯೨ರಲ್ಲಿ ೩೨೦ ವಿದ್ಯಾರ್ಥಿಗಳು ಪ್ರವೇಶಪಡೆದರು.

ಇನ್ನು ಪ್ರೌಢಶಾಲೆ ವಿದ್ಯಾರ್ಥಿಗಳ ಸಂಖ್ಯೆಯು ೪೩, ೧೩೨ ರಷ್ಟು ಇತ್ತು. ಪದವಿ ಪೂರ್ವ ಶಿಕ್ಷಣವನ್ನು ಪ್ರೌಢಶಾಲೆಯನ್ನು ಸೇರ್ಪಡಿಸಲಾಗಿದೆ. ಅಲ್ಲದೆ ಕೆಲವು ಕಾಲೇಜುಗಳು ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಸೇರಿರುತ್ತವೆ. ಆದರೆ ಸ್ವತಂತ್ರ ಪದವಿ ಪೂರ್ವ ವಿದ್ಯಾಲಯಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ೧೯೯೧-೯೨ರಲ್ಲಿ ೨೧ ಸಂಯುಕ್ತ ಪದವಿ ಪೂರ್ವ ವಿದ್ಯಾಲಯಗಳಿದ್ದವು. ಅನುದಾನರಹಿತ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯಗಳ ಸಂಖ್ಯೆ ೩, ಅನುದಾನ ರಹಿತ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯಗಳು ಜಿಲ್ಲೆಯಲ್ಲಿ ೪ ಹಾಗೂ ಸರ್ಕಾರವು ನಡೆಸುತ್ತಿದ್ದ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯಗಳು ೧೪ ಇದ್ದವು. ಇವುಗಳಲ್ಲದೆ ೧೬ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯಗಳನ್ನು ನಡೆಸುತ್ತಿದ್ದರು. ಒಟ್ಟಾಗಿ ೩೭ ಪದವಿ ಪೂರ್ವ ವಿದ್ಯಾಲಯಗಳು ಜಿಲ್ಲೆಯಲ್ಲಿ ಸ್ಥಾಪನೆಯಾಗಿದ್ದವು. ೧೯೮೯-೯೦ರಲ್ಲಿ ಪದವಿ ಪೂವರ ವಿದ್ಯಾರ್ಥಿಗಳ ಸಂಖ್ಯೆ ೧೩,೯೩೮ ಇತ್ತು. (ವೆ.ಮ.ರಾಜಶೇಖರ, ಪು.೧೯; ೧೯೯೪)

ಉನ್ನತ ಶಿಕ್ಷಣ ಸೌಲಭ್ಯಗಳು ಬಳ್ಳಾರಿ ಜಿಲ್ಲೆಯಲ್ಲಿ ಬಹಳ ತಡವಾಗಿಯೇ ಆರಂಭಗೊಂಡವು. ಕರ್ನಾಟಕ ವಿಶ್ವವಿದ್ಯಾಲಯದ ಅಡಿಯಲ್ಲಿ ೧೯೯೪-೯೫ರಲ್ಲಿ ಗುಲಬರ್ಗಾದಲ್ಲಿ ಆರಂಭದಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆರೆಯಲಾಯಿತು. ಅನಂತರ ಆ ಕೇಂದ್ರವು ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ರೂಪುಗೊಂಡಿತು. ಈ ಮಹಾ ವಿದ್ಯಾಲಯದ ಅಡಿಯಲ್ಲಿ ವೀರಶೈವ ವಿದ್ಯಾವರ್ಧಕ ಸಂಘ ೧೯೪೫ರಂದು ವೀರಶೈವ ಮಹಾವಿದ್ಯಾಲಯವನ್ನು ಸ್ಥಾಪಿಸಿ ಆಗ ಆ ಕಾಲೇಜಿಗೆ ವೈ.ಮಹಾಬಲೇಶ್ವರರ ಶ್ರಮದಿಂದ ಚಾಲನೆ ದೊರೆಯಿತು. ೧೯೯೧-೯೨ರಲ್ಲಿ ಬಳ್ಳಾರಿಯಲ್ಲಿ ೨೭೧೨ ವಿದ್ಯಾರ್ಥಿಘಳು, ೩೧೩ ವಿದ್ಯಾರ್ಥಿನಿಯರಿಗೆ ಬೇರೆ ಬೇರೆ ತೆರನಾದ ಕೋರ್ಸುಗಳನ್ನು ಆರಂಭಿಸಿ ಶಿಕ್ಷಣ ನೀಡಲಾಯಿತು. ಆಗ ಇದ್ದ ಬೋಧಕರ ಸಂಖ್ಯೆ ೧೧೫ ಹಾಗು ಬೋಧಕೇತರ ಸಿಬ್ಬಂದಿಯ ಸಂಖ್ಯೆ ೩೩ ರಷ್ಟಿತ್ತು. ಈ ಸಂಘವು ಅನೇಕ ಶಾಖೆಗಳನ್ನು ತೆರೆಯಿತು. ಅವುಗಳಲ್ಲಿ ಹೊಸಪೇಟೆ, ಹರಪನಹಳ್ಳಿ, ಕೊಟ್ಟೂರು, ಹಡಗಲಿ, ತಂಬ್ರಳ್ಳಿ, ಕುಡಿತಿನಿ ಇನ್ನೂ ಮುಂತಾದ ಕಡೆ ಸ್ಥಾಪಿಸಲಾಯಿತು. ೧೯೯೨-೧೯೯೩ರಲ್ಲಿ ೬೯೪ ಪ್ರಾಥಶಾಲೆ, ೬೦೪ ಕಿರಿಯ ಪ್ರಾಥಮಿಕ ಶಾಲೆ, ೭೦ ಜೂನಿಯರ್ ಕಾಲೇಜುಗಳು, ೭ ಕಲೆ ಮತ್ತು ವಿಜ್ಞಾನ, ವಾಣಿಜ್ಯ ಪದವಿ ಕಾಲೇಜುಗಳು ಮತ್ತು ಒಂದು ವೈದ್ಯಕೀಯ ಕಾಲೇಜನ್ನು ಆರಂಭಿಸಲಾಯಿತು.

ಸಂಡೂರು ತಾಲ್ಲೂಕಿನ ನಂದಿಹಳ್ಳಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಅಡಿಯಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸಲಾಯಿತು. ಇಲ್ಲಿ ಗಣಿತಶಾಸ್ತ್ರ, ವಾಣಿಜ್ಯಶಾಸ್ತ್ರ, ಕನ್ನಡ ಭೂವಿಜ್ಞಾನ, ಮಿನರಲ್ ಎಕ್ಸ್ ಪ್ಲೋರೇಶನ್, ಮಿನರಲ್ ಪ್ರೊಸೆಸಿಂಗ್ ವಿಷಯಗಳ ಬೋಧನೆ ನೀಡಲಾಗುತ್ತಿದೆ. ಕೊನೆಯ ಎರಡು ಕೋರ್ಸ್‌ಗಳನ್ನು ಬಿಟ್ಟರೆ ಇನ್ನುಳಿದ ವಿಷಯಗಳನ್ನು ಬಳ್ಳಾರಿ, ರಾಯಚೂರಿನ ಪಿ.ಜಿ.ಸೆಂಟರ್‌ಗಳಿಗೆ ಸ್ಥಳಾಂತರಿಸಲಾಗಿದೆ. ಈಚೆಗೆ ಇದೇ ವಿಶ್ವವಿದ್ಯಾಲಯದಿಂದ ಎಂ.ಬಿ.ಎ.ಕೋರ್ಸನ್ನು ಬಳ್ಳಾರಿಯಲ್ಲಿ ಆರಂಭಿಸಲಾಗಿದೆ. ೧೯೯೧-೯೨ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಹಂಪೆಯಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ಸ್ಥಾಪಿತವಾಯಿತು. ಇದು ಕೇವಲ ಸಂಶೋಧನೆಗಾಗಿಯೇ ಮೀಸಲಾಗಿಟ್ಟ ವಿಶ್ವವಿದ್ಯಾಲಯವಾಗಿ ವೈಶಿಷ್ಟ್ಯ ಪಡೆದಿದೆ. ಇಲ್ಲಿ ಪಿ.ಹೆಚ್ .ಡಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಇಲ್ಲಿನ ಅಧ್ಯಾಪಕರಿಂದ ಹಾಗೂ ಹೊರಗಿನ ವಿದ್ವಾಂಸರಿಂದ ಹಲವಾರು ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸುತ್ತಿದೆ.

೨.೯. ಆರ್ಥಿಕತೆ

ಉತ್ತಮ ಹವಾಗುಣ, ಪರಿಸರವನ್ನು ಹೊಂದಿರುವ ಬಳ್ಳಾರಿ ಜಿಲ್ಲೆಯು ನೈಸರ್ಗಿಕ ಸಂಪನ್ಮೂಲದಿಂದ ಶ್ರೀಮಂತಿಕೆಯನ್ನು ಉಳಿಸಿಕೊಂಡಿದೆ. ಆರ್ಥಿಕ ಅಭಿವೃದ್ಧಿಗೆ ನಿಸರ್ಗದ ನಂಟೇ ಕಾರಣ. ಇಲ್ಲಿ ಮಾನವನ

ಶ್ರಮ ಬಂಡವಾಳ ಮತ್ತು ವಿನಿಯೋಗ ಪ್ರಮುಖ ಅಂಶಗಳಾಗಿರುತ್ತವೆ. ಇಂತಹ ಅಂಶಗಳ ಅಭಿವೃದ್ಧಿಗೆ ಒಂದು ಸೀಮಿತತೆ ಇರುತ್ತದೆ. ಅಲ್ಲದೆ ಈ ಬದಲಾವಣೆಯಲ್ಲಿ ಏರುಪೇರುಗಳುಂಟು. ಆದರೂ ಅವುಗಳನ್ನು ಕಡೆಗಣಿಸುವಂತಿಲ್ಲ. ಆರ್ಥಿಕ ಅಭಿವೃದ್ಧಿಯು ಆಯಾ ಜಿಲ್ಲೆಯ ಆದಾಯ ಹಾಗೂ ತಲಾ ಆದಾಯಗಳು ಗಣನೀಯವಾದ ಪಾತ್ರ ವಹಿಸುತ್ತಿದ. ಬೆಲೆ ಅಧಿಕವಾಗುತ್ತಿರುವ ಸಂದರ್ಭದಲ್ಲಿ ಜನರ ಜೀವನ ಮಟ್ಟವು ಸುಧಾರಣೆಗೊಂಡಿದೆ. ಅತಿಹೆಚ್ಚು ಜನರು ಗ್ರಾಮೀಣ ಜೀವನವನ್ನು ಅನುಸರಿಸುತ್ತಿದ್ದರಿಂದ ಅವರ ದಿನಗೂಲಿ, ಸಂಬಳ, ಸಾರಿಗೆಗಳಲ್ಲಿ ಸ್ಥಿರತೆ ಇರುತ್ತದೆ. ಆದರು ಬೇಸಾಯ, ಕೈಗಾರಿಕೆ, ಸಾರಿಗೆ ಸಂಪರ್ಕ, ಶಿಕ್ಷಣಮಟ್ಟ, ಆರೋಗ್ಯ ಹಾಗೂ ಸಮಾಜದ ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗುತ್ತಿವೆ. ಇವೆಲ್ಲಕ್ಕೂ ಜಿಲ್ಲೆಯಲ್ಲಿ ಅತಿಯಾದ ನೈಸರ್ಗಿಕ ಸಂಪತ್ತಿದೆ. ಇದರಿಂದಲೇ ಬಡಜನರಿಂದ ಕೂಡಿದ ಶ್ರೀಮಂತ ದೇಶ ಎಂಬ ಮಾತು ಸತ್ಯವಾಗಿದೆ. ಈ ಎಲ್ಲಾ ಸಂಪತ್ತನ್ನು ಅತಿಯಾಗಿ ಬಳಸುವಿಕೆಯೂ ತುಂಬಾ ಹಾನಿಕರ ಎಂಬ ಮಾತನ್ನು ಅಲಕ್ಷಿಸುವಂತಿಲ್ಲ. ನೈಸರ್ಗಿಕ ಸಂಪನ್ಮೂಲವನ್ನು ಬಳಸಿದ ನಂತರ ಅಲ್ಲಿ ಪುನಃ ಪ್ರಕೃತಿಯ ಸಮತೋಲನವನ್ನು ಕಾಪಾಡಿಕೊಳ್ಳುವ ಕಾರ್ಯ ಮುಖ್ಯವಾದುದಾಗಿದೆ.

ಸಾಮಾನ್ಯವಾಗಿ ಜನರು ಬಳಕೆ ವಸ್ತುಗಳಾದ ಆಹಾರ, ಬಟ್ಟೆ, ವಸತಿಗಾಗಿ ಅಧಿಕವಾದ ಹಣವನ್ನು ವ್ಯಯ ಮಾಡುತ್ತಿರುವುದು ಸರ್ವವಿಧಿತ. ಅಂತೆಯೇ ಔಷಧ, ಶಿಕ್ಷಣ ಮತ್ತು ಸ್ಥಾವರ ವಸ್ತುಗಳ ಉಪಯೋಗದ ಪ್ರಮಾಣ ಕಡಿಮೆ. ಆದರೆ ನಮ್ಮ ಜನತೆ ಸಾಮಾಜಿಕ-ಧಾರ್ಮಿಕ ಸಮಯದಲ್ಲಿ ಹೆಚ್ಚು ಹಣ ಮತ್ತು ಸಮಯವನ್ನು ವ್ಯರ್ಥ ಮಾಡುವುದಲ್ಲದೆ ಅಧಿಕವಾದ ಹಣವನ್ನು ಪೋಲು ಮಾಡುತ್ತಿರುವುದು ಕಂಡುಬರುತ್ತದೆ. ಇದರಿಂದಲೇ ಇಡೀ ಜೀವನವು ಸಾಲ ಪಡೆಯುವಲ್ಲಿ ಯಶಸ್ವಿಯಾಗಿ ಆತನ ಆರ್ಥಿಕ ಹೂಡುವಿಕೆ ಹಿನ್ನಡೆಯಾಗಿ ಬಡತನದ ಕೂಡದಲ್ಲಿ ಬೀಳುತ್ತಾನೆ. ಇಲ್ಲಿ ಬರೀ ಜನರಷ್ಟೇ ಅಲ್ಲದೆ ನಮ್ಮ ಸರಕಾರವು ವಿದೇಶಗಳಿಂದ, ವಿಶ್ವಬ್ಯಾಂಕ್ ನಿಂದ ಹಲವು ರೀತಿಯ ಸಾಲಗಳನ್ನು ತೆಗೆದುಕೊಳ್ಳುತ್ತಿರುವುದು ಗಮನಾರ್ಹ.

ಇಲ್ಲಿ ಅತಿಹೆಚ್ಚು ಜನರು ಗ್ರಾಮೀಣ ಪರಿಸರದಲ್ಲೆ ಜೀವಿಸುತ್ತಿರುವುದರಿಂದ, ಅವರಿಗೆ ಬೇಸಾಯವೇ ಪ್ರಮುಖ ಕಸುಬಾಗಿದ್ದುದರಿಂದ ಆರ್ಥಿಕ ಹಿನ್ನಡೆಗೆ ಇದೊಂದು ಕಾರಣವಾಗಿದೆ. ಶೇ.೭೫ರಷ್ಟು ಜನರು ಈ ಕಸುಬಿನಲ್ಲಿ ತೊಡಗಿಸಿಕೊಂಡಿದ್ದಾರೆ. ಇದರಿಂದ ಅವರ ಆದಾಯ ಮತ್ತು ಉದ್ಯೋಗ ಅನಿಶ್ಚಿತವಾಗಿರುತ್ತದೆ. ಅಲ್ಲದೆ ಗ್ರಾಮೀಣ ಭಾಗದಲ್ಲಿರುವ ಸಣ್ಣಪುಟ್ಟಹಿಡುವಳಿದಾರರು, ಕುಶಲಕರ್ಮಿಗಳು ತುಂಬಾ ದುರ್ಬಲರಾಗಿದ್ದಾರೆ. ಏಕೆಂದರೆ ಅವರು ಬಳಸುವ ವಸ್ತುಗಳು ತುಂಬಾ

ಹಳೆಯವಾಗಿದ್ದು ಪರಂಪರೆಯ ಬಳುವಳಿಯಾಗಿ ಬಳಸುತ್ತಿರುತ್ತಾರೆ. ಅವುಗಳಲ್ಲಿ ವೈಜ್ಞಾನಿಕ ಸಲಕರಣೆಗಳನ್ನು ಬಳಸಲು ಹಿಂದೇಟು ಹಾಕುತ್ತಿರುವುದನ್ನು ನೋಡುತ್ತೇವೆ.

ಮೈಸೂರು ಸಂಸ್ಥಾನದ ಆರ್ಥಿಕತೆಯನ್ನು ಏಕರೂಪತೆಯಿತ್ತು. ಇತರೆ ನಾಗರಿಕ ಸೌಲಭ್ಯಗಳ ಪ್ರವೇಶಗಳಿಗಿಂತ ಉತ್ತಮವಾಗಿತ್ತು. ಆದರೆ ಏಕೀಕೃತವಾದ ನಂತರ ಉತ್ತರ ಕರ್ನಾಟಕ ಪ್ರದೇಶದಲ್ಲಿ ವಿಲೀನವಾದಾಗ ಬರಪರಿಸ್ಥಿತಿಯನ್ನು ಅನುಭವಿಸಿತು. ಇಲ್ಲಿ ಜೋಳ, ಎಣ್ಣೆ ಕಾಳುಗಳು, ಬೇಳೆ ಕಾಳುಗಳು ಮುಂತಾದವನ್ನು ಬೆಳೆಯಲಾಗುತ್ತಿದೆ. ಇದರಲ್ಲಿ ಅಕ್ಕಿ, ಜೋಳ ಮತ್ತು ಮೆಕ್ಕೆಜೋಳ ಮುಖ್ಯಾ ಆಹಾರ ಬೆಳೆಗಳಾಗಿವೆ. ಅಲ್ಲದೆ ಕಡಲೆ, ತೊಗರಿ, ನೆಲಗಡಲೆಗಳನ್ನು ಈ ಪ್ರದೇಶದಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಹತ್ತಿ ಪ್ರಮುಖ ವಾಣಿಜ್ಯ ಬೆಳೆಯಾಗಿದೆ.

ಒಂದು ಸ್ಥಳದ ಆರ್ಥಿಕ ಪ್ರಗತಿಯನ್ನು ಗಮನಿಸುವುದಾದರೆ ಆ ಸ್ಥಳದ ಬೆಲೆ ಸೂಚ್ಯಂಕವನ್ನು ಲಕ್ಷಿಸಬೇಕಾಗುತ್ತದೆ. ಇಲ್ಲಿ ಬೆಲೆ ಏರಿಕೆ ಇಲ್ಲವೆ ಇಳಿಕೆಯಿಂದಾದ ಬದಲಾವಣೆಯಿಂದ ಬೆಳವಣಿಗೆಯನ್ನು ಕಂಡುಕೊಳ್ಳಲಾಗುತ್ತದೆ. ಬೆಲೆ ಅತಿಯಾದಾಗ ಉಳಿತಾಯದಲ್ಲಿ ಹಿನ್ನಡೆಯುಂಟಾಗಿ ಬಂಡವಾಳ ಹೂಡಿಕೆಯಲ್ಲಿ ಏರುಪೇರು ಕಂಡುಬರುತ್ತದೆ. ಕೆಲವೊಮ್ಮೆ ಗ್ರಾಹಕ ಬೆಲೆಗಳು ಸಗಟು ಬೆಲೆಗಳಿಗಿಂತ ಅಧಿಕವಾಗಿರುತ್ತವೆ. ಇಂತಹ ಗ್ರಾಹಕರ ಬೆಲೆಗಳು ಜನಸಾಮಾನ್ಯರಲ್ಲಿ ವ್ಯತ್ಯಾಸ ಕಂಡುಬರುತ್ತವೆ. ಇದರಿಂದ ೧೯೭೩ರಲ್ಲಿ ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನಿಗದಿಪಡಿಸಿದ ಜಾರಿಗೆ ತರಲಾಯಿತು.

ನಮಗೆ ನೈಸಗಿರಕ ವರವಾಗಿ ಬಂದ ಭೂಮಿ, ನೀರು, ಗಾಳಿ, ಮಳೆ, ಅರಣ್ಯ, ಖನಿಜವನ್ನು ಮಿತವಾಗಿ ಬಳಸಬೇಕಾಗುತ್ತದೆ. ಭವಿಷ್ಯದ ಪ್ರಜ್ಞೆಯನ್ನಿಟ್ಟುಕೊಂಡು ಜೀವಿಸಬೇಕಾದುದು ಅವಶ್ಯವಾಗುತ್ತದೆ. ಏಕೆಂದರೆ ಈ ವಸ್ತುಗಳ ಅತಿ ಬಳಕೆಯಿಂದ ಜಲ ಬತ್ತುವಿಕೆ, ಪರಿಸರ ಮಾಲಿನ್ಯಗಳಂತಹ ವಿಪತ್ತಿಗೆ ಗುರಿಯಾಗಬೇಕಾಗುತ್ತದೆ. ನಾಗರೀಕತೆ ಬೆಳೆದಂತೆಲ್ಲಾ ಕಾರ್ಖಾನೆಗಳ ಬೆಳೆಯುವಿಕೆ ಅತಿಯಾಗುತ್ತದೆ. ಇದರಿಂದ ಹೊರಚೆಲ್ಲುವ ತ್ಯಾಜ್ಯವಸ್ತುಗಳನ್ನು ಜಲದಲ್ಲಿ ಬೆರೆಸುವುದರಿಂದಲೂ ಮಲೀನವಾಗಿ ಮುಂದಿನ ಪೀಳಿಗೆಗೆ ತೊಂದರೆ ಉಂಟಾಗುತ್ತದೆ. ಇದಲ್ಲದೆ ವಾಯುಮಾಲಿನ್ಯದಿಂದ ಪ್ರಾಣಕ್ಕೆ ಹಾನಿಯುಂಟಾಗುತ್ತದೆ. ಪರಿಸರದ ನಾಶ ಪ್ರಾರಂಭವಾದ ಮೇಲೆ ಅದರ ಪುನರುತ್ಥಾನ ಕೈಗೊಳ್ಳಲೇಬೇಕು.

ಗ್ರಾಮಗಳನ್ನು ಅಭಿವೃದ್ಧಿಪಡಿಸಲು ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಫಲಕಾರಿಯಾಗಿವೆ. ಇದರಿಂದ ೧೯೫೪ರಲ್ಲಿ ಮೂರು ಪಂಚಾಯಿತಿಗಳನ್ನು ಚಾಲನೆಗೆ ತರಲಾಯಿತು. ಇವುಗಳಲ್ಲಿ ತಾಲ್ಲೂಕು ಪಂಚಾಯಿತು. ಜಿಲ್ಲಾ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು ಆಯಾ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ

ಕಾರ್ಯಾಲಯದ ಅಧೀನದಲ್ಲಿದ್ದವು. ಆದರೆ ಈಗ ಪ್ರತ್ಯೇಕವಾಗಿ ತಾಲ್ಲೂಕು ಪಂಚಾಯಿತಿ ಎಂಬ ಹೆಸರಿನಿಂದ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಲಿದೆ. ಈ ಕಾರ್ಯಕ್ರಮದಿಂದ ಬಡವರಿಗೆ ಆಶ್ರಯ ಮನೆಗಳನ್ನು, ಕೃಷಿಕರಿಗೆ ಪಂಪ್ ಸೆಟ್ ಗೊಬ್ಬರ, ಭೂಸ್ವಾಧೀನತೆ, ಶಾಲಾಕಟ್ಟಡ ನಿರ್ಮಿಸಲು, ದೇವಾಲಯ ನಿರ್ಮಾಣಮಾಡಲು ಸರಕಾರವು ನೆರವು ನೀಡುತ್ತಾ ಬಂದಿದೆ. ಇದರೊಂದಿಗೆ ದುರ್ಬಲವರ್ಗದವರಿಗೆ ಸರಕಾರವು ಅನೇಕ ಪ್ರಾತಿನಿಧ್ಯ ನೀಡಿ ಇಪ್ಪತ್ತು ಅಂಶಗಳನ್ನು ಜಾರಿಗೆ ತರಲಾಯಿತು. ಇದರಿಂದ ಕೆಲವರಿಗೆ ಆಶಾದಾಯಕವಾದರೆ ಈ ಎಲ್ಲಾ ಯೋಜನೆಗಳು ಎಷ್ಟರ ಮಟ್ಟಿಗೆ ಸದುಪಯೋಗವಾಗುತ್ತವೆ ಎಂಬ ಮಾತು ಅಲ್ಲಲ್ಲಿ ಕೇಳಿಬರುತ್ತದೆ. ೧೯೭೨-೭೩ರಲ್ಲಿ ಜಯಂತಿ ಗ್ರಾಮಗಳು ಎಂಬ ಯೋಜನೆಯನ್ನು ಬಳ್ಳಾರಿಯಲ್ಲಿ ರೂಪಿಸಲಾಯಿತು. ಇದರಿಂದ ಸಮುದಾಯ ಕೇಂದ್ರ, ಬಾಲವಾಡಿಗಳು, ಕುಡಿಯುವ ನೀರು, ದುರ್ಬಲರಿಗೆ ಮನೆ, ಶಾಲೆ, ಅಂಚೆಕಛೇರಿ ಸ್ಥಾಪನೆ, ಒಳಚರಂಡಿ, ವಿದ್ಯುತ್ ಪೂರೈಕೆ ಮುಂತಾದ ಸಾರ್ವಜನಿಕ ಸೌಲಭ್ಯಗಳನ್ನು ಜಾರಿಗೆ ತರಲಾಯಿತು.

ಉದ್ಯೋಗ

ಕೃಷಿಯನ್ನು ಬಹಳಷ್ಟು ಜನರು ಅವಲಂಬಿಸಿದ್ದರೂ ವಂಶಪಾರಂಪರ್ಯವಾಗಿ ಬೆಳೆಸಿಕೊಂಡು ಬರುವ ಕಸುಬನ್ನೆ ಹೊಂದಿಕೊಳ್ಳಲಾರದ ಜನ ಇತ್ತು. ಆ ಸಂಖ್ಯೆಯೆ ನಿರುದ್ಯೋಗಿಗಳೆಂದು ಕರೆಸಿಕೊಳ್ಳುತ್ತಿರುವರು. ಇವರ ಸಂಖ್ಯೆ ಮಿತಿಮೀರಿ ಬೆಳೆಯುತ್ತಿವೆ. ಇಂತಹ ನಿರುದ್ಯೋಗಿಗಳನ್ನು ಸುಶಿಕ್ಷಿತರು, ಋತುಮಾನಗಳಲ್ಲಿ ನಿರುದ್ಯೋಗಿಗಳು, ಸಣ್ಣ ಬೇಸಾಯಗಾರರು, ಸಣ್ಣ ವ್ಯಾಪಾರಿಗಳು, ಕುಶಲಕರ್ಮಿಗಳನ್ನು ಕಾಣಬಹುದು. (ಗೆಝೆಟಿಯರ್ ಭಾಗ-೨ ಪು.೩೦೬) ಇಂತಹ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿಕೊಡಲು ಮಾಡಿಸಿಕೊಂಡು ಈ ಇಲಾಖೆಯ ಕೇಂದ್ರವನ್ನು ಸ್ಥಾಪಿಸಿ ನಿರುದ್ಯೋಗಿಗಳ ಹೆಸರನ್ನು ನೋಂದಣಿ ಮಾಡಿಸಿಕೊಂಡು ಈ ಇಲಾಖೆಯ ಹುದ್ದೆಗಳ ನೇಮಕಾತಿಯನ್ನು ಸಂದರ್ಶನಗಳ ಮೂಲಕ ಈ ಕೇಂದ್ರದಿಂದ ಕಳಿಸಿ ಅನೇಕ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಟ್ಟಿದೆ. ಬಳ್ಳಾರಿಯಲ್ಲಿ ೧೯೪೫ರಲ್ಲಿ ಉದ್ಯೋಗ ವಿನಿಮಯ ಕೇಂದ್ರವನ್ನು ಸ್ಥಾಪಿಸಲಾಯಿತು. ೧೯೭೦ರ ಹೊತ್ತಿಗೆ ೬೦೧೦ ಉದ್ಯೋಗಾರ್ಥಿಗಳನ್ನು ನೋಂದಾವಣಿ ಮಾಡಿಕೊಳ್ಳಲಾಗಿದೆ.

ಖನಿಜ ಸಂಪತ್ತು

ಕೈಗಾರಿಕಾ ಅಭಿವೃದ್ಧಿಯಲ್ಲಿ ಖನಿಜ ಸಂಪತ್ತು ಪ್ರಮುಖವಾದುದು. ಈ ಖನಿಜ ಸಂಪತ್ತು ಬಳ್ಳಾರಿ ಜಿಲ್ಲೆಯಲ್ಲಿ ಹೇರಳವಾಗಿ ಸಿಗುತ್ತಿದೆ. ಖನಿಜದ ಜೊತೆಗೆ ಮ್ಯಾಂಗನೀಸ್, ತಾಮ್ರ, ಮ್ಯಾಗ್ನಸೈಟ್,

ಬಂಗಾರ, ಸುಣ್ಣದ ಕಲ್ಲು, ಜೇಡಿಮಣ್ಣು, ವಜ್ರ ಮುಂತಾದವು ಕಾಣಸಿಗುತ್ತವೆ. ಇಲ್ಲಿ ೨೦ಕ್ಕೂ ಹೆಚ್ಚು ಗಣಿಕೇಂದ್ರಗಳಿವೆ. ಇವುಗಳಿಗೆ ತಮ್ಮದೇ ಆದ ಹೆಸರುಗಳನ್ನು ಇಡಲಾಗಿದೆ. ೧೯೬೯ರಲ್ಲಿ ಶೇ.೮೪ರಷ್ಟು ಅಧಿಕ ಖನಿಜವು ವಿದೇಶಕ್ಕೆ ರಫ್ತಾಗಿತ್ತು. ಆಗ ಇದ್ದ ಗಣಿ ಕೇಂದ್ರಗಳು ಮತ್ತು ಗಣಿಗಳ ಸಾಮರ್ಥ್ಯವನ್ನು ಅನುಬಂಧದಲ್ಲಿ ನೀಡಲಾಗಿದೆ.

೧೯೭೦ರಲ್ಲಿ ದೋಣಿಮಲೈ ಕಬ್ಬಿಣದ ಅದಿರು ಯೋಜನೆಯು ರಾಷ್ಟ್ರೀಯ ಖನಿಜ ಅಭಿವೃದ್ಧಿ ಸಂಸ್ಥೆ(ಎನ್.ಎಂ.ಡಿ.ಸಿ) ಜಿಲ್ಲೆಯ ಸಂಡೂರು ತಾಲ್ಲೂಕಿನ ನರಸಾಪುರದಲ್ಲಿ ಸ್ಥಾಪಿಸಿತು. ಇಲ್ಲಿ ೯೮ ದಶಲಕ್ಷ ಟನ್ ಕಬ್ಬಿಣ ತಯಾರಿಸುವ ಗುರಿ ಹೊಂದಲಾಯಿತು.(ಟಿ.ಆರ್ .ಚಂದ್ರಶೇಖರ್, ಪು.೪೯; ೧೯೯೪) ಇದಲ್ಲದೆ ಮೈಸೂರು ಸರಕಾರದವರು ಮೈಸೂರು ಮಿನರಲ್ಸ್ ಲಿಮಿಟೆಡ್ ನ್ನು ಸ್ಥಾಪಿಸಿದರು.(ಎಂ.ಎಂ.ಎಲ್) ಅಲ್ಲದೆ ಸಂಡೂರು ಮ್ಯಾಂಗನೀಸ್ ಮತ್ತು ಖನಿಜ ನಿಯಮಿತ ಹಾಗೂ ಹಲವಾರು ಸಣ್ಣಪುಟ್ಟ ಗಣಿಗಾರಿಕಾ ಸಂಸ್ಥೆಗಳು ಬೆಳಕಿಗೆ ಬಂದಿವೆ. ಅವುಗಳಲ್ಲಿ ಜಿ.ಜಿ.ಮೈನ್ಸ್, ಆರ್.ಪಿ.ಮೈನ್ಸ್ ಮುಂತಾದವು ಕಂಡುಬರುತ್ತವೆ.

ಜಲಸಂಪತ್ತು

ನೀರು ಎಲ್ಲರಿಗೂ ಬೇಕಾದ ಅಗತ್ಯವಸ್ತು. ಅದನ್ನು ಮಿತಿಮೀರಿ ಬಳಿಸಿ ಪೋಲು ಮಾಡುವುದು ಸರಿಯಲ್ಲ. ಮೊದಮೊದಲು ಮಳೆ ನೀರನ್ನು ಕೆರೆಹಳ್ಳಗಳಲ್ಲಿ ಸಂಗ್ರಹಿಸಿ ಆ ನೀರನ್ನೇ ಕೃಷಿಗೆ ಬಳಸುತ್ತಿದ್ದರು. ಈಗ ಆ ಪದ್ಧತಿ ಕಡಿಮೆಯಾಗುತ್ತಿದೆ. ಅಂತರ್ಜಲ ಶೋಧನೆಯಿಂದ ಕೆರೆಗಳು ಇಂದು ಬತ್ತಿಹೋಗುತ್ತಿವೆ. ನೀರಾವರಿ ಸೌಕರ್ಯಕ್ಕೆ ನದಿಗಳು ವರದಾಯಕವಾಗಿವೆ. ಇಲ್ಲಿ ತುಂಗಭದ್ರಾ ನದಿ ಇದೆ. ಇದರಿಂದ ಕಾಲುವೆಗಳ ಮೂಲಕ ನೀರು ಸರಬರಾಜು ಆಗುತ್ತಿದೆ. ೧೫೨೦ರಲ್ಲಿ ತುಂಗಾನದಿಯ ಹಾಗೂ ಹಗರಿಯ ಮೇಲೆ ಜಲ ಸಂಪರ್ಕವು ಬ್ಯಾಸ್ಕೆಟ್ ಮೂಲಕ ಸಾಗುತ್ತಿತ್ತು.

ಈ ಜಿಲ್ಲೆಯ ತುಂಗಭದ್ರಾ ನದಿಯಲ್ಲಿ ಮೀನು ಹಿಡಿದು ಸಾಕಾಣಿಕೆ ಮಾಡುವ ಕಾರ್ಯ ನಡೆಯುತ್ತಿದೆ. ಇದರಿಂದ ಆರ್ಥಿಕ ಆದಾಯವು ದೊರೆಯಲಿದೆ. ಇದರಿಂದಲೇ ಹಗರಿಬೊಮ್ಮನ ಹಳ್ಳಿಯಲ್ಲಿ ಅಲಿಪುರದಲ್ಲಿ, ತುಂಗಭದ್ರಾ ಜಲಾಶಯ ಹಾಗೂ ನಾಗೇನಹಳ್ಳಿಯಲ್ಲಿ ಮರಿಮೀನು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ ಸಹಕಾರಿ ಮೀನುಗಾರಿಕಾ ಸಂಘಗಳಿವೆ. ಇಲ್ಲಿಯ ಮೀನುಗಳನ್ನು ದೂರದ ಊರಿಗೆ ರವಾನಿಸಲಾಗುತ್ತಿದೆ. ಮೀನು ಸಂಗ್ರಹಿಸಲು ಶೈತ್ಯಾಗಾರವೊಂದನ್ನು ಸ್ಥಾಪಿಸಲಾಗಿದೆ. ಮೀನುಗಾರಿಕಾ ಉದ್ಯಮದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅರ್ಥಿಕಾಭಿವೃದ್ಧಿಯಲ್ಲಿ ಬ್ಯಾಂಕ್, ವಿದ್ಯುತ್, ರೈಲುಸಂಪರ್ಕಗಳು ಪ್ರಮುಖವಾಗಿವೆ. ಇದಲ್ಲದೆ ಇಡೀ ಜಿಲ್ಲೆಯ ತಲಾ ಆದಾಯವು ಯಾವ ರೀತಿ ಅಧಿಕವಾಗುತ್ತಾ ಹೋಗಿದೆ ಎಂಬುದನ್ನು ಗಮನಿಸುವುದು ಸೂಕ್ತ.

ಬಳ್ಳಾರಿಯಲ್ಲಿ ವಾಣಿಜ್ಯ ಬ್ಯಾಂಕುಗಳೊಂದಿಗೆ ಕೃಷಿ ಕಾರ್ಮಿಕರ ಅನುಕೂಲಕ್ಕಾಗಿ ದೇಶೀಯ ಬ್ಯಾಂಕ್ ಎಂದು ಕರೆಸಿಕೊಳ್ಳುವ ಸಹಕಾರ ಬ್ಯಾಂಕುಗಳು ಆರಂಭವಾದವು. ಜಿಲ್ಲಾ ಸಹಕಾರ (ಕೋ-ಅಪರೇಟಿವ್) ಬ್ಯಾಂಕ್ ಜೊತೆಗೆ ಕೃಷಿ ಭೂ ಅಭಿವೃದ್ಧಿಬ್ಯಾಂಕನ್ನು ತೆರೆಯಲಾಯಿತು. ನಂತರ ಅನೇಕ ವಾಣಿಜ್ಯ ಬ್ಯಾಂಕುಗಳು ಉಗಮವಾದವು. ಇವುಗಳಿಗಿಂತ ಪೂರ್ವದಲ್ಲಿ ಹಣಕಾಸು ವ್ಯವಹಾರದಲ್ಲಿ ಸ್ಥಳೀಯ ಹಣಕಾಸಿನ ಪಾತ್ರ ಹಿರಿದಾದುದು. ೧೯೧೫ರಲ್ಲಿ ಪಟ್ಟಣ ಸಹಕಾರ ಬ್ಯಾಂಕ್, ೧೯೪೬ರಲ್ಲಿ ವೈಶ್ಯಬ್ಯಾಂಕ್ ಬಳ್ಳಾರಿಯಲ್ಲಿ ಮೊದಲು ಸ್ಥಾಪನೆಯಾಗಿ ನಂತರ ಬೇರೆಡೆ ತನ್ನ ಶಾಖೆಗಳನ್ನು ತೆರೆಯಿತು. ೧೯೫೩ರಲ್ಲಿ ಕೆನರಾಬ್ಯಾಂಕ್, ೧೯೫೭ರಲ್ಲಿ ಮೈಸೂರು ಬ್ಯಾಂಕ್ ೧೯೬೧ರಲ್ಲಿ ಇಂಡಿಯನ್ ಬ್ಯಾಂಕ್ ಸ್ಥಾಪಿತವಾದವು. ಇದರ ಶಾಖೆಗಳನ್ನು ಅನೇಕ ತಾಲ್ಲೂಕುಗಳಲ್ಲಿ ತೆರೆಯಲಾಯಿತು. ಇಡೀ ಜಿಲ್ಲೆಯಲ್ಲಿ ೧೪ ಸಿಂಡಿಕೇಟ್ ಬ್ಯಾಂಕ್, ೨ ಕೆನರಾ ಬ್ಯಾಂಕ್, ೧ ಇಂಡಿಯನ್ ಬ್ಯಾಂಕ್, ೨ ಕೇಂದ್ರಿಯ ಭಾರತೀಯ ಬ್ಯಾಂಕ್, ೧ ಬ್ಯಾಂಕ್ ಆಫ್ ಇಂಡಿಯಾ, ೧೦ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹಾಗೂ ૩ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ೪ ವೈಶ್ಯಬ್ಯಾಂಕ್‌ಗಳನ್ನು ಸ್ಥಾಪಿಸಲಾಯಿತು.

ವ್ಯಾಪಾರಾಭಿವೃದ್ಧಿಯಲ್ಲಿ ರೆಡಿಮೇಡ್ ಗಾರ್ಮೆಡ್ ಸಹ ಅನೇಕ ಜನರಿಗೆ ವಸತಿ ಕಲ್ಪಿಸುವುದರೊಂದಗೆ ಉದ್ಯೋಗವನ್ನು ಒದಗಿಸಿದೆ. ೧೯೬೮-೬೯ರಲ್ಲಿ ೮೦ ಯೂನಿಟ್ ರೆಡಿಮೇಡ್ ಗಾರ್ಮೆಟ್ ನ್ನು ૩೦ ಲಕ್ಷ ರೂ. ಖರ್ಚಿನಲ್ಲಿ ಸ್ಥಾಪಿಸಲಾಯಿತು. ಅಲ್ಲದೆ ರೈಲ್ವೆ ಇಲಾಖೆಯಲ್ಲಿ ರೈಲ್ವೆ ಕಾರ್ಮಿಕರು ಸಹ ತುಂಬಾ ಪ್ರಾಮುಖ್ಯತೆಯನ್ನು ಹೊಂದಿದ್ದಾರೆ. ವ್ಯಾಗನ್ ಗಳಲ್ಲಿ ಖನಿಜವನ್ನು ತುಂಬಿಸಲು ಇವರು ಅತ್ಯವಶ್ಯಕವಾಗಿ ಬೇಕಾಗುತ್ತಾರೆ. ೫ ವ್ಯಾಗನ್ ಕೇಂದ್ರಗಳನ್ನು ಜಿಲ್ಲೆಯಲ್ಲಿ ತೆರೆಯಲಾಗಿದ್ದು ಇದರಿಂದ ಸಾಕಷ್ಟು ಸಂಖ್ಯೆ ರೈಲ್ವೆ ಕೂಲಿಕಾರ್ಮಿಕರ ಜೀವನಕ್ಕೆ ಆಧಾರ ಒದಗಿಸಿದಂತಾಗಿದೆ. ೧೯೬೯-೭೦ರಲ್ಲಿ ರೈಲ್ವೆ ವ್ಯಾಗನ್ ಗಳಲ್ಲಿ ಕಾರ್ಮಿಕರು ಖನಿಜವನ್ನು ಲೋಡ್ ಮಾಡಿದ ವಿವರವನ್ನು ಅನುಬಂಧದಲ್ಲಿ ಅಂಕಿ ಅಂಶಗಳ ಪಟ್ಟಿಯನ್ನು ನೀಡಲಾಗಿದೆ.

ವಿದ್ಯುತ್

ತುಂಗಭದ್ರಾ ಯೋಜನೆಯಲ್ಲಿ ಇತರೆಡೆಯಿಂದ ತಯಾರಾಗಿ ಬರುವ ಉತ್ಪಾದನೆಯು ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ಮುನಿರಾಬಾದ್ ಜನರೇಟರ್ ನಿಂದ ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ,

ಮಲ್ಲಾಪುರ, ಸಿರುಗುಪ್ಪಗಳಿಗೆ ವಿದ್ಯುತ್ ಸರಬರಾಜು ಆಗುತ್ತಿದೆ. ತುಂಗಭದ್ರಾ ಡ್ಯಾಂ ಮತ್ತು ಹಂಪಿ ಪವರ್ ಹೌಸ್ ನಿಂದ ಉತ್ಪತ್ತಿಯಾದ ವಿದ್ಯುತ್ತಿನಲ್ಲಿ ಬಳ್ಳಾರಿ, ಸಂಡೂರು, ಹೊಸಪೇಟೆಗೆ ವಿದ್ಯುತ್ ಸರಬರಾಜು ಕಲ್ಪಿಸಲಾಗಿದೆ. ಇದರಿಂದ ಅತಿ ಹೆಚ್ಚು ಪಂಪ್ ಸೆಟ್ ಗಳನ್ನು ಹೊಂದಿರುವ ಕೂಡ್ಲಿಗಿಗೆ ಹೆಚ್ಚು ವಿದ್ಯುತ್ ನೀಡಲಾಗುತ್ತಿದೆ.

ವ್ಯಾಪಾರ ವಾಣಿಜ್ಯ ಮಳಿಗೆಗಳಲ್ಲಿ ರೈತರು ಬೆಳೆದ ಧವಸಧಾನ್ಯ, ಬಾಳೆಗೊನೆ, ಮತ್ತಿತರ ವಸ್ತುಗಳನ್ನು ತಂದು ಮಾರಾಟ ಮಾಡಿಕೊಂಡು ಹೋಗುತ್ತಾರೆ. ಇಲ್ಲಿ ಬಳ್ಳಾರಿ, ಹೊಸಪೇಟೆ, ಕೊಟ್ಟೂರು ಮುಖ್ಯ ವ್ಯಾಪಾರ ಕೇಂದ್ರಗಳಾಗಿವೆ. ಇವುಗಳಲ್ಲದೆ ಪ್ರತಿಯೊಂದು ಊರಿನಲ್ಲಿ ಪ್ರತಿವಾರಕ್ಕೊಂದು ಬಾರಿ ಸಂತೆಯ ಮೂಲಕ ದಿನನಿತ್ಯದ ಉಪಯೋಗಿ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಇಂತಹ ಮಳಿಗೆಗಳಲ್ಲಿ ದಲ್ಲಾಳಿಗಳದೇ ಪ್ರಮುಖ ಪಾತ್ರವಾಗಿರುತ್ತದೆ. ನಿಗದಿತದವರನ್ನು ರೈತನು ಪಡೆಯದೆ ಹೋದರೆ ರೈತನಿಗೆ ತುಂಬಾ ತೊಂದರೆಯಾಗುತ್ತದೆ. ಇದರಿಂದಲೇ ಸರಕಾರವು ರೈತನ ಬೆಳೆಗೆ, ತರಕಾರಿ ಇತರೆ ಸಾಮಾನುಗಳಿಗೆ ನಿರ್ದಿಷ್ಟ ದರವನ್ನು ನಿಗದಿಪಡಿಸಿದೆ. ಇವುಗಳಿಗೆ ಎ.ಪಿ.ಎಂ.ಸಿಗಳೆಂದು ಕರೆಯಲಾಗುತ್ತಿದೆ. ಇಂತಹ ಕೃಷಿ ಸಹಕಾರ ಪತ್ತಿನ ಸಂಘದಿಂದ ರೈತನಿಗೆ ಗೊಬ್ಬರ ಇಲ್ಲವೆ ಧಾನ್ಯ ಪಡೆಯಲು ಸಾಲಗಳನ್ನು ನೀಡುತ್ತದೆ.೧೯೬೯-೭೦ರಲ್ಲಿ ಬಳ್ಳಾರಿ ಜಿಲ್ಲೆಯ ಗ್ರಾಮ ಮತ್ತು ಪಟ್ಟಣಗಳ ತಲಾ ಆದಾಯದ ತಾಲೂಕುವಾರು ಅಂಕಿ-ಅಂಶಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇದರೊಂದಿಗೆ ಬೇರೆ ಬೇರೆ ವೃತ್ತಿಗಳನ್ನು ಅನುಸರಿಸುತ್ತಿರುವ ಜನವರ್ಗವಿದೆ. ಅವರಿಂದಲೂ ಅಲ್ಪಮಟ್ಟಿಗೆ ಆರ್ಥಿಕ ಬೆಳವಣಿಗೆಗೆ ಸಹಾಯವಾಗಲಿದೆ. ಅವರುಗಳಲ್ಲಿ ಸಮಾಜ ವಿಜ್ಞಾನಿಗಳು, ಶಿಕ್ಷಕರು, ಸಾಹಿತಿಗಳು, ಕಲಾವಿದರು ಅಲ್ಲದೆ ಜಾತಿಸೂಚಕವಾಗಿ ಬಳಸುತ್ತಿರುವ ಜನವರ್ಗಗಳಾದ ಅಗಸರು, ಕ್ಷೌರಿಕರು, ಮೀನುಗಾರರು, ನೇಕಾರರು, ಬೀಡಿಕಟ್ಟುವವರು, ದರ್ಜಿಯವರು, ಚಮ್ಮಾರರು, ಬಡಗಿಗಳು, ಕಲ್ಲುಕುಟಿಗರು, ಕಮ್ಮಾರರು, ಅಕ್ಕಸಾಲಿಗರು, ಕೂಲಿಕಾರರು ಇತ್ಯಾದಿ ಕರ್ಮಿಗಲು ಸಹ ಆಯಾ ಸ್ಥಳದಿಂದ ಆರ್ಥಿಕ ಅಭಿವೃದ್ಧಿಗೆ ನೆರವು ನೀಡುತ್ತಿದ್ದಾರೆ.

೨.೧೦. ಶಾಸನಗಳು

ಶಾಸನಗಳ ಆಧಾರದಿಂದಲೂ ಬಳಾರಿಯ ಬಳಕೆಯನ್ನು ಗಮನಿಸಬಹುದು. ಬಳ್ಳಾರಿ ಜಿಲ್ಲೆಯ ಕುರುಗೋಡಿನಲ್ಲಿ ದೊರೆತ ಕ್ರಿ.ಶ.೯೭೧ರಲ ಶಾಸನದಲ್ಲಿ ರಾಷ್ಟ್ರಕೂಟರ ದೊರೆ ಕೊಟ್ಟಿಗನು ಸ್ಕಂದನ

ಪ್ರತಿಷ್ಠಾಪನೆ ಮಾಡದನು ಎಂದಿದೆ. ಇದರಿಂದ ಈ ಭಾಗದಲ್ಲಿ ರಾಷ್ಟ್ರಕೂಟರ ಆಳ್ವಿಕೆಯಿತ್ತು ಎಂಬುದು ತಿಳಿಯುತ್ತದೆ. ಆದರೆ 'ಬಳಾರಿ'ಯ ಪ್ರಸ್ತಾಪವಿಲ್ಲ. ಆದರೆ ಸಿರಿವಾರದ ಕ್ರಿ.ಶ.೧೦೪೪ರ ಈಶ್ವರ ದೇವಾಲಯದ ಮುಂಭಾಗದ ಶಾಸನದಲ್ಲಿ ಈ ರೀತಿ ಉಲ್ಲೇಖವಿದೆ. "ಚಾಲುಕ್ಯ ದೊರೆಯ ಸಾಮಂತ ಪಲ್ಲವರಸನು ಕಪ್ಪಗಲ್ಲು ಗ್ರಾಮದಲ್ಲಿ ಮಹಾದೇವರಿಗೆ ಎಂಟು ಮತ್ತರು, ಮಠಕ್ಕೆ ಎಂಟು ಮತ್ತರು ಭೂಮಿಯನ್ನು ಜೇಷ್ಟರಾಶಿ ಭಳಾರಿಗೆ ಧಾರಾಪೂರ್ವಕವಾಗಿ ಕೊಟ್ಟರು ಎಂದಿದೆ. ಇದು ಮೊಟ್ಟ ಮೊದಲ ಭಳಾರಿ ಪದ ಬಳಕೆಯಾದ ಶಾಸನವಾಗಿದೆ. ಕ್ರಿ.ಶ.೧೧೦೦-೪೧ ರವರೆಗೆ ಆಳಿದ ವಿಷ್ಣುವರ್ಧನನ ವಸದಲ್ಲಿದ್ದ ಹೊಯ್ಸಳರ ದುರ್ಗಗಳಲ್ಲಿ ಬಳರಿ ದುರ್ಗವು ಒಂದಾಗಿತ್ತು ಎಂದು ತಿಳಿಯುತ್ತದೆ. ಇದರೊಂದಿಗೆ ಕ್ರಿ.ಶ.೧೧೩೧ರ ಚಾಳುಕಯ ದೊರೆ ತ್ರಿಭೂವನ ಮಲ್ಲದೇವನ ಕಾಲದ ಶಾಸನದಲ್ಲಿ ಬಳಾರಿಯ ಭೀಮರಸನಿಗೆ ಭೂದಾನ ನೀಡಲಾಗಿದೆ. ಎಂದಿದೆ. ನಂತರ ಕ್ರಿ.ಶ.೧೧೪೭ರ ಕೋಳೂರು ಸೂರ್ಯನಾರಾಯಣನ ಗುಡಿಯಲ್ಲಿರುವ ಶಾಸನದ ಉಲ್ಲೇಖದಂತೆ ಬಳ್ಳಾರಿ ೩೦ರ ಪೂಲೆಯರಿಗೆ ತೆರಿಗೆ ಬಿಟ್ಟದ್ದನ್ನು ತಿಳಿಸುತ್ತದೆ. (ದೇವರಕೊಂಡಾರೆಡ್ಡಿ) ನಂಥರ 'ಬಳ್ಳಾರಿಯ ದಾರಿ' (ಪಂಚಮುಖಿ ೧೯೭೭) ಎಂಬ ವಿವರಗಳು ಕಾಣಸಿಗುತ್ತದೆ. ಈಚೆಗೆ ನನ್ನ ಸಂಶೋಧನಾ ಕಾರ್ಯದಲ್ಲಿ ಅಪ್ರಕಟಿತ ಶಾಸನವೊಂದು ಕಾಕುಬಾಳು ಗ್ರಾಮದ ರಸ್ತೆಯ ಕಂಪಲೆಪ್ಪನ ತುಡ್ಡದಲ್ಲಿ ದೊರೆತ ಶಾಸನದಲ್ಲಿ ಬಳಾರಿಸೀಮೆ ಎಂದಿದೆ. ಇದು ಸುಮಾರು ೧೨-೧೩ನೇ ಶತಮಾನದ್ದಿರಬೇಕೆಂದು ತಿಳಿದುಬರುತ್ತದೆ. ಈ ಎಲ್ಲಾ ಶಾಸನಗಳಿಂದ ಬಳಾರಿ ಬಳರಿ, ಬಳ್ಳಾರಿ ಬಳಾರಿ ಸೀಮೆ ಎಂದಿದೆ ವಿನಹ ಬನದ ಬಳ್ಳಾರಿ ಎಂಬ ಉಲ್ಲೇಖವಿಲ್ಲ.

೨.೧೧. ಐತಿಹ್ಯಗಳು

ತುಂಗಭದ್ರಾತೀರದ ದಕ್ಷಿಣ ದಿಕ್ಕಿನ ಕುಂತಳವೆಂಬ ನಗರದಲ್ಲಿ ಚಂದ್ರಹಾಸನೆಂಬ ರಾಜನು ಆಳುತ್ತಿದ್ದನು. ಆಗ ಈ ಪ್ರದೇಶವೆಲ್ಲವೂ ಅರಣ್ಯವಾಗಿತ್ತು. ಆ ತರುವಾಯ ಈ ಸ್ಥಳದ ಗುಡ್ಡದ ಮೇಲೆ ಬಳಾಸುರನೆಂಬ ಒಬ್ಬ ರಾಕ್ಷಸನು ಆಶ್ರಯ ಮಾಡಿಕೊಂಡು ಜೀವಕೋಟಿಗಳಿಗೆ ಉಪಟಳ ನೀಡುತ್ತಿದ್ದನು. ಸ್ವರ್ಗದ ದೇವಕನ್ನಿಕೆಯರಿಗೂ ಉಪದ್ರವ ನೀಡತೊಡಗಿದನು. ಇದರಿಂದ ಬೇಸತ್ತ ದೇವಕನ್ನಿಕೆಯರು ದೇವೇಂದ್ರನಿಗೆ ಮೊರೆ ಹೋದರು. ಆಗ ಇಂದ್ರನು ಬಳಾಸುರನನ್ನು ವಧೆ ಮಾಡುವ ನಿಮಿತ್ತದಿಂದ ಭೂಲೋಕಕ್ಕೆ ಬಂದು ಬಳಾಸುರನ ಸಂಗಡ ಯುದ್ಧ ಮಾಡಿ ವಜ್ರಾಯುಧದಿಂದ ಅವನನ್ನು ಸಂಹರಿಸಿದನು. ಅಂದಿನಿಂದ ಈ ಗುಡ್ಡಕ್ಕೆ ಬಳ್ಳಾರಿಯೆಂಬ ಹೆಸರು ಬಂದಿತು. (ಕಲಬುರ್ಗಿ ಎಂ.ಎಂ.ಪು.೫೨೪; ೧೯೫೪) ಎಂದು ತಿಳಿಯುವುದು.

ದಂತಕಥೆ

ಶತದೊರೆಗೂ ಗುಪ್ತರಿಗೂ ನಡೆದ ಯುದ್ಧದಲ್ಲಿ ಗುಪ್ತರಿಗೆ ಜಯವಾಯಿತು. ಈ ಘಟನೆಯು 'ಅರಿಪುರ ಬೀಡಿನಲ್ಲಿ' ಜರುಗಿತ್ತು ಎಂದು ವಿಶಾಖದತ್ತನ ದೇವಿಚಂದ್ರಗುಪ್ತ ನಾಟಕದಿಂದ ತಿಳಿದುಬರುತ್ತದೆ. ಈ ಪ್ರಸಂಗವು ಬಾಣನ ಹಾಗೂ ಭೋಜನ ಕಾವ್ಯಗಳಲ್ಲಿ ಬಳಕೆಯಾಗಿದೆ. ಇದರಿಂದ ಬಾಣನ ಅರಿಪುರವೇ ಈಗಿರುವ ಬಳ್ಳಾರಿಯ ಜೈಲು ಇರುವ ಭಾಗವಾದ 'ಅಲಿಪುರ'ವಾಗಿದೆ. ಈ ಘಟನೆಯು ಕ್ರಿ.ಶ.೩೮೮ರಲ್ಲಿ ಜರುಗಿರಬೇಕೆಂದು ಈ ದಂತಕಥೆಯಿಂದ ತಿಳಿಯುತ್ತದೆ. ಇಲ್ಲಿ ಬಳ್ಳಾರಿಪುರ=ಬಳ್ಳಾರಿಪುರ - ಬಳಾರಿಪುರವು ಬಳಕೆಯಲ್ಲಿಪುರ ಮಾಯವಾಗಿ ಬಳ್ಳಾರಿಯಷ್ಟೆ ಉಳಿದುಕೊಂಡಂತೆ ಭಾಸವಾಗುತ್ತದೆ.

ಇನ್ನೊಂದು ಕಥೆಯ ಪ್ರಕಾರ ಬಲ್ಲಾಳನೆಂಬ ಪ್ರಸಿದ್ಧ ಶಿವಶರಣನಿದ್ದನು. ಅವನು ಸರ್ವಧರ್ಮ ಸಮನ್ವಯಿಯಿಗಿದ್ದನು. ಒಮ್ಮೆ ಬೇಟೆಯಾಡುತ್ತಾ ದುಷ್ಟ ಮೃಗಗಳನ್ನು ಕೊಂದು ಬಾಯಾರಿ ನೀರಿಗಾಗಿ ಅಲೆದಾಡುತ್ತಿರುವಾಗ ಬೆಟ್ಟದ ಮೇಲೆ ದೇವ ನಿರ್ಮಿತವಾದ ನಿರ್ಮಲೋದಕ ಸರಸ್ಸನ್ನು ಕಂಡು ತೃಷೆಯನ್ನು ಹೋಗಲಾಡಿಸಿದನು. ಸುಂದರವಾದ ತಾಣ ಕಂಡು ಬಲಗುಡ್ಡದವರೆಗೂ ಪಟ್ಟಣ ನಿರ್ಮಿಸಿ ಯೋಗ್ಯ ಸ್ಥಳವೆಂದು ಭಾವಿಸಿ ವಿಷ್ಣು ದೇವಾಲಯ, ಶಿವದೇವಾಲಯ ಹಾಗೂ ಬಸದಿಯನ್ನು ಕಟ್ಟಿಸಿದನು (ಪಂಚಮುಖಿ ಆರ್.ಎಸ್. ೧೯೬೭) ಎಂದು ತಿಳಿಯುತ್ತದೆ.

ಇದರಂತೆ ಇರುವ ಇನ್ನೊಂದು ಕತೆಯಿದೆ. ಅದೆಂದರೆ ಕೋಳೂರು ಅಗ್ರಹಾರದಲ್ಲಿರುವ ಬಳ್ಳೇಶಮಲ್ಲಯ್ಯನೆಂಬ ಶಿವಶರಣನಿದ್ದನು. ಅವನು ಹುಟ್ಟುಕುರುಡನಾಗಿದ್ದನು. ಭಕ್ತಿಯಿಂದ ಇಷ್ಟಲಿಂಗವಾದ ಮಲ್ಲೇಶನನ್ನು ಧ್ಯಾನಿಸುತ್ತಿದ್ದನು. ಈಶನನ್ನು ಕಣ್ಣಿನಿಂದ ನೋಡಬೇಕೆಂಬ ಆಸೆಯಾಯಿತು. ಶಿವನು ಈತನ ಭಕ್ತಿಗೆ ಮೆಚ್ಚಿ ಬಳ್ಳದಲ್ಲಿ ತನ್ನ ನಿಜರೂಪ ತೋರಿಸಿದನಂತೆ. ಅಂದಿನಿಂದ ಮಲ್ಲೇಶ್ವರ ಎಂಬ ಅಭಿದಾನದಿಂದ ನೆಲೆಯೂರಿದನು. ಈಗಲೂ ಬಳ್ಳಾರಿಯ ಕೋಟೆಯಿರುವ ಸ್ಥಳದಲ್ಲಿ ಮಲ್ಲೇಶ ದೇವಾಲಯವಿದೆ. ಇದು ತುಂಬಾ ಪುರಾತನವಾದುದಾಗಿದೆ. ಇದಕ್ಕೆ ಸಾಮ್ಯತೆಯಿರುವ ಬಳ್ಳೇಶನೆಂಬ ಶರಣನಿದ್ದನು. ಆತನು ಶಿವನಪೂಜೆ ಮಾಡಿದನಂತರವೇ ಊಟ ಮಾಡುತ್ತಿದ್ದನು. ಒಮ್ಮೆ ಪೂಜೆ ಮಾಡಲು ಹೊರಟಾಗ ಕಿಡಿಗೇಡಿಗಳು ಶಿವಲಿಂಗವನ್ನು ಒಯ್ದು ಆ ಸ್ಥಳದಲ್ಲಿ ಬಳ್ಳವನ್ನು ಇರಿಸುವರು. ಆ ಬಳ್ಳವನ್ನೇ ಶಿವನ ಲಿಂಗವೆಂದು ಭಾವಿಸಿ ಪೂಜೆ ಮಾಡಿದ ಭಕ್ತಿಗೆ ಶಿವನು ಪ್ರತ್ಯಕ್ಷನಾದನಂತೆ ಅಂದಿನಿಂದಲೇ ಈ ಬಳ್ಳೇಶನಿಂದಲೇ ಬಳ್ಳಾರಿ ಎಂಬುದು ಬಳಕೆಯಾಗಿರಬೇಕೆಂದು ತಿಳಿಯುತ್ತದೆ.

ಬಳರಿಯ (ದುರ್ಗಾದೇವಾಲಯದ) ಅಚರಕರು ಗಾಣಿಗೆ ಮನೆತನದವರೇ ಆಗಿದ್ದಾರೆ. ಅವರ ಪ್ರಕಾರ ಅವರ ಪೂರ್ವಜರಲ್ಲಿ ಒಬ್ಬ ವ್ಯಕ್ತಿಗೆ ಕನಸಿನಲ್ಲಿ ಬಳರಿ ದೇವತೆ ಬಂದು ತಾನು ಊರಹೊರಗಿನ ಬನದಲ್ಲಿ ನೆಲೆ ನಿಂತಿರುವೆ ಎಂದು ತಿಳಿಸಿದಳಂತೆ. ಒಮ್ಮೆ ಆ ಮೂಲ ಪುರುಷನಿಗೆ ದರ್ಶನ ನೀಡಿ ಆ ಗುಡ್ಡದಿಂದ ಜಿಗಿದು ಈಗಿರುವ ಸ್ಥಳದಲ್ಲಿ ಮಾಯವಾದಳಂತೆ. ಇದರಂತೆ ಒಬ್ಬ ಮುದುಕಿಯು ಅಸಹ್ಯವಾಗಿದ್ದು ತಲೆಕೂದಲು ಕೆದರಿಕೊಂಡು ಮರದ ಕೆಳಗೆ ಕುಳಿತಿರುತ್ತಾಳೆ. ಇದನ್ನು ಗಮನಿಸಿದ ಜನತೆ ತುಚ್ಛವಾಗಿ ಬಯ್ಯುತ್ತಾರೆ. ಅರ್ಚಕರಿಗೆ ಸಂಬಂಧಿಸಿದ ವ್ಯಕ್ತಿಯೊಬ್ಬನನ್ನು ಕರೆದ ಮುದುಕಿ ತಲೆಯಲಿದ್ದ ಹೇನನ್ನು ತೆಗೆಯಬೇಕೆಂದು ಸೂಚಿಸಿದಳಂತೆ. ಆಗ ಆ ವ್ಯಕ್ತಿ ಬಂದು ತಲೆಗೆ ಕೈ ಹಾಕಿ ಬಗಿಯುವಾಗ ಕೂದಲಲ್ಲಿ ಕಣ್ಣು ಕಂಕಣ ನೋಡಿ ಬೆಚ್ಚಿ ಬೀಳುವಳು. ಅನಂತರ ರಾತ್ರಿ ವೇಳೆಯಲ್ಲಿ ಮಾದಿಗನ ಜೊತೆಯಲ್ಲಿ ಮಲಗಿ ಅವನ ಹೊಟ್ಟೆ ಬಗೆದು ರಕ್ತ ಕುಡಿದು ಅಲ್ಲಿಂದ ಹೊರಬರುತ್ತಾಳೆ. ಪೂರ್ವಕ್ಕೆ ಮುಖಮಾಡಿ ಹೊರಟಿರುವ ಬಳರಿಗೆ ಬಳೆ ಮಾರುವವನು ಎದುರಾಗುತ್ತಾನೆ. ಆತನಿಂದ ಬಳೆಹಾಕಿಸಿಕೊಂಡು ಪೂರ್ವದಿಕ್ಕಿಗೆ ಮುಖ ಮಾಡಿ ಹೊರಟು ಹೋದಳು. ಇದರಿಂದಲೇ ಬಳ್ಳಾರಿ ದುರ್ಗಮ್ಮನ ಗುಡಿಯಲ್ಲಿ ಬಳರಿ ದೇವತೆಯ ಬೆನ್ನಿಗೆ ಪೂಜೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ. ಇಲ್ಲಿ ಮಾದಿಗನನ್ನು ಕೊಂದ ಸಂಕೇತದಿಂದಲೇ ದುರ್ಗಿಯ ಶಿಲ್ಪದಲ್ಲಿ ಕಾಲಿನ ಬಳಿಗೂಗೆಯ ಚಿತ್ರದ ಬಗ್ಗೆ ಶೋದನೆ ಆಗಬೇಕು ಎಂದಿದ್ದಾರೆ. ಗೂಬೆಯು ಸಾವಿನ ಸುದ್ದಿಯನ್ನು ತರುವ ಪಕ್ಷಿ ಎಂಬ ನಂಬಿಕೆ ಜನರಲ್ಲಿದೆ. ಅದು ಬಂದು ನಾಡೋಳಗೆ ಅರಚಿಕೊಂಡ ಕೆಲವು ದಿನಗಳಲ್ಲೆ ಯಾರಾದರೂ ಸಾಯುವರೆಂಬ ಅಚಲ ನಂಬಿಕೆಯಿದೆ.

ಅಲ್ಲದೆ ಇಲ್ಲಿ ದುರ್ಗೆ(ಬಳರಿಯು) ಸಾವನ್ನು ತರುವ ದೇವತೆಯಾಗಿದ್ದರಿಂದಲೂ ಅವಳ ಪಕ್ಕಕ್ಕೆ ಗೂಗೆ ಇದೆ ಎನಿಸುತ್ತದೆ. ಈ ಕಥೆಗೆ ಹೊಂದಿಕೊಂಡಿರುವಂತೆ ತಿಂದಪ್ಪ ಎಂಬುವರು ತಿಳಿಸಿದಂತೆ 'ಬಳರಿ' (ಬಳ್ಳಾರಿ ದುರ್ಗಮ್ಮ) ಗುಡಿಯಲ್ಲಿ ಪೂಜೆಗಾಗಿ ಬಂದ ಭಕ್ತರಲ್ಲಿ ಒಬ್ಬ ಬಾಲಕನನ್ನು ಆಹಾರವಾಗಿ ಸೇವಿಸುತ್ತಿರುವುದನ್ನು ಎದುರಿಗಿರುವ ಮಲ್ಲೇಶದೇವನು ಗಮನಿಸಿ ನೀನು ಹೀಗೆ ದಿನಾಲು ಬಂದ ಭಕ್ತರನ್ನು ಕೊಲ್ಲುತ್ತಾ ಹೋದರೆ ಜನಸಂಖ್ಯೆ ಬೆಳೆಯಲಾರದು ಎಂದು ಕೇಳಿದ್ದಕ್ಕೆ ಮಲ್ಲೇಶನಿಗೆ ಕಾಣಿಸದಂತೆ ಪೂವರಕ್ಕೆ ಮುಖಮಾಡಿ ಬಾಲಕನನ್ನು ತಿನ್ನಲು ತೊಡಗಿದಳಂತೆ. ಅಂದಿನಿಂದಲೇ ದುರ್ಗೆಯ (ಬಳರಿ ದೇವತೆಗೆ) ಬೆನ್ನಿಗೆ, ಹುತ್ತಿಗೆ ಪುಜೆ ಮಾಡುತ್ತಿರುವುದನ್ನು ಗಮನಿಸಬಹುದು. ಅಲ್ಲದೆ ಬಳರಿಯ ಉಗ್ರಸ್ವರೂಪದವಳೆಂದು ಅವಳನ್ನು ಮಾನವರು ನೋಡಿದರೆ ಭೀತಿಗೊಳಗಾಗುವರೆಂದು ಅರ್ಚಕರು ಮೊದಲು ಪೂಜೆಯನ್ನು ಪರದೆ ಮುಚ್ಚಿಕೊಂಡು ಪೂಜಿಸುವರು ಎಂದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಇವೆಲ್ಲಾ ಆಧಾರಗಳನ್ನು ಅವಲೋಕಿಸುವುದಾದರೆ 'ಬನದ ಬಳಾರಿ' ಎಂಬುದು ಕಾವ್ಯದಲ್ಲಿ ಹಾಗೂ ನಮ್ಮ ಅತ್ತೆಯವರಾದ ಹುಲಿಗೆಮ್ಮ ಹೇಳಿದ ಜನಪದ ಗೀತೆಯಲ್ಲಿ ಬಳಕೆಗೊಂಡಿರುವುದರಿಂದ ಹೀಗಿರುವ 'ಬಳ್ಳಾರಿ ದುರ್ಗಮ್ಮ' ಬನದೇವತೆಯಾಗಿರಬೇಕೆನಿಸುತ್ತದೆ. ಇದಕ್ಕೆ ಹೊಂದಿಕೊಂಡಂತ ಕಥೆಗಳಲ್ಲಿ ಐತಿಹ್ಯಗಳಲ್ಲೂ ಇದೇ ಅಂಶವಿದ. ಆದರೆ ಯಾವುದೇ ಶಾಸನಗಳಲ್ಲಿ 'ಬನದ ಬಳಾರಿ' ಎಂಬ ಉಲ್ಲೇಖವಿಲ್ಲದಿರುವುದು ಕುತೂಹಲಕರವಾಗಿದೆ. ಒಟ್ಟಿನಲ್ಲಿ ಇಲ್ಲಿ ಬಳ್ಳಾರಿಯ ಮೂಲ ಬಳರಿ ಎಂಬ ದೇವತಾ ಸೂಚಕವಾಗಿಯೇ ಬಳಸಲ್ಪಟ್ಟಿರಬೇಕೆಂಬುದು ಸತ್ಯಕ್ಕೆ ಹತ್ತಿರವಾಗಿದೆ.

ಈ ಎಲ್ಲಾ ಅಂಶಗಳಿಂದಲೂ ಸಾಂಸ್ಕೃತಿಕ ಮಹತ್ವವನ್ನು ಪಡೆದಿರುವ ಬಳ್ಳಾರಿ ಜಿಲ್ಲೆಯು ಭೌಗೋಳಿಕವಾಗಿ ಚಾರಿತ್ರಿಕವಾಗಿ, ಪೌರಾಣಿಕವಾಗಿಕ ಸಾಮಾಜಿಕವಾಗಿ, ರಾಜಕೀಯವಾಗಿ, ನೈಸರ್ಗಿಕವಾಗಿ ಮತ್ತು ಆರ್ಥಿಕವಾಗಿಯೂ ಅನನ್ಯವಾಗಿದೆ. ಅಲ್ಲದೆ ಸಾಕಷ್ಟು ವೈಶಿಷ್ಟ್ಯಗಳನ್ನು ಹೊಂದಿದೆ. ಕರ್ನಾಟಕ ಸಂಸ್ಕೃತಿಗೆ ಪೂರಕವಾದ, ಪ್ರಸಿದ್ಧ ಐತಿಹಾಸಿಕ ಸ್ಥಳಗಳು ಇಲ್ಲಿ ಕಂಡುಬರುತ್ತವೆ. ಈ ವಿಶಿಷ್ಟತೆಯೇ ರಾಜ್ಯಮಟ್ಟದಲ್ಲಿ ಬಳ್ಳಾರಿಯು ತನ್ನದೇ ಆದ ಸ್ಥಾನಮಾನವನ್ನು ಹೊಂದಿದೆ.

ಅಧ್ಯಾಯ ೩

ಜನಪದ ವೈದ್ಯ ಪರಂಪರೆ

೩

ಜನಪದ ವೈದ್ಯ ಪರಂಪರೆ

ವೈದ್ಯ ಪದ್ಧತಿ ಇಂದಿನದೂ ಇವತ್ತಿನದೂ, ಇತ್ತೀಚಿನದೂ ಅಲ್ಲ. ಈ ಹೊತ್ತಿನ ಆಧುನಿಕ ವೈದ್ಯ ಪದ್ಧತಿ ಅಸ್ತಿತ್ವಕ್ಕೆ ಬರುವ ಮೊದಲೇ ಇತ್ತು. ಸಾವಿರಾರು ವರ್ಷಗಳಿಂದಲೂ ಜನಪದರ ಬೆನ್ನಿನೊಂದಿಗೆ ಬೆಸೆದುಕೊಂಡು ಬಂದಿದೆ. ನಮ್ಮ ಭಾರತದಲ್ಲೇ ಅಲ್ಲದೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಬೇರೂರಿದೆ. ಜಗತ್ತಿನಾದ್ಯಂತ ವೈದ್ಯ ಪದ್ಧತಿಯನ್ನು ಅನುಸರಿಸದ ಜನಪದರು ಇಲ್ಲವೆನ್ನಬಹುದು. ಈ ಮಾತು ಒಂದು ಸತ್ಯಕ್ಕೆ ಹತ್ತಿರವಾಗಿದೆ. ನಮ್ಮ ಜನಪದರ ಬದುಕು ಹೊಸ ಹಾದಿಯತ್ತ ಮುನ್ನುಗ್ಗುತ್ತಿದೆ. ಇದಕ್ಕೆ ಬೇರೆ ಬೇರೆ ಕಾರಣಗಳೂ ಇವೆ. ಹೀಗೆ ರಭಸದಿಂದ ಮುನ್ನಡೆಯುವ ಹೊತ್ತಿನಲ್ಲಿ ಹಳೆಯದನ್ನು ತೀರಾ ಬಿಡಬೇಕೇ ಇಲ್ಲ ಅತಿಯಾಗಿ ಕಟ್ಟು ಬೀಳದೇ ವಿವೇಚಿಸಿ ಸ್ವೀಕರಿಸಬೇಕೇ? ಅಲ್ಲದೇ ಜೊತೆಗೆ ತಿಳಿದವರು ಹೇಳುತ್ತಾರೆ ಎಂದು ಹೇಳಿದ್ದನ್ನೆಲ್ಲಾ ಒಪ್ಪಿಕೊಂಡರೆ ಒಳ್ಳೆಯದೋ, ಅಥವಾ ಹಳೆತನದಲ್ಲಿರುವ ಮೌಲ್ಯವನ್ನ ಸ್ವೀಕರಿಸಿ ಹೊಸ ಮಾದರಿಗೆ ಒಗ್ಗಿಕೊಳ್ಳುವುದು ಸೂಕ್ತವೇ. ಈ ಎಲ್ಲಾ ಸವಾಲುಗಳನ್ನು ಗಮನದಲ್ಲಿರಿಸಿಕೊಂಡು ಅಧ್ಯಯನಕ್ಕೆ ಇಂಬು ಕೊಡಲಾಗಿದೆ.

ಆರಂಭದಲ್ಲಿ ಎರಡು ಕಾಲಿನ ಮನುಷ್ಯ ಕಾಡಿನಲ್ಲಿ ವಾಸಿಸುತ್ತಿದ್ದ. ತನ್ನದೇ ಆದ ವೈದ್ಯ ಪದ್ಧತಿಯನ್ನು ರೂಢಿಸಿಕೊಂಡಿದ್ದ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಲೆಯುತ್ತಿದ್ದ. ಇದು ಅವನಿಗೆ ಅನಿವಾರ್ಯವೂ ಕೂಡಾ ಆಗಿತ್ತು. ಇದಕ್ಕೆ ಅವನ ಸಹಜ ಪ್ರವೃತ್ತಿಗಳಾದ ಹಸಿವು, ಆಯಾಸ, ತೃಪ್ತಿಪಡಿಸಿಕೊಳ್ಳಲು ವಿಶ್ರಾಂತಿಯನ್ನು ಬಯಸಿದ. ಇವುಗಳ ಜೊತೆಗೆ ಮನಸ್ಸು ಹಾಗೂ ದೇಹದ ರೋಗ ರುಜಿನುಗಳನ್ನು ವಾಸಿ ಮಾಡಿಕೊಳ್ಳಲು ವೈದ್ಯ ಪದ್ಧತಿ ಮೊರೆ ಹೊಕ್ಕಿದ. ಕಾಡಿನಲ್ಲಿ ವಾಸಿಸುತ್ತಿದ್ದ ಮನುಷ್ಯನಿಗೆ ಪ್ರಕೃತಿಯೇ ಆರಾಧ್ಯ ದೈವ, ಅಲ್ಲಿಯೇ ಕೈಗೆ ಸಿಕ್ಕ ಎಲೆ, ಚಿಗುರು, ತೊಗಟೆ, ಹಂಬು, ಕಾಂಡ ಇನ್ನಿತರ ವಸ್ತುಗಳನ್ನು ಬಳಸುವಲ್ಲಿ ಮುಂದಾದ. ಒಮ್ಮೊಮ್ಮೆ ಆಹಾರದ ಪರದಾಟಕ್ಕೆ ಪರದಾಡುತ್ತಿದ್ದಾಗ, ಬಿದ್ದೋ ಅಥವಾ ಕೈಕಾಲು ತಲೆ ಒಡೆದೋ ಪರಚಿಕೊಂಡೋ ಇನ್ನೂ ಅನೇಕ

ತೊಂದರೆಗೆ ಸಿಲುಕಿಕೊಳ್ಳುತ್ತಿದ್ದ. ಆಗ ಅವನು ಪ್ರಕೃತಿಯ ವಸ್ತುಗಳನ್ನು ಅಂತಹ ಗಾಯಗಳಿಗೆ ಉಪಯೋಗ ಮಾಡುತ್ತಿದ್ದ. ಒಂದು ವಸ್ತುವಿನಿಂದ ಸಾಧ್ಯವಾಗುವುದಿಲ್ಲವೆಂದೂ ಅರಿವಾದಾಗ ಇನ್ನೊಂದನ್ನು ಬಳಸುತ್ತಿದ್ದ. ಅದರಲ್ಲಿ ಗುಣವಾಯಿತು ಎಂದು ತಿಳಿದು ಅಂತಹವುಗಳನ್ನು ನೆನಪಿನಲ್ಲಿಟ್ಟುಕೊಂಡು ಬಳಸುತ್ತಾ ಬಂದ. ಅವೇ ಜಾನಪದ ವೈದ್ಯರಾಗಿ ರೂಪ ಪಡೆಯಿತು. ಕ್ರಮೇಣ ಒಂಟಿಯಾಗಿ, ನಂತರ ಗುಂಪುಗಳಲ್ಲಿ ಹಾಗೇ ಮುಂದುವರಿದು ಸಮಾಜವಾಗಿ ನಂತರ ಅದರೊಳಗೆ ಅನೇಕ ಕುಟುಂಬಗಳಾಗಿ ಪಡೆ ಒಡೆದವು. ಕೆಲವು ಕುಟುಂಬಗಳಲ್ಲಿ ಪಾರಂಪರಿಕವಾಗಿ ವೈದ್ಯ ಪದ್ಧತಿಯನ್ನು ರೂಢಿಸಿಕೊಂಡು ಇಂದಿಗೂ ಮುಂದುವರೆಯುತ್ತಿದ್ದಾನೆ.

ಮಾನವ ಮಾತ್ರ ವೈದ್ಯ ಪದ್ಧತಿಯನ್ನು ರೂಢಿಸಿಕೊಂಡು ಬಂದನೋ? ಇಲ್ಲಾ ಅವನಿಗೆ ನೋವು, ರೋಗ ರುಜಿನುಗಳು ಬಂದಂತೆ ಪ್ರಾಣಿಗಳೂ ಕೂಡ ನರಳುತ್ತಿದ್ದವು. ಅವುಗಳಿಂದ ಉಪಯೋಗ ಪಡೆಯುತ್ತಿದ್ದ ಮನುಷ್ಯರಿಗೆ ಕರುಣೆ, ದಯೆ, ಪ್ರೀತಿ ಉಂಟಾಗಿ ಅವುಗಳಿಗೂ ಕೂಡ ಕಾಡಿನಲ್ಲಿ ಸಿಕ್ಕುವ ವಸ್ತುಗಳಿಂದ ಔಷಧವನ್ನು ನೀಡುವ ಪದ್ಧತಿಯನ್ನು ರೂಢಿಸಿಕೊಂಡು ಇಂದಿಗೂ ಮುಂದುವರೆಸಿಕೊಂಡು ಬಂದಿರುತ್ತಾನೆ. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡು ಈ ಅಧ್ಯಯನಕ್ಕೆ ಅಳವಡಿಸಲಾಗಿದೆ.

ಮಾನವನ ಸಹಜ ಪ್ರವೃತ್ತಿಗಳಾದ ಹಸಿವು ಆಯಾಸಗಳನ್ನು ನೀಗಿಸಿಕೊಳ್ಳಲು ಆಹಾರ ಮತ್ತು ವಿಶ್ರಾಂತಿ ಮುಖ್ಯ ಆದುದರಿಂದ ದೇಹ ಮತ್ತು ಮನಸ್ಸಿನ ನೋವು ಹಾಗೂ ರೋಗ ರುಜಿನುಗಳನ್ನು ನಿವಾರಿಸಿಕೊಳ್ಳಲು ವೈದ್ಯೋಪಚಾರ ಅವಶ್ಯಕ. ವೈದ್ಯೋಪಚಾರಗಳಲ್ಲಿ ಅಲೋಪತಿ, ಹೋಮಿಯೋಪತಿ, ಆಯುರ್ವೇದ, ಪ್ರಕೃತಿ ಚಿಕಿತ್ಸೆ ಇನ್ನೂ ಹಲವು ಪ್ರಕಾರಗಳಲ್ಲಿ ಜನಪದ ವೈದ್ಯವು ಕೂಡ ಒಂದು. ಈ ವೈದ್ಯ ಪದ್ಧತಿಯನ್ನು ಹಳ್ಳಿಯ ವೈದ್ಯ, ನಾಟಿ ವೈದ್ಯ, ನಾಡ ವೈದ್ಯ, ಮನೆ ಮದ್ದು, ನಾಡ ಮದ್ದು, ಕೈ ಔಷಧ, ಹಿತ್ತಲ ಮದ್ದು, ಅಜ್ಜಿ ಮದ್ದು ಮೊದಲಾದ ಹೆಸರುಗಳಿಂದ ಕರೆಯುವುದು ರೂಢಿಯಲ್ಲಿದೆ. ಭೂಮಿಯ ಮೇಲೆ ಜೀವ-ಜಂತುಗಳು ಉಗಮವಾಗುತ್ತಿದ್ದಂತೆಯೇ ರೋಗ ರುಜಿನುಗಳು ಅವುಗಳ ಬೆನ್ನು ಹತ್ತಿವೆ. ಅವುಗಳ ನಿವಾರಣೆಗಾಗಿ ಈ ತರಹದ ಚಿಕಿತ್ಸಕ ವಿಧಾನಗಳನ್ನು ಕಂಡುಕೊಂಡಿದ್ದಾನೆ. (ವೈದ್ಯ ಪದ್ಧತಿಯು ಹೇಗೆ ಹುಟ್ಟಿತು, ಅವುಗಳ ಪ್ರಯತ್ನದಲ್ಲಿ ಮಾನವನ ಪ್ರತಿಕ್ರಿಯೆ ಏನು? ಎನ್ನುವುದನ್ನು ಸ್ವರೂಪ ಮತ್ತು ಲಕ್ಷಣಗಳಲ್ಲಿ ಚರ್ಚಿಸಲಾಗಿದೆ. ಅಂದು ಕಂಡುಕೊಂಡಿರುವ ವೈದ್ಯ ಪದ್ಧತಿಯನ್ನು ಇವತ್ತಿನವರೆಗೆ ಪ್ರಜ್ಞಾಪೂರ್ವಕವಾಗಿಯೂ ಅಥವಾ ಅಪ್ರಜ್ಞಾಪೂರ್ವಕವಾಗಿಯೂ ತೊಂಡಿ ಸಂಪ್ರದಾಯದ ಮೂಲಕ ಜೀವಂತವಾಗಿ ಹರಿದು ಬಂದಿದೆ. ಇಂತಹ ಒಂದು ವೈದ್ಯಕ್ಕೆ ಪರಂಪರೆಯನ್ನು ಗುರುತಿಸುವುದಕ್ಕೆ

ನಮ್ಮ ಜನಪದ ವಾಕ್ ಪರಂಪರೆಯು ಆಧಾರ ಸ್ತಂಭವಾಗಿ ಗಟ್ಟಿಗೊಳಿಸಲಾರದು. ಈ ಆಧಾರಕ್ಕೆ ಗಟ್ಟಿತನವನ್ನು ನೀಡಬೇಕಾದರೆ ನಾವು ಮನುಕುಲದ ಪ್ರಾರಂಭಕ್ಕೆ ಶರಣು ಹೋಗಬೇಕು. ಈ ಮನುಕುಲದ ಮೂಲದಲ್ಲಿ ವೈದ್ಯವನ್ನು ಗುರುತಿಸಬೇಕಾದರೆ ಸಾಹಿತ್ಯಕ ಮೂಲಗಳನ್ನು ಗಮನಿಸಬೇಕು. ಸಾಹಿತ್ಯಕ ಆಧಾರಗಳು ದೊರಕುತ್ತವಾದರೂ ಅವರ ಬೆಳವಣಿಗೆಗೆ ನಮ್ಮ ಜನಪದವೇ ಪ್ರೇರಣೆ ಎನ್ನುವುದು ನಿಸ್ಸಂದೇಹ.

ಕ್ರಿಸ್ತಪೂರ್ವ ೫೦೦೦ ವರ್ಷಗಳಿಗಿಂತಲೂ ಹಿಂದೆ ಜನಪದ ವೈದ್ಯ ಪದ್ಧತಿ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂಬುದಕ್ಕೆ ಹಲವು ಪುರಾವೆಗಳಿವೆ. ಆಗಲೇ ಈಗಿರುವಂತಹ ಹಲವು ವೈದ್ಯಕೀಯದ ಪ್ರತ್ಯೇಕ ವಿಭಾಗಗಳು ಆಗಲೇ ಇದ್ದವು. 'ಶಲ್ಯ' (ಶಸ್ತ್ರ-ಚಿಕಿತ್ಸಕ Surgeon) "ಬಿಷಕ್ ವೈದ್ಯ" (ಔಷಧ-ಚಿಕಿತ್ಸಕ Physician) ಮತ್ತು "ಬಿಷಕ್ ಅರ್ಥಯಡ್ ವೈದ್ಯ" (ತಾಂತ್ರಿಕ-ಮಾಂತ್ರಿಕ ವೈದ್ಯ)ವೆಂಬ ಪ್ರತ್ಯೇಕ ಭಾಗಗಳು ಮತ್ತು ಪ್ರತ್ಯೇಕ ಕಸುಬುದಾರರು, ಉಪಿಕರಣಗಳು ಇದ್ದವೆನ್ನುವುದಕ್ಕೆ ಮಾಹಿತಿಗಳಿವೆ. ಗಾಯಗಳಿಗೆ ನಂಜುಂಟಾಗದಿರಲು(Septic) ಕೆಲವು ವಿಶಿಷ್ಟ ಕ್ರಮಗಳನ್ನನುಸರಿಸುತ್ತಿದ್ದರೆಂಬ ಅಂದಾಜಿದೆ. ನೋವಿನ ಉಪಶಮನಕ್ಕೆ ಮದ್ದುಗಳ ಬಳಕೆಯಾಗುತ್ತಿದ್ದ ಸೂಚನೆಗಳಿವೆ. ವಿಕಾರಗೊಂಡ ಅಂಗಾಂಗಗಳನ್ನು ಸರಿಪಡಿಸಲು ಈಗಲೂ ಜರುಗುತ್ತಿರುವ (Plasty) ಪ್ಲಾಸ್ಟಿ ಪದ್ಧತಿ ರೂಢಿಯಲ್ಲಿತ್ತು.

ಪ್ರಾಚೀನ ಕಾಲದಿಂದಲೂ ರೂಢಿಗತವಾಗಿದ್ದಂತಹ ಭಾರತೀಯ ವೈದ್ಯ ಪದ್ಧತಿಯನ್ನು ಕ್ರಿಸ್ತ ಪೂರ್ವ ನಾಲ್ಕನೇ ಶತಮಾನದಲ್ಲಿ ದಂಡೆತ್ತಿ ಬಂದಿದ್ದ ಅಲೆಕ್ಸಾಂಡರನ ಸಂಪರ್ಕದಿಂದ ಗ್ರೀಕರು ನಮ್ಮ ವೈದ್ಯ ಪದ್ಧತಿಯ ಲಾಭ ಪಡೆದುಕೊಂಡರು ಮತ್ತು ಮುಂದೆ ಅರಬ್ಬರ ಸಂಪರ್ಕದಿಂದ ಅದು ಇಸ್ಲಾಮಿಕ್ ವೈದ್ಯ ಪದ್ಧತಿಯೊಡನೆ ಬೆರೆತು ಹೋಯಿತು ಮುಂದೆ ಬಂದಂತಹ ಆಂಗ್ಲ ಅಧಿಕಾರಿಗಳು "Modern Scientific Medicine"ನ್ನು ರೂಡಿಗೆ ತಂದು ದೇಶೀಯ ಪ್ರಾಚೀನ ವೈದ್ಯ ಪದ್ಧತಿಯನ್ನು ಅಲ್ಲಗಳೆದರು ಎನ್ನುವುದಕ್ಕೆ ಹಲವು ರಿತಿಯ ಆಧಾರಗಳು ದೊರೆಯುತ್ತವೆ.

"ಮಾತೃ ರೂಪವಾದ ಎಲ್ಲೈ ಔಷಧಿಗಳೇ
ನಿಮ್ಮ ಜನ್ಮ ಸ್ಥಾನಗಳು ಅಪರಿಮಿತವಾಗಿವೆ
ನಿಮ್ಮ ಬೆಳವಣಿಗೆಯಾ ಅತ್ಯಧಿಕವಾಗಿರುತ್ತದೆ.
ನಾನಾ ಕರ್ಮಗಳಲ್ಲಿ ಉಪಯೋಗಿಸಲ್ಪಡುವ ಎಲ್ಲೈ ಔಷಧಿಗಳೇ
ನೀವು ನನ್ನ ಪುತ್ರಾದಿ ಜನರನ್ನು ರೋಗ ರಹಿತವಾಗುವಂತೆ ಮಾಡಿರಿ"
(ಋಗ್ವೇದ - ೧೦೯೭.೨ ನೇ ಶ್ಲೋಕ)

ಎನ್ನುವ ವೇದಗಳಲ್ಲಿನ (ಋಗ್ವೇದ) ಸಾಲುಗಳು ನಮ್ಮ ವೈದ್ಯ ಪದ್ಧತಿ ಪ್ರಾಚೀನತೆಯನ್ನು ಎತ್ತಿ ಹಿಡಿಯುತ್ತವೆ. ಇದು ಸಾಹಿತ್ಯಕವಾಗಿ ದೊರೆಯುವ ಮೊತ್ತ ಮೊದಲ ಆಧಾರ ಎಂಬಂತೆ ಕಂಡುಬರುತ್ತವೆ. ಕ್ರಿಸ್ತ ಪೂರ್ವ ೩ನೇ ಶತಮಾನದ ಅಶೋಕನ ಎರಡನೇ ಶಾಸನ, ಈ ಒಂದು ಶಾಸನದಲ್ಲಿ ವೈದ್ಯ ಬಗೆಗೆ ಇರುವಂತಹ ವಿವರಗಳು ಕಂಡುಬರುವುದಿಲ್ಲವಾದರೂ ಜನರಿಗೆ ಹಾಗೂ ಪಶುಗಳಿಗೆ ಔಷಧಿಗಳಿಗಾಗಿ ಉಪಯೋಗಕ್ಕೆ ಬರುವಂತಹ ವಿವಿಧ ರೀತಿಯ ಗಿಡ ಮೂಲಿಕೆಗಳನ್ನು ದೇಶ ವಿದೇಶಗಳಿಂದ ತರಿಸಿ ನಡೆಸಲಾಗುತ್ತಿತ್ತು ಎನ್ನುವ ಉಲ್ಲೇಖಗಳು ಕಂಡುಬರುತ್ತವೆ. ಅಂದರೆ ಈ ಒಂದು ಜನಪದ ವೈದ್ಯಕೀಯ ಅಂಶಗಳು ಶಾಸನಗಳಲ್ಲಿ ಲಿಖಿತವಾಗಿ ದಾಖಲೆಗಳತ್ತ ಪ್ರವೇಶಿಸುತ್ತಿದ್ದಾಗಲೇ ವೈದ್ಯದ ಪರಿಕಲ್ಪನೆ ಜನಪದರಲ್ಲಿ ಮೂಡಿತ್ತು. ಅಲ್ಲದೇ ಸಾಹಿತ್ಯಕ ಉಲ್ಲೇಖಗಳು ಅಂದಿನ ಕಾಲದಲ್ಲಿ ಜನಪದ ವೈದ್ಯ ಪದ್ಧತಿಗೆ ನೀಡುತ್ತಿರತಕ್ಕಂತಹ ಪ್ರಾಮುಖ್ಯತೆಯನ್ನು ಕುರಿತು ಉಲ್ಲೇಖಿಸಲಾಗಿದೆ. ನಂತರ ದೊರೆಯುವ ಆಧಾರವೆಂದರೆ ಕ್ರಿಸ್ತಪೂರ್ವ ೪೦೦ ರಲ್ಲಿ 'ಸಮಂತ ಬದ್ರ'ನು 'ಪದ್ಮಾವತಿ ದೇವಿ'ಗೆ "ಬಸ್ಮಕ ರೋಗ"ವನ್ನು ಗುಣಪಡಿಸಿದಂತ ಆಧಾರವಿದೆ.

ಅನಂತರ 'ನಾಗಾರ್ಜುನ ಪುಟ'ವೆಂಬ ವೈದ್ಯ ಗ್ರಂಥವನ್ನು ಬರೆದ ನಾಗಾರ್ಜುನ ಕವಿಯ ಬಗೆಗೆ ಹೇಳುವ ಕವಿ ರಾಜಮಾರ್ಗಕಾರನ ಹೇಳಿಕೆ(ಕ್ರಿ.ಶ.೮೫೦) ನಾಗಾರ್ಜುನ ಕವಿಯು ಆ ಕಾಲದ ಅತ್ಯುತ್ತಮ ಜನಪದ ವೈದ್ಯಕಾರ. ಭಾರತೀಯ ಜನಪದ ವೈದ್ಯ ಪದ್ಧತಿಯನ್ನು (ದೇಶ) ವಿದೇಶಗಳಿಗೆ ಹೆಚ್ಚಿನ ಪರಿಚಯವಿತ್ತವನು ಈ ಒಂದು ಹೇಳಿಕೆ ಪ್ರಮುಖ ದಾಖಲಾತಿಯಗಿ ಕಂಡುಬರುತ್ತದೆ. ಕ್ರಿಸ್ತಶಕ ೧೧೦೦ರ ಕೀರ್ತಿವರ್ಮನ "ಗೋವೈದ್ಯ" ಭಾರತೀಯ ಸಾಹಿತಿಕ ಆಧಾರಗಳಲ್ಲಿ ಮೊತ್ತ ಮೊದಲ ವೈದ್ಯ ಗ್ರಂಥ ಎನ್ನುವ ಖ್ಯಾತಿಯನ್ನು ಪಡೆದಿದೆ. "ಕ್ರಿಸ್ತ ಶಕ ೧೨೨೫-೧೪೦೦ ಕಾಫಿ ವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ವ್ಯಕ್ತವಾಗಿರುವ "ನಾಡ ಮದ್ದಂ ತಿಂದು ಕುತ್ತ ಕೆಡವಿರಬಹುದೇ"? ಎನ್ನುವ ಮಾತು ಆಗಿನ ಕಾಲದ ವೈದ್ಯದ ಮಹತ್ವವನ್ನು ಸಾಕ್ಷಿ ಮಾತನ್ನಾಗಿಸುತ್ತದೆ.

"ಬಂಡು ಕೆಂಡವ ಕಾಸಿ
ಉಂಡು ಶತಪಥ ನೆಡೆದು
ಉಂಡು ಎಡದ ಮಗ್ಗುಲಲ್ಲಿ ಮಲಗಿ
ವೈದ್ಯನಾ ಭಂಡಾಟವಿಲ್ಲ ಸರ್ವಜ್ಞ"

ಕ್ರಿ.ಸ್ತಶಕ ೧೧೦೦ರಲ್ಲಿ ರಚಿತವಾಯಿತೆನ್ನಲಾದ ಕೀರ್ತಿವರ್ಮನ "ಗೋವೈದ್ಯ" ಎನ್ನುವ ಗ್ರಂಥ, ೧೧೭೫ರ ಜಗದ್ದಳ, ಸೋಮನಾಥನ ಕರ್ನಾಟಕ ಕಲ್ಯಾಣಕಾರಕ ಕ್ರಿಸ್ತ ಶಕ ೧೨೦೦ರ ದೇವೇಂದ್ರ ಮನಿಯ

"ಬಾಲಗ್ರಹ ಚಿಕಿತ್ಸೆ". ಕ್ರಿಸ್ತಶಕ ೧೫೦೦ರ ಚಾಮರಸನ "ಅಶ್ವವೈದ್ಯ" ಮತ್ತು ಶ್ರೀಧರದೇವನ "ವೈದ್ಯಾಮೃತ", ಕ್ರಿಸ್ತಶಕ ೧೪೬೦ರ ಮೃಗರಾಜನ "ಖಗೇಂದ್ರ ಮಣಿ ದರ್ಪಣ", ಕ್ರಿಸ್ತ ಶಕ ೧೩೦೦ರಲ್ಲಿ ರಚಿತವಾಯಿತೆನ್ನಲಾದ "ಜ್ವಾಲಿನಿ ಕಲ್ಪಾದಿ ಸಂಗ್ರಹ" ಮುಂತಾದ ಗ್ರಂಥಗಳು ಮಹತ್ತರವಾದ ವೈದ್ಯ ಪದ್ಧತಿಗೆ ಆಧಾರಗಳಾಗಿ ನಿಲ್ಲುತ್ತವೆ. ಕ್ರಿಸ್ತಶಕ ೧೩೦೦ "ಜ್ವಾಲಿನಿ ಕಲ್ಪಾದಿ ಸಂಗ್ರಹ"ದಲ್ಲಿ ಪ್ರಾಚೀನ ಕಾಲದಲ್ಲಿ ತಿಗಣೆಗಳನ್ನು ಸುಲಭವಾಗಿ ಹೋಗಲಾಡಿಸುವುದಕ್ಕೆ "ಕಡಲೆಯ ಬೇರನ್ನು ಸಿದ್ದ ದಿನದಲ್ಲಿ ತಂದು ಮಂಚದಲ್ಲಿ ಕಟ್ಟಲು ತಿಗಣೆ ಹೊದ್ದಲಮ್ಮದು" ಎನ್ನುವಂತಹ ಉಲ್ಲೇಖವಿದೆ. ಇದು ಹಿಂದಿನ ಕಾಲದಲ್ಲಿ ದೇವಸ್ಥಾನದ ಮಠಮಾನ್ಯಗಳು ಔಷಧ ಭಂಡಾರವಾಗಿದ್ದವೆನ್ನುವುದನ್ನು ಅನಾಥ, ಬಡರೋಗಿಗಳಿಗೆ ಆಶ್ರಮವಾಗಿದ್ದವು ಎನ್ನುವುದನ್ನು ತಿಳಿಸುತ್ತದೆ. "ಸೋಲಿಗಶಾಸನ"ದಲ್ಲಿ "ತನುಮುಟ್ಟಿಸಿದ್ದಂ ಮಾಡುವ ಸಲಿಗಿಂತ ಶೇಷರಸಮೂಲಿಕೆಗಳು ಇದ್ದಂತಹ ಕ್ಷೇತ್ರಾಂತರದ ವರ್ಣನೆ ಕಂಡುಬರುತ್ತದೆ ಮತ್ತು 'ಬೆಳ್ಳಿಗಾವಿಯ ಕೊಠಡಿ' ಮಠವು ಅನಾಥ ರೋಗಿಗಳ ಆಶ್ರಯವಾಗಿತ್ತು, ಈ ಮಠದಲ್ಲಿ ಶಸ್ತ್ರ, ವೈದ್ಯರು, ಪರಿಚಾರಕರು, ಸೇವಕರು, ಸಾಕಷ್ಟು ಜನರಿದ್ದರೆನ್ನುವುದನ್ನು ವ್ಯಕ್ತಪಡಿಸುತ್ತದೆ.

ಕ್ರಿಸ್ತಶಕ ೧೫೦೦ರ ಚಾಮರಸನ 'ಅಶ್ವವೈದ್ಯ'ದಲ್ಲಿ "ಶೃಂಗೀಯ ಬೇರು, ವಾಗೆಜರಿಂಗುಂ, ಬೆಳ್ಳುಳ್ಳಿ, ತಿಗಡೆ ಸೈಂಧವಮೀಪಂಚಗಮುಮಂ ಸಮನಾಗಿ ತುರಂಗಕ್ಕೆವುದು ಸರ್ವಶೋಲಾಪ-ಹಾರಂ" ಎನ್ನುವ ಚಿಕಿತ್ಸಾ ವಿಧಾನದ ಉಲ್ಲೇಖ ಕಂಡುಬರುತ್ತದೆ. ಮತ್ತು ಅದೇ ಕಾಲದಲ್ಲಿ ಇದ್ದಿತೆನ್ನಲಾದ 'ಶ್ರೀಧರ ದೇವನ' ವೈದ್ಯಾಮೃತದಲ್ಲಿ ಮೂಲವ್ಯಾಧಿಗೆ.

"ಅರಿಶಿಣಮು ಚೂರ್ಣ ಮಾಡಿ, ಕಳ್ಳಿಯ ಹಾಲಲು ಕಲೆಸಿ
ಎಣ್ಣೆಯಂ ಪೊಸುಗೆ ಲೋಳಿ ಕರಗುವುವು"

ಎನ್ನುವ ನಿವಾರಕ ವಿವರಗಳು ಕಂಡುಬರುತ್ತವೆ. ಈ ರೀತಿಯ ಉಲ್ಲೇಖಗಳು ಅಂದಿನ ಕಾಲದಲ್ಲಿ ವೈದ್ಯದ ಮಹತ್ವವನ್ನು ಪ್ರತಿಬಿಂಬಿಸುತ್ತವೆ.

ಅನಾಮಧೇಯನ ಸು|| ಕ್ರಿ.ಸ್ತ ಶಕ ೧೩೦೦ರ ಗ್ರಂಥವೆಂದು ನಂಬಲಾಗಿರುವ "ಜ್ವಾಲಿನೀಕಲ್ಪಾದಿ" ಸಂಗ್ರಹದಲ್ಲಿ ಪ್ರಾಚೀನ ಕಾಲದಲ್ಲಿ ತಿಗಣೆಗಳನ್ನು ಸುಲಭವಾಗಿ ನಾಶಪಡಿಸುತ್ತಿದ್ದರು ಎನ್ನುವುದಕ್ಕೆ "ಕಡಲೆಯ ಬೇರನ್ನು ಸಿದ್ದ ದಿನದಲ್ಲಿ ತಂದು ಮಂಚದಲ್ಲಿ ತಿಗಣೆ ಹೊದ್ದಲಮ್ಮದು" ಎನ್ನುವ ಮಾತುಗಳು ಕಂಡುಬರುತ್ತವೆ. ಕ್ರಿಸ್ತಶಕ ಸುಮಾರು ೧೩೬೦ರ ಮಂಗರಾಜನ 'ಖಗೇಂದ್ರ ಮಣಿದರ್ಪಣ' ಮತ್ತು ಕ್ರಿಸ್ತಶಕ ಸುಮಾರು ೧೫೦೦ 'ಚಾಟರಸನ' ಅಶ್ವವೈದ್ಯ ಮುಂತಾದ ಗ್ರಂಥಗಳು ಜನಪದ ವೈದ್ಯಕ್ಕೆ

ಆಧಾರಗಳಾಗುತ್ತವೆ. ಈ ಎಲ್ಲಾ ಉಲ್ಲೇಖಗಳ ಸೂಕ್ಷ್ಮಾಂತರಗಳನ್ನು ನೋಡುವುದಾದರೆ ಹಿಂದಿನ ಕಾಲದಲ್ಲಿ ದೇವಸ್ಥಾನ ಮಠ ಮಂದಿರಗಳು ಬ್ರಿಟೀಷ್ ಶಾಲೆಗಳಾಗಿದ್ದವೆಂಬುದನ್ನು ನಾವು ಅರಿಯಬಹುದು. ಅಂತಹ ಸ್ಥಳದಲ್ಲಿ ಅನಾಮಧೇಯನ ಔಷಧಿಯನ್ನು ತಿಗಣೆಗಳ ಮೇಲೆ ಪ್ರಯೋಗ ಮಾಡಿದಂತೆ ಕಂಡುಬರುತ್ತದೆ. ಈ ಮೊದಲು ನಾನು ಹೇಳಿದಂತೆ ಜನಪದ ವೈದ್ಯರ ಮುಖ್ಯ ಲಕ್ಷಣ ಎಂದರೆ 'ಬಾಯಿಂದ ಬಾಯಿಗೆ ಹರಿದು ಬಂದಿರುವಂತದ್ದು' ಆದರೂ ಈದಮು ಸಾಹಿತ್ಯಿಕ ಗ್ರಂಥಗಳ ಉಲ್ಲೇಖ ಏಕೆ? ಎನ್ನುವಂತಹ ಸಹಜ ಪ್ರಶ್ನೆ ಬರಬಹುದು. ಅದಕ್ಕೆ ಸರ್ವಸಮ್ಮತವಾದ ಒಂದೇ ಒಂದು ಉತ್ತರವೆಂದರೆ ಆ ಎಲ್ಲಾ ಗ್ರಂಥಗಳಿಗೆ ಪ್ರೇರಣೆ ನೀಡಿದ್ದು ಆ ಕಾಲದಲ್ಲಿ ಪ್ರಚಲಿತವಿದ್ದ ಜನಪದ ವೈದ್ಯವೇ ಕಾರಣ ಎಂಬುದನ್ನು ನಾವು ಮನಗಾಣಬೇಕು.

೧೮ನೇ ಶತಮಾನದ ನಂತರ ಜನಪದ ಅಧ್ಯಯನವು ಒಂದು ವೈಜ್ಞಾನಿಕ ಅಧ್ಯಯನವಾಗಿ ಪರಿಗಣಿತವಾಯಿತು. ಅನಂತರದ ಜನಪದ ಸಂಗ್ರಹ ಮತ್ತು ವಿಶ್ಲೇಷಣೆಯತ್ತ ಹೆಚ್ಚು ಗಮನ ಕೊಡಲಾಯಿತು. ಆ ಒಂದು ಪ್ರಭಾವ 'ಜನಪದ ವೈದ್ಯ'ದ ಮೇಲೆ ಬಿತ್ತು. ಹಿಂದಿನಿಂದಲೂ ವೈದ್ಯ ಮನೆತನಗಳಲ್ಲಿ ಅಡಕವಾಗಿದ್ದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಮದ್ರಾಸ್ ವಿಶ್ವವಿದ್ಯಾಲಯದ "ವಿವಿಧ ವೈದ್ಯಗಳು" ಎಂಬ ಗ್ರಂಥವನ್ನು ಹೊರತಂದಿತು. ಈ ಗ್ರಂಥಗಳಲ್ಲಿ ಹಲವು ಹಸ್ತಪ್ರತಿಯಲ್ಲಿನ ಹಲವು ಪ್ರಾಚೀನ ಚಿಕಿತ್ಸಕ ಪ್ರಕಾರಗಳು ಪ್ರಕಟವಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ಪಾಣಾಚೆಯ "ಕೈ.ಶಂಕರನಾರಾಯಣ ಭಟ್ಟ ದೈತೋಟ" ಇವರು ತಮ್ಮ ಮನೆತನದಲ್ಲಿ ಪಾರಂಪರಿಕವಾಗಿ ಅನುಸರಿಸಿಕೊಂಡು ಬರುತ್ತಿದ್ದ ವೈದ್ಯ ಪದ್ಧತಿಯನ್ನು "ಅಜ್ಜಿಮದ್ದು" "ಜನಪದ ವೈದ್ಯ" ಮನೆ ಮದ್ದು ಎನ್ನುವ ಹೆಸರಿನಲ್ಲಿ ವೈದ್ಯ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ. ಈ ವೈದ್ಯ ಗ್ರಂಥಗಳು ಪ್ರಾಚೀನ ಜನಪದ ವೈದ್ಯ ಗ್ರಂಥಗಳಲ್ಲಿ "ಅಜ್ಜಿ ಮದ್ದು" ಎಂಬ ಗ್ರಂಥ ಸುಲಭವಾದ ಮನೆ ಮದ್ದುಗಳ ಸಂಗ್ರಹವೆಯೆಂದೂ, ಇನ್ನೂರು ಪುಟಗಳಷ್ಟು ಇದೆಯೆಂದು ಶ್ರೀ ಶ್ರೀನಿವಾಸ ಮೂರ್ತಿ (ಮೂರ್ತಿ ಮೆಡಿಕಲ್ಸ್ ಸಿದ್ದಾಪುರ)ರವರು ತಿಳಿಸಿದ್ದಾರೆ. ಇದು ಸಮಗ್ರ ವೈದ್ಯ ವಿಚಾರಗಳನ್ನು ಒಳಗೊಂಡಿರುವಂತಹ ಪ್ರಥಮ ಜನಪದ ವೈದ್ಯ ಗ್ರಂಥವಾಗಿದೆ.

ದಿ. ಕೊರಡ್ಕಲ್ ಶ್ರೀನಿವಾಸರಾಯರು ತಮ್ಮ ಅಜ್ಜಿ ಹೇಳಿದ ವೈದ್ಯ ವಿವರಗಳನ್ನು ಸಂಗ್ರಹಿಸಿ 'ಮನೆಮದ್ದು' ಎಂಬ ವೈದ್ಯ ಗ್ರಂಥವನ್ನು ಪ್ರಕಟಿಸಿದ್ದಾರೆ. ಇದೊಂದು ಸುಮಾರು ೬೦ ವರ್ಷಗಳ ಹಿಂದಿನ ವೈದ್ಯ ಗ್ರಂಥವಾಗಿದೆ. ಈ ಗ್ರಂಥಗಳಲ್ಲಿ ಸ್ತ್ರೀ ರೋಗಕ್ಕೆ ಸಂಬಂಧಿಸಿದಂತಹ ವೈದ್ಯ ವಿವರಗಳು ಹೆಚ್ಚು

ಕಂಡುಬರುತ್ತವೆ. "ಮಹಿಳಾ ಜನಪದ ವೈದ್ಯ" ವಿಚಾರಕ್ಕೆ ಇದೊಂದು ನಾಂದಿಯಾದ ಗ್ರಂಥವೆಂದರೆ ಅಥವಾ ಅಡಿಪಾಯದ ಗ್ರಂಥವೆಂದರೆ ಅತಿಶಯೋಕ್ತಿ ಆಗಲಾರದು. "ಕೈ ಸೀತಾರಾಮ ಭಟ್ ಬಡತಿ" ಇವರು "ಗೃಹ ವೈದ್ಯ" ಎಂಬ ಗ್ರಂಥವು ವನಸ್ಪತಿಯ ಚಿಕಿತ್ಸೆಯ ಕ್ರಮಗಳನ್ನು ವಿವರಿಸುತ್ತದೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ನೇತೃತ್ವದಲ್ಲಿ ಪ್ರಕಟವಾಗುತ್ತಿದ್ದ "ವಾಗ್ಭೂಷಣ" ಮಾಸ ಪತ್ರಿಕೆಯಲ್ಲಿ ಪ್ರತಿ ತಿಂಗಳು ಪ್ರಕಟವಾಗುತ್ತಿದ್ದಂತಹ "ಗೃಹವೈದ್ಯವು" ಎಂಬ ಲೇಖನಮಾಲೆ ಬಹಳ ಮಹತ್ತರವಾದುದು ಇದೊಂದು ಆಯುರ್ವೇದದ ಹಿನ್ನೆಲೆಯಲ್ಲಿ ರಚನೆಯಾಗಿರುವ ಒಂದು ಅನುಭವಿಕ ವೈದ್ಯ ಗ್ರಂಥದಂತೆ ಸಾರಂಗತವಾದುದು ಪಾರಂಪರಿಕ ಜನಪದ ವೈದ್ಯದ ಸಾವಿರಾರು ಪ್ರಕಾರಗಳು ಆಧಾರವಾಗಿವೆ ಮತ್ತು ಅಂತಹ ಪ್ರಕಾರಗಳು ಕಂಡುಬರುತ್ತವೆ.

ಇವತ್ತು ಜಗತ್ತಿನ ಜಾನಪದ ವಿಷಯಗಳನ್ನು ಬಿತ್ತರಗೊಳಿಸುವಂತಹ "ಜನಪದ ಜಗತ್ತು" ಎನ್ನುವ ತ್ರೈಮಾಸಿಕ ಪತ್ರಿಕೆಯಲ್ಲಿ 'ಜನಪದ ವೈದ್ಯ' ದ ವಿಶ್ಲೇಷಣಾತ್ಮಕ ವಿವರಣೆಗಳು ಮತ್ತು ವೈದ್ಯರ ಪರಿಚಯಗಳನ್ನು ಪರಿಚಯಿಸುತ್ತ ಬಂದಿದೆ. ಹೆಚ್.ಎಲ್.ನಾಗೇಗೌಡರ (ಪ್ರ.೫೦) ಕಾರ್ಯ ನಿಜವಾಗಿ ಮಹತ್ವವಾದದ್ದು. ಅಳಿದು ಹೋಗುತ್ತಿದ್ದಂತಹ ಚಿಹ್ನೆ ಲೆಕ್ಕ ಜನ ವೈದ್ಯರು ಮತ್ತು ಅವರ ವೈದ್ಯದ ಪ್ರಕಾರಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಸೋಂದಾದ ಕೈ ರಾಮಭಟ್ ರವರ 'ಜನಪದ ವೈದ್ಯ', ಗಣಪತಿರಾವ್ ಪಟವರ್ಧನ್ ರವರ 'ಅನುಭೂತಯೋಗ ಸಂಗ್ರಹ', 'ಕಾಮಧೇನು', 'ಕಲ್ಪವೃಕ್ಷ' ಪೂಜ್ಯ ರಾಘವೇಂದ್ರ ಸ್ವಾಮೀಜಿಯವರ 'ಸ್ವಯಂ ವೈದ್ಯ', ಹುಲಿಕುಂಠೆ ಮಠದ ಪೂಜ್ಯಯ ಶಿವಕುಮಾರ ಸ್ವಾಮೀಜಿಯವರ 'ಆರೋಗ್ಯ ದರ್ಪಣ', ಡಾ.ಎಂ.ಗೋಪಾಲಕೃಷ್ಣರಾಯರ 'ಉಪಯುಕ್ತ ಗಿಡ ಮೂಲಿಕೆಗಳು' ಎನ್ನುವ ಕೃತಿಗಳು ಹಲವಾರು ಜನಪದ ವೈದ್ಯರ ಪ್ರಕಾರಗಳನ್ನೊಳಗೊಂಡಿರುವಂತಹ ಅನುಭವ ಪೂರ್ವ ಗ್ರಂಥವಾಗಿದೆ.

ಶ್ರೀ ಮಳಲಿ ವಸಂತಕುಮಾರ ೧೯೭೭ರಲ್ಲಿ ಜಾನಪದ ಸಂಗ್ರಹ ದೃಷ್ಟಿಯಿಂದ ಶೇಖರಿಸಿ ಪ್ರಕಟಿಸಿದಂತಹ "ಜನಪದ ವೈದ್ಯ" ಗ್ರಂಥವು ಕನ್ನಡದ ಇತ್ತೀಚಿನ ಜನಪದ ವೈದ್ಯ ಗ್ರಂಥ ಎನ್ನುವ ಪಾತ್ರಕ್ಕೆ ಹಿರಿದಾದುದು. ಅವರ ಈ ಒಂದು ಕೃತಿಯ ಪೀಠಿಕೆಯಲ್ಲಿ ಜನಪದ ವೈದ್ಯರ ಸ್ವರೂಪ, ವ್ಯಾಪ್ತಿ ಮತ್ತು ಲಕ್ಷಣಗಳನ್ನು ಹಾಗೂ ಇತಿಮಿತಿಗಳನ್ನು ಸರಳವಾಗಿ ದೀರ್ಘವಾಗಿ ಚರ್ಚಿಸಿದ್ದಾರೆ. ಇವರು ಹೇಳಿರುವಂತಹ ಅನ್ವಯಿಕ ಮಾತುಗಳು ಜನಪದ ವೈದ್ಯಕ್ಕೆ ಒಂದು ಸಾರಸ್ವತವಾದ ವಿಮರ್ಶೆಯಾಗಿ ಇವತ್ತಿನ ಕಾಲಕ್ಕೆ ಅನ್ವಯವಾಗುವಂತಹ ಮಹತ್ತರವಾದ ಮಾತುಗಳಾಗಿ ಕಂಡುಬರುತ್ತವೆ. ಈ ಕೃತಿಯಲ್ಲಿ

ಹಲವು ಜಿಲ್ಲೆಯಲ್ಲಿ ಬಳಸುತ್ತಿದ್ದಂತಹ ವೈದ್ಯ ಪ್ರಕಾರಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ ಮತ್ತು ಒಂದು ಖಾಯಿಲೆಗೆ ಭಿನ್ನ ಭಿನ್ನ ಪ್ರದೇಶದಲ್ಲಿ ಬಳಸುತ್ತಿದ್ದ ವೈದ್ಯರ ವಿಧಾನಗಳನ್ನು ಪ್ರಕಾರಗಳನ್ನು ಬಹಳ ವಿವರವಾಗಿ ಚರ್ಚಿಸಿದ್ದಾರೆ. ವೈದ್ಯ ವಿಮರ್ಶಕರಾದ ಪ್ರಥಮ ಕನ್ನಡದ ಕೃತಿಯಾಗಿದೆ. ಇದರಲ್ಲಿ ವ್ಯಕ್ತವಾಗಿರುವಂತಹ ಔಷಧಿಗಳ/ವೈದ್ಯಗಳ ಪ್ರಕಾರಗಳು ನಮ್ಮ ಹೈದ್ರಾಬಾದ್ -ಕರ್ನಾಟಕವಾದಂತಹ, ಉತ್ತರ ಕರ್ನಾಟಕದಂತಹ ಜನತೆಗೆ ತಿಳಿಯುವುದಿಲ್ಲ. ಏಕೆಂದರೆ ಇದೊಂದು ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಕಂಡುಬರುವಂತಹ ವೈದ್ಯರ ಪ್ರಕಾರಗಳನ್ನು ಪ್ರಾದೇಶಿಕ ಚಿಕಿತ್ಸೆಗಳು ವಿದ್ಯಾಸಾಗವಾನಿ, ಕುಡಿ ಎಣ್ಣೆಯ ಲೇಪನ ಮಕ್ಕಳ ನಿದ್ರೆಗೆ ಸುಗದ ಕುಡಿ ಕಾಡಿಗೆ ಹಾವು ಕಚ್ಚಿದಗ ಮದ್ದರಸ ಕೊಡುವುದು, ನಂಜಬಟ್ಟಲು, ಅರೆ ತಲೆ ನೋವಿಗೆ ರಾತ್ರಿ ಅನ್ನಸೇವನೆ, ಜಿಗಣೆ ಕಚ್ಚಿದಾಗ ತಿನ್ನುವ ಸುಣ್ಣ, ಹೊಗೆಸೊಪ್ಪು, ವಾಂತಿ ಬೇಧಿ ತಡೆಗಟ್ಟಲು ನೆಲ್ಲಿಕಾಯಿ ಗಾತ್ರ ಹುಣುಸೇಹಣ್ಣು, ನಾಲ್ಕೈದು ಪುದಿನ ಎಲೆಗಳು, ಐದಾರು ಕಾಳು ಮೆಣಸು, ನಾಲ್ಕೈದು ಏಲಕ್ಕಿಗಳು, ಎರಡೆ ಚಿಟಿಕೆ ಉಪ್ಪು ಇವುಗಳೆಲ್ಲವನ್ನೂ ಸೇರಿಸಿ ನುಣ್ಣಗೆ ಅರೆದು ಬಾಯಿಯಲ್ಲಿಟ್ಟುಕೊಂಡು ರಸ ನುಂಗುವುದು ಇದು ವಾಂತಿ ಹಾಗೂ ಬೇಧಿಯ ನಿಲುಗಡೆಯಾಗುತ್ತದೆ, ಮತ್ತು ಚೇಳಿನ ವಿಷವನ್ನು ಇಳಿಸುವುದಕ್ಕೆ ಕೋಳಿಯ ಬಿಳಿಯ ಮಲವನ್ನು ಬಿಡಿದು ಎಲೆ ಅಡಿಕೆಯಲ್ಲಿ ಚೇಳು ಕಡಿದವರಿಗೆ ಕೊಡುವುದು ಮತ್ತು ಬಿಳಿಯ ಒಳಗಡ್ಡೆಯನ್ನು ಕಟ್ಟಿದ ಜಾಗಕ್ಕೆ ಇಡುವುದು ಇಂತಹ ಹತ್ತಾರು ವೈದ್ಯದ ಉಲ್ಲೇಖಗಳು ನಮ್ಮ ಬಳ್ಳಾರಿ ಜಿಲ್ಲೆಯ ಪ್ರದೇಶದೊಳಗೆ ಹತ್ತಾರು ಕಡೆ ಕಂಡುಬರುತ್ತದೆ.

‘ಊಟ ಬಲ್ಲವನಿಗೆ ರೋಗವಿಲ್ಲ’ ಮತ್ತು ‘ಹಿತ್ತಲ ಗಿಡ ಮುದ್ದಲ್ಲ’ ಎನ್ನುವ ಶ್ರೀಮತಿ ರೇಣುಕಾ ಭಟ್ಟ ಅವರ ಸಂಗ್ರಹಿತ ಗ್ರಂಥಗಳಾಗಿವೆ ಆದರೆ ಮಾಹಿತಿಗಾರರ ಅಥವಾ ನಿರೂಪಕರ ಹೆಸರುಗಳನ್ನು ಇವರು ತಿಳಿಸಿಲ್ಲ. ಈ ಕೃತಿಯ ತಾತ್ಪರ್ಯ ರೋಗ ಪ್ರತಿಬಂಧಕವಾದ ಮತ್ತು ರೋಗ ಶಾಮಕವಾದ ಆಹಾರ ವೈದ್ಯ ಚಿಕಿತ್ಸೆಗಳನ್ನು ಬಿತ್ತರಿಸುವಂತಹ ಜನಪ್ರಿಯ ಗ್ರಂಥಗಳಾಗಿ ಕಂಡು ಬರುತ್ತವೆ. ಇದಕ್ಕೆ ಪ್ರತಿಯಾಗಿ ಬೆಂಗಳೂರಿನ ಡಾ.ಸಿ.ಬಿ.ಪುರಾಣಿಕರ ‘ಹಿತ್ತಲ ಗಿಡ ಮದ್ದು’ ಎನ್ನುವ ಅಭೂತಪೂರ್ವ ಗ್ರಂಥ ಹೊರಬಂತು.

ಶ್ರೀಮತಿ ಶಾಂತಿ ನಾಯಕರ ‘ಜನಪದ ವೈದ್ಯ ಅಡಿಗೆ’ ಎಂಬ ಗ್ರಂಥದಲ್ಲಿ ಚಿಕಿತ್ಸೆಗೆ ಸಹಾಯಕವಾಗುವಂತಹ ಅಡಿಗೆಗಳ ಕೆಲವು ವಿವರಗಳು ನಮಗೆ ದೊರಕುತ್ತವೆ. ಶ್ರೀಮತಿ ಶಾಂತಕುಮಾರಿ ಪಾಟೀಲ ಅವರ ‘ಜನಪದ ವೈದ್ಯ’ ಸಹ ಪರಿಮಿತವಾದ ಪ್ರಯೋಜನಾತ್ಮಕ ಚಿಕಿತ್ಸಕ ಗ್ರಂಥವಾಗಿದೆ.

ಸಂಶಿಯ ಡಾ.ಮುದ್ದೇಬಿಹಾಳ್ ರವರ ಎರಡು ಚಿಕಿತ್ಸಾ ಗ್ರಂಥಗಳು ಮಹತ್ತರವಾದ ವೈದ್ಯ ಗ್ರಂಥಗಳಾಗಿ ಕಂಡುಬರುತ್ತವೆ.

೧೯೩೩ರಲ್ಲಿ ಮಾಜಿ ಜಿಲ್ಲಾ ರಿಜಿಸ್ಟ್ರರಾದ ತ.ರಾಮಕೃಷ್ಣಯ್ಯ ಇವರು 'ಆಯುರ್ವೇದ ಸಾರ' ಭಾಗ ೧ ಮತ್ತು ಭಾಗ ೨ ಎನ್ನುವ ಎರಡು ಮಹತ್ತರ ಆಯುರ್ವೇದ ಸಾರ ಗ್ರಂಥಗಳನ್ನು ತಂದಿದ್ದಾರೆ. ಆಯುರ್ವೇದ ಸಾರವಾಗಿದ್ದರು. ಅದರಲ್ಲಿ ಜನ ವೈದ್ಯ ವಿಚಾರಗಳು ಹೆಚ್ಚು ಬಳಕೆಯಾಗಿವೆ. ಇದು ಮಹತ್ವತೆಯನ್ನು ತಿಳಿಸುತ್ತದೆ.

೧೯೩೬ರಲ್ಲಿ ಪಂಡಿತ ತಾರಾನಾಥರು 'ಸುಲಭ ಚಿಕಿತ್ಸೆ' ಎನ್ನುವ ಕೃತಿಯಲ್ಲಿ ಸುಮಾರು ೪೨ ರೋಗಗಳ ವಿವರ ಮತ್ತು ಆ ರೋಗಗಳಿಗೆ ಆಂಗ್ಲ ಭಾಷೆಯಲ್ಲಿ ಬಳಸುವ ಪದ, ರೋಗಗಳ ಲಕ್ಷಣ, ಔಷಧಿಗಳನ್ನು ಬಳಸುವ ವಿವರ/ಔಷಧಿಗಳ ವಿವರ, ಪಥ್ಯದ ವಿವರವನ್ನು ೧೩೪ ಪುಟಗಳಲ್ಲಿ ಸುಧೀರ್ಘವಾಗಿ ಚರ್ಚಿಸಿದ್ದಾರೆ. ಪುಸ್ತಕ ಆರಂಭದಲ್ಲಿ ಮೊದಲ ಮಾತು ಎನ್ನುವ ಶೀರ್ಷಿಕೆಯೊಳಗೆ ಅಂದಿನ ಕಾಲದಲ್ಲಿನ ಕರ್ನಾಟಕ ಜನಪದ ವೈದ್ಯರ ಸ್ಥಿತಿಗತಿ ಮತ್ತು ಅದನ್ನು ಬೇರೆ ಬೇರೆ ರಾಷ್ಟ್ರಗಳು ಬಳಸಿ ಪಡೆಯುತ್ತಿದ್ದ ಉಪಯೋಗ ಹಾಗೂ ನಮ್ಮ ಜನಪದ ವೈದ್ಯದ ಪ್ರಾಮುಖ್ಯತೆಯನ್ನು ಮಹತ್ತರವಾಗಿ ಚರ್ಚಿಸಿದ್ದಾರೆ. ಇದರ ಮೂವತ್ತೆರಡು ರೀತಿಯ ಖಾಯಿಲೆಗಳನ್ನು ಅವುಗಳ ನಿರ್ಮೂಲನೆಗೆ ಬಳಸಬಹುದಾದ ವೈದ್ಯರ ವಿವರವನ್ನು ಕೊಟ್ಟಿದ್ದಾರೆ. ಹಾಗೆ ಪುಸ್ತಕದ ಕೊನೆಯಲ್ಲಿ ಉತ್ತಮವಾದ ಔಷಧಿಗಳ ವಿವರವನ್ನು ನೀಡಿದ್ದಾರೆ.

೧೯೫೫ರಲ್ಲಿ ಶ್ರೀಮೋಟಗಾನಹಳ್ಳಿ ಮಹಾದೇವ ಶಾಸ್ತ್ರಿಯವರು 'ಚಿಕಿತ್ಸಾ ತತ್ವ ದೀಪಿಕಾ' ಎನ್ನುವ ಜನಪದ ವೈದ್ಯ ಕೃತಿಯನ್ನು ಹೊರತಂದಿದ್ದಾರೆ. ಡಾ.ಅನುಪಮಾ ನಿರಂಜನರವರು 'ತಾಯಿಮಗು'(೧೯೬೮) ಆರೋಗ್ಯ ದರ್ಶನ(೧೯೭೦) ಈ ಕೃತಿಯೊಳಗೆ ಸಾಮಾನ್ಯ ಖಾಯಿಲೆಗಳು ಮತ್ತು ಅಸಾಮಾನ್ಯ ಖಾಯಿಲೆಗಳು ಎಂದು ಎರಡು ರೀತಿಯಲ್ಲಿ ವರ್ಗೀಕರಿಸಿ ಖಾಯಿಲೆಗಳ ಲಕ್ಷಣ ಮತ್ತು ಅವುಗಳ ರೋಗ ನಿವಾರಣೆಗಳನ್ನು ಚಿತ್ರಿಸಿದ್ದಾರೆ. ಹೆಚ್ಚಿಗೆ ಆಧುನಿಕ ಔಷಧಗಳ ವಿವರಗಳು ಕಂಡುಬಂದರೂ ಅಲ್ಲಲ್ಲಿ ಜನಪದ ವೈದ್ಯದ ವಿಚಾರಗಳು ಅನಿವಾರ್ಯವೆಂಬ ಎನ್ನುವಂತೆ ಮಧ್ಯದಲ್ಲಿ ಬಂದು ಹೋಗುತ್ತವೆ. ಇದನ್ನು ನೋಡಿದರೆ ಎಷ್ಟೇ ಆಧುನಿಕ ವೈದ್ಯ ಮುಂದುವರೆದಿದ್ದರೂ ಜನಪದ ವೈದ್ಯರ ಮಹತ್ವವಾಗಿ ಬೇಕು ಎನ್ನುವುದನ್ನು ತಿಳಿಸುತ್ತದೆ. ಇವರ ಮತ್ತೊಂದು ಕೃತಿಯಾದ 'ತಾಯಿ ಮಗು'ವಿನಲ್ಲಿ ಸ್ತ್ರೀರೋಗಕ್ಕೆ ಮತ್ತು ಅವುಗಳ ನಿವಾರಣೆಗೆ ಹೆಚ್ಚು ಆದ್ಯತೆಯನ್ನು ನೀಡಿರುವುದು ಕಂಡುಬರುತ್ತದೆ. ಡಾ.ಸಿ.ಆರ್

.ಚಂದ್ರಶೇಖರ್ ರವರ 'ಖಾಯಿಲೆಯ ಕಾರಣಗಳು ನಿಮ್ಮ ನಂಬಿಕೆ ಎಷ್ಟು ಸರಿ'(೧೯೫೫) ಎನ್ನುವ ಕೃತಿಯ ನಂಬಿಕೆ ವೈದ್ಯ ವಿವರಣೆಯನ್ನು ಮತ್ತು ಆದರೆ ಮೌಢ್ಯತೆಯನ್ನು ಬಹಳ ವೈಜ್ಞಾನಿಕವಾಗಿ ಚರ್ಚಿಸಿದ್ದಾರೆ.

ಎಂ.ಗೋಪಾಲಕೃಷ್ಣರಾವ್ ರವರು ೧೯೭೫ರಲ್ಲಿ 'ಬಡವರ ವೈದ್ಯ ಭಾಗ-೧' ಬಡವರ ವೈದ್ಯ ಭಾಗ ೨ ಎನ್ನುವ ವೈದ್ಯ ಸಂಪುಟಗಳನ್ನು ಹೊರ ತಂದಿದ್ದಾರೆ. ೪೨ ರೋಗಗಳ ವಿವರ ಮತ್ತು ಅವುಗಳ ನಿವಾರಣೆಗಾಗಿ ಬಳಸಬಹುದಾದ ಪಾರಂಪರಿಕ ವೈದ್ಯದ ವಿವರಣೆಯನ್ನು ಕೊಟ್ಟಿದ್ದಾರೆ. ಅನುಬಂಧದಲ್ಲಿ ವನಸ್ಪತಿಗಳ ವಿವರ, ಷದ್ಯರ ಸೇವಾ ವಸ್ತುಗಳು, ಸಿದ್ಧ ಔಷಧಿಗಳು ಮತ್ತು ಚಿಕಿತ್ಸೋಪಕರಣಗಳ ವಿವರಣೆಯನ್ನು ಮಧ್ಯೆ ಮಧ್ಯೆ ಎನಿಮಾ ಪ್ರಯೋಗದ ಆಸನಗಳು, ವೈದ್ಯರ ಪ್ರಕಾರಗಳ/ವೈದ್ಯವನ್ನು ಬಳಸುವ ಚಿತ್ರಗಳನ್ನು ಕೊಟ್ಟಿದ್ದಾರೆ. ಅದೇ ರೀತಿ 'ಬಡವರ ವೈದ್ಯ ಭಾಗ-೨' ರೋಗ ೩೭ ಖಾಯಿಲೆಗಳ ವಿವರ ಮತ್ತು ಅವುಗಳ ನಿವಾರಕ ಔಷಧಿಗಳ ವಿವರವನ್ನು ಕೊಟ್ಟಿದ್ದಾರೆ ಈ ಎರಡು ಸಂಪುಟಗಳ ಜಾನಪದ ವೈದ್ಯರ ಮಹತ್ತರ ಕೃತಿಗಳು.

? ೧೮೮೫ರಲ್ಲಿ ಪ್ರೊ.ಎ.ವಿ.ನಾವಡರವರು "ವೈದ್ಯರ ಹಾಡುಗಳು" ಎನ್ನುವ ಕೃತಿಯಲ್ಲಿ ಜಾನಪದ ವೈದ್ಯಕ್ಕೆ ಸಂಬಂಧ ಪಟ್ಟಿರುವಂತಹ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಈ ಹಾಡಿನಲ್ಲಿ ವೈದ್ಯರ ಅಂತಸತ್ವ ಅಡಗಿದೆ. ಕಳವೆ ವೀರ ರಾಜೇಂದ್ರರವರು ವಿರಚಿತ 'ಸಕಲ ವೈದ್ಯ ಸಂಹಿತಾ ಸಾರವರ್ಣವ' ಎನ್ನುವ ಬೃಹತ್ ಜನಪದ ವೈದ್ಯ ಕೃತಿಗಳನ್ನು ಎರಡು ಸಂಪುಟಗಳಲ್ಲಿ ೧೯೮೬ರಲ್ಲಿ ಬಿ.ಎಸ್ .ಸರ್ಯಾಯ್ಯನವರು ಸಂಗ್ರಹಿಸಿದ್ದಾರೆ. ಈ ಕೃತಿಗಳು ಜನಪದ ವೈದ್ಯ ಗ್ರಂಥ ಅತ್ಯಂತ ವಿವರಣೆಯನ್ನು ಒಳಗೊಂಡಿರುವ ಸಂಪುಟಗಳು. ಶ್ರೀರಾಮ ಇಟ್ಟಣ್ಣನವರು ೧೯೯೦ರಲ್ಲಿ 'ಜಾನಪದ ಪಶುವೈದ್ಯಯ ಬೀಳಗಿ ಸಿದ್ದಪ್ಪ' ಎನ್ನುವ ಪಶು ವೈದ್ಯ ಗ್ರಂಥವನ್ನು ಬೀಳಗಿ ಸಿದ್ದಪ್ಪನವರು ದನಗಳ ರೋಗಗಳಿಗೆ ನೀಡುತ್ತಿದ್ದ ಉಪಚಾರದ ಮಾಹಿತಿಯನ್ನು ನೀಡಿದ್ದಾರೆ. ಅದೇ ರೀತಿ ಡಾ.ಸಿ.ಆರ್ .ರಂಗೇ ಗೌಡ, ಡಾ. ಮಾಗಡಿ ಆರ್.ಗುರುದೇವ ಅವರು ೧೯೯೨ರಲ್ಲಿ 'ಜನಪದ ಪಶುರೋಗ ಚಿಕಿತ್ಸೆ' ಪಶುವೈದ್ಯ ಕೃತಿಯನ್ನು ಹೊರ ತಂದಿದ್ದಾರೆ. ಇದರಲ್ಲಿ ಸುಮಾರು ೫೮ ಪಶು ರೋಗಗಳ ಲಕ್ಷಣ ಮತ್ತು ಅವುಗಳ ನಿವಾರಣೆಗೆ ಬಳಸಬಹುದಾದ ಔಷಧಿಗಳ ವಿವರಣೆಯನ್ನು ೧೬೫ ಪುಟಗಳಲ್ಲಿ ವಿವರಿಸಿದ್ದಾರೆ. ಉದಾ : 'ಶಶಿ' ಈ ರೋಗವು ಪಶುಗಳಲ್ಲಿ ಕಂಡುಬರುವಂತಹ ಸಾಮಾನ್ಯ ರೋಗ. ಇದರ ನಿವಾರಣೆಗೆ ಪು.೯೨ರಲ್ಲಿ ಈ ಕೆಳಗಿನ ಔಷಧಿಗಳ ವಿವರಣೆ ಕೊಡುತ್ತಾರೆ. ಪು.೯೩.

- ತುಂಬೆ ಸೊಪ್ಪನ್ನು ಅರೆದು ಒಂದು ಗೊಟ್ಟದಲ್ಲಿ ಕುಡಿಸಿ ಮೈಗೆ ಲೇಪ ಹಾಕಿಸಬೇಕು.
- ಮೆಣಸು, ಇಂಗು ಬೆಲ್ಲವನ್ನು ಸೇರಿಸಿ ಅರೆದು ತಿನ್ನಸಬೇಕು, ಅಥವಾ ಬಿಸಿನೀರನಲ್ಲಿ ಗೊಟ್ಟದಲ್ಲಿ ಹಾಕಿ ಕುಡಿಸಬೇಕು.
- ಹುಣಸೆ ಸೊಪ್ಪು, ಬೆಳ್ಳುಳ್ಳೀ, ಲವಂಗ, ಮೆಣಸು ೨೫, ವೀಳ್ಯದೆಲೆ ೧, ಒಂದು ಅಚ್ಚು ಬೆಲ್ಲ ಎಲ್ಲವನ್ನು ಕುಟ್ಟಿ ಕುಡಿಸಬೇಕು, ಮೆಣಸು ಅಥವಾ ಅರಿಶಿಣದ ಕೊಂಬನ್ನು ತೆಯ್ದು ದಿನಕ್ಕೆ ಎರಡು ವೇಳೆ ಕಣ್ಣಿಗೆ ಹಾಕಬೇಕು. ಜೊತೆಗೆ ಕರಿ ಬಟ್ಟೆಯಲ್ಲಿ ಬೆಳ್ಳುಳ್ಳಿಯಲ್ಲಿ ಸುತ್ತಿ ಉರಿ ಹತ್ತಿಸಿ ಮೋಗಿಗೆ ಹೊತ್ತಿಗೆ ಹೊಗೆ ಕೊಡಬೇಕು.

ಇದೇ ರೀತಿಯಲ್ಲಿ ಹತ್ತು ಹಲವು ವೈದ್ಯರ ಪ್ರಕಾರಗಳನ್ನು ಸಂಗ್ರಹಿಸಿದ್ದಾರೆ.

ಸಂಶಿಯ ಡಾ.ಮುದ್ದೇಬಿಹಾಳ್ ಅವರು ಎರಡು ಚಿಕಿತ್ಸಾ ಗ್ರಂಥಗಳನ್ನು ರಚಿಸಿದ್ದಾರೆ. ಗದುಗಿನ "ಪಶುವೈದ್ಯ ಸಂಜೀವಿ" "ಪಶು ವೈದ್ಯ ಚಿಂತಾಮಣಿ" ದಕ್ಷಿಣ ಕನ್ನಡ ಜಿಲ್ಲೆಯ ಪಶು ವೈದ್ಯ ಸಂಗ್ರಹ, ಮಹತ್ತರವಾದ ಜನಪದ ವೈದ್ಯ ಗ್ರಂಥಗಳು. ೧೯೮೧ರಲ್ಲಿ ಚಚತವಾದ ಶ್ರೀ.ಎಲ್ .ಆರ್ . ಹೆಗಡೆಯವರ "ಜನಪದ ವೈದ್ಯ" ಗ್ರಂಥದಲ್ಲಿ ೨೨೫ಕ್ಕಿಂತಲೂ ಹೆಚ್ಚು ಜನರ ವೈದ್ಯಕೀಯ/ಚಿಕಿತ್ಸಾ ವಿಧಾನಗಳಿವೆ. "ದನಗಳ ವೈದ್ಯ", "ಪಶು ವೈದ್ಯಯ ರತ್ನಾಕರ" ಎನ್ನುವ ಪಶುವೈದ್ಯ ಕೃತಿಗಳ ಪಶುವೈದ್ಯದ ಮೇಲೆ ಬಹಳ ಪ್ರಭಾವ ಬೀರುವಂತಹ ಕೃತಿಗಳಾಗಿವೆ. ೧೯೯೫ರಲ್ಲಿ ಕೆ.ಪೂರ್ಣಿಮಾ ಭಟ್ ರವರು "ಕೇರಳೀಯ ಸಾಂಪ್ರದಾಯಿಕ ಚಿಕಿತ್ಸೆಗಳು" ಎನ್ನುವ ಕೃತಿ ಹೆಚ್ಚು ಉಪಯುಕ್ತವಾದುದು. ೧೯೯೫ರಲ್ಲಿ ಡಾ.ನಂ. ಮೊಗಸಾಲೆಯವರು. "ನಿಮ್ಮ ಕೈಯಲ್ಲೇ ನಿಮ್ಮ ಆರೋಗ್ಯ" ಎನ್ನುವಂತಹ ಆರೋಗ್ಯ ಸಲಹೆ-ಅಂಕಣ ಬರಹಗಳ ಸಂಗ್ರಹವನ್ನು ಆಧರಿಸಿ ಕೃತಿಯನ್ನು ಹೊರ ತಂದಿದ್ದಾರೆ. ಈ ಕೃತಿಯಲ್ಲಿ ಹಲವಾರು ರೋಗಿಷ್ಠರ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿರುವುದು ಕಂಡುಬರುತ್ತದೆ. ಅವರು ಕೊಟ್ಟಿರುವಂತಹ ಆಧುನಿಕ ವೈದ್ಯವನ್ನು ಮತ್ತು ಆಯುರ್ವೇದವನ್ನು ಹೆಚ್ಚು ಅನುಸರಿಸಿದೆ. ಆದರೆ ಕೆಲವು ಕಡೆ ಬಳಕೆಯಾಗಿರುವಂತಹ ಕೆಲವು ಸೂಕ್ಷ್ಮಾಂತರ ಔಷಧಿಗಳು ಜನಪದ ವೈದ್ಯವೇ ಆಗಿದೆ. ಉದಾ : "ನಾನು ೨೦ ವರ್ಷದ ವಿದ್ಯಾರ್ಥಿನಿ ನನಗೆ ೬ ವರ್ಷದ ತನಕ ಉಬ್ಬಸ ಇತ್ತು, ನಂತರ ಸಂಪೂರ್ಣ ಹುಷಾರಾಗಿ ೧೮ನೇ ವರ್ಷದಲ್ಲಿ ಪುನಃ ಪ್ರಾರಂಭವಾಗಿ ೮-೧೦ ತಿಂಗಳು ಕಾಡಿತು. ಅದಕ್ಕೆ ಆಯುರ್ವೇದಿಕ್ ಚಿಕಿತ್ಸೆ ಮಾಡಿದಾಗ ಗುಂಡ ಕಂಡುಬಂತು, ಈಗ ಜಾಸ್ತಿ ಇದೆ, ಬಾಳೆಹಣ್ಣು, ಐಸ್ ಕ್ರೀಮ್ ತಿಂದರೆ

ಜೋರಾಗುತ್ತದೆ, ಬಾಯಲ್ಲಿ ಲೋಳೆ ಲೋಳೆ ಕಫ ಬರುತ್ತದೆ ಹಾಗೆ ನಾನು ತುಂಬಾ ಸಪೂರ ಆಗಿದ್ದೇನೆ. ನಾನು ದಪ್ಪವಾಗಲು ಔಷಧಿ ಸೂಚಿಸಿ'' ಎನ್ನುವಂತಹ ಪ್ರಶ್ನೆಗೆ ಈ ಕೆಳಗಿನ ಉತ್ತರವನ್ನು ಕೊಡಲಾಗಿದೆ.

ಉಬ್ಬಸವನ್ನು ಹೆಚ್ಚಿಸುವ ಬಾಳೆಹಣ್ಣು ಇತ್ಯಾದಿಗಳನ್ನು ತಪ್ಪಿಯೂ ಸೇವಿಸಬೇಡಿ, ತಲೆಗೆ ತೇಕರಾಜ ತೈಲವನ್ನು ಅಭ್ಯಾಸ ಮಾಡಿಕೊಳ್ಳಿ, ಮೃತ್ಯಂಜಯ ರಸವನ್ನು ೧೧.೧.೧೧, ೧/೪ ಚಮಚ ಶುಂಠಿ ರಸ, ೧/೨ ಚಮಚ ಜೇನು ತುಪ್ಪದಲ್ಲಿ ಸೀಲೋಪಾದಿ ಚೂರ್ಣ ೧/೨ ಚಮಚ, ಕೊಡಿಸಿ ೩ ಸಲ ಜೇಣು ತುಪ್ಪದಲ್ಲಿ ತೆಗೆದುಕೊಳ್ಳಿ. ದಪ್ಪವಾಗಲು ಔಷಧ ಇಲ್ಲ ಕೂಷ್ಮಾಂಡ ರಸಾಯನ ೧ ಚಮಚ, ೨ ಸಲ ಖಾಲಿ ಹೊಟ್ಟೆಗೆ ತೆಗೆದುಕೊಳ್ಳಿ'' ಇಲ್ಲಿ ಕೊಟ್ಟಿರುವಂತಹ ಹಲವು ಔಷಧಿಗಳು ನಮ್ಮ ಪ್ರಾಚೀನ ಜನಪದ ವೈದ್ಯರಲ್ಲಿ ಇದ್ದಂತಹವು. ಅದೇನೇ ಇರಲಿ ಸುಮಾರು ೧೫೦ ಪುಟಗಳಲ್ಲಿ ಕೇಳುಗರ ಪ್ರಶ್ನೆಯೊಂದಿಗೆ ಉತ್ತರಿಸುವುದರ ಮುಖಾಂತರ ಹಲವು ಜನಪದ ವೈದ್ಯರ ಬಳಕೆಯನ್ನು ಮಾಡಿದ್ದಾರೆ.

ಶ್ರೀ ಎಂ.ಕೆ.ಮುಲ್ಲಾ, ಡಣಾಪುರರವರು ೧೯೯೭ರಲ್ಲಿ ''ಮೋಡಿ, ಮಾಟ, ಮಂತ್ರ ಮತ್ತು ಪರಿಹಾರ'' ಎನ್ನುವ ಕಿರುಹೊತ್ತಿಗೆಯನ್ನು ಹೊರ ತಂದಿದ್ದಾರೆ. ಮಟ, ಮಂತ್ರ, ತಂತ್ರಗಳಿಗೆ ಹೆಚ್ಚು ಆದ್ಯತೆಯನ್ನು ನೀಡಿದ್ದರು. ಹಲವು ಜನಪದ ವೈದ್ಯಗಳನ್ನು ಬಳಸಿದ್ದಾರೆ. ಉದಾ : ಬೇನೆ ಬಾವುಗೆ ಸೀತಾಫಲ ತೊಪ್ಪಲವನ್ನು ಬೇನೆಯಾದ ಜಾಗಕ್ಕೆ ತೊಪ್ಪಲ ಹಾಕಿ ಬಟ್ಟೆ ಕಟ್ಟಬೇಕು. ಕೆಮ್ಮಿಗೆ ಸಿಹಿ ಕಟ್ಟಿಗೆ ''ಮಿಟ್ಟಿ ಲಕಡಿ'' ಇದನ್ನು ಎಂಟು ದಿವಸ ತಿಂದರೆ ಜನ್ಮಾಂತರ ಬರುವುದಿಲ್ಲ''(ಪುಟ.೨೧೨) ಜ್ವರಕ್ಕೆ, ''ಶುಂಠಿ ಹಿಪ್ಪಲಿ, ಮೆಣಸು, ಸೈದರ ಲವಣ, ಪ್ರಾ.ಕಾಯಿ, ಜಾಜಿಕಾಯಿ, ಅಜಿವಾನದ ಮೇಲಿನ ಹೊಟ್ಟು ಹಿಪ್ಪಲಿ ಒಂದು ಚಮಚ ತೆಗೆದುಕೊಂಡು ಅರ್ಧ ಬಿಸಿನೀರು ಅರ್ಧ ತಣ್ಣೀರು ಕೂಡಿಸಿ ಕೊಟ್ಟರೆ ಸರ್ವಜ್ವರ ವಾಸಿಯಾಗುವುದು.''(ಪು.೭೩) ಶ್ರೀಕೃಷ್ಣ ಯಜುರ್ವೇದಿಯವರು ೨೦೦೧ರಲ್ಲಿ 'ಜನಪದ ವೈದ್ಯ'(ಅಜ್ಜಿಯ ಔಷಧಿಗಳ ಭಂಡಾರ) ಕಿರುಕೃತಿಯನ್ನು ತಂದಿದ್ದಾರೆ. ಅತ್ಯುತ್ತಮವಾದ ಜನಪದ ವೈದ್ಯರ ಜ್ಞಾನ ಭಂಡಾರವೆನ್ನಬಹುದು.

ಡಾ.ಸತ್ಯನಾರಾಯಣ ಭಟ್ಟ.ಪಿ. ರವರು ''ಬೆಂಗಳೂರು ಜಿಲ್ಲೆಯ ಬಂಗಾಲ ವೈದ್ಯರು''(೧೯೯೭) ಎನ್ನುವ ಕೃತಿಯೊಳಗೆ ಇಂದಿನ ದಿನಗಳಲ್ಲಿ ಜನಪದ ವೈದ್ಯರ ಸ್ಥಿತಿಗತಿಯನ್ನು ಅವರ ವೈದ್ಯ ಪರಿಣಾಮದ ಮಹತ್ವತೆಯನ್ನು, ಕಣ್ಮರೆಯಾಗುತ್ತಿರುವ ಪಶುವೈದ್ಯ ಪರಂಪರೆಯನ್ನು, ಕಣ್ಮರೆಯಾಗುತ್ತಿರುವ ಮಂತ್ರ, ತಂತ್ರ, ವೈದ್ಯಗಳನ್ನು ಚರ್ಚಾತ್ಮಕವಾಗಿ ವಿವರಿಸಿದ್ದಾರೆ. ಆರಂಭದಲ್ಲಿ ಜನಪದ ವೈದ್ಯರ ವಿಳಾಸಗಳನ್ನು ಕೊಟ್ಟಿದ್ದಾರೆ.

ವಸಂತಕುಮಾರ ಮಳಲಿಯವರು ೧೯೭೯ರಲ್ಲಿ 'ಕರ್ನಾಟಕ ಜನಪದ ವೈದ್ಯ', 'ಸುಮಾನ್ ಜಾನಪದ' ನಂ.೧ ರಲ್ಲಿ ಎಲ್ .ಹೆಗಡೆಯವರು 'ಜನಪದ ವೈದ್ಯ' ಎನ್ನುವ ವಿಮರ್ಶಾತ್ಮಕ ಲೇಖನವನ್ನು ಬರೆದಿದ್ದಾರೆ. ಡಾ.ಎಸ್.ಕೆ.ಕರೀಂ ಖಾನ್(ಸಂ) 'ಕರ್ನಾಟಕ ಜಾನಪದ' ಕೃತಿಯಲ್ಲಿ ಎ.ಎನ್ .ಶಿವರಾಮುರವರು 'ಜನಪದ ವೈದ್ಯ' ಮತ್ತು ಡಾ.ಶ್ರೀರಾಮ ಇಟ್ಟಣ್ಣವರ 'ನಂಬಿಕೆ ಸಂಪ್ರದಾಯಗಳು' ಹೆಚ್ .ಜಿ.ಲಕ್ಕಪ್ಪಗೌಡ(ಸಂ) 'ಮಲೆನಾಡು ಜಾನಪದ'ದಲ್ಲಿ ಎಸ್ .ಬಿ.ರವಿಕಲಾ 'ಜನಪದ ವೈದ್ಯ' ತಿ.ನಂ.ಶಂಕರನಾರಾಯಣರವರ 'ಜಾನಪದ ವಿಚಾರದಲ್ಲಿ' ಜನಪದ ವೈದ್ಯ ಪಾಲ್ತಾಡಿ ರಾಮಕೃಷ್ಣ ಆಚಾರ್ 'ಜಾನಪದ ಸ್ಪಂದನ', 'ವೈಜ್ಞಾನಿಕ ಅಧ್ಯಯನ ಮಾಂತ್ರಿಕ' ಧಾರ್ಮಿಕ 'ಜನಪದ ವೈದ್ಯ', ಡಾ.ದೇ.ಜವರೇಗೌಡ, 'ಜನಪದ ವಾಹಿನಿ'ಯಲ್ಲಿ ಡಿ.ವಿ.ಕೆ. ಮೂರ್ತಿಯವರ 'ವೈದ್ಯ ಜಾನಪದ (ಯೋಗ)' ಸುವರ್ಣ ಜಾನಪದ ನಂ.೧ ಬಿ.ಶಿವರಾಮ ಶೆಟ್ಟಿಯವರ 'ಜನಪದ ವೈದ್ಯರ; ಕೃತಿ/ಸಂಸ್ಕೃತಿ' ಇದನ್ನು ಮುಂತಾದ ಜನಪದ ವೈದ್ಯ ವಿಮರ್ಶಾತ್ಮಕ ಲೇಖನಗಳು ಪಾರಂಪರಿಕ ಜನಪದ ವೈದ್ಯ ಪದ್ಧತಿಯ ಅಂತಸತ್ವವನ್ನು ಎತ್ತಿ ಹಿಡಿಯುತ್ತವೆ ಮತ್ತು ಇವತ್ತಿನ ಜನಪದ ವೈದ್ಯರ ಚರ್ಚೆಗೆ ಆಧಾರ ಸ್ತಂಬಗಳಾಗಿ ನಿಲ್ಲುತ್ತವೆ.

ಅಧ್ಯಾಯ ೪

ವೈಜ್ಞಾನಿಕ ನೆಲೆಯಲ್ಲಿ ಜನಪದರ ಮೂಢ ನಂಬಿಕೆಗಳ ಅವಲೋಕನ

೪

ವೈಜ್ಞಾನಿಕ ನೆಲೆಯಲ್ಲಿ ಜನಪದರ ಮೂಢ ನಂಬಿಕೆಗಳ ಅವಲೋಕನ

ಆಧುನಿಕ ಯಾತ್ರೆ ಇಂದು ಎಲ್ಲರನ್ನೂ ಮೂಕದ ಸ್ಥಿತಿಗೆ ತಳ್ಳುತ್ತಿದೆ. ಅದರಲ್ಲೂ ಭಾರತ ಹಳ್ಳಿಗಳ ಕಣಜ. ಆದುದರಿಂದ ಆಧುನಿಕ ಕಪಿಮುಷ್ಟಿಯೊಳಗೆ ಜಾನಪದರು ಮುಖಾಮುಖಿಯಾಗುತ್ತಿದ್ದಾರೆ. ಈ ಹೊತ್ತಿನಲ್ಲೂ ಜನಪದರ ಮೂಢ ನಂಬಿಕೆಗಳು ಗೌಣವಾಗುತ್ತಿವೆಯೇ ಅಥವಾ ಮುಂದುವರೆಯುತ್ತಿವೆಯೇ ಎಂಬ ತೂಗುಡತೆ ನಮ್ಮನ್ನು ಕಾಣುತ್ತಿದೆ. ಅಂತ ಮೂಢನಂಬಿಕೆಗಳು ಇಂದಿನವೇನಲ್ಲ. ಅವುಗಳು ಮನುಷ್ಯನೊಂದಿಗೆ ಬೆಂಬಿಡದೆ ಹಾಸುಹೊಕ್ಕಾಗಿ ಅಂಟಿಕೊಂಡು ಬಂದಿರುತ್ತವೆ. ೨೧ನೇ ಶತಮಾನದಲ್ಲಿ ಎದರು ಬದಿರಾಗುತ್ತಿದ್ದರೂ ಮೂಢನಂಬಿಕೆಗಳು ಸಾರ್ವತ್ರಿಕವಾಗಿ ಮರೆಯಾಗಿರುವುದಿಲ್ಲ. ಇನ್ನೂ ಸಮಾಜದ ವ್ಯವಸ್ಥೆಯಲ್ಲಿ ಸ್ಫೋಟಗೊಳ್ಳುತ್ತಿವೆ.

ಸಾವಿರಾರು ವರ್ಷಗಳಿಂದಲೂ ಸಮಾಜದಲ್ಲಿ ಮಾಟ, ಮಂತ್ರ, ಯಂತ್ರ ಮತ್ತು ತಂತ್ರಗಳು ವೈದ್ಯಕೀಯದ ಒಂದು ಭಾಗವಾಗಿ ಅಳವಡಿಸಿಕೊಂಡು ಬರಲಾಗಿದೆ. ಈ ಅಂಶಗಳು ಮಾನವ ಶಾಸ್ತ್ರ ಮತ್ತು ಇತಿಹಾಸದ ಶಾಖೆಗಳಲ್ಲಿಯ ತೆಕ್ಕೆಯಲ್ಲಿವೆ. ಒಬ್ಬ ರೋಗಿಯ ಪರೀಕ್ಷೆ ಮಂತ್ರಯುತವಾಗಿ ನಡೆಯುತ್ತಿರುವಾಗ ಮಂತ್ರಕ್ಕೆ ಹೆಚ್ಚು ಮಹತ್ವವಿದೆಯೋ ಇಲ್ಲಾ ಶುಶ್ರೂಷೆಗಾಗಿ ಎಂಬ ಅನುಮಾನ ಮತ್ತು ಪ್ರಶ್ನೆಗಳು ಮಂತ್ರಗಳೊಂದಿಗೆ ಒಂದು ಸ್ಪಷ್ಟ ಖಾಯಿಲೆಗೆ ಔಷದಿ ಕೊಟ್ಟರೆ ಆ ಮೂಲಿಕೆಗೆ ಗುಣಪಡಿಸುವ ಶಕ್ತಿ ಇದೆಯೋ ಅಥವಾ ಇಲ್ಲವೊ ಎಂಬುದರ ಕುರಿತು ಪ್ರಯೋಗದ ಮೋರೆ ಹೋಗಬಹುದಾಗಿದೆ.

ನಾವು ಯಾವೊದೋ ಒಂದು ಗಿಡಮೂಲಿಕೆ ಇಲ್ಲಾ ನಮ್ಮ ಸಂಪ್ರದಾಯದ ಪೂಜೆ-ಮಂತ್ರಗಳ ಮುಖೇನ ನಾವು ಬಯಸುವ ಉದ್ದೇಶ ನೆರವೇರಿದರೆ ಗೊಂದಲ, ಅನುಮಾನಕ್ಕೆ ಆಸ್ಪದ ಇರದೇ ಸ್ಪಷ್ಟತೆ ಕಾಣಬಹುದಾಗಿದೆ. ಪ್ರಯೋಗಗಳು ಅವಶ್ಯಕ ಎಂಬುದನ್ನು ಮರೆಯುವಂತಿಲ್ಲ. ಏಕೆಂದರೆ ಗೊಡ್ಡು ಸಂಪ್ರದಾಯಕ್ಕೆ ನಿಷ್ಟರಾದ ವೈದ್ಯ ಮತ್ತು ರೋಗಿಗಳು ಒಂದನ್ನೊಂದು ಬಿಟ್ಟು ಆಗಲರಾರು. ಕೆಲವು ಸಂದರ್ಭದಲ್ಲಿ ರೋಗವನ್ನು ನಿವಾರಿಸಲು ಕಾರಣವಾಗದೇಯು ಇರಬಹುದು. ಕೊನೆಗೆ ನೈಸರ್ಗಿಕವಾಗಿಯೇ

ನಿವಾರಣೆಯಾಗಬಹುದಾಗಿದೆ. ಒಬ್ಬ ರೋಗಿಯು ಅವನ ಮಾನಸಿಕ ಸ್ಥೈರ್ಯ, ನೆಮ್ಮದಿ, ಇಲ್ಲಾ ಉಪಚಾರದಿಂದ ರೋಗ ಮುಕ್ತಗೊಳ್ಳಲು ಬಹುದಾಗಿದೆ.

ಉದಾ : "ಇಂದೆಂಬು" ಎಂಬ ಬುಡಕಟ್ಟು ಜನಾಂಗದವರು ಆಫ್ರಿಕಾದಲ್ಲಿದ್ದ ಇವರು ಇಂದು ಜಿಂಬಾಬೆಯಲ್ಲಿ ನೆಲೆ ಊರಿದ್ದಾರೆ. ಇವರಲ್ಲಿ "ಲುಂಡ ವೈದ್ಯಕೀಯ ಪದ್ಧತಿ ಜಾರಿಯಲ್ಲಿತ್ತೆಂದು ಉಲ್ಲೇಖಿಸಿರುವುದಿದೆ. ಆ ಪ್ರಕಾರವಾಗಿ ಪ್ರತಿಯೊಂದು ಖಾಯಿಲೆಗೂ ಒಂದೊಂದು ಮಂತ್ರ, ತಂತ್ರ, ವಿದ್ಯೆಯಿದೆ. ಯಾವೊದೋ ಗಿಡಮೂಲಿಕೆಗಳನ್ನು ಔಷದಿ ರೂಪದಲ್ಲಿ ಕೊಡುವಂತಹ ವಿಧಿ ಇದೆ. ಈ ಕುರಿತು ಬಹಳ ಆಸಕ್ತಿಯಿಂದ ಅಧ್ಯಯನ ನಡೆಸಿದ ಎರ್ವಿನ್ ಆಕರ್ನೆಕ್ಟ್ ಹೀಗೆ ಅಭಿವ್ಯಕ್ತಪಡಿಸಿರುತ್ತಾನೆ. 'ಈ ಜನಾಂಗದವರ ಕೈಪಿಡಿಗಳಲ್ಲಿ ಔಷದೋಪಚಾರಗಳ ನಿಷ್ಕೃಷ್ಟವಾದ ಯಾದಿ ಇದೆ. ಅದರಲ್ಲಿ ಔಷಧಿ ಮತ್ತು ತಂತ್ರಗಳನ್ನು ನಿರ್ದಿಷ್ಟವಾಗಿ ಇಂತಿಂತಹ ರೋಗಗಳಿಗೆ ಎಂದು ಹೇಳಲಾಗಿದೆ. ಇಂತಹವುಗಳ ಪ್ರಯೋಗದಿಂದ ಯಾವ ಪರಿಣಾಮವನ್ನು ಊಹಿಸಬಹುದೆಂಬ ಸೂಚನೆಯೂ ಇದೆ.

ವಿಜ್ಞಾನವೆಂದರೆ ಬರಿ ಪ್ರಯೋಗದಿಂದ ಬಂದ ಫಲವೆನ್ನುವವರಿದ್ದಾರೆ. ಅಲ್ಲದೆ ಆಧ್ಯಾತ್ಮವೆಂತಲೂ ಕರೆಯುವವರುಂಟು. ಋಷಿಪುಂಗರ ಸನಿಹದಿಂದ ಉದ್ಭವೆಂತಲೂ ಭಾವಿಸಿರುವುದಾಗಿದೆಂತಲೂ ಭಾವಿಸಿದ್ದಾರೆ. ಆದರೆ ಕಾಲಾನುಘಟ್ಟದಲ್ಲಿ ಅವಲೋಕಿಸಿದರೂ ಪರಿಪೂರ್ಣ, ಸಾರ್ವತ್ರಿಕ, ಚಾರಿತ್ರಿಕವಾಗಿ ಅದಕ್ಕೆ ಮಿತಿಯೂ ಇಲ್ಲ. ಇಲ್ಲಿ ಸತ್ಯಾಸತ್ಯತೆಯ ಗೊರವೆಗೆ ಹೋಗುವುದು ಸೂಕ್ತವಲ್ಲ. ಇಲ್ಲಿನ ಜಿಜ್ಞಾಸೆ ಎಂದರೆ ಒಟ್ಟಿನಲ್ಲಿ ಸೀಮಿತವಾದದ್ದು. ಅದರ ಲಕ್ಷಣವೆಂದರೆ ಆಧ್ಯಾತ್ಮದ ಮೌಲ್ಯದಂತಲ್ಲ ಎಂಬುದೇ ಇಲ್ಲಿನ ಪ್ರಾಂಜಲತೆ.

ಇನ್ನೂ ವೈಜ್ಞಾನಿಕತೆಯ ವ್ಯಾಪಕತೆಯ ಕಡೆಗೆ ಗಮನ ಹರಿಸಿದರೆ ಕೆಲವು ತಾತ್ವಿಕ ಅಂಶಗಳು ಹೊರಚೆಲ್ಲುತ್ತದೆ. ಚರಿತ್ರೆಯನ್ನು ಕಡೆಗೆ ಸರಿಸಿ ವೈಜ್ಞಾನಿಕ ಮನೋವೃತ್ತಿಯ ಕುರಿತು ಗುತ್ತಿಗೆ ಹಿಡಿದವರಂತೆ ಹೇಳುವ ಕೆಲವು ವಿದ್ವಾಂಸರು ತಮ್ಮ ಸ್ವಂತಿಕೆಯಿಂದ ಉದ್ಧರಣೆ ಮಾಡುವುದುಂಟು. ನೀರು ನೈಸರ್ಗಿಕವಾದುದು. ಅದನ್ನು H_2o ಎಂದು ಕರೆದಿರುವುದುಂಟು. ಈ H_2o ಎಂಬ ಪದವನ್ನು ಕಂಡರಿಯದ ಜಾನಪದರು ಇದ್ದಾರೆ. ಆದರೆ ನಮ್ಮ ವಿಜ್ಞಾನಿಗಳಂತವರು ಅದನ್ನು ಕರೆದದ್ದು ಸೋಜಿಗವೆಂದು ಹೇಳಬಹುದು. ನಮ್ಮ ವಿಜ್ಞಾನಿಗಳ ಪ್ರಕಾರ ಯುರೋಪಿಯನ್ ಮಾದರಿಯ ಪ್ರಯೋಗದ ಪದ್ಧತಿಯಷ್ಟೇ ವೈಜ್ಞಾನಿಕ ಪದ್ಧತಿಯಾಗುವುದು. ಈಗ ಬೇವಿನ ಮರದ ಬೀಜದಲ್ಲಿರುವ ರಾಸಾಯನಿಕ ಅಂಶಗಳಾವುವು. ಅವು ಮಾನವನ ದೇಹದೊಡಲನ್ನು ಸೇರಿ ಎಂತಹ ಜೀವ-ರಸಾಯನ ಕ್ರಿಯೆಗಳನ್ನು

ಉಂಟು ಮಾಡುತ್ತವೆ ಎಂಬ ಆಧುನಿಕತೆಯ ಸತ್ಯ ತಿಳಿಯದಿದ್ದರೆ ಆ ಪಂಡಿತನು ವಿಜ್ಞಾನಿಯೆಂಬ ಪಟ್ಟ ಇರುತ್ತಿರಲಿಲ್ಲ ಎಂಬ ಅಂಶವನ್ನು ಮನನ ಮಾಡಿಕೊಳ್ಳಬೇಕು. ಆದರೆ ಅವನು ವೈದ್ಯಕೀಯ ಸತ್ಯಾಸತೆಯನ್ನು ಕಂಡುಕೊಂಡಿರುವುದು ಸುಳ್ಳಲ್ಲ. ಜೊತೆಗೆ ಅವನು ಪಡೆದುಕೊಂಡ ಜ್ಞಾನವು ದೈವದತ್ತವಾಗಿ ಬಂದುದಲ್ಲ. ತಾನು ತನ್ನ ದೈನಂದಿನ ದಿನಗಳಲ್ಲಿ ಯಾವೂದೋ ಸಂದರ್ಭದ ಮುಷ್ಠಿಗೆ ಬಿದ್ದು ಸ್ವಂತ ಪರಿಶ್ರಮದಿಂದ ಪಡೆದುಕೊಂಡದ್ದಾಗಿದೆ. ಈ ಅಂಶಗಳ ಆಳವನ್ನು ಹೊಕ್ಕಿದಾಗ ಗೊತ್ತಾಗುತ್ತದೆ. ಅವನ ಪ್ರಯೋಗದಿಂದ ತನ್ನ ಜ್ಞಾನದ ಪಕ್ವತೆ ಮತ್ತು ಮಿತಿಗಳೊಳಗೆ ಬಳಸಿ ತಿಳಿದುಕಂಡಿರುವುದಂತು ಸತ್ಯ. ಅವನೇನಾದರೂ ಅದು ವೈಜ್ಞಾನಿಕ ಪದ್ಧತಿ ಅಲ್ಲದಿದ್ದೆಂದೂ ತಿಳಿಯದಿದ್ದರೆ ಎರಡು ಶತಮಾನಗಳ ಹಿಂದಿನ ಯೂರೋಪಿಯನ್ ವಿಧಾನ ಏಕೆ ಮತ್ತು ಹೇಗೆ ವೈಜ್ಞಾನಿಕ ಪದ್ಧತಿಯಾಗುತ್ತದೆ. ಅಂದು-ಇಂದಿನ ಪ್ರಯೋಗವಿಧಾನ ವ್ಯತ್ಯಾಸವಿಲ್ಲವೆ? ಆದುದರಿಂದ ಪದ್ಧತಿಯೂ ಕೂಡ ವಿಕಾಸವಾಗುತ್ತ ಬಂದಿದೆ. ಅಲ್ಲದೆ ಅಂತಹ ಪದ್ಧತಿಯೂ ತುಕ್ಕು ಹಿಡಿದು ಮರೆಯಾಗುವಂತದಲ್ಲ.

ಅನೇಕ ವಿದ್ವಾಂಸರು ವೈಜ್ಞಾನಿಕ ವಿಜ್ಞಾನದ ಪದ್ಧತಿ ಕುರಿತು ತಮ್ಮ ಅನುಭವಗಳಿಂದ ಸರ್ವಕಾಲಕ್ಕೂ ಸ್ವೀಕರಿಸಬಹುದಾದ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವರುಗಳಲ್ಲಿ ಮಾರ್ಕ್ಸ್ ವರ್ಟೋಪ್ಸ್ಕಿ ಅವರು ಸಂರಚನೆಯ ದೃಷ್ಟಿಯಿಂದ ವಿಜ್ಞಾನವೆಂದರೆ ವ್ಯವಸ್ಥಿತವಾದ ಮತ್ತು ಕ್ರಮಬದ್ಧವಾದ ಜ್ಞಾನಸಮುಚ್ಚಾಯ ಎಂದು ಉಲ್ಲೇಖಿಸಿದ್ದಾರೆ(ವ್ಯವಸ್ಥೆ ಮತ್ತು ಕ್ರಮ ಎಂಬರೆಡು ಅಂಶಗಳು ಸರ್ವಕಾಲದಲ್ಲೂ ಏಕ ಪ್ರಕಾರವಾಗಿರುವುದಿಲ್ಲ. ಸಾಮಾನ್ಯವಾಗಿ ಅವು ವಿಕಾಸ ಹೊಂದುತ್ತಲೇ ಇರುತ್ತದೆ.). ವಿಜ್ಞಾನವು ಪರಿಧಿಗಷ್ಟೇ ಸೀಮಿತವಲ್ಲ. ಅದೊಂದು ಕ್ರಿಯಾಶೀಲ ಕೃಷಿ. ಸತತವಾಗಿ ಸಾಗುತ್ತಿರುವ ವಿಚಾರಣೆಯ ಆ ಕ್ರಿಯೆಯ ದ್ಯೋತಕ ಬರೀ ಸ್ವರೂಪದಿಂದ ಅವಲೋಕಿಸಿ, ನೋಡಿ ವಿಜ್ಞಾನವನ್ನು ವ್ಯಾಖ್ಯಾನಿಸಲಾಗುವುದಿಲ್ಲ ಎಂಬುದನ್ನು ಅರಿಯಬೇಕು. ಆದರೆ ಅದರ ಕ್ರಿಯೆಯ ವಿಧಾನ, ಕರ್ತವ್ಯ ಮತ್ತು ಬಹಳವಾಗಿ ಅನುಸರಿಸುವ ರೀತಿ, ಕ್ರಮ, ಈ ಅಂಶಗಳನ್ನು ಗಮನಿಸಬೇಕಾಗುತ್ತದೆ. ಮೂಲತಃ ವಿಜ್ಞಾನದ ಉದ್ದೇಶ ವೇನಾಗಿರುತ್ತದೋ ಅದು ಇವುಗಳನ್ನೆಲ್ಲಾ ನಿಯಂತ್ರಿಸುತ್ತಿರುತ್ತದೆ.(ಆ.೧೫, ಪು.೨೪)

ಮುಂದುವರೆದು ಹೀಗೆ ಹೇಳಿರುತ್ತಾರೆ. "ವೈಜ್ಞಾನಿಕ ಸಿದ್ಧಾಂತಕ್ಕೆ ಪ್ರಚೋದನೆ ದೊರಕುವುದು ಪ್ರಯೋಗಭ್ಯಾಸಗಳಿಂದ. ಪ್ರಯೋಗವೆಂದರೆ ಬರಿಯ ಅಣಕವಲ್ಲ. ಮಾಡಿದ್ದನ್ನೇ ಪದೇ ಪದೇ ಮಾಡುತ್ತಿರುವುದಲ್ಲ. ಬುದ್ಧಿವಂತಿಕೆಯ ಆಲೋಚನಾ ಕ್ರಮದಿಂದ ಅಥವಾ ನಿಯಮ ಹಾಗೂ ತಾರ್ಕಿಕ ಸೂತ್ರಗಳಿಂದ ಹೆಣೆದು ಪ್ರಯೋಗ ನಡೆಸುವುದಷ್ಟೇ ಪ್ರಯೋಗವೆನ್ನಿಸಿಕೊಳ್ಳುವುದಿಲ್ಲ. (ಪು.೨೭)

ಯಾವುದಾದರನ್ನೂ ಅರಿಯಲೂ, ತಿಳಿಯಲೂ ಮಾನವನಿಗಿರುವ ಯಾವುದೇ ಅತಿ ಸಾಮಾನ್ಯ ಪದ್ಧತಿಯು ವೈಜ್ಞಾನಿಕ ಪದ್ಧತಿಗೆ ಮೂಲ. ಕುಂತಲ್ಲೇ ಕುಳಿತು ಕಟ್ಟುಮುಚ್ಚಿ ಸೂರ್ಯ, ಚಂದ್ರರ ಬಗ್ಗೆ ಅತಿರಮ್ಯವಾದ ಅಂಶಗಳನ್ನೂ ಇಲ್ಲಾ ಘಟನೆಗಳನ್ನೂ ಅರಿಯಬಹುದೆಂದು ಕುಂತಲ್ಲೆ ಇರುವುದು ವಿಜ್ಞಾನದ ಪದ್ಧತಿಯ ಒಂದು ಭಾಗವೆನ್ನಬಹುದಿತ್ತು. ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಚರ್ಚಿಸುವ ಅಗತ್ಯವಿದೆ ಎಂದು ಮನುಷ್ಯ ಮನನ ಮಾಡಿಕೊಳ್ಳಬೇಕು. ಈ ವಿಷಯಕ್ಕೆ ಪೂರಕವಾಗಿ ಚರ್ಚಿಸುವುದಾದರೆ ಸಮಗ್ರ-ಚಿತ್ರವು ವಾದಕಲೆಯಲ್ಲಿದೆ. ಇದನ್ನು ಇಂಗ್ಲಿಷ್ ಭಾಷೆಯಲ್ಲಿ 'ಡಯಲೆಕ್ಟಿಡ್' ಎಂದು ಕರೆಯುವರು. ಅದಕ್ಕೆ ಇಂತದೇ ಒಂದು ಅಂಗೀಕಾರವಿಲ್ಲ. ವಸ್ತುನಿಷ್ಟವಾಗಿ ವಿಷಯಗಳನ್ನು ತಾರ್ಕಿಕವಾದ ವಿಶ್ಲೇಷಣೆಗೆ ಒಳಪಡಿಸುವುದೇ ವಿಧಾನ.

ಒಟ್ಟಿನಲ್ಲಿ ಜ್ಞಾನದ ತಳದಿಂದ ಪರಿತಪಿಸಿ ಶೋಧನೆ ಆರಂಭವಾಗಿ ಸಿಕ್ಕಿದ್ದೆಲ್ಲವನ್ನು ಪ್ರಯೋಗಕ್ಕೆ ಅಳವಡಿಸಿ ಕೆಲಸ ಮಾಡುತ್ತೆವೆಯೋ ಅದು ಪ್ರಾಥಮಿಕ ಕ್ರಮ. ಇದನ್ನೇ ಟ್ರಯಲ್ ಅಂಡ್ ಎರರ್ ಮೆಥಡ್' ಎಂದೆನ್ನುವರು. ಆದರೆ ವಾದಕಲೆ ಈ ಕ್ರಮವನ್ನು ಹೊರತು ಪಡಿಸುವುದಿಲ್ಲ. ಹೀಗಾಗಿ ಕಾರ್ಲ್‌ಪಾಪರ್ ಅವರು 'ಪರೀಕ್ಷಾ ಊಹೆ ಮತ್ತು ತಪ್ಪು ಸರಿ ನೋಡುವ ಕ್ರಮವನ್ನು ಹೆಚ್ಚು ಪ್ರಜ್ಞಾಪೂರ್ವಕವಾಗಿ ಮುಂದುವರೆಸಿದರೆ ಅದು ವೈಜ್ಞಾನಿಕ ಪದ್ಧತಿಯ ರೂಪುರೇಷೆಗಳನ್ನು ಪಡೆಯುತ್ತಾ ಹೋಗುತ್ತದೆ.(ಉದ್ಧೃತ : ಆ.೧೫, ಪು.೮೩)

ಮನುಷ್ಯ ನಿಸರ್ಗಕ್ಕೆ ಹೊಂದಿಕೊಂಡು ಸಾವಿರಾರು ಪ್ರಯೋಗಗಳನ್ನು ಮಾಡಿ ಬಹುಶಃ ನಿರ್ದಿಷ್ಟತೆ ಹತ್ತಿರವಾದ ಅಂಶಗಳನ್ನು ಪಡೆದುಕೊಳ್ಳುವನು. ಕ್ರಮ, ನಿಯಮ, ಶ್ರಮದಿಂದ ವ್ಯವಹಾರಿಕವಾಗಿ ಕೆಲವು ನಿಲುವುಗಳಿಗೆ ಬದ್ಧನಾಗಿ ಹಿಂದಿನ 'ಪರೀಕ್ಷೆ ಮಾಡಿ ಸರಿ ತಪ್ಪು ತಿಳಿಯುವ' ಕ್ರಮವು ಹಿಂದಕ್ಕೆ ಸರಿಯಲೂಬಹುದು. ಅಷ್ಟಕ್ಕೆ ಆತೇರನಾದ ವಿಧಾನದ ಕೊಡುಗೆಯನ್ನು ತಳ್ಳಿಹಾಕುವಂತಿಲ್ಲ. ಆರಂಭದಲ್ಲಿ ತಿಳಿದುಕೊಂಡ ನಿಯಮಗಳನ್ನು ಒರೆಗೆ ಹಚ್ಚಿ ಶ್ರಮವಹಿಸಿ ಅವಲೋಕನ ಮಾಡಿ ತನ್ನ ಅನುಭವಗಳಿಂದ ತಿಕ್ಕಿ, ತಿಡಿ, ಪರೀಕ್ಷೆ ಮಾಡುತ್ತಾ ಮುಂದುವರೆದಾಗ ಹಿಂದಿನ ನಿಯಮಜ್ಞಾನವು ಅಪಕ್ವವೊ ಇಲ್ಲಾ ಅಪೂರ್ಣವಾಗಿಯೋ ಎಂಬುದು ತಿಳಿಯುತ್ತದೆ. ಒಟ್ಟಾರೆಯಾಗಿ ಅನುಭವ ಮತ್ತು ಅವಲೋಕನ ಸತತವಾಗಿ ನಡೆದಾಗ ವಿಜ್ಞಾನದ ವಿಕಾಸತೆಗೆ ಮಾರ್ಗವಾಗುವುದರಲ್ಲಿ ಎರಡು ಮಾತಿಲ್ಲ.

ಈ ಮೇಲೆ ವಿಶ್ಲೇಷಿಸಲಾಗಿರುವ ಅಂಶಗಳ ಸೂಕ್ಷ್ಮಾವಲೋಕನವನ್ನು ಜೊತೆಗೆ ಸ್ಥೂಲಾವಲೋಕವನ್ನು ಗಮನಿಸಿ ಜನಪದರು ತಲಾತಲಾಂತರದಿಂದ ಅಂದರೆ ಓಬಿರಾಯನ ಕಾಲದ ಪದ್ಧತಿಗಳು, ಆಚರಣೆಗಳು,

ಜನಪದ ವೈದ್ಯಪದ್ಧತಿಯಲ್ಲಿ ಇರುವ ಮೂಢನಂಬಿಕೆಗಳನ್ನು ವೈಜ್ಞಾನಿಕ ನೆಲೆಯಲ್ಲಿ ಚರ್ಚಿಸಲಾಗಿದೆ. ಅಲ್ಲದೆ ಗುಣಾತ್ಮಕವಾಗಿ ತಿಳುವಳಿಕೆ ಭಿನ್ನವಾಗಿದೆ ಎಂಬ ತಾತ್ವಿಕೆ ಅಂಶಗಳನ್ನು ಮನನ ಮಾಡಿಕೊಡಲು ಪ್ರಯತ್ನಿಸುವುದಾಗಿದೆ.

ನಮ್ಮ ದೇಶದ ನೈಸರ್ಗಿಕ ಸಂಪತ್ತೂ ಅಪಾರವಾದುದು. ಅಲ್ಲ ಸಸ್ಯ, ಪ್ರಾಣಿ, ಜಲ, ಖನಿಜ, ಸಂಪತ್ತಿಗೆ ಕೊರತೆ ಇಲ್ಲ. ಇಲ್ಲಿ ಬಹುರೂಪಿ ಸಂಸ್ಕೃತಿಯ ಜನಪದರೂ ನೆಲೆ ಊರಿದ್ದಾರೆ. ಹಾಗೆಯೇ ಬಹುಸಂಪ್ರದಾಯಸ್ಥರೂ ತಳ ಊರಿರುವುದು ಗೊತ್ತಿರುವ ವಿಚಾರವೇ. ಆದರೆ ಇತರ ದೇಶಗಳಿಗೆ ವಿಸ್ತರಿಸುವಷ್ಟು ವೈದ್ಯಜ್ಞಾನವಿದ್ದರೂ ನಮ್ಮ ತಳಸಮುದಾಯ, ಇಲ್ಲಾ ಜನಸಾಮಾನ್ಯರಿಂದ ಮರೆಯಾಗಿಯೇ ಉಳಿದಿವೆ. ಅದಕ್ಕೆ ಉತ್ತರ ಕಂಡುಕೊಳ್ಳುವಲ್ಲಿ ಒಂದು ಗುಂಪು ತಲೆಕೆಡಿಸಿಕೊಳ್ಳುತ್ತಾ ಬಂದಿದ್ದಾರೆ. ಈಗಲೂ ಮುಂದುವರೆಯುತ್ತಿರುವರು. ಇಲಿ ಸೂಕ್ಷ್ಮಾತಿಸೂಕ್ಷ್ಮ ಅಂಶಗಳು ತಿಳಿಯಪಡಿಸುವುದೆನೆಂದರೆ ಸಾವಿರಾರು ವರ್ಷಗಳಿಂದ ನಮ್ಮ ಹಿರಿಕರು ಹಾಕಿಕೊಟ್ಟ ಆಲದ ಮರದಂತೆ ಬೃಹದಾಕಾರವಾಗಿ ಸಂಪ್ರದಾಯಗಳು ಚಾಚಿದ್ದು, ಇವು ನಮ್ಮ ಜನರ ಮನದ ಮೇಲೆ ಪ್ರಭಾವ ಬೀರಿ ನಿಯಂತ್ರಿಸುವುದರೊಂದಿಗೆ ದಬ್ಬಾಳಿಕೆ ಮಾಡುತ್ತಿವೆ. ಒಂದು ರೀತಿಯಲ್ಲಿ ಮೂಢನಂಬಿಕೆ ವೈದ್ಯಜ್ಞಾನ ಹಾಗೂ ಜನರ ನಡುವೆ ಅಡ್ಡಕೋಟೆ ಕಟ್ಟಿ ಎರಡು ಭಾಗ ಮಾಡಿದೆ.

ಪ್ರಸ್ತುತ ಸಂದರ್ಭದಲ್ಲಿಯೂ ವೈದ್ಯಜ್ಞಾನ ನಮ್ಮ ಹಳ್ಳಿ ಹಳ್ಳಿಗಳಲ್ಲಿ ನೆಲೆ ಊರಿರುವ ಜನಸಾಮಾನ್ಯರಿಗೆ ತಲುಪುವಲ್ಲಿ ಕ್ಷೀಣಿಸಿವೆ. ಜೊತೆಗೆ ಅವರನ್ನು ತನ್ನತ್ತ ಸೆಳೆದುಕೊಳ್ಳುವುದರಲ್ಲಿ ಶ್ರದ್ಧಾಪೂರ್ವಕವಾದ ಪ್ರಯತ್ನವಿಲ್ಲ. ಕೆಲವೇ ಕೆಲವರಿಗೆ ಮಾತ್ರ ವೈದ್ಯಪದ್ಧತಿ ದೊರೆಯುತ್ತಿರಬಹುದು. ನಮ್ಮಲ್ಲಿನ ಶೋಧನೆಗಳು ಕೂಡ ಮಿತಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಾಣುತ್ತೇವೆ. ಇಂದಿನ ದಿನಗಳಲ್ಲಿ ಮೆಟ್ರೊಪಾಲಿಟನ್ ಸಿಟಿ, ನಗರಗಳಲ್ಲಿ, ಮಲ್ಟಿನ್ಯಾಷನಲ್ ಕಂಪನಿಗಳು ದೊಡ್ಡ ಆಸ್ಪತ್ರೆಗಳು, ಸಂಶೋಧನಾ ಕೇಂದ್ರಗಳಾಗಿ ಪರಿವರ್ತನೆಗೊಳ್ಳುತ್ತಿವೆ. ದೊಡ್ಡಪ್ರಮಾಣದಲ್ಲಿ ಹಳ್ಳಿಗಳನ್ನು ಆಕರ್ಷಿಸುವ, ಮನವೊಲಿಸುವ ಹಾದಿ ಕುಂಟಿತಗೊಂಡಿವೆ. ಈ ಮೂಢನಂಬಿಕೆಗಳ ಭದ್ರಕೋಟೆ ಇವರಿಬ್ಬರ ನಡುವೆ ಕಂದಕವನ್ನೇ ಸೃಷ್ಟಿಸಿವೆ.

ಆದರೆ ಹಳ್ಳಿಯಲ್ಲಿರುವ ಜನಪದರು ನಂಬಿಕೆ, ಸಂಪ್ರದಾಯ, ಆಚರಣೆ, ರೂಢಿ ಇನ್ನೂ ಹಳೆಯ ಮಾದರಿಯನ್ನಾಧರಿಸಿ ಅಲ್ಲಿಯೇ ತಳ ಊರಿದ್ದಾರೆ. ಇಂತಹ ಸಂದಿಗ್ಧ ಸ್ಥಿತಿಯನ್ನು ನಮ್ಮ ಹಳ್ಳಿಗಳಲ್ಲಿ ಯಾವಾಗ ಸಮಾಪ್ತಿಗೊಳ್ಳುತ್ತವೆಯೋ ಬಳ್ಳಾರಿ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಜನಪದ

ವೈದ್ಯ, ರೋಗಿ, ಅನೇಕ ವಕ್ತೃಗಳನ್ನು ಬೇಟಿಯಾದ ಹೊತ್ತಿನಲ್ಲಿ ಅವರಿಂದ ಹೊರಚೆಲ್ಲಿದ ಅಂಶಗಳನ್ನು ಇಲ್ಲಿ ಅಡಕಗೊಳಿಸಲಾಗುವುದರೊಂದಿಗೆ ವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಹಸಿರು ಔಷಧಿ ಹೆಸರು ಹೇಳಿದರೆ ಮರೆತು ಹೋಗುವುದೆ?

ಜಾನಪದ ವಿವಿಧ ಔಷಧಿಯನ್ನು ನೀಡುವ ವೈದ್ಯರಿದ್ದಾರೆ ಹಳ್ಳಿಗಳಲ್ಲಿ. ಅವರಲ್ಲಿ ಒಂದು ರೀತಿಯ ಮೂಢನಂಬಿಕೆಗಳನ್ನು ತಾತ ಮುತ್ತಾರಿಂದ ಬಳುವಳಿಯಾಗಿ ಬಂದಿರುತ್ತವೆ. ಒಬ್ಬನಿಗೆ ತಿಳಿದಿರುವ ಔಷದಿ ಬರೀ ಒಂದೇ ರೋಗಕ್ಕಷ್ಟೇ ಇರಬಹುದು ಅಥವಾ ಅನೇಕ ರೋಗಗಳಿಗೆ ಇರಬಹುದಾಗಿದೆ. ಒಂದು ರೋಗಕ್ಕೆ ಔಷಧಿ ಕೊಡುವಾಗ ಚಿಗುರು, ಬೇರು, ಕಾಂಡ, ಎಲೆ ಹೀಗೆ ಇನ್ನೂ ಅನೇಕವಾದುವುಗಳ ಬಗ್ಗೆ ಒಬ್ಬ ಜನಪದ ವೈದ್ಯ ಇನ್ನೊಬ್ಬರಿಗೆ ಹೇಳಿಕೊಡುವ ಪದ್ಧತಿಯೂ ಇಲ್ಲ. ಹಾಗೇನಾದರೂ ಮಾಹಿತಿ ನೀಡಿದರೆ ಅವರ ವಿಧ್ಯೆ ನನ್ನಿಂದ ಮರೆತು ಹೋಗುವುದೆಂಬ ಮೂಢನಂಬಿಕೆ ಇದೆ. ಅಲ್ಲದೆ ಒಂದು ರೋಗಕ್ಕೆ ಬಳಸುವ ಸಾಮಾಗ್ರಿಗಳನ್ನೂ ಹೇಳಿದರೂ ಸಾಯುವ ಕೊನೆಗಳಿಗೆಯಲ್ಲಿ ತನಗೆ ಅತ್ಯಂತ ಪ್ರಿಯವಾದ ಮತ್ತು ರಕ್ತಸಂಬಂಧಿಯೊಂದಿಗೆ ಹೇಳುವನು.

ಹೀಗೆ ಮಾಡುವುದರಿಂದ ತಪ್ಪು ಮಾಡುತ್ತಿದ್ದೇನೆ ಎಂದು ಅರಿತುಕೊಳ್ಳೂವುದೂ ಇಲ್ಲ. ಔಷಧಿಯನ್ನು ಹೇಳಿದಾಕ್ಷಣ ಔಷಧಿ, ಅಥವಾ ಗಿಡಮೂಲಿಕೆಗಳಲ್ಲಿ ಇರುವ ವಸ್ತಗಳಲ್ಲಿ, ರೋಗಿಯ ಕಾಯಿಲೆ ಕಿಂಚಿತ್ತೂ ಯಾವುದೇ ರೀತಿಯ ಬದಲಾವಣೆ ಹೊಂದುವುದಿಲ್ಲ ಎಂಬುದನ್ನು ಅರಿಯಬೇಕು. ಈ ತೆರವಾದ ನಂಬಿಕೆಯನ್ನು ಹುಟ್ಟು ಹಾಕಿರುವರು. ಆದರೆ ಸ್ವಾರ್ಥ ಮತ್ತು ಅರಿಯದ ಜನರು ಅದರ ಲಾಭ ಪಡೆಯುತ್ತಾ ಆ ಸಾಂಪ್ರದಾಯವನ್ನೇ ಮುಂದುವರೆಸುವರು. ಅದು ಹಳ್ಳಿಗಳಲ್ಲಿ ಇಂದಿಗೂ ಮುಂದುವರೆಯುತ್ತಿದೆ ಎಂಬ ಅಂಶವನ್ನು ಮನಗಾಣಬೇಕು. ಬೇರೆಯವರಿಗೆ ಹೇಳಿದರೆ ತಮ್ಮ ಸುತ್ತಮುತ್ತ ಹಳ್ಳಿಗರು ಆ ಔಷಧಿಗಳನ್ನು ಬಳಸಿಕೊಂಡು ಅವರೇ ಬೇರೆ ಬೇರೆ ರೋಗಗಳಿಗೆ ಚಿಕಿತ್ಸೆ ನೀಡುವರು. ಹೀಗಾದಾಗ ಹಳ್ಳಿಗರು ತಮ್ಮನ್ನೇ ಕಾಡಿ ಬೇಡಿ, ದಕ್ಷಿಣೆ, ನೀಡುವವರಿಲ್ಲದಾಗುತ್ತಾರೆ ಎಂಬ ಹೆದರಿಕೆಯಿಂದ ಹಲವು ಜನಪದ ವೈದ್ಯರು ನಂಬಿರುವರು.

ಬೇವಿನ ಕಡ್ಡಿಯಿಂದ ಹಲ್ಲು ಉಜ್ಜುವುದು ಎಷ್ಟು ಉಪಯುಕ್ತ

ಸಾಮಾನ್ಯವಾಗಿ ಹಳ್ಳಿಯಲ್ಲಿ ನೆಲೆಸಿರುವಂತ ಜನಪದರು ಮುಂಜಾನೆ ಎದ್ದು ಹೊಲ, ಗದ್ದೆ, ತೋಟಗಳಿಗೆ ಹೋಗುವುದು ಸಹಜ. ಆಗ ಅವರು ನದಿಯ ದಂಡೆಯಲ್ಲಿ ಸಿಗುವ ಮರಳು, ಅಥವಾ

ಇದ್ದಲೂ ಕೆಮ್ಮಣ್ಣು, ಸಿದ್ದೆ ಮಣ್ಣಿನಲ್ಲಿ ಹಲ್ಲನ್ನು ಉಜ್ಜುತ್ತಾರೆ. ಇಂತಹವುಗಳನ್ನು ಉಪಯೋಗಿಸುವುದರಿಂದ ಎಷ್ಟು ಆಪಾಯಕರವೆಂಬುದು ತಿಳಿದಿರುವುದಿಲ್ಲ. ಹಲ್ಲುಗಳು ಶುಚಿಯಾಗುತ್ತವೆ ಎಂದು ಭಾವಿಸಿರುತ್ತಾರೆ. ಅಂತಹವುಗಳಲ್ಲಿ ರೋಗದ ಕ್ರಿಮಿಗಳಿದ್ದು; ರೋಗವನ್ನು ಸಹಜವಾಗಿ ತಂದೊಡ್ಡಿಕೊಳ್ಳುತ್ತಾರೆ. ಮಣ್ಣಿನಲ್ಲಿ ನುರುಜು ಕಲ್ಲುಗಳಿರುತ್ತವೆ. ಅಲ್ಲದೆ ಗಟ್ಟಿಯಾದ ಇದ್ದಲಿನಲ್ಲಿ ಗಟ್ಟಿಯಾದ ನುರುಜುಗಳಿರುತ್ತವೆ. ಇಂತವುಗಳಿಂದ ಹಲ್ಲು ಉಜ್ಜುವುದರಿಂದ ಹಲ್ಲಿನ ಬುಡದಲ್ಲಿರುವ ಅಂದ್ರಿನ ಮಾಂಶ ಕಿತ್ತು, ಕ್ರಮೇಣ ಗಾಯವಾಗುತ್ತಾ ದಿನನಿತ್ಯ ಹೀಗೆ ಮಾಡುವುದರಿಂದ ಕ್ರಮೇಣ ಹಲ್ಲು ಸವೆಯುತ್ತವೆ. ಆದುದರಿಂದ ಹಲ್ಲುಗಳು ಅಲ್ಲಾಡುವುದೇ ಹೆಚ್ಚು. ಕ್ರಮೇಣ ವಸಡಿನ ರೋಗಗಳು ಉದ್ಭವವಾಗುತ್ತದೆ.

ಇಂದಿಗೂ ಹಳ್ಳಿಗಳಲ್ಲಿ ಜನರು ಬೇವಿನ ಕಡ್ಡಿಯನ್ನು ತೆಗೆದುಕೊಂಡು ಒಂದೆರಡು ಸಲ ಜಗಿದು ಮೆದುವು ಮಾಡಿ ಬ್ರಷ್‌ನಂತೆ ತಿಕ್ಕುವರು. ಅದನ್ನು ಪರಿಪೂರ್ಣವಾಗಿ ಆರೋಗ್ಯಕರವಾಗಿ ಬಳಸುವ ರೀತಿಯನ್ನು ತಿಳಿದಿರುವುದಿಲ್ಲ. ಆದುದರಿಂದ ತಿಳಿದುಕೊಳ್ಳುವುದು ಸೂಕ್ತ. ಬೇವಿನ ಕಡ್ಡಿ ತುಂಬ ಬಲಿತಿರಬಾರದು ಜೊತೆಗೆ ಎಳಸಾಗಿರುವ ಕಡ್ಡಿಯನ್ನು ಉಪಯೋಗಿಸುವುದು ಹಲ್ಲು ಉಜ್ಜಲು ಸೂಕ್ತವಲ್ಲವೆಂಬುದನ್ನು ಮನಗಾಣಬೇಕು. ತುಂಬ ದಪ್ಪ ಜೊತೆಗೆ ಗಟ್ಟಿಯಾದ ಬೇವಿನ ಕಡ್ಡಿಯನ್ನು ಉಪಯೋಗಿಸುವುದರಿಂದ ಅದರ ಸಿಗುರುಗಳು ವಸಡಿಗೆ ಸಿಕ್ಕಿಕೊಂಡು ಹಲ್ಲಿಗೆ ಗಾಯ ಉಂಟು ಮಾಡಬಹುದಾಗಿದೆ. ಆದುದರಿಂದ ಹೆಚ್ಚು ಸೂಕ್ತವೆನ್ನಿಸುವ ರೀತಿಯಲ್ಲಿ ಕಡ್ಡಿಯನ್ನು ತೆಗೆದುಕೊಂಡು ಬ್ರಷ್ ಮಾಡಿ ಬಳಸಬೇಕು ಎಂಬುದನ್ನು ಅರಿಯಬೇಕು. ಹಳ್ಳಿಗಳಲ್ಲಿ ಇಂದಿಗೂ ಮಾವಿನ ಕಡ್ಡಿ, ಕೊಣಮಾವಿನ ಕಡ್ಡಿಗಳನ್ನು ಆರೋಗ್ಯದಾಯಕವಾಗಿ ಬಳಸಬೇಕು. ಇದರಿಂದ ಬಾಯಿಯ ದುರ್ನಾತ ನಾಶವಾಗುತ್ತದೆ. ಕೊಳೆ ನಿರ್ಮೂಲನವಾಗುವುದು. ಬೇವಿನ ಬೀಜಗಳನ್ನು ಪುಡಿಮಾಡಿ ಅದರ ಜೊತೆಗೆ ಅಡಿಗೆ ಉಪ್ಪು ಬಳಸಿ ಹಲ್ಲು ಉಜ್ಜಿದರೆ ಕ್ರಿಮಿಗಳು ಮರಣಗೊಂಡು ವಸಡುಗಳನ್ನು ರಕ್ಷಿಸಿಕೊಳ್ಳಬಹುದು. ಹಳ್ಳಿಯಲ್ಲಿ ನೆಲೆನಿಂತ ಜನಪದ ವೈದ್ಯರು ನಾಟಿ ವೈದ್ಯಪದ್ಧತಿ ಬಗ್ಗೆ ಗುಪ್ತವಾಗಿಡುವುದನ್ನು ಬಿಟ್ಟು ಮನಃಪೂರಕವಾಗಿ, ವಿಶಾಲದೃಷ್ಟಿಯಿಂದ ಇತರರಿಗೂ ಹೇಳಿಕೊಡಬೇಕು. ಸಾಯುವಾಗ ತಮ್ಮ ಜೊತೆಗೆ ಅದರ ಜ್ಞಾನವನ್ನು ತೆಗೆದುಕೊಂಡು ಹೋಗುವ ತುಂಬಾ ಸಣ್ಣತನ ಬೀಡಬೇಕು. ಜನಪರ, ಜನಹಿತದ ಕಾಳಜಿಯನ್ನು ಮನಸ್ಸಿನ ಅಂತರಂಗದಲ್ಲಿಟ್ಟುಕೊಂಡು ನಾಟಿ ಪದ್ಧತಿಯ ವೈದ್ಯರು ವೈದ್ಯವಿಜ್ಞಾನಕ್ಕೆ ಒತ್ತು ನೀಡಿದಾಗ ಮಾತ್ರ ಅವರ ಬದುಕು ಸಾರ್ಥಕವಾಗುತ್ತದೆ. ಜೊತೆಗೆ ಜನಸಾಮಾನ್ಯರಿಗೆ ಸಿಗುವ

ಮಾದರಿಯಲ್ಲಿ ನಾಟಿವೈದ್ಯಪದ್ಧತಿಯಿಂದ ವಿಂಗಡನೆ ಮಾಡಿ ಅವುಗಳನ್ನು ಗುಳಿಗೆ, ಇಂಜಕ್ಷನ್ ಹಾಗೂ ದ್ರವದ ರೂಪದಲ್ಲಿ ಉಪಯೋಗಿಸುವಂತಾದರೆ ಎಲ್ಲರಿಗೂ ಉಪಯುಕ್ತ ವಾಗುತ್ತದೆ ಎಂಬ ಅಂಶವನ್ನು ಅರಿಯಬೇಕು.

ಇರುಳುಗಣ್ಣು ಅಥವಾ ಸಂಜೆಗಣ್ಣು

ಕ್ಷೇತ್ರಕಾರ್ಯದ ಅನ್ವೇಷಣೆಯಲ್ಲಿ ಬಳ್ಳಾರಿಯ ವ್ಯಾಪ್ತಿಯ ಒಳಗೆ ಬರುವ ಅನೇಕ ಹಳ್ಳಿಗಳಲ್ಲಿ ನೆಲಸಿರುವ ಜನಪದರನ್ನು ಬೇಟಿಯಾಗುತ್ತಿದ್ದೆ. ನನಗೆ ಅಶ್ಚರ್ಯ ಜೊತೆಗೆ ಎಂತಹ ಮುಗ್ಧ ಜನಪದರು ಇನ್ನೂ ನಾಟಿ ವೈದ್ಯಪದ್ಧತಿಯಲ್ಲಿ ಒಡನಾಟವನ್ನು ಇರಿಸಿಕೊಂಡಿದ್ದಾರೆ ಅನ್ನಿಸಿತು. ನಾಟಿ ವೈದ್ಯಪದ್ಧತಿಯನ್ನು ಅನುಸರಿಸಲಿ. ಆದರೆ ಮೂಢನಂಬಿಕೆಗಳು ಇನ್ನೂ ಜೀವಂತವಾಗಿ ಇವೆಯಲ್ಲ. ಆದುದರಿಂದ ಎಲ್ಲರೂ ಆಧುನಿಕತೆಯ ಒಡನಾಟದೊಂದಿಗೆ ಬದುಕಲು ಹಾತೋರಿಯುತ್ತಿದ್ದಾರೆ. ಆದರೆ ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಬದುಕನ್ನು ಮುಂದೂಡುತ್ತಿರುವ ಜನಪದರನ್ನು ಬಹಳ ಸೂಕ್ಷ್ಮತೆಯಿಂದ ಅವರಲ್ಲಿ ಒಬ್ಬರಾಗಿ ಇಂತಹವುಗಳ ಬಗ್ಗೆ ತಿಳುವಳಿಕೆಯನ್ನು ನೀಡಬೇಕೆನ್ನಿಸಿತು.

ಇರಳುಗಣ್ಣು ಎಂಬುದು ವಂಶಪಾರಂಪರ್ಯವಾಗಿ ಬರುವುದೇನಲ್ಲ. ಅಂದರೆ ಇರುಳುಗಣ್ಣು ಎಂದರೆ ಏನು ಎಂಬ ಪ್ರಶ್ನೆ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಒಬ್ಬ ವ್ಯಕ್ತಿಗೆ ಹಗಲು ಹೊತ್ತಿನಲ್ಲಿ ಕಣ್ಣಿನ ದೃಷ್ಟಿ ಚೆನ್ನಾಗಿದ್ದು, ಸೂರ್ಯ ಇಳಿಯುತ್ತಿದ್ದಂತೆ ಸಂಜೆಯಾಗುತ್ತದೆ. ಈ ಸಂದರ್ಭದಲ್ಲಿ ಕಣ್ಣಿನ ದೃಷ್ಟಿ ಮಂಜಾಗುತ್ತಾ ಕತ್ತಲಾಗುತ್ತಿದ್ದಂತೆ ಕಣ್ಣು ಕಾಣುವುದಿಲ್ಲ. ಇದಕ್ಕೆ ಇರಳುಗಣ್ಣು ಎಂದು ಕರೆಯುತ್ತಾರೆ. ಇಂತಹ ವ್ಯಕ್ತಿಗಳು ಬಿಸಿಲಿನಿಂದ ಮನೆ ಒಳಗೆ ಬಂದಾಗ ಇತರರಿಗಿಂತ ದೃಷ್ಟಿ ಪಡೆಯಲು ಹೆಚ್ಚು ವೇಳೆ ತೆಗೆದುಕೊಳ್ಳುವುದಂತು ವಾಸ್ತವ ಸತ್ಯ.

ಈ ಮೇಲಿನ ಅಂಶಗಳಿಗೆ ಇಂಬು ಕೊಡುವುದಾದರೆ ವೈಜ್ಞಾನಿಕ ಸತ್ಯಾಸತ್ಯತೆಯ ಮೊರೆ ಹೊಕ್ಕಾಗ ಮಾತ್ರ ಅರಿವಾಗುವುದು. ಆರೋಗ್ಯವಂತ ಮನುಷ್ಯನ ದೇಹಸ್ಥಿತಿ ಕ್ಷೀಣಿಸುವುದು ಏತಕ್ಕೆ ಎಂದು ಪ್ರಶ್ನೆ ಇಟ್ಟುಕೊಂಡು ಮುಂದೆ ಸಾಗಬೇಕಾಗುತ್ತದೆ. ಮನುಷ್ಯನಿಗೆ ಜೀವಸತ್ವಗಳು ಇರಬೇಕು. ಆದರಲ್ಲೂ ಇರಳುಗಣ್ಣಿಗೆ 'ಎ' ಜೀವಸತ್ವದ ಕೊರತೆ ಕಂಡುಬಂದಾಗ ಈ ತೇರನಾದ ಕಾಯಿಲೆ ಕಾಣುವುದು ಸಹಜ. ಆದರೆ ಹಳ್ಳಿಗರಿಗೆ ಇದ್ಯಾವುದೋ ದೈವ ಇಲ್ಲಾ ಮಾಟ-ಮಂತ್ರದಿಂದ ಎಂದು ನಂಬುತ್ತಾರೆ. ಇದ್ಯಾವುದು ಅಲ್ಲ. 'ಎ' ಜೀವಸತ್ವ ಇಂತಿಷ್ಟೇ ಪ್ರಮಾಣದಲ್ಲಿ ಇರಬೇಕೆಂಬುದನ್ನು ಮನನ ಮಾಡಿಕೊಳ್ಳಬೇಕು. 'ಎ'

ಜೀವಸತ್ವ ಕಡಿಮೆಯಾದಲ್ಲಿ ಮೈ ಚರ್ಮ ಒಣಗಿ ಸಿಪ್ಪೆ ಎಳಲು ಪ್ರಾರಂಭವಾಗುತ್ತದೆ. ಆದಾದ ನಂತರದಲ್ಲಿ ಇರಳುಗಣ್ಣು ಕಾಣಿಸಿಕೊಳ್ಳುವುದು. ಹಳ್ಳಿಯ ಜನಪದರಿಗೆ ಇರಳುಗಣ್ಣು ಬಂದಾಗ ನಾಟಿ ವೈದ್ಯನು ಅವಕ್ಕೆ ಸೊಪ್ಪನ್ನು ಗೆಜ್ಜಿ ಅಥವಾ ಹಿಂಡಿ ಇದರ ರಸ ಮತ್ತು ಆಡಿನ ಈಲಿಯನ್ನು ಜೊತೆಯಲ್ಲಿ ಹರಿದು ತಿನ್ನಲಿಕ್ಕೆ ಕೊಡುವರು. ಇದರಿಂದ ಗುಣ ಮುಖವಾಗುವುದು. ಇದೊಂದು ಪದ್ಧತಿ. ಇನ್ನೊಂದು ಅಂಶವೆಂದರೆ ಮುಂಜಾನೆ ಮಂಜಿನ ನೀರನ್ನು ಕಣ್ಣಿಗೆ ಹಾಕಿದರೆ ಕಾಯಿಲೆ ಬೇಗನೆ ವಾಸಿಯಾಗುತ್ತದೆ ಎಂಬ ನಂಬಿಕೆನೂ ಉಂಟು. ಆದರೆ ಇದು ಸತ್ಯಕ್ಕೆ ದೂರವೆಂಬುದನ್ನು ಮರೆಯುವಂತಿಲ್ಲ.

ಅವರ್ಕೆಸೊಪ್ಪು ಮತ್ತು ಈಲಿಯಲ್ಲಿ ಕೆರಟಾಸಿನ್ ಎಂಬ ವಸ್ತು ಇರುತ್ತದೆ. ಇದು ರೋಗಿಯ ಪಿತ್ತಜನಕಾಂಗದಲ್ಲಿ 'ಎ' ಜೀವಸತ್ವವಾಗಿ ರೂಪಾಂತರಗೊಂಡು ವ್ಯಕ್ತಿಯ ಶರೀರಕ್ಕೆ ಎಷ್ಟು ಬೇಕು ಅಷ್ಟು 'ಎ' ಜೀವಸತ್ವ ಉತ್ಪತಿಗೊಂಡು ಅಂಗಗಳಿಗೆ ಪೂರೈಕೆಯಾಗುತ್ತದೆ. ಆಗ ರೋಗಿಯು ಈ ಇರಳುಗಣ್ಣಿನಿಂದ ನರಳುವುದು ತಪ್ಪುತ್ತದೆ. ಈ ತೆರನಾದ ವೈದ್ಯಪದ್ಧತಿಯಿಂದ ರೋಗಪಿಡಿತನಾದ ವ್ಯಕ್ತಿ ಗುಣಮುಖವಾಗಲು ತುಂಬಾ ದಿವಸಗಳು ಅವಶ್ಯಕ. ಆದರೆ ವೈಜ್ಞಾನಿಕ ವೈದ್ಯ ಪದ್ಧತಿಯು ಆಧುನಿಕತೆಯಿಂದ ಕೂಡಿದ್ದು, ಈ ಕಾಯಿಲೆ ಅತಿಶೀಘ್ರುವಾಗಿ ವಾಸಿಯಾಗುವುದು. ಇಂತಹ ಔಷದಿಗಳು ಕೂಡ ಜನಸಾಮಾನ್ಯರಿಗೆ ಕಡಿಮೆ ಬೆಲೆಯಲ್ಲಿ ದೊರಕುವುದರಿಂದ ಬಹುಬೇಗನೆ ವಾಸಿ ಮಾಡಿಕೊಳ್ಳಬಹುದಾಗಿದೆ. ಈಗಲೂ ಹಳ್ಳಿಗಳಲ್ಲಿ ಮಳ್ಳಿಮೀನುಗಳನ್ನು ಜೀವಂತವಾಗಿ ನುಂಗಲು ಕೊಡುವರು. ಆದರೆ ಕಾಡ್ ಮತ್ತು ಶಾರ್ಕ ಮೀನುಗಳ ಎಣ್ಣೆಯನ್ನು ತೆಗೆಯಲಾಗುತ್ತದೆ. ಆ ಎಣ್ಣೆಯನ್ನು ನಿಗದಿತ ಪ್ರಮಾಣದಲ್ಲಿ ಬಳಸುವುದರಿಂದ ಇರಳುಗಣ್ಣಿನಿಂದ ಬಿಡುಗಡೆ ಹೊಂದಬಹುದು.

ಮುಂದುವರೆದು ಹೇಳುವುದಾದರೆ 'ಎ' ಜೀವಸತ್ವವಿರುವ ಆಹಾರ ಪದಾರ್ಥಗಳನ್ನು ಉಪಯೋಗಿಸಬೇಕು. ಅವುಗಳೆಂದರೆ ಬೆಣ್ಣೆ, ಮೀನು, ಮೊಟ್ಟೆ, ಈಲಿ, ಹಾಲು, ಸೊಪ್ಪು, ಮೂಲಂಗಿ ಇನ್ನೂ ಅನೇಕ ಆಹಾರ ಪದಾರ್ಥಗಳಲ್ಲಿ ಹೆಚ್ಚಾಗಿ ಇರುತ್ತದೆ. ಇವುಗಳ ಸೇವನೆಯಿಂದ 'ಎ' ಜೀವಸತ್ವ ಸಿಗುವುದರಿಂದ ಇರಳುಗಣ್ಣನ್ನು ಬರದಂತೆ ತಡೆಯಬಹುದಾಗಿದೆ. ಜನಸಂಖ್ಯೆ ಹೆಚ್ಚಾಗಿದ್ದು, ಆರ್ಥಿಕ ಅಭಾವ ತಲೆದೊರುತ್ತಿದೆ. ಇದರಿಂದ ಪೌಷ್ಟಿಕ ಅಂಶದ ಆಹಾರ ಬಳಸಲು ಸಾಧ್ಯವಾಗುತ್ತಿಲ್ಲ. ಇಂದಿಗೂ ಪಟ್ಟಣಗಳಲ್ಲಿರುವ ಕೊಳಚೆ ನಿವಾಸಿಗಳಲ್ಲಿ, ಅಲೆಮಾರಿಗಳಲ್ಲಿ, ಜೊತೆಗೆ ಹಳ್ಳಿಯ ಮುಗ್ಧ ಮಕ್ಕಳಲ್ಲಿ ಇಂದಿಗೂ ಚಿಕ್ಕಂದಿನಲ್ಲೇ ದೃಷ್ಟಿ ಇಲ್ಲದಂತಾಗುತ್ತಿದ್ದಾರೆ. ಆದುದರಿಂದ ಸುಲುಬೋಪಾಯವನ್ನು ಬಳಸಿ ಜನಸಾಮಾನ್ಯರಿಗೆ ತಲುಪುವಂತೆ ಸರಕಾರ ಮತ್ತು ಅನೇಕ ಸಂಸ್ಥೆಗಳು ಯೋಜನೆಗಳನ್ನು ಹಾಕಿಕೊಂಡರೆ ಇಂತಹ ಅನೇಕ ರೋಗ ನಿವಾರಣೆಗಳತ್ತ ಗಮನ ಹರಿಸುವುದು ಇಂದು ಅವಶ್ಯಕ.

ಹೊಟ್ಟೆ ನೋವಿಗೆ ಸುಡುವ ಮೂಢ ಚಿಕಿತ್ಸಾ ಪದ್ಧತಿ ಸರಿಯೇ

ಈ ರೋಗ ಬೇರೆ ಬೇರೆ ರೋಗಗಳಿಗೂ ಕಾರಣವಾಗಿರುತ್ತದೆ. ಇಂತಹ ಹೊಟ್ಟೆ ನೋವಿಗೆ ಕಾರಣಗಳು ಅನೇಕ. ನಮಗೆ ನಿಮಗೆ ಗೊತ್ತಿರುವ ಹಾಗೆ ಸಾಮಾನ್ಯವಾಗಿ ಹಳ್ಳಿಯ ಜನರಿರಲಿ ಇಲ್ಲಾ ಪಟ್ಟಣದ ಜನರಿರಲಿ ಬಾಯಿಯ ರುಚಿಯನ್ನು ತಡೆಹಿಡಿಯಲಾಗದೆ ಇಷ್ಟವಾದದನ್ನು ತುಂಬಾ ತಿನ್ನುವಂತಹದ್ದು. ಇದರಿಂದ ಮನುಷ್ಯ ತಿಂದ ಆಹಾರ ಜೀರ್ಣವಾಗದೆ ಅಜೀರ್ಣವಾದಾಗ ಹೊಟ್ಟೆ ಒಳಗೆ ನುಲಿಯುವಂತದ್ದು, ಇಲ್ಲಾ ಹೊಟ್ಟೆಯ ಮಾಂಸಖಂಡಗಳು ಸಡಿಗೊಳ್ಳದೆ ಬೀಗಿದಾಗ, ಆಗಿಂದಾಗ್ಗೆ ಮಲಬದ್ಧತೆ ಆದಾಗ, ಅಥವಾ ರಕ್ತಬೇಧಿ, ಬೇಧಿ ಉಂಟಾದಾಗ ಹೀಗೆ ಇನ್ನೂ ಅನೇಕ ಕಾರಣಗಳಿಂದ ಹೊಟ್ಟೆನೋವು ಬುರುವುದಂತೂ ನಿಜ. ಈ ಸಂದರ್ಭದಲ್ಲಿ ಹೊಟ್ಟೆ ಒಳಗೆ ಕರಳು, ವಪೆ, ಪ್ಲೀಹ, ಪ್ರಧಾನವಾಗಿ ಜಠರ, ಪಿತ್ತಜನಕಾಂಗ ಹೀಗೆ ಅನೇಕ ರೋಗಗಳಿಗೆ ಕಾರಣವಾಗುತ್ತದೆ.

ಸಾಮಾನ್ಯವಾಗಿ ಹೊಟ್ಟೆ ನೋವಿಗೆ ಹೊಟ್ಟೆಯ ಮಾಂಸ ಖಂಡಗಳು ಸ್ಥಗಿತಗೊಂಡೋ ಇಲ್ಲಾ ಬಿಗಿತವಾದಾಗ ಈ ನೋವು ಕಾಣಿಸುವುದು ಸಹಜ ಅಥವಾ ನಾವು ಸೇವಿಸಿದ ಆಹಾರ ವಿಪರೀತವಾಗಿದ್ದು, ಇಲ್ಲಾ ತಟ್ಟೆಯಲ್ಲಿ ಇರುವಂತದ್ದೆಲ್ಲವನ್ನೂ ತಿಂದಾಗ ಹೊಟ್ಟೆ ಒಳಗೆನೇ ಒಂದು ರೀತಿಯ ನುಲಿಯುವಿಕೆ ಆರಂಭವಾಗುವುದು. ಇಲ್ಲಾ ಅಜೀರ್ಣವಾಗುವ ಸಾಧ್ಯತೆ ಇಲ್ಲದಿರುವಾಗ ಈ ರೀತಿ ನೋವು ಕಾಣುವುದುಂಟು. ಅಲ್ಲದೆ ಆಗಾಗ ಮಲಬದ್ಧತೆ ಉಂಟಾಗುವುದು. ಇದು ಹೊಟ್ಟೆ ನುಲಿತದಿಂದ ಉಂಟಾಗುವುದು. ಅಲ್ಲದೆ ಸೃಷ್ಟಿಯಾಗುವ ಕೊಕ್ಕೆಹುಳು, ಬಾಡಿಹುಳು, ಎರೆಹುಳ ಇನ್ನೂ ಕೆಲವು ಹುಳ ಹೊಟ್ಟೆಯೊಳಗೆ ಸುತ್ತಿಕೊಂಡು ಕರುಳಿನಲ್ಲಿ ಆಹಾರ ಸರಿಯಾದ ರೀತಿಯಲ್ಲಿ ಸರಬರಾಜು ಆಗುವುದಿಲ್ಲ. ಆದುದರಿಂದ ತೊಂದರೆ ಉಂಟಾಗುತ್ತದೆ. ಅಲ್ಲದೆ ಈ ಹುಳುಗಳು ಉಂಟು ಮಾಡುವ ಹುಣ್ಣುಗಳಿಂದ ಹೊಟ್ಟೆ ನೋವು ಕಾಣಿಸಿಕೊಳ್ಳುವುದು.

ವೈಜ್ಞಾನಿಕವಾಗಿ ಇನ್ನೂ ಕೆಲವು ಕಾರಣಗಳು ಇರುತ್ತವೆ. ನಮ್ಮ ಹಳ್ಳಿಯ ಜನಪದರು ಮೊದಲೇ ಮುಗ್ಧರಾಗಿರುವುದರಿಂದ ಅದು ದೈವದ ಹಿನ್ನಲೆಯಿಂದ ಉಂಟಾಗಿದೆ ಅಂತಲೋ ಅಥವಾ ಮನೆಯ ಮದ್ದಿನಿಂದ ತಾವೇ ಸುಟ್ಟಿಕೊಳ್ಳುವಲ್ಲಿ ದಮನ ಮಾಡುವ ಪ್ರಯತ್ನಗಳಿಂದ ಅನೇಕ ವೈರುಧ್ಯಗಳಿಗೆ ಸಿಲುಕುವ ಸಾಧ್ಯತೆ ಹೆಚ್ಚು.ಆಗಿಂದಾಗ್ಗೆ ಮನಷ್ಯನಿಗೆ ಆಮಶಂಕೆ ಉಂಟಾಗುತ್ತದೆ. ಇದಕ್ಕೆ ಕಾರಣಗಳು ಗೊತ್ತಿರುವುದಿಲ್ಲ. ಮಜ್ಜಿಗೆ, ಮೊಸರು ಜಾಮುನು ಇಲ್ಲಾ ಮರದ ಚೆಕ್ಕೆಯ ರಸ ಕುಡಿಯುವುದು ಪದ್ಧತಿ.

ಬೇದಿಗೆ ಅಥವಾ ಆಮಶಂಕೆಗೆ ಕಾರಣ ಅಂದರೆ ಎಂಟಮೀಬ ಹಿಸ್ಟೋಲಿಟಿಕಾ ಅಂತ ಜಾತಿಯ ಹುಳಗಳು ಹೊಟ್ಟೆಯ ಕರುಳಿನಲ್ಲಿ ಆಶ್ರಯ ಪಡೆಯುವುದರಿಂದ ಅಂತ ಸಂದರ್ಭದಲ್ಲಿ ಹುಣ್ಣುಗಳಿಂದ ಹೊಟ್ಟೆ ನೋವು ಆರಂಭವಾಗುವುದು. ಅಲ್ಲದೆ ಇನ್ನೊಂದು ಜಾತಿಯ ಕ್ರಿಮಿಗಳು ಕರುಳಿನಲ್ಲಿ ಗಾಯಮಾಡಿ ರಕ್ತ ಹೀರಿ ಬದುಕಲು ಆರಂಭಿಸುತ್ತವೆ. ಆಗ ಬೇದಿ ತಾನಾಗಿಯೇ ಆರಂಭವಾಗುವುದು. ಆಮೇಲೆ ಟೈಫಾಯಿಡ್ ಕ್ರಿಮಿಗಳು ಕರುಳಲ್ಲಿ ಹುಣ್ಣುಗಳನ್ನು ಉಂಟು ಮಾಡುತ್ತವೆ. ಆದುದರಿಂದ ಹೊಟ್ಟೆನೋವು ಆರಂಭವಾಗುವುದು ಸಹಜ.

ಈ ಹೊಟ್ಟೆನೋವು ಬೇರೆ ಬೇರೆ ಕಾರಣಗಳಿಂದ ಉಂಟಾಗುತ್ತದೆ. ಆದರೆ ಹಳ್ಳಿಯ ಜನಪದರು ತಮ್ಮ ಆಲೋಚನೆಗಳಿಂದ ತಮ್ಮದೇ ಔಷಧಿಗಳನ್ನು ಕಂಡುಕೊಳ್ಳುವರು. ಆದರೆ ಈ ಹೊಟ್ಟೆನೋವಿಗೆ ಏನು ಕಾರಣ. ಶರೀರದಲ್ಲಿ ಯಾವ ಯಾವ ಅಂಗಾಂಗಗಳಲ್ಲಿ ಅದು ಹುಟ್ಟಿಕೊಳ್ಳುತ್ತದೆ. ಜೊತೆಗೆ ವೈಜ್ಞಾನಿಕ ಅಂಶಗಳೇನು? ಎಂಬ ಅರಿವು ಅವರಿಗೆ ಗೊತ್ತಿರುವುದಿಲ್ಲ. ಆದ್ದರಿಂದ ಅವರ ಮೂಢ ನಂಬಿಕೆಗಳಿಂದ ಹೊಟ್ಟೆಗೆ ಕಬ್ಬಿಣದ ಸಣ್ಣ ಸರಳಿನಿಂದ ಸುಡಿಸಿಕೊಳ್ಳುವುದು, ಬಳೆಯ ಗಾಜಿನ ಚೂರಿನಿಂದ ಹೊಟ್ಟೆಯ ಸುತ್ತ ಸುಡಿಸಿಕೊಳ್ಳುವುದು, ಅಥವಾ ಹಂಬು ಇಲ್ಲಾ ಬೇರೆ ಬೇರೆ ಉಪಕರಣಗಳಿಂದ ಸುಟ್ಟರೆ ವಾಸಿಯಾಗುತ್ತದೆ ಎಂಬ ನಂಬಿಕೆ ಇಂದಿಗೂ ಜನಪದರಲ್ಲಿ.

ವೈಜ್ಞಾನಿಕವಾಗಿ ಹೇಳುವುದಾದರೆ ಮನುಷ್ಯನಿಗೆ ಹಲವಾರು ರೀತಿಯಿಂದ ಹೊಟ್ಟೆನೋವು ಕಾಣಿಸುತ್ತದೆ. ೧ ಕಲ್ಲುಗಳ ಶೇಖರಣೆ, ೨. ಪೆಪ್ಟಿಕ್ ಹುಟ್ಟು, ೩. ಇವತ್ತಿನ ದಿನಗಳಲ್ಲಿ ಕ್ಷಯ, ಕ್ಯಾನ್ಸರ್ ಗೆ ವಾಲುವಿಕೆ, ಇನ್ನಿತರವಾದ ಅಂಶಗಳಿಂದ ಈ ರೋಗ ಬರುವ ಸಾಧ್ಯತೆಗಳಿವೆ.

ಮೂತ್ರಜನಕಾಂಗ ಮತ್ತು ಪಿತ್ತಜನಕಾಂಗಗಳಲ್ಲಿ ಕಲ್ಲುಗಳು ರಾಸಾಯನಿಕವಾಗಿ ಉತ್ಪತ್ತಿಯಾಗುತ್ತವೆ. ದಿನದಿನಕ್ಕೆ ಸಣ್ಣ ಕಲ್ಲುಗಳು ಗಾತ್ರದಲ್ಲಿ ಬೆಳೆಯುತ್ತಾ ಹೋಗುವುದರಿಂದ ಇಂತಹ ಕಲ್ಲುಗಳು ಮೂತ್ರ ಮತ್ತು ಪಿತ್ತರಸದ ಸಾಗುವಿಕೆಗೆ ಅಡಚಣೆ ಮಾಡಿ ಇದಕ್ಕೆ ಪೂರಕವಾದ ಅಂಗಗಳು ಸೊಂಕಿಗೀಡಾಗುವುದು ನಿಜ. ಇದರ ಪರಿಣಾಮವೇ ಹೊಟ್ಟೆ ನೋವು. ಪೆಪ್ಟಿಕ್ ಹುಣ್ಣು ಹೊಟ್ಟೆಯಲ್ಲಿನ ಡಿಯೋಡಿನಂ ಹಾಗೂ ಜಠರವು ಒಸರುವ ರಸಗಳಲ್ಲಿ ಆಮ್ಲ ಮತ್ತು ಜೀರ್ಣಕಾರಕಗಳು ಇರುತ್ತವೆ. ಜಠರ ಹೈಡ್ರೋಕ್ಲೋರಿಕ್ ಆಮ್ಲವನ್ನು ಹೊರಸೂಸುತ್ತದೆ. ಈ ಎರಡು ಭಾಗಗಳಲ್ಲಿ ಆಮ್ಲದ ಮಟ್ಟ ಜಾಸ್ತಿಯಾದರೆ ಇಲ್ಲವೇ ಆಮ್ಲವನ್ನು ಪಡೆದುಕೊಳ್ಳಬಲ್ಲ ಶಕ್ತಿಯನ್ನು ಈ ಭಾಗಗಳಲ್ಲಿರುವ ತೆಳುಪೊರೆ ಕಳೆದುಕೊಂಡರೆ ತೆಳುಪೊರೆಯು ನಸಿಸಿ ಕೆಲವು ದಿನಗಳಲ್ಲಿ ಹುಣ್ಣುಗಳಾಗುವುದಕ್ಕೆ ಅವಕಾಶ ಕಲ್ಪಿಸುತ್ತದೆ. ಇದರಿಂದ

ಹೊಟ್ಟೆನೋವು ಕಾಣುತ್ತದೆ. ಅಪೆಂಡಿಕ್ಸ್ ಸೋಂಕಿಗೆ ಒಳಗಾದಾಗಲೂ ತುಂಬಾ ಹೊಟ್ಟೆ ನೋವು ಉಂಟಾಗುತ್ತದೆ.

ಆ ಮೇಲೆ ಕ್ಷಯ ರೋಗವು ದೇಹದ ವಿವಿಧ ಭಾಗಗಳಲ್ಲಿ ಅಂದರೆ ಪೆರಿಟೊಸಿಯಂ, ಮೂತ್ರಪಿಂಡ, ಕರುಳು ಹೀಗೆ ಕಾಣಿಸಿಕೊಳ್ಳುತ್ತದೆ. ಕರುಳಿನ ಕ್ಷಯ ಸಾಮಾನ್ಯವಾಗಿ ದೊಡ್ಡ ಕರುಳಿನ ಮೊದಲ ಭಾಗದಲ್ಲಿ ಆಗುವುದರಿಂದ ಹೊಕ್ಕಳಿನ ಮಟ್ಟದಿಂದ ಸ್ವಲ್ಪ ಕೆಳಗೆ ಹೊಟ್ಟೆಯ ಬಲಭಾಗದಲ್ಲಿ ನೋವು ಕಂಡುಬರುವ ಸಾಧ್ಯತೆ ಹೆಚ್ಚು. ಸಾಮಾನ್ಯವಾಗಿ ಶರೀರದಲ್ಲಿ ಕ್ಯಾನ್ಸರ್ ತಲುಪದೆ ಇರುವ ಯಾವ ಅಂಗವೂ ಇಲ್ಲ. ಇದು ಪಿತ್ತಜನಕಾಂಗ, ಜಠರ, ಮೂತ್ರ ಜನಕಾಂಗ, ಗುದನಾಳ ಅಲ್ಲದೆ ಸಾಮಾನ್ಯವಾಗಿ ಹೆಂಗಸರಲ್ಲಿ ಅಂಡನಾಳ, ಅಂಡಾಶಯ, ಗರ್ಭಚೀಲ ಇನ್ನೂ ಅನೇಕ ಭಾಗಗಳಲ್ಲಿ ಕ್ಯಾನ್ಸರ್ ಉಂಟಾಗಿ ಹೊಟ್ಟನೋವಿಗೆ ಕಾರಣವಾಗುತ್ತಾರೆ ಮನುಷ್ಯನರು.

ಆದರೆ ನಮ್ಮ ಹಳ್ಳಿಯ ಜನಪದರು ಹೊಟ್ಟೆನೋವಿಗೆ ಬೇಗನೆ ಗುಣಮುಖವಾಗಲೆಂಬ ಆತುರದಿಂದ ತಾತ್ಕಾಲಿಕವಾಗಿ ನೋವನ್ನು ಮರೆಮಾಡಲು ವಿವಿಧ ಔಷಧ ಚಿಕಿತ್ಸೆಯನ್ನು ಇವತ್ತಿಗೂ ಮಾಡಿಕೊಳ್ಳುವರು. ಬಳ್ಳಾರಿಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೋಡಿದ ಅಂಶಗಳನ್ನು ಇಲ್ಲಿ ಬರೆಯುತ್ತಿದ್ದೇನೆ. ಹೊಟ್ಟೆಯ ಮೇಲೆ ಊತ ಇಲ್ಲಾ ಗಾಯವಾಗಿ ನೋಯುತ್ತಿದ್ದರೆ ಒಂದು ಹಿಡಿ ಉಪ್ಪನ್ನು ತೆಗೆದುಕೊಂಡು ಬಟ್ಟೆಯಲ್ಲಿ ಕಟ್ಟಿ, ಬಿಸಿ ಮಾಡಿ ಅದರ ಮುಖೇನ ನೋಯುತ್ತಿರುವ ಭಾಗದ ಮೇಲೆ ಶಾಖ ಕೊಡುವರು. ಇಲ್ಲಾ ಬೀನ ಬೂದಿ ಉಜ್ಜುವರು, ಅಥವಾ ಪಾತ್ರೆಯನ್ನು ನೋವು ಇರುವಲ್ಲಿ ಇಟ್ಟು ಶಾಖ ಕೊಡುವರು. ಹೊಕ್ಕಳೀಗೆ ಹತ್ತಿ, ಕಳ್ಳಿ ಹಾಲು ಹಾಕುವುದರಿಂದಲೂ ನೋವು ವಾಸಿಯಾಗುವುದೆಂದು ಹಳ್ಳಿಗಳಲ್ಲಿ ನಂಬಿರುತ್ತಾರೆ.

ಈ ಮೇಲಿನ ಅಂಶಗಳನ್ನು ನಿಗೂಢತೆ ಅರಿಯುವುದಾದರೆ ಹೊಟ್ಟೆಯಲ್ಲಿನ ನೋವನ್ನು ನರತಂತುಗಳು ಸೂಚಕಗಳ ಮೂಲಕ ಮೆದುಳಿಗೆ ಒಯುತ್ತವೆ. ಆಗ ಮೆದುಳಿಗೆ ಆ ನೋವಿನ ಅರಿವಾಗುವುದು. ಆ ಸಂದರ್ಭದಲ್ಲಿ ಬಳಸಿದ ವಿಧಾನಗಳು ನರತಂತುಗಳ ಕಾರ್ಯವನ್ನು ಸ್ಥಗಿತಗೊಳಿಸಿ ಹೊಟ್ಟೆ ಸೋವುಂಡ ವ್ಯಕ್ತಿಗೆ ಆ ನೋವಿನ ಅನುಭವ ಕಡಿಮೆಯಾಗುತ್ತದೆ. ನೋವು ವಿವಾರಕ(Analgesics) ಔಷಧಿಗಳು ಕೂಡ ಇದೇ ತತ್ವದ ಆಧಾರದ ಹಿನ್ನಲೆಯಲ್ಲಿ ಕಾರ್ಯತತ್ಪರವಾಗಿರುತ್ತವೆ. ಈ ಎಲ್ಲಾ ವಿಧಾನಗಳಿಂದ ನೋವಿಗೆ ಆ ಕ್ಷಣದ, ಸಂದರ್ಭದ ತಾತ್ಕಾಲಿಕ ನಿವಾರಣೆಯೇ ಹೊರತು ಶಾಶ್ವತವಾಗಿರುವುದಿಲ್ಲ. ಆ ನೋವು ಇನ್ಯಾವಗಲಾದರೂ ಕಾಣಿಸಿಕೊಳ್ಳಬಹುದಾಗಿರುತ್ತದೆ. ಪುನಃ ಈ

ಮೊದಲಿನ ವಿಧಾನಗಳನ್ನು ಅನುಸರಿಸಿದರೆ ನೋವಿನ ಮೂಲ ಮರುಕಳಿಸಿ ರೋಗ ನಿಯಂತ್ರಣದಲ್ಲಿರದೆ ಮಿತಿ ಮೀರುತ್ತದೆ.

ಹಳ್ಳಿಗರಲ್ಲಿ ಇನ್ನೊಂದು ಬಹಳ ಪ್ರಧಾನ ನಂಬಿಕೆ ಅಂದರೆ ಹೊಟ್ಟೆನೋವು ಬಂದಾಗ ನಿಂಬೆಹುಳಿನ ಜತೆಗೆ ಅಡಿಗೆ ಸೋಡಾ ಹಾಕಿ ನೀರನ್ನು ಸೇರಿಸಿ ಕುಡಿಸುವುದು. ಹೊಟ್ಟೆ ನೋವಿಂದ ನರಳುವವರು ಬಹಳಷ್ಟು ಜನ ಅಜೀರ್ಣದಿಂದ ಅಥವಾ ಜಠರ ಮತ್ತು ಡಿಯೋಡಿನಂನಲ್ಲಿ ಅತಿಯಾದ ಹೈಡ್ರೋಕ್ಲೋರಿಕ್ ಆಮ್ಲದ ಒಸರುವಿಕೆಯಿಂದ ನರಳುತ್ತಿರುತ್ತಾರೆ. ಈ ಕಾರಣಗಳಿಂದ ನೋವಿಗೆ ತುತ್ತಾದವರಿಗೆ ಇದು ಉಪಯೋಗ. ಅಡಿಗೆ ಸೋಡ ಸೋಡಿಯಂ ಕಾರ್ಬೊನೇಟ್ ಆಗಿದ್ದು ನಿಂಬೆ ಹುಳಿಜತೆ ಸೇರಿಸಿದಾಗ ಇಂಗಾಲಾಮ್ಲ ಬಿಡುಗಡೆ ಹೊಂದಿ, ಜೀರ್ಣಕ್ರಿಯೆಯನ್ನು ಉತ್ತೇಜಿಸಿ ಜಠರದಲ್ಲಿನ ಬಿಗಿತ್ವವನ್ನು ತಗ್ಗಿಸುವುದು. ಇದರಿಂದ ಕ್ರಮೇಣ ಹೊಟ್ಟೆ ನೋವು ಗುಣಮುಖವಾಗುತ್ತದೆ.

ಹೈಡ್ರೋಕ್ಲೋರಿಕ್ ಆಮ್ಲದ ಅತಿಯಾದ ಒಸರುವಿಕೆಯಿಂದ ಜಠರ ಮತ್ತು ಡಿಯೋಡಿನಂಗಳಲ್ಲಿ ಹುಣ್ಣಾಗಿ ಹೊಟ್ಟೆ ನೋಯುತ್ತಿದ್ದರೆ, ನಿಂಬೆ ಹುಳಿ ಸೋಡ ಮಿಶ್ರಿಸಿ ಕುಡಿದರೆ ಒಳ್ಳೆದು. ಸೋಡಬಳಸಿದಾಗ ನಿಂಬೆಹುಳಿಯಲ್ಲಿನ ಸಿಟ್ರಿಕ್ ಆಮ್ಲ ಮತ್ತು ಸೋಡಾದಿಂದಾದ ಕಾರ್ಬಾನಿಕ್ ಆಮ್ಲ ಎರಡೂ ಹೈಡ್ರೋಕ್ಲೋರಿಕ್ ಆಮ್ಲವನ್ನು ದುರ್ಬಲಗೊಳಿಸುವುದರಿಂದ ತಾತ್ಕಾಲಿಕವಾಗಿ ನೋವು ಕಡಿಮೆಗೊಳ್ಳುವುದು.

ಈ ಮೇಲಿನ ಎಲ್ಲಾ ವಿಶ್ಲೇಷಣೆಯಿಂದ ಕಂಡುಬರುವ ಅಂಶವೆಂದರೆ ಹೊಟ್ಟ ನೋವಿಗೆ ಹಳ್ಳಿಗಳಲ್ಲಿ ಸುಡುವ ಪದ್ಧತಿ ಸಾಮಾನ್ಯವೆಂಬುದು. ಜನಪದರು ಹೊಟ್ಟನೋವು ಕೊನೆಗೊಳ್ಳುತ್ತದೆ ಎಂಬುದನ್ನು ನಂಬುವರು. ಅನೇಕ ಬಾರಿ ಅಜೀರ್ಣ, ಸರಿಯಾಗ ಊಟ ಮಾಡಿದಿರುವಿಕೆಯಿಂದ ನೋವು ತಾನಾಗಿ ಗುಣವಾಗುವ ಸಾಧ್ಯತೆ ಇರುತ್ತದೆ. ಆಗ ಅವರು ಸುಟ್ಟಿದ್ದರಿಂದ ವಾಸಿಯಾಗಿದೆ ಎಂಬ ಬಲವಾದ ನಂಬಿಕೆ ಆಗುತ್ತದೆ. ಒಟ್ಟಾರೆಯಾಗಿ ರೋಗಿಯು ಮತ್ತು ಅವನ ಕಡೆಯವರು ಮೌಢ್ಯಕ್ಕೆ ಮೋರೆ ಹೋದಂತಾಗುವುದು. ಇದೊಂದು ಮೂಢ ಪದ್ಧತಿ ಎಂದು ಮನನವಾಗುತ್ತದೆ.

ನಮ್ಮ ಹಳ್ಳಿಗರು ಮೂಢನಂಬಿಕೆ ಮೊರೆಹೋಗುವುದನ್ನು ಬಿಟ್ಟು ವೈಜ್ಞಾನಿಕವಾಗಿ ತಮ್ಮನ್ನು ಒಳಪಡಿಸಿಕೊಳ್ಳಬೇಕು. ರಕ್ತದ ಒತ್ತಡ, ಕರುಳುಬೇನೆ ಅಥವಾ ಹುಣ್ಣು, ಇಲ್ಲಾ ಮಾನಸಿಕ ರೋಗಗಳಿಂದ ನರಳುತ್ತಿರುವಂತ ರೋಗಿಗಳು ತಮ್ಮೊಳಗಿರುವ ಆಲೋಚನೆ, ಕೋಪ, ಜೊತೆಗೆ ಬೀಡಿ, ಸಿಗರೇಟು, ಮಧ್ಯಪಾನ, ಕಡಾಖಂಡಿತವಾಗಿ ವರ್ಜಿಸಬೇಕು. ಇಲ್ಲದಿದ್ದರೆ ಮನಸ್ಸಿಗೆ ಪೂರಕವಾದ ಚಿಂತೆಗಳಾದ

ದ್ವೇಷ, ಚಿಂತೆ, ವೈರತ್ವ, ಪ್ರತೀಕಾರ, ಅಸೂಯೆ ಇನ್ನೂ ಮುಂತಾದವು ದೇಹದೊಳಗಿನ ರಾಸಾಯನಿಕ ಕ್ರಿಯೆಗಳ ಮೇಲೆ ಪರಿಣಾಮ ಬೀರಿ ವಿಷವಸ್ತುಗಳನ್ನು ಉತ್ಪಾದಿಸುವಲ್ಲಿ ತೊಡಗಲು ಆರಂಭಿಸುತ್ತವೆ. ಇದರಿಂದ ಜಠರದಲ್ಲಿ ಹೈಡ್ರೊಕ್ಲೋರಿಕ್ ಆಮ್ಲವು ಹೆಚ್ಚು ಸ್ರವಿಸಿ ಜಠರ ಮತ್ತು ಕರುಳುಗಳಲ್ಲಿ ಹುಣ್ಣಾಗುವ ಸಾಧ್ಯತೆ ಹೆಚ್ಚು. ಈ ಕಾರಣದಿಂದ ಹೊಟ್ಟೆನೋವು, ನುಲಿತ ಮತ್ತು ಎದೆ ಉರಿ ಬರುತ್ತದೆ. ಇದಕ್ಕೆ ಪೂರಕವಾಗಿ ವೈದ್ಯರು ಆಮ್ಲವನ್ನು ಸಮನಗೊಳಿಸುವ ಕ್ಷಾರ ಔಷಧಿಗಳನ್ನು ಕೊಟ್ಟು ವಾಸಿ ಮಾಡುವರು. ಔಷಧವನ್ನು ಪಡೆದ ನಂತರವು ಮಾಂಸ, ಖಾರ, ಹುಳಿ, ಉಪ್ಪು, ಇರುವಂತ ಆಹಾರ ಕಡಿತಗೊಳಿಸಬೇಕು. ಆಗ ಹೊಟ್ಟೆನೋವು ವಾಸಿಯಾಗುವುದು. ಆದುದರಿಂದ ವೈದ್ಯನು ಜಾಣ್ಮೆಯಿಂದ ರೋಗಿಯ ಮನಸ್ಸನ್ನು ಅರಿತು ಅವನು ಆ ಗೊಂದಲವನ್ನು ಕಡಿಮೆ ಮಾಡಿ ನೆಮ್ಮದಿ ಕಾರಕವಾದ, ಔಷಧಿಯತ್ತ ಗಮನ ಹರಿಸದಿದ್ದರೆ, ಪುನಃ ಪರಿಣಾಮ ಎದುರಿಸುತ್ತಾನೆ. ಅಂದರೆ ವೈದ್ಯ ಮತ್ತು ರೋಗಿ. ಆದುದರಿಂದ ರೋಗಿಯು ಕೆಲವು ನಿಯಮಬದ್ಧತೆಗೆ ಗುರಿಯಾಗಿ ಸಾತ್ವಿಕ ಆಹಾರ ತೆಗೆದುಕೊಂಡರೆ ಆಮ್ಲದ ಹುಣ್ಣಿನಿಂದ ನರಳುತ್ತಿರುವ ರೋಗಿಯು ಗುಣಮುಖಹೊಂದುವಲ್ಲಿ ಆಶ್ಚರ್ಯವಿಲ್ಲ.

ಬಾಯಿ ಬಸಳೆಯೇ

ಈ ರೋಗ ಇಂದಿನದೂ, ನೆನ್ನೆಯದೂ, ಮೊನ್ನೆಯದೆನಲ್ಲ. ಆದರೆ ಹಳ್ಳಿಗರಲ್ಲಿರಲಿ ಇಲ್ಲಾ ಪಟ್ಟಣದವರಿರಲಿ ಎಲ್ಲರಲ್ಲೂ ಒಂದೊಂದು ರೀತಿಯಲ್ಲಿ ಕಾಣಸಿಗುವುದು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅನೇಕ ಈ ತೆರನಾದ ರೋಗಿಗಳನ್ನು ಕಂಡು ಮಾತನಾಡಿದಾಗ ಒಂದು ಆಶ್ಚರ್ಯ ಹಾಗೂ ಮುಗ್ಧತೆಯ ತೊಳಲಾಟಕ್ಕೆ ಸಿಲುಕಿದೆ, ಅನ್ನಿಸಿತು. ಮಾಹಿತಿಯನ್ನು ಸಂಗ್ರಹಿಸಿದೆ. ಆದರೆ ನಮ್ಮ ಹಳ್ಳೀಗರು ಒಂದಿಲ್ಲ ಒಂದು ಒತ್ತಡ ಹಾಗೂ ಮೂಢ ಪದ್ಧತಿಗಳಿಗೆ ಸಿಲುಕಿರುವುದಂತೂ ನಿಜ. ಈ ಬಾಯಿ ಬಸುಳೆ ಕೆನ್ನೆಯ ಒಳಗೆ, ನಾಲಿಗೆ, ತುಟಿ, ಒಳ ಹಾಗೂ ಮೆಲ್ ತುಟಿ ಒಳಗೆ ಸಣ್ಣ ಸಣ್ಣ ಗುಳ್ಳೆಗಳಾಗಿ ಕೆಂಪಾಗಿ ಉರಿ ಮತ್ತು ನೋವನ್ನು ನೀಡುತ್ತವೆ.

ರೋಗಿಯು ಆಹಾರ ತೆಗೆದುಕೊಳ್ಳುವಾಗ ನುಂಗಲು ಆಗದೆ ಹಸಿದುಕೊಂಡು ಇರಲೂ ಆಗದೆ ಇರುವ ಸಂದಿಗ್ಧ ಸ್ಥಿತಿಯಲ್ಲಿರುತ್ತಾನೆ. ಈ ಸಂದರ್ಭದಲ್ಲಿ ಉಪ್ಪು, ಖಾರ, ಹುಳಿ, ಬಿಸಿ ಇರುವ ಪದಾರ್ಥಗಳು ಮತ್ತಷ್ಟು ನೋವಿಗೆ ಎಡೆಮಾಡಿಕೊಡುತ್ತವೆ. ಆದರಲ್ಲೂ ಗಡಸ್ಸಾದ ಆಹಾರ ಸೇವನೆ ಕಷ್ಟಕರ. ಇಂದಿಗೂ ಹಳ್ಳಿಗಳಲ್ಲಿ ಸಾಮಾನ್ಯ ಜನರು ಬಾಯಿ ಬಸಳೆ ಅಂತ ಕರೆಯುವುದು ವಾಸ್ತವವಾಗಿದೆ.

ಹಳ್ಳಿಗರ ದೃಷ್ಟಿಯಲ್ಲಿ ಒಬ್ಬರ ಎಂಜಲನ್ನು ಇನ್ನೊಬ್ಬರು ತಿಂದರೆ, ಅಥವಾ ತಾನು ಕಚ್ಚಿ ಇನ್ನೊಬ್ಬನಿಗೆ ಕೊಟ್ಟರೆ ಇಲ್ಲಾ ಬಾಚಣಿಗೆಯನ್ನು ಬಾಯಲ್ಲಿ ಕಟದಾಗ ಉಂಟಾಗುತ್ತದೆ ಎಂಬ ಮೂಢನಂಬಿಕೆಗಳು ಇವೆ. ಇವು ಸತ್ಯಕ್ಕೆ ದೂರವಾದ ಮಾತು.

ವೈಜ್ಞಾನಿಕವಾಗಿ ಅವಲೋಕಿಸಿದಾಗ ಮೂಢನಂಬಿಕೆಗಳು ತುಂಬಾ ಗೌಣವಾಗುತ್ತವೆ. ರೋಗಿಗೆ ಈ ಬಾಯಿ ಬಸಳೆಯು ಬೇರೆ ಬೇರೆ ಕಾರಣಗಳಿಗಾಗಿ ಉಂಟಾಗುತ್ತದೆ.

ಒಬ್ಬ ಮನುಷ್ಯನಿಗೆ ಅತ್ಯುಲ್ಪವಾಗಿ ಅವಶ್ಯಕವಾಗಿರುವ ಜೀವಸತ್ವಗಳು ಬೇಕು. ಅಂದರೆ "ಬಿ" ಜೀವಸತ್ವದ ಗುಂಪಿನ ಉಪಜೀವತ್ವವಾದ ರೈಬೋಫ್ಲೇವಿನ್ ವಸ್ತುವಿನ ಕೊರತೆ ಇದ್ದಾಗ ಈ ಬಾಯಿಬಸುಳೆ ಉಂಟಾಗುವುದು ಸಹಜ. ಆರಂಭದಲ್ಲಿ ಬಾಯಿಯ ಅಂದರೆ ತುಟಿಯಲ್ಲಿ ಬಿಳಿಯ ಗುಳ್ಳೆಯಂತಾಗಿ ಒಡೆದು ನಂತರ ಕೆಂಪಾಗುತ್ತದೆ. ಈ ತೇರನಾದ ಕೂಡಲೇ ರೋಗಿಯು ಎಚ್ಚೆತ್ತುಕೊಂಡು ತಕ್ಷಣವೇ ವೈದ್ಯರನ್ನು ಬೇಟಿ ಮಾಡಿದರೆ, ಅವರು 'ಬಿ' ಜೀವಸತ್ವಗಳ ಗುಳಿಗೆ ಕೊಡುವರು. ಕ್ರಮೇಣ ಆದು ವಾಸಿಯಾಗುವುದು. ಮುಂಜಾಗ್ರತೆಯನ್ನು ವಹಿಸದಿದ್ದರೆ ಬಾಯಿ ಹುಣ್ಣಾಗಿ ತುಂಬಾ ನೋವಿಗಿಡಾಗಬೇಕಾಗುತ್ತದೆ.

ಕ್ಷೇತ್ರಕಾರ್ಯದಲ್ಲಿ ಬಳ್ಳಾರಿಯ ವಿವಿಧ ತಾಲ್ಲೂಕುಗಳಲ್ಲಿರುವ ಜನಪದರನ್ನು ಬೇಟಿಯಾಗಿ ಬಾಯಿಬಸಳೆಗೆ ತುತ್ತಾದವರನ್ನು ನೋಡಿದಾಗ ಇಂದಿಗೂ ತಮ್ಮ ತಲಾತಲಾಂತರವಾಗಿ ರೂಢಿಸಿಕೊಂಡು ಬಂದಿರುವ ಮೂಢನಂಬಿಕೆಗಳು ಚಾಲ್ತಿಯಲ್ಲಿ ಬಳಸುತ್ತಿದ್ದಾರೆ. ಸಾಮಾನ್ಯವಾಗಿ ಈ ರೋಗಿಗಳು ಮೊಟ್ಟೆಯನ್ನು ಒಡೆದು ಅವರ ಬಿಳಿ ಲೋಳೆಯನ್ನು ಗಾಯವಾದ ಭಾಗಕ್ಕೆ ಸರವುದು ಇಲ್ಲಾ ಬಾಯಿ ಬಸಳೆ ಸೊಪ್ಪನ್ನು ಜಗಿಯುವುದು ಅಥವಾ ಆಹಾರದಲ್ಲಿ ಸೇವಿಸುವುದು. ಇನ್ನೊಂದು ಪದ್ಧತಿಯನ್ನೂ ನೋಡಬಹುದು ಬೆಳ್ಳುಳ್ಳಿಯನ್ನು ತೆಗೆದುಕೊಂಡೂ ಕೆಲವು ಜಾತಿಯ ಮರಗಳ ಚಕ್ಕೆಯನ್ನೂ ಸೇರಿಸಿ ರೋಗಿಯ ಕುತ್ತಿಗೆಗೆ ಕಟ್ಟುವರು. ಇದೊಂದು ಮೂಢ ಪದ್ಧತಿ ಎಂಬುದರಲ್ಲಿ ಎರಡು ಮಾತಿಲ್ಲ. ಈ ಕ್ರಮದಿಂದ ರೋಗಿಯು ಗುಣವಾಗುವುದಿಲ್ಲ. ಜೊತೆಗೆ ರೈಬೋಫ್ಲೇಪಿನ್ ಜೀವಸತ್ವವನ್ನು ಒದಗಿಸಲು ಅಸಾಧ್ಯವೆಂಬುದನ್ನು ಹಳ್ಳಿಯ ಜನಪದರೂ ಅರಿಯಬೇಕು. ಪ್ರಧಾನವಾಗಿ ರೋಗಿಯು ಶರೀರಕ್ಕೆ ಬೇಕಾದ ಮಾಂಶ, ೨೦ ಈಲಿ, ಬೆಟ್ಟೆ, ಹಾಲು ಕೋಳಿ ಮೊಟ್ಟೆ, ತರಕಾರಿಗಳನ್ನು ತೆಗೆದುಕೊಂಡರೆ "ವಿ" ಜೀವಸತ್ವ ಒದಗುತ್ತದೆ. ಜನಪದರು ಕೋಳಿಮೊಟ್ಟೆ ಕುಡಿಸುವುದು ಉಪಯುಕ್ತ. ಇದರಲ್ಲಿ ರೈಬೋಫ್ಲೇವಿನ್ ಹೆಚ್ಚಾಗಿರುವುದರಿಂದ 'ಬಿ' ಜೀವಸತ್ವ ದೊರಕುತ್ತದೆ. ಈ ಎಲ್ಲಾ ಅಂಶಗಳಿಂದ ಸಂಕಿರಣವಾಗಿ

ಹೇಳುವುದಾದರೆ ಜೀವಸತ್ವವಿರುವ ಇಂಜೆಕ್ಷನ್, ಮಾತ್ರೆ, ಪೋಷ್ಟಿಕ ಆಹಾರವನ್ನು ತೆಗೆದುಕೊಂಡರೆ ರೋಗಿಯು ಒಂದೆರೆಡು ದಿನಗಳಲ್ಲಿ ಗೆಲುವನ್ನು ಪಡೆಯುತ್ತಾನೆ.

ಮೊಳೆ ರೋಗವೆಂಬ ಕಂಟಕ ಅಥವಾ ಮೂಲವ್ಯಾಧಿ ಅಥವಾ ಗೂದೆ ರೋಗಕ್ಕೆ ಸುಟ್ಟರೆ ವಾಸಿಯಾಗುವುದೇ

ಆರಂಭದಲ್ಲಿ ಮೂಲವ್ಯಾಧಿಯೆಂದರೇನು? ಎಂದು ಪ್ರಶ್ನೆ ಇಟ್ಟುಕೊಂಡರೆ ಚರ್ಚಿಸಬಹುದು. ಮೂಲ ವಾಧಿಗೆ ನೆಗಡಿ ತಲೆನೋವುಗಳಿಗಿಂತ ಹೆಚ್ಚಾಗಿ ತಲೆಕೆಡಿಸಿಕೊಂಡು ಅಂಜುವುದಿಲ್ಲ. ಮೂಲವ್ಯಾಧಿ ಎಂಬು ಶಬ್ದದ ಅರ್ಥವನ್ನು ಎರಡು ರೀತಿಯಲ್ಲಿ ಹೇಳಬಹುದು. ಮೂಲವ್ಯಾಧಿ ಮೂಲದಲ್ಲಿ ಅಂದರೆ ಗುದದ್ವಾರದಲ್ಲಿ ಉಂಟಾಗುವ ನೋವು, ವ್ಯಾಧಿ ಎಂದರ್ಥ ಮೂಲಾ, ಎಂದರೆ ಮೊಳಕೆಗಳಾಗುವ ವ್ಯಾಧಿ ಎಂದು ಇನ್ನೊಂದು ಅರ್ಥವೂ ಉಂಟು, ಗುದದ್ವಾರದಲ್ಲಿ ರೋಗವಾಗಲಿ, ಮೊಳಕೆಗಳಾಗಲಿ ಏಕೆ ಸಂಭವಿಸುತ್ತವೆ. ಎಂದು ಪೂರ್ವವಾಗಿ ತಿಳಿದರೆ ಆ ಭೀತಯು ಗೌಣವಾಗುತ್ತದೆ.

ಶರೀರದಲ್ಲಿ ನಿರಂತರವಾಗಿ ನಡೆಯುವ ಜೀವನದ ಕ್ರಿಯಾನುಕ್ರಿಯೆಯ ಪರಿಣಾಮವಾಗಿ ವಿಷವು ಉತ್ಪನ್ನವಾಗುತ್ತಲೇ ಇರುತ್ತದೆ. ಆದು ರಕ್ತದ ಪ್ರವಾಹದೊಡನೆ ಹರಿದು ಹೋಗಿ ಮಲ ಮೂತ್ರ ಬೆವರು ಉಸಿರುಗಳ ಮೂಲಕ ವಿಸರ್ಜಿಸಲ್ಪಡುತ್ತಿರುವುದ. ಆದರೆ ಯಾವ ಕಾರಣದಿಂದ ಆ ವಿಷ ವು ಸರಿದು ಹೋಗಲು ತಡೆ ಉಂಟಾದರೆ, ಆ ಭಾಗದಲ್ಲಿ ದಾಹ, ಬಾವು, ಕುರುಕೊಳೆತಗಳು ಆರಂಭವಾಗುವುವು. ಅಲ್ಲದೆ ಆ ವಿಷದ ಪ್ರವಾಹಕ್ಕೆ ತಡೆ ಉಂಟಾದರೆ, ಮುಖ್ಯವಾಗಿ ರಕ್ತ ಪ್ರವಾಹದೊಳಗಿನ ತಡೆಯೇ ಪ್ರಧಾನ ರಕ್ತನಲಿಕೆಗಳೊಳಗಿನ ಸುಸೂತ್ರವಾದ ಪ್ರವಾಹದ ತಡೆಗೆ ಮೂರು ಕಾರಣಗಳಿರುತ್ತವೆ. ನರತಂತುಗಳ ದೋಷದಿಂದ ರಕ್ತನಲಿಕೆಗಳು ಸಂಕುಚಿತವಾಗುತ್ತವೆ. ಪಿತ್ತದ ಕಾರಣದಿಂದ ಉಷ್ಣತೆಯು ಹೆಚ್ಚಾಗಿ ನೋವು ಉಂಟಾಗಿ ರಕ್ತ ನಲಿಕೆಗಳ ಮೇಲೆ ಭಾರ ಬೀಳುತ್ತದೆ. ಕಫ ದೋಷದಿಂದ ರಕ್ತ ಪ್ರವಾಹವು ನರಗಳಲ್ಲಿ ತೊಂದರೆ ಉಂಟಾದಾಗ ಅದರ ವೇಗವು ಕಡಿಮೆಯಾಗಿ ಅಲ್ಲಲ್ಲಿ ಸಂಚಿತವಾಗಿ ವಿಷ ಸಂಚಯವಾಗುತ್ತವೆ.

ವೈಜ್ಞಾನಿಕವಾಗಿ ಇನ್ನೂ ಅನೇಕ ಕಾರಣಗಳನ್ನು ಗುರುತಿಸಬಹುದಾಗಿದೆ. ಗುದನಾಳದಲ್ಲಿನ ಕ್ಯಾನ್ಸರ್ ಕೂಡ ಮೊಳೆರೋಗಕ್ಕೆ ಕಾರಣವಾಗುತ್ತದೆ. ಗರ್ಭವತಿಯರಲ್ಲಿ ಬೆಳೆಯುತ್ತಿರುವ ಪಿಂಡವನ್ನಾವರಿಸಿರುವ ಗರ್ಭಚೀಲ ಹಿಗ್ಗತೊಡಗಿದಂತೆಲ್ಲಾ ಹೊಟ್ಟೆಯ ಇತರ ಅಂಗಗಳ ಮೇಲೂ

ಪರಿಣಾಮಬೀರುತ್ತದೆ. ಆಗ ಗುದನಾಳದ ಅಭಿದಮುನಿಗಳಲ್ಲಿನ ರಕ್ತಸಾವುವಿಕೆಗೆ ತೊಂದರೆ ಉಂಟಾಗಿಗಿ ಅಭಿದಮನಿಗಳು ಹಿಗ್ಗಿ ಡೊಂಕಾಗುತ್ತವೆ. ಇದರ ಪರಿಣಾಮೇ ಮೂಲವ್ಯಾದಿ. ಜೊತೆಗೆ ಗರ್ಭಿಣಿ ಸ್ತ್ರೀಯರಲ್ಲಿ ಬಿಡುಗಡೆ ಹೊಂದುವ ಪ್ರೊಜೆಸ್ಟರಾನ್ ಎಂಬ ಹಾರ್ಮೋನು ಅಭಿದಮನಿಗಳ ಮೇಲಿನ ಪರಿಣಾಮದಿಂದಲೂ ಈ ಮೇಳೆ ರೋಗ ಬರುವುದು. ಗರ್ಭಿನಿಯರಲ್ಲಿನ ಈ ರೋಗ ತಾತ್ಕಾಲಿಕವಷ್ಟೇ. ಸಾಮಾನ್ಯವಾಗಿ ಹೆರಿಗೆ ನಂತರ ಗೌಣಗೊಳ್ಳುವುದು. ಕೆಲವರಿಗೆ ಮೂಲವ್ಯಾಧಿ ಅನುವಂಶಿಕವಾಗಿ ಬರುವುದು. ಇದಕ್ಕೆ ಕಾರಣ ಅಂದರೆ ಅಭಿದಮನಿಗಳಲ್ಲಿನ ಗೋಡೆಯಲ್ಲಿರುವ ಅಶಕ್ತೆಯೇ ಇದಕ್ಕೆ ಪೂರಕ. ಅನುವಂಶಿಕವಾಗಿ ಬರುವ ಈ ಕಾಯಿಲೆ ಗುದನಾಳದ ನೀಲಿಗಳು ಸಮರ್ಪಕವಾಗಿರುವುದಿಲ್ಲ. ಇದರಿಂದಾಗಿ ಗೂದೆರೋಗಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಮೂಲವ್ಯಾಧಿಯು ಕಂಡಕ್ಟರ್, ವೈದ್ಯರು, ದರ್ಜಿಗಳು, ಒಟ್ಟಾರೆಯಾಗಿ ಹೆಚ್ಚು ಕುಳಿತು ಕೆಲಸ ಮಾಡುವವರಿಗೆ ಇದು ಲಭ್ಯವಾಗುವುದು. ಒಟ್ಟಾರೆಯಾಗಿ ಮನುಷ್ಯ ಕಾಲ ಮೇಲೆ ನಿಲ್ಲುವುದರಿಂದ ಗುದನಾಳದ ನೀಲೆಗಳಲ್ಲಿನ ರಕ್ತವು ಭೂಮಿಯ ಗುರುತ್ವಾಕರ್ಷಣ ಶಕ್ತಿಯ ವಿರುದ್ಧ ಮೇಲ್ಮುಖವಾಗಿ ಹರಿಯ ಬೇಕಾಗುತ್ತದೆ. ಈ ಅಭಿದಮನಿಗಳಲ್ಲಿ ಯಾವ ರೀತಿಯ ಕವಾಚಗಳೂ ಇಲ್ಲವಾದ್ದರಿಂದ ಗುದನಾಳದ ಅಭಿದಮನಿಗಳಲ್ಲಿನ(ನೀಲಿಗಳಲ್ಲಿ) ಈಟಿ (ಪಿತ್ತ ಜನಕಾಂಗ) ಯಿಂದ ಗುದನಾಳದವರೆಗಿನ ರಕ್ತವು ಭಾರವೆಲ್ಲವೂ ಬೀಳುತ್ತದೆ. ಈ ಒತ್ತಡದಿಂದಾಗಿ ಗುದನಾಳ ನೀಲೆಗಳು ಹಿಗ್ಗಿಕೊಂಡು ಡೊಂಖಾಗುವುದು ಹೆಚ್ಚು. ಮಲಬದ್ಧತೆ ಹೆಚ್ಚು ಕಾಲವಾಗುವವರಿಗೆ ಮೂಲವ್ಯಾದಿ ಸೃಷ್ಟಿಗೊಳ್ಳುಬಲ್ಲದು. ಮಲ್ಲ ಗಟ್ಟಿಯಾಗಿದ್ದರೆ ಹೆಚ್ಚಾಗಿ ತಿಣುಕಾಬೇಕಗಾತ್ತದೆ. ಇಂತಹ ತಿಣುಕುವಿಕೆಯಿಂದ ಮೂಲವ್ಯಾದಿ ಉಂಟಾಗುವುದು.

ಅಲ್ಲದೆ ದೀರ್ಘಾವಧಿಯ ಬೇಧಿ, ಆಮಶಂಕೆ, ಹಾಗೂ ಆಗಾಗ ಮೂತ್ರವಾಡುವಾಗ ತಿಣುಕಿ ಮೂತ್ರ ವಿಸರ್ಜಿಸುವ ಅಭ್ಯಾಸವಿದ್ದರೂ ಕೂಡ ಈ ಮೊಳೆ ರೋಗ ಮನುಷ್ಯರಲ್ಲಿ ಕಾಣಿಸಿಕೊಳ್ಳುತ್ತದೆ.

ಈ ಕಾಯಿಲೆಗೆ ಸರಿಯಾದ ಚಿಕಿತ್ಸೆ ಗಮನಿಸುವುದು ಸೂಕ್ತ. ಮಲಬದ್ಧತೆಗೆ ಆಹಾರವನ್ನು ಸರಿಯಾಗಿ ಜಗಿದರೆ ಒಂದೇ ಸಮನೆ ನುಂಗಿ ಮುಗಿಸುವುದು. ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಕುಡಿಯದೇ ಇರುವುದು. ಆದುದರಿಂದ ಆಹಾರದ ಎಲ್ಲಾ ತುತ್ತುಗಳನ್ನು ಚೆನ್ನಾಗಿ ಅಗಿದು ನುಂಗಿದರೆ ಮಲಬದ್ಧತೆಯೂ ಪರಿಹಾರವಾಗುತ್ತದೆ.

ಊಟ ಮಾಡುವ ಮುನ್ನ ಅಂದರೆ ಒಂದು ಗಂಟೆ ಮೊದಲು ಮತ್ತು ಬೆಳಿಗ್ಗೆ ಎದ್ದ ತಕ್ಷಣ ಒಂದೊಂದು ಲೋಟ ತಣ್ಣೀರನ್ನು ಕುಡಿಯಬೇಕು. ನಾವು ಬಳಸುವ ಆಹಾರದಲ್ಲಿ ಸೊಪ್ಪಿನ ಪಲ್ಲೆ,

ಹಣ್ಣಿನ ರಸ, ಮಜ್ಜಿಗೆ ಹೆಚ್ಚಿನದಾಗಿ ಬಳಸಬೇಕು. ಹೀಗೆ ಅನೇಕ ಮೃದು ಹಾಗೂ ನೀರನ್ನು ಸೇವಿಸುವುದರಿಂದ ಮೊಳೆರೋಗವನ್ನು ಕಡಿಮೆ ಮಾಡಬಹುದು.

ಮೂಲವ್ಯಾದಿಯಿದ್ದಂತ ಮನುಷ್ಯ ಕೆಲವು ಪಥ್ಯಗಳಿಗೂ ಕೂಡ ಒಳಪಡಬೇಖು. ಅವುಗಳೆಂದರೆ ಅತಿಯಾದ ಉಪ್ಪು, ಹುಳಿ, ಕಾರ, ಮಸಾಲೆಗಳು, ಕರಿದ ತಿನಿಸು, ಚಹಾ, ಕಾಫಿ, ಬೀಡಿ, ಸಿಗರೇಟು ಇಂತಹವುಗಳನ್ನೆಲ್ಲ ವರ್ಜಿಸಬೇಕಾಗುವುದು. ಹೆಚ್ಚು ಹೊತ್ತು ಕುಳಿತು ಕೆಲಸ ಮಾಡುವವರು ದಿನಾ ಬೆಳಿಗ್ಗೆ ಸಾಯಂಕಾಲ ಒಂದೆರೆಡು ಮೈಲುಗಳನ್ನಾದರೂ ವೇಗವಾಗಿ ನಡೆದರೆ ಉತ್ತಮ. ಸಾವಕಾಶದಿಂದ ನಿದ್ದೆ ಮಾಡಬೇಕು. ನಿದ್ರಿಸದೆ ಇದ್ದರೆ ಮೊಳಕೆಗಳ ನೋವು ಹೆಚ್ಚಾಗುತ್ತದೆ. ಮಲವು ನೈಸರ್ಗಿಕವಾಗಿ ವಿಸರ್ಜನವಾಗುವಂತೆ ಪ್ರೇರಿಪಿಸಲು, ಸೊಂಟ ಮತ್ತು ಕೆಳ ಹೊಟ್ಟೆಯ ಕರುಳುಗಳಿಗೆ ವ್ಯಾಯಮವನ್ನು ಕೊಡುವಂತೆ ದೇಹವನ್ನು ವಿವಿಧ ರೀತಿಯಲ್ಲಿ ತೌಲಬದ್ಧವಾಗಿ ಬಾಗಿಸಬೇಕು. ಇವತ್ತಿಗೂ ನಮ್ಮ ಹಳ್ಳಿಗಳಲ್ಲಿ ಮೊಳೆಯನ್ನು ತೆಗೆಯುವ ಮೂಢ ಪದ್ಧತಿ ಇದೆ. ಆ ಹಳ್ಳಿಯ ವೈದ್ಯ ಮೊಳೆಯನ್ನು ಬುಡದಿಂದಲೇ ಕಿತ್ತು ತೆಗೆಯುತ್ತೇನೆಂದು ಹೇಳುವನು. ಒಂದುಷ್ಟು ದಿವಸ ರೋಗಿಯ ಗುದದ್ವಾರಕ್ಕೆ ಔಷಧಿಯನ್ನು ಹಾಕುವನು. ಅದು ತಾಸುಗಟ್ಟಲೇ ಉರಿದು ಮಲಬದ್ಧತೆಗೂ ತೊಂದರೆಯಾಗುವುದು. ಇನ್ನೊಬ್ಬ ವೈದ್ಯ ಸರಳನ್ನು ಬೆಂಕಿಯಲ್ಲಿ ಕಾಯಿಸಿ ಬೇರು ಸಮೇತ ಮೊಳೆ ತೆಗೆಯುತ್ತೇನೆಂದು ಗುದ ದ್ವಾರದೊಳಗೆ ಸರಳನ್ನು ತೂರಿಸಿ, ತಿರುವಿ ಬೇರಿನಂತಿರುವ ಮೊಳೆ ತೆಗೆಯುವರು. ಇಂತಹ ಸಂದರ್ಭದಲ್ಲೂ ಆ ನೋವನ್ನು ಅನುಭವಿಸಿದವನಿಗೆ ಗೊತ್ತು. ಕಾದ ಸರಳನ್ನು ಗುದನಾಳಕ್ಕೆ ಹಾಕಿ ತಿರುವಿದಾಗ ಅದರ ಅಂಗಾಂಶ ಸುಡುವುದರ ಜೊತೆಗೆ ಸರಳಿಗೆ ಸುತ್ತಿಕೊಳ್ಳುತ್ತದೆ. ಆ ಸರಳಿನ ಜೊತೆಗೆ ಬರುವ ಅಂಗಾಂಶವೆ ಮೊಳೆ ಎಂದು ಹೇಳುತ್ತಾನೆ. ಇದರ ಜೊತೆಯಲ್ಲಿಯೇ ಗುದನಾಳದ ಅಭಿದಮನಿಗಳು ಸುಟ್ಟು ಹೋಗುತ್ತವೆ. ಸ್ವಲ್ಪ ದಿವಸಗಳ ಕಾಲ ಆ ನೋವು ಮೊಳೆಯ ಅನ್ನಿಸಿಕೆ ಕಾಣುವುದಿಲ್ಲ. ರೋಗಿಗೆ ಕಾಯಿಲೆ ವಾಸಿ ಆಯಿತು ಎಂಬ ಅನುಭವವಾಗುವುದು.

ಈ ರೀತಿ ಮಾಡುವುದರಿಂದ ರೋಗಿಯು ಅನೇಕ ತೊಂದರೆಗಳಿಗೆ ಸಿಲುಕುವನು. ಅವುಗಳೆಂದರೆ ಶರೀರದ ಅಂಗಾಂಗಗಳಲ್ಲಿ ರಕ್ತ ಹರಿಯುವಿಕೆ, ಹುಣ್ಣಾಗುವಿಕೆ, ನೋವು, ಶಕ್ತಿಹೀನ ಉಂಟಾಗುತ್ತದೆ. ಕೆಲವು ಸಂದರ್ಭದಲ್ಲಿ ನೋವು ಹೆಚ್ಚಾಗಿ, ಕೀವು ಇನ್ನಿತರ ಅಂಶಗಳನ್ನು ತಡೆಯಲಾಗದೆ ರೋಗಿಯು ತನ್ನ ಬದುಕನ್ನೇ ನಾಶಮಾಡಿಕೊಳ್ಳುವ ಸಾಧ್ಯತೆಯೂ ಹೆಚ್ಚು.

ಪ್ರಸ್ತುತ ದಿವಸಗಳಲ್ಲಿ ವೈದ್ಯ ವಿಜ್ಞಾನ ಮುಂದುವರಿದಿದೆ. ಇನ್ನೂ ಹೊಸ ಪ್ರಯೋಗಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಹೆಚ್ಚಿನ ಪ್ರಯೋಗ ಮಾಡಿ ಸಾಧ್ಯವಾಗುವವರೆಗೆ ರೋಗಿಗೆ ಸರಳ ಕ್ರಿಯೆಯ

ಶಸ್ತ್ರ ಚಿಕಿತ್ಸೆಗೆ ಭಾಗಿಯಾಗುವಂತೆ ಮಾಡುತ್ತಿದೆ. ಆದುದರಿಂದ ನಮ್ಮ ಜನಪದ ಒರಟು ವಿಧಾನ ಅವಶ್ಯಕತೆ ಇಲ್ಲ. ಮೊಳೆ ರೋಗಕ್ಕೆ ಕಾರಣವಾಗಿರುವ ಸತ್ಯಾಸತ್ಯತೆಯನ್ನು ಕಂಡು ಹಿಡಿದು ಸೂಕ್ತ ಪರಿಹಾರವನ್ನು ನೀಡುವರು. ಇಂದು ಮಾತ್ರೆ, ಮುಲಾಮು ಅಥವಾ ಶಸಕ್ತವಾದ ಆಹಾರವನ್ನು ತೆಗೆದುಕೊಂಡು ನಿಯಂತ್ರಣ ಮಾಡುವಲ್ಲಿ ಪ್ರಯತ್ನಿಸುವಲ್ಲಿ ಮುಂದಾಗಿರುವರು. ಈ ಸರಳ ವಿಧಾನದಲ್ಲಿ ಕಡಿಮೆಯಾಗದಿದ್ದರೆ, ಜೊತೆಗೆ, ಅವಶ್ಯಕತೆ ಕಂಡು ಬಂದಲ್ಲಿ ಮಾತ್ರ ಚಿಕಿತ್ಸೆಗೆ ಮೊರೆ ಹೋಗುವ ಪ್ರಯತ್ನ ಮಾಡುವರು. ಒಟ್ಟಾರೆಯಾಗಿ ಮನುಷ್ಯನು ಪ್ರಕೃತಿಯ ಕ್ರಿಯೆಗೆ ಹೊಂದಿಕೊಳ್ಳುವಂತೆ ವೈದ್ಯರು ಮಾಡುವರು.

ಪಾರ್ಶ್ವವಾಯು, ಲಕ್ವಾ ಅಥವಾ ಪ್ಯಾರಲಿಸ್ ಅಥವಾ ಪ್ಯಾರಲಿಸಿಸ್ ಸ್ಟ್ರೋಕ್ ಅಥವಾ ಅರ್ಧಾಗವಾಯು

ಮನುಷ್ಯರ ಹಿಂದೆ ಮಾಡಿದ ಕರ್ಮಕ್ಕೆ ಈ ರೋಗವನ್ನು ದೇವರು ನೀಡುತ್ತಾನೆಯೇ. ಇದೊಂದು ಹಳ್ಳಿಗರಲ್ಲಿರುವ ಹಿಂದಿನ, ಇವತ್ತಿನ ಮೂಢ ನಂಬಿಕೆ. ಈ ರೋಗಕ್ಕೆ ಇಂಗ್ಲೀಶ್ ನಲ್ಲಿ ಪ್ಯಾರಲಿಸ್ ಅಂತಲೂ, ಮುಸಲ್ಮಾನೀ ರೂಢಿ ಪದ್ಧತಿಯಲ್ಲಿ ಲಕ್ವಾ ಅಂತಲೂ, ಅದೇ ಇಂಗ್ಲೀಷ್ ನಲ್ಲಿ ಪ್ಯಾರಲಿಸ್ ಸ್ಟ್ರೋಕ್ ಅಂತನೂ, ಅರ್ಧಾತವಾಯು ಅಂತ ಸಂಸ್ಕೃತದಲ್ಲಿ ಕರೆಯುವ ವಾಡಿಕೆ ಇದೆ.

ಮನುಷ್ಯನಿಗೆ ಇದ್ದಕ್ಕೆ ಇದ್ದಹಾಗೆಯೇ ಅಲ್ಲದೇ ಯಾವುದೇ ಪೂರ್ವಸೂಚನೆಯಿಲ್ಲದೆ ಏಕಾ ಏಕಿ ಮಿಂಚಿನಂತೆ ಇದು ಕಾಣಿಸಿಕೊಳ್ಳುತ್ತದೆ. ಈ ರೋಗದ ಪ್ರಧಾನವಾದ ಲಕ್ಷಣವೆಂದರೆ ರೋಗದ ದಾಳಿಗೆ ತುತ್ತಾದ ಶರೀರದ ಪಕ್ಕವು(ಪಾರ್ಶ್ವ) ಅಲುಗಾಡಿಸಲು ಸಾಧ್ಯವಾಗದಂತೆ ನಿಷ್ಕ್ರಿಯವಾಗಿ ಬಿಡುವುದು. ಈ ರೋಗದ ವ್ಯಕ್ತಿ ಅನೇಕ ದಿವಸಗಳವರೆಗೆ ಸ್ವತಃ ಅವನೆ ಮಾಡಿಕೊಳ್ಳಲು ಬರದು. ಅವನಿಗೊಬ್ಬ ಸಹಾಯಕನ ಅವಶ್ಯಕತೆ ಇರುತ್ತದೆ. ಇವತ್ತಿಗೂ ಕೂಡ ಹಳ್ಳಿಗಳಲ್ಲಿ ಈ ರೋಗದ ಹೆಸರನ್ನೂ ಹೇಳಲಿಕ್ಕೆ ಭಯ ಉಂಟಾಗುತ್ತದೆ. ಅಲ್ಲದೆ ಶರೀರದ ಯಾವೊದೋ ಒಂದು ಭಾಗ ನಿತ್ರಾಣವೆನಿಸಿದರೆ ನೋವು ಉಂಟಾಗುತ್ತಿದ್ದರೆ, ಮುಂದೆ ಲಕ್ವಾಕ್ಕೆ ಕಾರಣವಾಗುವುದೆಂಬ ಭೀತಿ ಇದೆ. ಆದರೆ ಇಲ್ಲಿ ಪ್ರಧಾನವಾಗಿ ಗಮನಿಸುವ ಅಂಶವೆಂದರೆ ಹಲವು ದಿನ, ತಿಂಗಳು, ನಿಧಾನಕ್ಕೆ ಆಕ್ರಮಣ ಮಾಡುವ ರೋಗವಲ್ಲ. ಒಮ್ಮೆಲೆ ಮಿಂಚಿನಂತೆ ಮನುಷ್ಯನಿಗೆ ಬಂದೆರಗುವ ರೋಗವಾಗಿದೆ.

ಇಲ್ಲಿ ನನ್ನ ತಥ್ಯವೆನೆಂದರೆ ಈ ರೋಗಕ್ಕೆ ಕಾರಣಗಳೇನು? ಇಲ್ಲಿ ಮುಖ್ಯವಾಗಿ ವಾತದೋಷದ ಪ್ರಕೋಪ ಇನ್ನೂ ಕೆಲವು ವೇಳೆ ಆಹಾರ ವಿಚಾರಗಳು ಕಾರಣವಾಗುತ್ತವೆ. ಇನ್ನೂ ಸರಳೀಕರಿಸಿ

ಹೇಳುವುದಾದರೆ, ನಮ್ಮ ಶರೀರವನ್ನು ಒಣಗಿಸುವ ಗುಣವುಳ್ಳ ಪದಾರ್ಥಗಳನ್ನು ಉಪಯೋಗಿಸುವಂತವು. ಅವುಗಳೆಂದರೆ ಕಾರ, ಕರಿದ ತಿನಿಸು, ಸಿಗರೇಟ್, ಕಾಫಿ, ಚಹ, ಮಧ್ಯ ಇವುಗಳು ಒಂದೆಡೆಯಾದರೆ ಇತ್ತೀಚಿನ ತಿನಿಸುಗಳಾದ ಐಸ್ ಕ್ರೀಂ, ಕೋಲ್ಡಡ್ರಿಂಕ್ಸ್, ಜೊತೆಗೆ ಯೋಚನೆ, ಎಡೆಬಿಡದೆ ನಿದ್ದೆಗೆಡುವುದು, ಪೋಷಕಾಂಶಗಳಿಲ್ಲದ ಆಹಾರ ಸೇವನೆ, ಅತಿ ಕಾಮಲಂಪಟತೆ, ಅಲ್ಲದೆ ದೀರ್ಘಾವಧಿಯ ರೋಗಗಳಿಂದ ಧಾತುಗಳು ಕ್ಷಯಿಸುವಿಕೆ, ಮಲ ಮೂತ್ರ ಬೆವರು ನಿದ್ರಾದಿ ಶರೀರದ ಸಹಜ ಪ್ರವೃತ್ತಿಗಳನ್ನು ತಡೆದು ಹಿಡಿಯುವಿಕೆ. ಇನ್ನೂ ಮುಂದುವರಿದು ಹೇಳುವುದಾದರೆ ಆಹಾರವು ಜೀರ್ಣಿಸದೆ ಹುಟ್ಟಿಕೊಳ್ಳುವ ಆ ಮವಿಷ ಮತ್ತು ನಾಡಿ ಕೇಂದ್ರಗಳಿಗೆ ಮೆದುಳು ಮುಂತಾದವುಗಳಿಗೆ ಏಟು ಬೀಳುವಿಕೆ. ಇನ್ನೂ ಅನೇಖ ಕಾರಣಗಳಿಂದ ಲಕ್ವಾ ಆಘಾತ ಕಾಣಿಸುತ್ತದೆ. ವೈಜ್ಞಾನಿಕವಾಗಿಯೂ ಕೂಡ ಅನೇಕ ಕಾರಣಗಳಿರುತ್ತವೆ.

ಮಿದುಳಿನಲ್ಲಿ ರಕ್ತಸ್ರಾವ, ರಕ್ತಭಾರ(ಬ್ಲಡ್ ಪ್ರೆಶರ್) ರಕ್ತಕೊರತೆ, ಬ್ಲಡ್ ಪ್ಲೆಶರ್ ನಲ್ಲಿ ಸಮಾಕ್ಷಮತೆ ಇಲ್ಲದಿರುವುದು ಹೀಗೆ ರೋಗವು ಕಾಣಿಸಿಕೊಳ್ಳುತ್ತದೆ. ನಮ್ಮ ಹಳ್ಳಿಗರ ಜನಮನದಲ್ಲಿ ಈ ಮೇಲೆ ಹೇಳಿದ ಯಾವುದೇ ಕಾರಣಗಳನ್ನರಿಯದ ಮುಗ್ಧ ಜನ, ಈ ರೋಗಕ್ಕೆ ನಾಟಿ ವೈದ್ಯನ ಮೋರೆ ಹೋಗವರು. ಸಾಮಾನ್ಯವಾಗಿ ಆ ನಾಟಿ ವೈದ್ಯ ಪಾರಿವಾಳವನ್ನು ಕೊಂದು ಅದರ ರಕ್ತವನ್ನು ಪಾಶ್ವಹೊಡೆದ ಭಾಗಗಳಿಗೆ ತಿಕ್ಕಿ, ಅನಂತರ ನೋವಿಣೆಯಿಂದ ತಿಕ್ಕಿ ನಂತರ ಬಿಸಿನೀರನ್ನು ಹಾಕಿ ಅನಂತರ ಬೆಚ್ಚನೆಯ ಹೊಂದಿಕೆಯನ್ನು ಹೊದಿಸಿ ಮಲಗುವಂತೆ ಸೂಚಿಸುವನು. ಆನಂತರ ಯಾವುದೇ ರುಚಿಯಾದ ಆಹಾರ ಪದಾರ್ಥವನ್ನು ಮಾಂಸ ಆಹಾರವನ್ನು ಮಾಡುವ ಹಾಗಿಲ್ಲವೆಂದು ಆದೇಶಿಸುವನು. ಇಂತಹ ಚಿಕಿತ್ಸೆಯು ಎಷ್ಟು ದಿವಸ ಒಂದು ತಿಂಗಳು, ೩ ತಿಂಗಳು, ಆರು ತಿಂಗಳು ಹೀಗೆ ವರ್ಷನುಗಟ್ಟಲೇ ತೆಗೆದುಕೊಳ್ಳುವ ಸಾಧ್ಯತೆಗಳು ಹೆಚ್ಚು.

ಹಳ್ಳಿಗರಲ್ಲಿ ಇವತ್ತಿಗೂ ಇರುವ ಪದ್ಧತಿಯೆಂದರೆ ಹಿಟ್ ಪದಾರ್ಥಗಳನ್ನು ಕೊಡುವಂತದ್ದು, ಜೊತೆಗೆ ಕೊಂಚ ಮದ್ಯವನ್ನೂ ಕೂಡ ಕೊಡುವ ಪರಿಪಾಠವಿರುತ್ತದೆ. ಇಂತಹ ಮೂಢನಂಬಿಕೆಗಳು ಎಷ್ಟು ದಿವಸಯೆಂಬುದು. ಆದ್ದರಿಂದ ಅವರಲ್ಲಿ ಏಕಾಕಿ ಇಂತಹ ಮೂಢನಂಬಿಕೆಗಳನ್ನು ತ್ಯಜಿಸಲು ಆಗದು. ಅಂತಹವುಗಳ ಬಗ್ಗೆ ತಿಳುವಳಿಕೆ ನೀಡಿ-ವಿಧಾನಗತಿಯಲ್ಲಿ ವೈಜ್ಞಾನಿಕ ವೈದ್ಯಪದ್ಧತಿಯ ಮೊರೆ ಹೋಗುವಂತೆ ಮನ ಒಲಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಲಕ್ವಾಕ್ಕೆ ಬಲಿಯಾದ ವ್ಯಕ್ತಿ ಸಾಮಾನ್ಯವಾಗಿ ಪ್ರಜ್ಞಾಹೀನರಾಗುವರು. ಇಂತಹ ಸ್ಥಿತಿ ಒಂದು ವಾರದವರೆಗೂ ಮುಂದುವರೆಯುವ ಸಾಧ್ಯತೆ ಇರುತ್ತದೆ. ಇಂತಹ ಸಂದಿಗ್ಧತೆಯಲ್ಲಿ ಅವನಿಂದ ಯಾವ

ತೊಂದರೆಗಳನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಈ ರೋಗವು ಶರೀರದ ಒಂದೇ ಪಕ್ಕಭಾಗಗಳಿಗೆ ಕಂಡುಬರುತ್ತದೆ. ಅಂದರೆ ಕಣ್ಣು, ಬಾಯಿ, ಕೈಕಾಲುಗಳನ್ನು ಅಲುಗಾಡಿಸಲು ಸಾಧ್ಯವಾಗುವುದಿಲ್ಲ. ಇಂತಹ ರೋಗಕ್ಕೆ ತುತ್ತಾದ ಮನುಷ್ಯರಲ್ಲಿ ಅನೇಕ ಗಂಟೆಗಳವರೆಗೆ ಗಂಟಲಿನ ನುಂಗುವ ಸ್ನಾಯುಗಳು ಶಕ್ತಿಹೀನಗೊಳ್ಳುವುವು. ಆದುದರಿಂದ ಆಹಾರವನ್ನು, ಇಲ್ಲಾ ನೀರನ್ನು ಅಥವಾ ಬೇರೆ ಪಾನಿಯಗಳನ್ನು ನೀಡುವಾಗ ಆತನನ್ನು ಪರೀಕ್ಷಿಸಿ ಬಹಳ ಜಾಣ್ಮೆಯಿಂದ ಬಾಯಿಗೆ ಹಾಕಬೇಕು. ಇಲ್ಲದಿದ್ದರೆ ಆಹಾರನಾಳದಲ್ಲಿ ಇಳಿಯದೆ ಶ್ವಾಸನಾಳದಲ್ಲಿ ಇಳಿದು ಪ್ರಾಣಹಾನಿಯಾಗುವ ಸಂಭವ ಹೆಚ್ಚು. ಈ ಆಘಾತವಾದ ವ್ಯಕ್ತಿಗಳಿಗೆ ಸುಮಾರು ೧೦-೧೨ ಗಂಟೆಗಳವರೆಗೆ ಏನನ್ನು ಕೊಡದೇ ಇರುವುದೇ ಒಳಿತು. ಔಷಧವನ್ನು ಕೊಡುವಾಗ ಜೇನಿನಲ್ಲಿ ಕಲಸಿ ಸ್ವಲ್ಪ ಸ್ವಲ್ಪವಾಗಿ ನಾಲಿಗೆಗೆ ಸ್ವಲ್ಪ ಹೊತ್ತು ಅಂದರೆ, ೫-೧೦, ೧೫ ನಿಮಿಷಗಳಿಗೊಮ್ಮೆ ಸವರಬೇಕಾಗುತ್ತದೆ.

ಈ ಕಾಯಿಲೆಗೆ ತುತ್ತಾದ ವ್ಯಕ್ತಿಯನ್ನು ಆರಾಮದಾಯಕವಾದ ಹಾಸಿಗೆಯಲ್ಲಿ ಮಲಗಿಸಬೇಕು. ತಲೆಯ ಭಾಗ ಸ್ವಲ್ಪ ಎತ್ತರವಾಗಿರುವಂತೆ ಮಾಡಿ ಮಲಗಿಸಬೇಕು. ತಲೆಯು ತುಂಬ ಬಿಸಿಯಾಗಿದ್ದರೆ, ಒಂದು ಬಿಳಿ ಬಟ್ಟೆಯನ್ನು ತೆಗೆದುಕೊಂಡು ತಣ್ಣೀರಿನಲ್ಲಿ ಅದ್ದಿ ಚೆನ್ನಾಗಿ ಹಿಂಡಿದ ಬಟ್ಟೆಯನ್ನು ನೆತ್ತಿಯ ಮೇಲೆ ಇಟ್ಟು ಪಾದಗಳೆರಡನ್ನೂ ಬಿಸಿನಲ್ಲಿ ಮುಳುಗಿಸಬೇಕು. ಅನಂತರ ಬೆಚ್ಚಗಿನ ಹೊದಿಕೆಯನ್ನು ಹೊದಿಸಬೇಕು.

ರೋಗಿಗೆ ಮಲವಿಸರ್ಜನೆ ಸರಿಯಾಗಿ ಆಗಿಲ್ಲವೆಂದು ತಿಳಿದುಬಂದರೆ ಉಗುರು ಬೆಚ್ಚಗಿನ ನೀರಿನಿಂದ ಮೃದುವಾಗಿ ಬಸ್ತಿಯನ್ನು ಕೊಡಬೇಕು. ಯಾಕೆ ಹೀಗೆ ಮಾಡಬೇಕೆಂದರೆ ಹಳ್ಳಿಯಲ್ಲಿ ವೈದ್ಯರಿಲ್ಲದಿದ್ದಾಗ ಪ್ರಥಮ ಚಿಕಿತ್ಸೆಯಾಗಿ ಮಾಡುವುದು ಒಳಿತು. ಆದರೆ ವೈದ್ಯರು ಲಭ್ಯವಾದ ಕೂಡಲೇ ಅವರ ಚಿಕಿತ್ಸೆ ಪ್ರಕಾರವಾದ ಸಲಹೆಗಳನ್ನು ರೋಗಿ ಪಾಲಿಸಬೇಕಾಗುತ್ತದೆ. ರೋಗಿಯು ಸುಲಭವಾಗಿ ಜೀಣರವಾಗುವ ರವೆ, ಅಕ್ಕಿ, ಗಂಜಿ, ಕಾಯಿಪಲ್ಲೆಗಳನ್ನು ನೀರು ಹಾಕಿ ಕುದಿಸಿ ಹಿಂಡಿದ ರಸ, ಮೋಸುಂಬೆ ದ್ರಾಕ್ಷಿಗಳ ರಸ, ಹಾಲು, ಹುಳಿಯಿಲ್ಲದ(ಬೆಣ್ಣೆ ತೆಗೆದ) ಮಜ್ಜಿಗೆ ಇವುಗಳನ್ನು ಬಳಸಿದರೆ ಒಳ್ಳೆಯದು.

ಸಾಸಿವೆ ಎಣ್ಣೆ ಮತ್ತು ಬಾದಾಮಿ ಎಣ್ಣೆಯನ್ನು ಸಮವಾಗಿ ಮಿಶ್ರಮಾಡಿ, ಆಘಾತವಾದ ಭಾಗಗಳಿಗೆ ದಿನಕ್ಕೆ ೨ ಸಲ ತಿಕ್ಕಬೇಕು. ಬೆನ್ನಿಗೂ ಅದೇ ಎಣ್ಣೆಯನ್ನು ತಿಕ್ಕಿದರೆ ಒಳ್ಳೆಯದು. ರೋಗಿಯು ಸಾಮಾನ್ಯವಾಗಿ ಸದಾ ಬೆಚ್ಚಗಿರುವಂತೆ ನೋಡಿಕೊಳ್ಳಬೇಕು. ಅಲ್ಲದೆ ದಿನಕ್ಕೆ ಒಂದು ಬಾರಿಯಾದರೂ ಸ್ವಲ್ಪ ತಿರುಗಾಡಿ ಬಂದರೆ ಒಳ್ಳೆದು. ಕೈಕಾಲುಗಳನ್ನು ಅಲುಗಾಡಿಸಲು ಪ್ರಯತ್ನ ಪಡುತ್ತಿರಬೇಕು. ತಜ್ಞ ವೈದ್ಯರಿಂದ ಸಲಹೆ, ಚಿಕಿತ್ಸೆಯನ್ನು ಪಡೆಯುತ್ತಿದ್ದರೆ ರೋಗಿಯು ಗುಣಹೊಂದುವುದು ಸಾಧ್ಯ.

ಹಸಿರೆಳೆ ಎಂಬ ನಿಗೂಢ ರೋಗವುಂಟೆ...?

ದಕ್ಷಿಣ ಹಾಗೂ ಉತ್ತರ ಕರ್ನಾಟಕದಲ್ಲಿ ಮಾತ್ರಲ್ಲ ಎಲ್ಲ ಕಡೆ ಈ ರೋಗ ಇರುತ್ತದೆ. ಆದರೆ ಪ್ರಾದೇಶಿಕವಾಗಿ ಬೇರೆ ಬೇರೆ ರೀತಿಯಲ್ಲಿ ಸಂಭೋಗಿಸುವರು ಹಳ್ಳಿಗರು. ಬಳ್ಳಾರಿ ಆಜುಬಾಜಿನಲ್ಲಿ ಇಂದಿಗೂ ಈ ರೋಗದಿಂದ ಬಳಲುವರಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಕಂಡುಂಡ ಅನುಭವ ಹಾಗೂ ರೋಗಿಗಳ ಒಡನಾಟ ಮತ್ತು ನಾಟಿ ವೈದ್ಯರ ಹುಡುಕಾಟದಲ್ಲಿ ನಮಗೆ ಗೊತ್ತಿಲ್ಲದ ಅನೇಕ ಕಾಯಿಲೆಗಳು ಇವೆ. ಆದ್ದರಿಂದ ರೋಗಿಗಳ, ಜನಪದ ವೈದ್ಯರನ್ನು ಭೇಟಿಯಾಗಿ ಸಂಗ್ರಹಿಸಿದ ಮಾಹಿತಿಯನ್ನು ಇಲ್ಲಿ ಕೊಡಲು ಪ್ರಯತ್ನಿಸಿದ್ದೇನೆ.

ಈ ರೋಗ ಸಾಮಾನ್ಯವಾಗಿ ಗರ್ಭಿಣಿ ಸ್ತ್ರೀಯರಲ್ಲಿ ಕಂಡುಬರುತ್ತದೆ. ಸ್ತ್ರೀಯರು ಗರ್ಭಿಣಿಯರಾದ ಸಂದರ್ಭದಲ್ಲಿ ಹೊಕ್ಕಳಿನ ಸುತ್ತ ಹಸಿರೆಳೆಗಳಾಗುತ್ತವೆ. ಇದು ಯಾಕೆಂದರೆ ಈಲಿಯ (ಲಿವರ್) ಮಧ್ಯ ಸಾಗುವ ಅಭಿದಮನಿಗಳಲ್ಲಿ ಪಿತ್ತಜನಕಾಂಗ ತೊಂದರೆಗೆ ಒಳಗಾದಾಗ-------- ಒಂದು ಮೂಢನಂಬಿಕೆ. ಇದೊಂದು ಹೊಟ್ಟೆಯಲ್ಲಿರುವ ರೋಗದ ಸಂಕೇತವಷ್ಟೇ ಹಸಿರೆಳೆಗಳನ್ನು ನಾಶಪಡಿಸಿದರೂ ಹೊಟ್ಟೆಯಲ್ಲಿರುವ ತೊಂದರೆ ಶಮನಗೊಳ್ಳುವುದಿಲ್ಲ. ಆದುದರಿಂದ ಹೊಟ್ಟೆಯಲ್ಲಿರುವ ತೊಂದರೆ ಗುಣವಾದರೆ ತಾನಾಗಿಯೇ ಹಸಿರೆಳೆ ಮಾಯವಾಗುವುದು.

ಅಂದರೆ ರೋಗಕ್ಕೆ ತುತ್ತಾದ ರೋಗಿಗಳು ಕಾಲಿಗೆ ಬಿಸಿ ನೀರನ್ನು ಹಾಕಿಕೊಂಡು ಹಾಸಿಗೆಯನ್ನು ಕಾಲಕಡೆ ಎತ್ತರಿಸಿ ಮಲಗುವುದರಿಂದ ನೋವು ಕಡಿಮೆಗೊಳ್ಳುವುದು. ಮೊಣಕಾಲಿನಿಂದ ತೊಡೆಸಂದಿಯವರೆಗೆ ಕಾಲನ್ನು ಅಂಗೈಗಳಿಂದ ಒತ್ತಿ ನೀವಬೇಕು. ಇದರ ಪರಿಣಾಮವಾಗಿ ರಕ್ತ ಸರಾಗವಾಗಿ ಸೊಂಟದ ಕಡೆಗೆ ಹರಿಯುವುದು. ಅಲ್ಲದೆ ಗರ್ಭಿಣಿಯರಲ್ಲಿ ಪಿಂಡ ಎದೆಯ ಕಡೆಗೆ ಜಾರಿ ಅಭಿದಮನಿಗಳ ಮೇಲೆ ಬಿದ್ದಿದ್ದ ಒತ್ತಡ ನಿವಾರಣೆಯಾಗುವುದರಿಂದ ಕಾಲಿನಲ್ಲಿ ಶೇಖರವಾಗಿದ್ದ ರಕ್ತ ವೇಗವಾಗಿ ಹೃದಯದ ಕಡೆಗೆ ಹರಿಯುತ್ತದೆ. ಇವುಗಳನ್ನು ನಾವು ಅನುಸರಿಸಿದರೂ ವೈದ್ಯರ ಮೋರೆ ಹೋಗುವುದರಿಂದ ನಿರಂತರವಾಗಿ ಕಾಡುವ ಈ ಬೇನೆ ಮುಕ್ತಿಹೊಂದಿ ಅವರ ವೈಜ್ಞಾನಿಕ ಚಿಕಿತ್ಸೆಯಿಂದಲೇ ಅನ್ನುವಂತದನ್ನು ಮರೆಯುವಂತಿಲ್ಲ.

ಗದಗಟ್ಟು, ರೋಗವೆಂದಾಕ್ಷಣ ಭಯವೆ?

ಸಾಮಾನ್ಯವಾಗಿ ಹಳ್ಳಿಗರು ಈ ರೋಗವನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಅವುಗಳೆಂದರೆ ಗದಗಟ್ಟು, ಗದ್ದಬಾವು, ಗದ್ದ ಊದಿಕೊಳ್ಳುವಿಕೆ, ಗೆಜ್ಜೆಕಟ್ಟು ಇಂಗ್ಲಿಷ್ ನಲ್ಲಿ ಮಂಪ್ಸ್

ಅಂತಲೂ ಕರೆಯುವರು. ಈ ಕಾಯಿಲೆಗೆ ತುತ್ತಾದ ಒಂದೆರೆಡು ರೋಗಿಗಳನ್ನು ಪ್ರತ್ಯೇಕ್ಷವಾಗಿ ಬೇಟಿ ಮಾಡಿದಾಗ ಅವರ ಗೋಳನ್ನು ಮರೆಯುವಂತಿಲ್ಲ. ಈ ರೋಗಕ್ಕೆ ತುತ್ತಾದ ರೋಗಿಯ ಎರಡು ಕಪಾಳಗಳು ದಪ್ಪವಾಗಿ ಊದಿಕೊಂಡು ಎದ್ದುಕಾಣುತ್ತಿದ್ದೆ. ದೂರದಿಂದಲೇ ಪತ್ತೆಹಚ್ಚಲೂಬಹುದು. ವಾಸ್ತವವಾಗಿ ಎರಡು ಕೆನ್ನೆಗಳ ಹಿಂಬದಿಯಲ್ಲಿ ಹೇಗೆಂದರೆ ಕಿವಿಗಳಿಂದ ಸ್ವಲ್ಪವೇ ಕೆಳಗೆ ಊದಿಕೊಂಡಿರುತ್ತವೆ. ಈ ಊತ ಏಕೆ ಕಾಣಿಸಿಕೊಳ್ಳುತ್ತದೆ ಅಂದರೆ ಪೆರೋಟಿಡ್ ಗ್ರಂಥಿಗಳೆಂಬ ಲಾಲಾ ಗ್ರಂಥಿಗಳ ಊರಿಯೂತದಿಂದ ಉಂಟಾಗುತ್ತದೆ. ಪೆರೋಟಿಡ್ ಎಂದು ಹೆಸರು ಬರಲು ಕಾರಣವೆಂದರೆ ಈ ಲಾಲಾಗ್ರಂಥಿಗೆ ಬರಲು ಅದು ಕುಳಿತಿರುವ ಸ್ಥಳವೇ ಕಾರಣ. ಗ್ರೀಕ್ ಭಾಷೆಯಲ್ಲಿ ಪೆರೋಟಿಡ್ ಅಂದರೆ ಕಿವಿಯ 'ಸುತ್ತಮುತ್ತ' ಎಂದರ್ಥವಿರುತ್ತದೆ. ಈ ರೋಗದಿಂದ ಬಳಲುತ್ತಿರುವ ರೋಗಿಯು ಊಟ, ತಿಂಡಿ, ಮಾಡಲು ಸಾಧ್ಯವಾಗದೆ, ನೀರನ್ನು ಕುಡಿಯಲು ಕಷ್ಟಸಾಧ್ಯ. ಅಂತ ಸಂದರ್ಭದಲ್ಲಿ ರೋಗಿಯು ದವಡೆಗಳನ್ನು ಆಡಿಸುವಾಗ ಅವುಗಳ ಸುತ್ತಮುತ್ತ ವಿಪರೀತ ನೋವು ಕಾಣಿಸಿಕೊಳ್ಳುತ್ತದೆ. ಅಲ್ಲದೆ ಮಾತನಾಡಲು ಕಷ್ಟವೆನಿಸುವುದು. ಈ ಕಾಯಿಲೆಯು ಪೆರೋಟಿಡ್ ಗ್ರಂಥಿಗಳನ್ನಷ್ಟೇ ಅಲ್ಲದೆ ಮೇದೋಜೀರಕ, ಥೈರಾಯ್ಡ್ , ಅಂಡಾಶಯ, ಸ್ತನಗಳು ಹೀಗೆ ದೇಹದ ಇನ್ನಿತರ ಗ್ರಂಥಿಗಳನ್ನು ಅವರಿಸಲೂಬಹುದು. ವೃಷಣಗಳು ಗಾತ್ರದಲ್ಲಿ ಎಷ್ಟೊಂದು ಹಿಗ್ಗುತ್ತವೆಂದರೆ ಅವು ಪೆರಲಕಾಯಿ, ಇಲ್ಲಾ ಸೇಬುಹಣ್ಣಿಗಿಂತಲೂ ದಪ್ಪವಾಗಿ ಕಾಣಿಸುತ್ತವೆ.

ಜನಪದರು ಹಳ್ಳಿಗಳಲ್ಲಿ ಈ ರೋಗವು ಬೇರೆ ಬೇರೆ ಕಾರಣಗಳಿಂದ ಎಂಬ ಮೂಢನಂಬಿಕೆ ಇದೆ. ಊರಿನ ಮಾರಿಗೆ ಸರಿಯಾಗಿ ನೆಡೆದುಕೊಳ್ಳಲಿಲ್ಲವೆಂದೊ ಇಲ್ಲಾ ಹಿರಿಯೂರಿಗೆ ಎಡೆ ಇಕ್ಕಲಿಲ್ಲವೆಂದೋ ಅಥವಾ ರೋಗಿಯು ಜಗಿದ, ತಿಂಡಿ ಪದಾರ್ಥಗಳನ್ನು ತೆಗೆದುಕೊಂಡು ತಿಂದ ಕಾರಣ ಈ ರೋಗ ಬರುತ್ತದೆ ಎಂಬ ಮಾತುಗಳು ಕೇಳಿಬರುತ್ತವೆ. ಹಾಗಾದರೆ ಈ ರೋಗಕ್ಕೆ ಹಳ್ಳಿಯ ಜನಪದರು ಮಾಡಿಕೊಳ್ಳುವ ನಾಟಿ ವೈದ್ಯಪದ್ಧತಿ ಏನು? ರೋಗದ ಮೂಲಕ್ಕೆ ಕಾರಣವನ್ನು ಅರಿಯದೆ ಇರುವ ರೋಗಿಗಳು ಅನೇಕ ಪದ್ಧತಿಯನ್ನು ಅನುಸರಿಸುವವರು. ರೋಗ ಬಂದ ವ್ಯಕ್ತಿಗೆ ಅಡಿಗೆ ಮಾಡುವ ಒಲೆ ಹತ್ತಿರ ಕುಳಿತುಕೊಂಡು ಅವನಿಗೆ ಅವನ ತಾಯಿಯೋ ಇಲ್ಲಾ ತಂದೆ, ಬಿಸಿ ಬೂದಿಯನ್ನು ಎರಡು ಕಡೆಯ ಕುತ್ತಿಗೆಯ ಗಲ್ಲಕ್ಕೆ ತೆಗೆದುಕೊಂಡು ಉಜ್ಜುವರು. ಅಥವಾ ಸೀಮೆ ಎಣ್ಣೆಯ ದೀಪದ ಬತ್ತಿಯನ್ನು ಎರಡು ಗಲ್ಲಗಳಿಗೆ ಉಜ್ಜುವರು. ಇನ್ನೂ ಮುಂದುವರೆದು ಹೇಳುವುದಾದರೆ ಬೆಳ್ಳುಳ್ಳಿ ಇಕ್ಕಲುಗಳನ್ನು ದಾರಕ್ಕೆ ಕಟ್ಟಿ ರೋಗ ಬಂದ ವ್ಯಕ್ತಿಯ ಕೊರಳಿಗೆ ಕಟ್ಟುವರು. ಅಲ್ಲದೆ ಗಂಧದ ಮರದ ತುಂಡನ್ನು ತೇದು ಅದನ್ನು ತಿಕ್ಕುವರು. ಹೀಗೆ ಇನ್ನು ಅನೇಕ ನಾಟಿ ಔಷಧಿಯ ಚಿಕಿತ್ಸೆಯನ್ನು ಮಾಡಿಕೊಳ್ಳವರು.

ವೈಜ್ಞಾನಿಕವಾಗಿ ತುಲನೆ ಮಾಡಿದಾಗ ಈ ಯಾವ ಚಿಕಿತ್ಸೆಗಳು ಪರಿಪೂರ್ಣವಾಗುಗಳಲ್ಲ. ಈ ರೋಗವು ವೈಜ್ಞಾನಿಕವಾಗಿ ಅನೇಕ ವೈರಸ್‌ಗಳಿಂದ ಬರುತ್ತದೆ. ಅಂದರೆ ಪ್ಯಾರಾಮಿಕ್ಸೋ ವೈರಸ್ ಗಳ ಗುಂಪಿಗೆ ಸೇರುವ ಮಿಕ್ಸೋವೈರಸ್ ಪೆರೋಟೈಟಿಡಿಸ್ ಎಂಬ ಅತಿ ಚಿಕ್ಕವೈರಸ್ ನಿಂದ ಮಂಪ್ಸ್ ಉಂಟಾಗುತ್ತದೆ. ಇದರ ಸೋದರ ಮತ್ತು ನಿಕಟ ಸಂಬಂಧಿ ವಂಶಕ್ಕೆ ಸೇರಿರುವ ಆರ್ಥೋಮಿಕ್ಸೋ ವೈರಸ್ ಗಳೆಂಬ ಇನ್ ಫ್ಲುಯೆಂಝಾ ವೈರಸ್ ನಿಂದ ಉಂಟಾಗುತ್ತದೆ. ಈ ವೈರಸ್ ನ ಗಾತ್ರ ೮೦ ರಿಂದ ೨೪೦ ನ್ಯಾನೋಮೀಟರ್ ಗಳಷ್ಟಿರುತ್ತದೆ. ಒಂದು ಮೀಟರ್ ನ ಬಿಲಿಯನ್ನಿನ(ಒಂದು ಭಾಗವೇ ಒಂದು ನ್ಯಾನೋಮೀಟರ್) ಈ ರೋಗದಿಂದ ಬಳಲುತ್ತಿರುವ ರೋಗಿಯು ಕೆಮ್ಮಲು ಮತ್ತು ಸೀನುಗಳ ಮುಖಾಂರ ವೈರಸ್ ಅವರಿಸುತ್ತದೆ. ಕೆನ್ನೆಯ ಬಾವು ಕಾಣಿಸಿಕೊಳ್ಳುವುದಕ್ಕೆ ಎರಡು ದಿನಗಳ ಮೊದಲೇ ರೋಗಿಯು ತನ್ನ ಜೊಲ್ಲಿನಲ್ಲಿ ಗದಗಟ್ಟು ವೈರಸ್ ಗಳನ್ನು ಸ್ರವಿಸುತ್ತಿರುತ್ತಾನೆ. ಅಲ್ಲದೆ ಬಾವು ಸಂಪೂರ್ಣವಾಗಿ ಇಳಿದ ಅನಂತರವವೂ ಸಹ ಸುಮಾರು ಒಂದು ವಾರದವರೆಗೆ ವೈರಸ್ ಗಳು ಸ್ರವಿಸುವುದುಂಟು.

ಈ ರೋಗ ಪ್ರಾರಂಭವಾದಲಿನಿಂದಲೇ ತನ್ನ ಕ್ರಿಯೆಯಲ್ಲಿ ತೊಡಗುವುದಿಲ್ಲ. ಸಮಯದವರೆಗೆ ಸ್ವಲ್ಪ ಹೊತ್ತು ಗಂಟಲಿನ ಹಿಂಬದಿಯಲ್ಲಿರುತ್ತದೆ. ಅನಂತರ ತನ್ನ ವಂಶಾಭಿವೃದ್ಧಿಯನ್ನು ಹೆಚ್ಚಿಸುತ್ತಾ ಹೋಗುತ್ತದೆ. ಆಮೇಲೆ ಪೆರೋಟಿಡ್ ಗ್ರಂಥಿಗಳನ್ನು ವಶಪಡಿಸುತ್ತದೆ. ಈ ರೋಗದ ಲಕ್ಷಣವೆಂದರೆ ಸ್ವಲ್ಪ ಮೈಬೆಚ್ಚಗಿದ್ದು ಅನಂತರ ಜ್ವರ ಕಾಣಿಸುವುದು. ಅನಂತರ ಗಂಟಲು ನೋವು ಜೊತೆಗೆ ಮೈ ಇಳಿಮುಖವಾಗಾಗುತ್ತದೆ. ಅಲ್ಲದೆ ಕುತ್ತಿಗೆಯ ಪೆಡುಸುತನ, ತಲೆನೋವು ಮತ್ತು ವಾಂತಿಯಿಂದ ನರಳುತ್ತಾರೆ. ಇಂತಹ ಲಕ್ಷಣವು ರೋಗವು ಕಾಣಿಸಿಕೊಂಡ ಹತ್ತು ದಿವಸಗಳಲ್ಲಿ ಕಾಣಿಸಿಕೊಳ್ಳುತ್ತವೆ. ಗದಗಟ್ಟುವಿನ ಲೈಂಗಿಕ ಸಾಮರ್ಥ್ಯಗಳ ಬಗ್ಗೆ ಚಿಂತೆಗೀಡಾಗುವರು. ಹೀಗೆ ಇನ್ನೂ ಅನೇಕ ಲಕ್ಷಣಗಳು ಕಂಡುಬರುತ್ತವೆ.

ಆರ್ಕೈಟಿಸ್ ನ ಸ್ತ್ರೀ ಪ್ರತಿರೂಪವೇ ಊಫೆರೈಟಿಸ್ , ಅಂದರೆ ಅಂಡಾಶಯಗಳ ಊರಿಯೂತ. 'ಇದು ತೀವ್ರ ಸ್ವರೂಪದ ಕಿಬ್ಬೊಟ್ಟೆಯ ನೋವು ಮತ್ತು ವಾಂತಿಯನ್ನು ಉಂಟು ಮಾಡಬಲ್ಲದು. ಕೆಲವೊಮ್ಮೆ ಮಂಪ್ಸ್ ವೈರಸ್ ಕೊಂಚ ಎತ್ತರದಲ್ಲಿ ಕುಳಿತಿರುವ ಮೇದೋಜೀರಕ ಎಂಬ ಇನ್ನೊಂದು ಗ್ರಂಥಿಯ ಮೇಲೆ ಆಕ್ರಮಣ ಮಾಡುವುದರಿಂದ ಮೇಲ್ಭಾಗದ ಹೊಟ್ಟೆನೋವು, ಜ್ವರ ಮತ್ತು ವಾಂತಿಗಳಂಥ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅಂಡಾಶಯ ಮತ್ತು ವೇದೋಜಿರಕಗಳ

ಉರಿಯಾತಗಳೆರಡೂ ಸುಮಾರು ಮೂರು ಅಥವಾ ನಾಲ್ಕು ದಿನಗಳಲ್ಲಿ ತಹಬಂದಿಗೆ ಬರುತ್ತವೆ. ಸ್ತ್ರೀಯರು ಸ್ತನಗಳ ಉರಿಯೂತವನ್ನು ಅನುಭವಿಸುತ್ತಾರೆ. ಇದಕ್ಕೆ ಮ್ಯಾಸ್ಟೈಟಿಸ್ ಎನ್ನಲಾಗುತ್ತದೆ. ಅಲ್ಲದೆ ಸ್ತನಗಳ ಆಧಾರ-ಕಟ್ಟುಗಳನ್ನು ಧರಿಸಲು ಸಲಹೆ ಮಾಡಲಾಗುತ್ತದೆ. ಪುರುಷರು ಪ್ರೋಸ್ಪೇಟೈಟಿಸ್ ಅಥವಾ ಪ್ರೋಸ್ಟೇಟ್ ಗ್ರಂಥಿಯ ಉರಿಯೂತಕ್ಕೆ ಒಳಗಾಗಬಹುದು. ಈ ಗ್ರಂಥಿಯು ಶಿಶ್ನದ ಮೂಲಸ್ಥಳದಿಂದ ಸ್ವಲ್ಪವೇ ಹಿಂದೆ ಕುಳಿತಿರುತ್ತದೆ ಎಂಬುದನ್ನು ವೈಜ್ಞಾನಿಕವಾಗಿ ಒಳ ನುಗ್ಗಿದಾಗ ಅರಿಯಬಹುದಾಗಿದೆ.

ಇವತ್ತಿಗೂ ಹಳ್ಳಿಗರಲ್ಲಿ ಇರುವ ನಂಬಿಕೆ ಎಂದರೆ ಈ ರೋಗ ಬಂದ (ಮನುಷ್ಯರು) ರೋಗಿಗಳು ಪಕ್ಕದ ಮನೆಯವರ ಅದರಲ್ಲೂ ಸ್ತ್ರೀಯರ ಕತ್ತಿನ ಸರವನ್ನು ಧರಿಸಿಕೊಂಡರೆ ಮಂಪ್ಸ್ ವಾಸಿಯಾಗುತ್ತದೆ ಎಂಬ ಆಶಾಭಾವನೆ ವಾಸ್ತವದಲ್ಲಿದೆ. ಇದೊಂದು ತಪ್ಪು ಕಲ್ಪನೆಯೆಂದು ಮನವರಿಕೆ ಮಾಡಿಕೊಡಬೇಕು. ಇಂದಿಗೂ ಈ ಬಾವುಗೆ ಯಾವುದೇ ಚಿಕಿತ್ಸೆಯು ಲಭ್ಯವಿರುವುದಿಲ್ಲ. ಲಘು ಸ್ವರೂಪದ ಮತ್ತು ಮಧ್ಯಮ ಸ್ಥಿತಿಯ ರೋಗಿಗಳಿಗೆ ಸರಳವಾದ ನೋವು ನಿವಾರಕಗಳನ್ನು ಸೂಚಿಸಲಾಗುತ್ತದೆ. ಹಾಸಿಗೆಯ ವಿಶ್ರಾಂತಿಯು ಅನಗತ್ಯ. ಪರಿಸ್ಥಿತಿಯು ತೀವ್ರವಾದಾಗ ಮಾತ್ರ ರೋಗಿಯು ಹಾಸಿಗೆಯ ವಿಶ್ರಾಂತಿಯನ್ನು ಪಡೆಯಬೇಕು. ರೋಗಿಯನ್ನು ಶಿತದಿಂದ ತಪ್ಪಿಸಿ ಬೆಚ್ಚಗೆ ಇಟ್ಟಿರಬೇಕು. ಅಲ್ಲದೆ ಯಾವುದೇ ಜ್ವರಕ್ಕೆ ಅನ್ವಯವಾಗುವ ಸಾಮಾನ್ಯ ನಿಯಮದಂತೆ ಕುಡಿಯಲು ಸಾಕಷ್ಟು ಪಾನೀಯಗಳನ್ನು ನೀಡಬೇಕು. ಗ್ರಂಥೀಯ ಊತವು ತೀವ್ರವಾದಾಗ ಮತ್ತು ತಿನ್ನುವುದಕ್ಕೆ ನೋವಾದಾಗ ಮೃದುವಾದ ಆಹಾರ ಮತ್ತು ಸಾಕಷ್ಟು ಪಾನೀಯಗಳನ್ನು ಶಿಫಾರಸ್ಸು ಮಾಡಲಾಗುವುದು. ಅಸ್ವಸ್ಥತೆಯನ್ನು ನೀಗಿಸಲು ನೋವು ನಿವಾರಕಗುಳಿಗೆಗಳ ಅಗತ್ಯ ಬೀಳುತ್ತದೆ. ಒಸಡು ಮತ್ತು ಲಾಲಾಗ್ರಂಥಿಗಳಿಗೆ ಉಂಟಾಗಬಹುದಾದ ಬ್ಯಾಕ್ಟೀರಿಯಾಗಳ ಸೋಂಕನ್ನು ತಡೆಗಟ್ಟುವ ಸಲುವಾಗಿ ತೆಳುವಾದ ಉಪ್ಪಿನ ನೀರಿನಿಂದ ಆಗಿಂದಾಗ್ಗೆ ಬಾಯಿಯನ್ನು ಮುಕ್ಕಳಿಸಬೇಕು. ಈ ಕಾಯಿಲೆಯ ಬಹಳ ಪ್ರಧಾನವಾದ ಲಕ್ಷಣವೆಂದರೆ ಒಂದು ಸಲ ಅನುಭವಿಸಿದ ರೋಗಿಯು ಮುಂದೆ ಈ ಬಾವು ಅಥವಾ ಗದಗಟ್ಟು ಮುಂದೆ ಎಂದಿಂದಿಗೂ ಬರದ ಹಾಗೆ ವೈರಸ್ ನ್ನು ತಡೆಗಟ್ಟಬಹುದಾಗಿದೆ.

ವಾಂತಿಹುಳಿ ರೋಗ ಅಥವಾ ಹುಳಿತೇಕು ಅಥವಾ ಹುಳಿಸುಡುವ ರೋಗ ಕೇಳಿರುವಿರಾ

ನಮ್ಮ ಜನಪದರು ಹುಳಿದೇಕು, ಹುಟಿಗಟ್ಟುವಿಕೆ, ಇಲ್ಲಾ ಹುಳಿವಾಸನೆ ಹೀಗೆ ಅನೇಕ ಹೆಸರುಗಳಿಂದ ಕರೆಯುವರು. ಏಕೆಂದರೆ ಆ ರೋಗದಿಂದ ಬಳಲುವವರಿಗೆ ಎದೆಯಲ್ಲಿ ಸುಟ್ಟಂತೆ ಉರಿದಂತೆ ಆಗಿ, ಬಾಯಿಯಲ್ಲಿ ಹುಳಿ ನೀರು ಆಗಿಂದಾಗ್ಗೆ ಬರುತ್ತಿರುವುದು. ಹೆಚ್ಚಿನದಾಗಿ ಹುಳಿ ವಾಂತಿ

ಆಗುತ್ತಿರುತ್ತದೆ. ಜೊತೆಗೆ ನಾಲಿಗೆ, ಹಲ್ಲು, ಹುಳಿಯ ತೇವದಿಂದ ಏನನ್ನು ತಿನ್ನಲು ಜಗಿಯಲು ಕಸಿವಿಸಿಯಾಗುತ್ತದೆ. ಜೊತೆಗೆ ಊಟ, ತಿಂಡಿ, ಪಾನಿಯಗಳನ್ನು ಕುಡಿದ ಕೆಲವು ಹೊತ್ತಿನಲ್ಲೆ ಜೀರ್ಣಿಸಿಕೊಳ್ಳಲಾಗದೆ ಹೊರಗೆ ಬರುತ್ತದೆ.

ಹಾಗೆಂದರೆ ಈ ರೋಗಕ್ಕೆ 'ಕಾರಣಗಳೇನಿರಬಹುದು? ಜೊತೆಗೆ ಹಿಂದಿನ ರಹಸ್ಯದ ಬಗ್ಗೆ ಜನಪದರಿಗೆ ಗೊತ್ತಿರುವುದಿಲ್ಲ. ಹುಳಿಯಾದ ಪಿತ್ತ(ಪಾಚಕರಸ)ವು ಜಠರದಲ್ಲಿ ಸ್ರವಿಸುವುದು. ಈಗ ವಿವೇಚಿಸುತ್ತಿರುವ ಆಮ್ಲಪಿತ್ತ ರೋಗವು, ಜಠರದೊಳಗಿನ ಆ ಹುಳಿಪಿತ್ತದ ಪಿಕೃತಿಯಿಂದುಂಟಾಗುವುದು. ಅದು ಸ್ವತಃ ತಾನೇ ವಿಕೃತವಾಗಲೂಬಹುದಾಗಿದೆ. ಇಲ್ಲವೇ ಜಠರದಲ್ಲಿ ಸ್ರವಿಸುವ ಬೇರೆ ಪಾಚರಸಗಳ ಅಥವಾ ಪಿತ್ತಪಿತ್ತದ ವಿಕೃತಿಯಿಂದಲೂ ಹುಟ್ಟಿಕೊಳ್ಳಬಹುದಾಗಿದೆ. ಅಲ್ಲದೆ ಆಹಾರ, ಪಾನಿಯಗಳನ್ನೂ ಆಗಿಂದಾಗ್ಗೆ ಸೇವಿಸುವುದರಿಂದ, ಧ್ರುವ ರೂಪದ ಇಲ್ಲವೆ ಘನರೂಪವಾದ ಆಹಾರದ ಕನಿಷ್ಟ ೩-೪ ಗಂಟೆಯೊಳಗೆ ಸೇವಿಸಿದರೆ ಜೀರ್ಣವು ಕೆಟ್ಟು ಹುಳಿಯಾಗುವುದು. ರಾತ್ರಿ ಮಲಗುವಾಗ ಹಾಲು ಕುಡಿಯುವರಿಗೆ, ಏಕೆಂದರೆ ಅವರು ರಾತ್ರಿ ಉಂಡು ಆಹಾರವು ಅರ್ಧ ಜೀರ್ಣವಾಗುವ ಹೊತ್ತಿಗೆ ಹಾಲು ಕುಡಿಯುವುದರಿಂದ ಅಜೀರ್ಣವಾಗುವುದು. ಅಲ್ಲದೆ ಉಷ್ಣವನ್ನು ಹೆಚ್ಚಿಸುವ ಉಪ್ಪು ಹುಳಿಕಾರ ಮಸಾಲೆಗಳನ್ನೂ, ಶೀತಗುಣದ ಸಿಹಿ ಐಸ್ ಕ್ರೀಂ ಮೊಸರು ಪಾಯಸಗಳನ್ನು ಜೊತೆಯಾಗಿ ಅತಿಯಾಗಿ ತಿನ್ನುವುದರಿಂದ ಹೆಚ್ಚುಕರಿದ, ಪ್ರೆಯ್ ಯಾದ, ಅಲ್ಲದೆ ಒಡೆ, ಭಜಿ, ಕಮರಿದ ತಿಂಡಿ ತಿನ್ನಿಸುಗಳನ್ನು ಬಿಡದೆ ಸೇವಿಸುವುದರಿಂದ ಬರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಅತಿಯಾದ ಚಹಾ, ಕಾಫಿಯ ಚಟ, ಅಲ್ಲದೆ ಬರಿಹೊಟ್ಟೆ ಕುಡಿಯುವುದು. ಮನುಷ್ಯನನ್ನು ಕೆರಳಿಸುವ ಸಿಟ್ಟು ಭಾವಾವೇಶಗಳಿಂದಲೂ ಅಧಿಕಾಮ್ಲಪಿತ್ತವಾಗುವುದು. ಅಲ್ಲದೆ ಆಗಾಗ್ಗೆ ಇಡೀ ದಿನ ಏನಾದರೂ ತಿನ್ನುತ್ತಲೇ ಇರುವುದರಿಂದ ಜಠರಕ್ಕೆ ಮಿತಿಮೀರಿ ಪಿತ್ತವನ್ನು ಸ್ರವಿಸುವುದರಿಂದ ಈ ರೋಗ ಬರುವುದು.

ಈ ರೋಗದ ಲಕ್ಷಣಗಳೆಂದರೆ ಆಹಾರವು ಜೀರ್ಣವಾಗದಿರುವಿಕೆ, ಸಂಕಟ, ಬಾಯಿಗೆ ಕಹಿ, ಹುಳಿ ರುಚಿಯ ನೀರೂರುವಿಕೆ, ಮೈಮನಗಳು ಜಡ, ಎದೆ ಗಂಟಲುಗಳಲ್ಲಿ ಉರಿ, ಬಾಯಿಗೆ ಯಾವುದೂ ರುಚಿಸದಿರುವಿಕೆ. ಈ ಎಲ್ಲ ಲಕ್ಷಣಗಳೊಂದಿಗೆ ಇನ್ನೂ ಕೆಲವು ಅಂಶಗಳೆಂದರೆ ಅನೇಕರಿಗೆ ಹುಳಿಯಾದ ಇಲ್ಲವೆ ಕಹಿಯಾದ ವಾಂತಿಯೂ ಬರುವ ಸಾಧ್ಯತೆಗಳಿರುತ್ತವೆ. ವಾಂತಿಯಾದರೆ ಈ ರೋಗದ ಲಕ್ಷಗಳು ತಾತ್ಕಾಲಿಕವಾಗಿ ಶಮನಗೊಳ್ಳಬಹುದು. ವಾಂತಿಯಲ್ಲಿ ಉಂಡದ್ದೆಲ್ಲವೂ ಹೋಗಲೂಬಹುದು. ಇಲ್ಲದಿದ್ದರೆ ತುಂಬ ಹುಳಿಯಾದ ಪುತ್ತ ಮೂತ್ರ ಹೋಗಬಹುದು.

ಹಳ್ಳಿಯ ವೈದ್ಯರು ಇದಕ್ಕೆ ತಮ್ಮದೇ ಆದ ಚಿಕಿತ್ಸೆಯಲ್ಲಿ ತೊಡಗಿರುವರು. ಅಂದರೆ ಬೆಳಿಗ್ಗೆ ಹೊತ್ತು ಬರಿ ಹೊಟ್ಟೆಗೆ ನೀರು ಕುಡಿಸಿ ಸ್ವಲ್ಪ ಹೊತ್ತು ಬಿಟ್ಟು ಬಾಯಿಗೆ ಕೈ ಹಾಕಿ ವಾಂಚಿ ಮಾಡಿಸುವುದು. ಇಲ್ಲದಿದ್ದರೆ ನಿಂಬೆ ಹಣ್ಣಿನ ರಸವನ್ನು ನೀರಿಗೆ ಬೇರಸಿ ಕುಡಿಸುವರು. ಅಥವಾ ಉಪ್ಪು ಮತ್ತು ಬೆಳ್ಳುಳ್ಳಿಯನ್ನು ಸೇರಿಸಿ ತಿನ್ನಿಸುವರು. ಅಥವಾ ಅಳಲೇಕಾಯಿಯನ್ನು ತೇದು ಬಿಸಿನೀರಿನಲ್ಲಿ ತೇಯ್ದು ಕುಡಿಯಲು ಕೊಡುವರು. ಇವೆಲ್ಲವು ತಾತ್ಕಾಲಿಕವಾಗಿ ಸಮಧಾನ ಕಾಣಬಹುದು. ಆದರೆ ಕ್ರಮೇಣ ಪಿತ್ತಸ್ರಾವ ಅತ್ಯಧಿಕವಾಗಿ ಹೊಟ್ಟೆಹುಣ್ಣು (ಗ್ಯಾಸ್ಟ್ರಿಕ್ ಅಲ್ಸರ್) ಆಗಿ ಶಸ್ತ್ರ ಚಿಕಿತ್ಸೆಯ ಅಗತ್ಯವನ್ನು ತಂದೊಡ್ಡಬಹುದಾಗಿದೆ.ಇವೊತ್ತು ವೈಜ್ಞಾನಿಕವಾಗಿ ವೈದ್ಯವು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಿರುವುದರಿಂದ ಹಳೆಯಕಾಲದ ಜನಪದ ಮೂಢನಂಬಿಕೆಗಳತ್ತ ಗಮನಹರಿಸದೆ ವೈದ್ಯರನ್ನು ಬೇಟಿಯಾಗಿ ಅವರ ಸಲಹೆಯ ಮೇರೆಗೆ ಚಿಕಿತ್ಸೆಯನ್ನು ಪಡೆದುಕೊಳ್ಳುವಲ್ಲಿ ಮಗ್ನರಾಗಬೇಕು. ಆದುದರಿಂದ ಹುಳಿದೇಕಿಗೆ ವೈಜ್ಞಾನಿಕವಾಗಿ ಚಿಕಿತ್ಸಾದೃಷ್ಟಿ ಎಂದರೆ, ರೋಗಿಯು ಒಂದೆರೆಡು ದಿವಸ ಉಪವಾಸ ಮಾಡಬೇಕು. ಉಪವಾಸ ಮಾಡಲು ಸಾಧ್ಯವಾಗದಿದ್ದರೆ ಹಣ್ಣುಗಳ ರಸ, ಅಥವಾ ಸೊಪ್ಪು ತರಕಾರಿಗಳನ್ನು ನೀರಿನಲ್ಲಿ ಬೇಯಿಸಿ ಹಿಂಡಿದ ರಸವನ್ನು ಕುಡಿಯುವುದು ಜೊತೆಗೆ ವೈದ್ಯರ ಸಲಹೆಗಳಿಗೆ ಬದ್ಧರಾಗಿರಬೇಕು. ಆಗ ರೋಗವು ಕಡಿಮೆಯಾಗುವುದರಲ್ಲಿ ಅನುಮಾನವಿಲ್ಲ.

ಅಧ್ಯಾಯ ೫

ಜನಪದ ವೈದ್ಯದ ವರ್ಗೀಕರಣ

೨೫

ಜನಪದ ವೈದ್ಯದ ವರ್ಗೀಕರಣ

ಭಾರತ ಬಹುಳತ್ವ ಸಂಸ್ಕೃತಿಯಿಂದ ಕೂಡಿದೆ. ವೈವಿಧ್ಯಮಯವಾದ ಸಂಪ್ರದಾಯದ ಜನಪದರು ನೆಲೆನಿಂತಿದ್ದಾರೆ. ಹಾಗೆಯೇ ವಿವಿಧ ರೂಢಿಗಳು ಆಚರಣೆಗಳೂ, ವಿಧಿವಿಧಾನಗಳು, ಪೂಜೆ ಪುರಸ್ಕಾರಗಳು, ಊಟೋಪಾಚಾರವು ಇದೆ. ಈ ಅಂಶಗಳಿಗೆ ಪೂರಕವಾಗಿ ನಾನಾ ರೀತಿಯ ಜನಪದರು ಕೂಡ ಇದ್ದಾರೆ. ಜನಪದ ವೈದ್ಯವು ಜಾನಪದ ಸಂಪ್ರದಾಯಗಳಿಗನುಗುಣವಾಗಿ ಸ್ಥಳದಿಂದ ಸ್ಥಳಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ರಾಜ್ಯದಿಂದ ರಾಜ್ಯಕ್ಕೆ, ರಾಷ್ಟ್ರದಿಂದ ರಾಷ್ಟ್ರಕ್ಕೆ ದೇಶದಿಂದ ದೇಶಕ್ಕೆ, ಕಾಲದಿಂದ ಕಾಲಕ್ಕೆ ರೂಪಾಂತರಗೊಳ್ಳುತ್ತಾ, ಬದಲಾವಣೆ ಪಡೆಯುತ್ತಾ ಕೆಲವು ಹಾಗೆಯೇ ಮುಂದುವರೆಯುತ್ತಾ ಮುನ್ನಡೆಯುತ್ತಿವೆ. ಆಯಾಯ ಭಾಗಗಳಲ್ಲಿ ಪರಿಸರಕ್ಕೆ ಅನುಗುಣವಾಗಿ ಬೆಳೆಯುವ ಸಸ್ಯಗಳಿಗನುಗುಣವಾಗಿ ಜೊತೆಗೆ ಪ್ರಾದೇಶಿಕತೆಗೆ ಪೂರಕವಾಗಿ, ಔಷಧಿ ತಯಾರಿಸುವ ವಿಧಾನಗಳು ಕೂಡ ಬೇರೆಯಾಗಿರುತ್ತವೆ. ಪ್ರಾದೇಶಿಕತೆಗೆ ಪೂರಕವಾಗಿ ಹೇಳುವುದಾದರೆ ಕರ್ನಾಟಕವನ್ನು ಪ್ರಧಾನವಾಗಿ ಎರಡು ಭಾಗ ಮಾಡಿಕೊಂಡರೆ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂದು ಗುರ್ತಿಸಬಹುದು.

ದಕ್ಷಿಣ ಕರ್ನಾಟಕದಲ್ಲಿ ಪುನಃ ನಾವು ಬಯಲುಸೀಮೆ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಸಸ್ಯಗಳಿಗನುಗುಣವಾಗಿ ಕೊಡುವ ವೈದ್ಯಪದ್ಧತಿ ಬೇರೆಯಾಗಿರುತ್ತದೆ. ಬೆಂಗಳೂರು, ಮೈಸೂರು ಕಡ್ಲೆ ಸೊಪ್ಪಿನ ಸಾರು, ಪ್ರಧಾನವಾಗಿದ್ದರೆ, ಅದೇ ಹಾಸನ ಮಂಡ್ಯ ಜಿಲ್ಲೆಗಳಲ್ಲಿ ಮಾಂಸದ ಊಟವೆಂದರೆ ಪ್ರಿಯ. ಇನ್ನೂ ಕರಾವಳಿ ಪ್ರದೇಶಕ್ಕೆ ಬಂದರೆ ಕಣ್ಣು ಕುಟುದಾರೆ ಒಣದ್ರಾಕ್ಷಿ, ಪುಸ್ಪ ಹಚ್ಚುವುದು ಸಾಮಾನ್ಯ. ಅದೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಕಾಲು, ಬೆನ್ನು ನೋವುಬಂದರೆ ಮೀನಿನ ಎಣ್ಣೆ ತಿಕ್ಕಿ ನೀವುದು ಸಾಮಾನ್ಯ. ಇನ್ನೂ ಉತ್ತರ ಕರ್ನಾಟಕಕ್ಕೆ ಬಂದರೆ ಕೋಳಿ ಸಾರು, ಮೀನು ಅಪತ್ಯವಾಗಿದ್ದು ಆದೇ ಸೊಪ್ಪಿನ ರಸ, ಉತ್ತತಿ, ದ್ರಾಕ್ಷಿ, ಹೀಗೆ ಕೊಡುವುದನ್ನು ಕಾಣುತ್ತೇವೆ. ಒಟ್ಟಾರೆಯಾಗಿ ವೈದ್ಯ ಸ್ವಭಾವ ಪ್ರದೇಶಕ್ಕೆನುಗುಣವಾಗಿ ಔಷಧಿ ಕೊಡುವರು. ಕೆಲವು ಬಾರಿ ಔಷಧ ಕೊಡುವಾಗ ಸಾದೃಶ ನಿಯಮ ಅನುಸರಿಸುವುದುಂಟು. ಏಡಿ ಚೇಳು ಕಚ್ಚಿದಾಗ ದೊರದ ಮಣ್ಣು ಹಚ್ಚುವಂತದ್ದು, ಇಲ್ಲಾ ನರಮಂಡಲದ ರಕ್ತಪರಿಚಲನಾಕ್ರಮದಂತಿರುವ ಪಾಪಿಹೂವನ್ನು ಮಿದುಳು ಸಂಬಂಧ ರೋಗಿಗಳಿಗೆ

ಕೊಡುವುದನ್ನು ಅಥವಾ ಮಾಟದಲ್ಲಿ ವ್ಯಕ್ತಿಯ ಕೂದಲು, ಉಗುರು, ಪ್ರತಿಮೆ ಮಾಡಿ ಸುಡುವಂತದ್ದು ವೈದ್ಯನ ಜಾಣತನವಾಗಿರುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಕಾಯಿಲೆಗಳಿಗನುಗುಣವಾಗಿ ಸಸ್ಯಗಳನ್ನು ಬಳಸುವಂತದನ್ನೇ ಕಾಣಬಹುದಾಗಿದೆ. ಕಾರೆಮುಳ್ಳನ್ನು ಮನೆಯಲ್ಲಿ ತಂದಿಟ್ಟರೆ ಮನೆ ಹೊಳಾಗುವುದೆಂದೂ, ಚಿತ್ತ ಮುರಕನಬಳ್ಳೀ ಮೂಸಿದ ಮನಸ್ಸುಗಳು ಮುರಿಯುತ್ತವೆ ಎಂದೂ, ಅಲ್ಲದೆ ಹುಚ್ಚು ಹಿಡಿಯುತ್ತದೆ ಅಂತಲೂ,ಅಲ್ಲದೆ ಕೆಲವು ಸೊಪ್ಪುಗಳ ನಾಮಕರಣವನ್ನು ನಾವು ಅವಲೋಕಿಸಿದರೆ ತಿಳಿಯುತ್ತದೆ. ಅಂತವುಗಳೆಂದರೆ ಬಾಯಿ ಬಸಳೆ ಸೊಪ್ಪು, ಸಾವಿರ ಸಂಬಾರಸೊಪ್ಪು, ಇಂತವುಗಳಿಂದ ನಿರ್ದಿಷ್ಟವಾಗಿ ಕೆಲವು ಖಾಯಿಲೆಗಳ ಲಕ್ಷಣಹೊಂದಿದ್ದು, ಪೂರಕವಾದ ವೈಶಿಷ್ಟ್ಯವನ್ನು ಪಡೆದಿರುತ್ತವೆ. ಅದೇ ರೀತಿಯಾಗಿ ಕಿರುನಾಲಿಗೆಯಾದರೆ, ಉಪ್ಪು, ಮೆಣಸಿನ ಪುಡಿಯನ್ನು ನಾಲಿಗೆಗೆ ಹಚ್ಚುವ ಪದ್ಧತಿ ಇದೆ. ಹಲ್ಲಿಟ್ಟನ್ನು ಹಚ್ಚುವ ವಿಧಾನವೂ ಇದೆ. ಮುಂಜಾನೆ ಎದ್ದ ಕೂಡಲೇ ನೀರು ಮುಟ್ಟುವ ಮುನ್ನ ಅನುಭವಸ್ತರಿಂದ ತಲೆಯ ಮೇಲಿನ ಸೂಲಿಯ ಕೂದಲನ್ನು ಕೀಳುತ್ತಾರೆ. ಹುಟ್ಟಿದ ಮಕ್ಕಳಿಗೆ ಹೆತ್ತ ತಾಯಿಯೇ ದೃಷ್ಠಿ ಆಗಿದೆ ಎಂದು ತನ್ನ ಕೂದಲಿನಲ್ಲಿಯೇ ಮಗುವಿಗೆ ನೀವಳಿಸುವ ಪದ್ಧತಿ ಇದೆ.

ಈ ಎಲ್ಲಾ ಅಂಶಗಳಿಂದ ತಿಳಿದು ಬರುವುದೆನೆಂದರೆ ಜನಪದ ವೈದ್ಯ ಸಂಪ್ರದಾಯವಾಗಿ ಒಂದು ಕಡೆಯಿಂದ ಮುಂದುವರೆಯುತ್ತಿದ್ದರೆ, ಇನ್ನೊಮದು ಕಡೆಯಿಂದ ಅದೊಂದು ವಿಜ್ಞಾನವಾಗಿಯೂ ಸಾಗುತ್ತದೆ. ಜನಪದ ವೈದ್ಯ ಸೂಕ್ಷ್ಮವಾಗಿ ಗಮನಿಸಿದರೆ ನಂಬಿಕೆ, ಸಂಪ್ರದಾಯಗಳ ಸುರುಳಿಯಲ್ಲಿ ನಿಂತಿದ್ದು, ಈ ವೈದ್ಯಪದ್ಧತಿ ವೈಜ್ಞಾನಿಕ ಹಿನ್ನಲೆಯನ್ನು ಪಡೆದಿದೆ ಅನ್ನುವ ಅಂಶವನ್ನು ಮರೆಯುವಂತಿಲ್ಲ.

ಇಂದೂ ಕೂಡ ಗ್ರಾಮ್ಯ ಪ್ರದೇಶಗಳಲ್ಲಿ ಜನಪದ ವೈದ್ಯ ಬಹಳ ಮಹತ್ವ ಪಡೆದಿದ್ದು ಮೌಲ್ಯಯುತವಾಗಿದೆ. ಹಳ್ಳಿ ವೈದ್ಯರು ಅನಕ್ಷರಸ್ಥರು. ಯಾವುದೇ ಗ್ರಂಥಗಳನ್ನು ಓದಿದವರಲ್ಲ. ಅಲ್ಲದೆ ಶಿಷ್ಟರಿಂದ ವೈದ್ಯರ ಪೂರಕವಾಗಿ ಮಾಹಿತಿ ಪಡೆದವರಲ್ಲ. ಜೊತೆಗೆ ಅವರು ಕೊಡುವ ವೈದ್ಯಪದ್ಧತಿಯಲ್ಲಿ ವಿಜ್ಞಾನಕ್ಕೆ ಪೂರಕವಾದ ಜೀವಸತ್ವಗಳು ಇರುತ್ತದೆ ಎಂಬ ಅರಿವು ಇಂದಿಗೂ ಅರಿತಿರುವುದಿಲ್ಲ. ಹಾಗಾಗದರೆ ಹೇಗೆ ವೈದ್ಯಪದ್ಧತಿಯನ್ನು ರೂಢಿಸಿಕೊಂಡು ಬೇರೆಯವರಿಗೆ ಉಪಯೋಗವಾಗುತ್ತಾರೆ ಎಂಬುದು ಕುತುಹಲ ಕೆರಳಿಸುತ್ತದೆ. ಆದರೆ ಜನಪದ ವೈದ್ಯ ತನ್ನ ಅನುಭವದ ಹಿನ್ನಲೆ ಜೊತೆಗೆ ಇತರ ಹಿರಿಕರ ಅನುಭವಗಳನ್ನು ನೋಡಿಯೋ, ಕೇಳಿಯೋ ಮತ್ತು ತನ್ನ ಜ್ಞಾನ ಬುತ್ತಿಯಿಂದ ಉಪಯೋಗಿಸಿಕೊಳ್ಳುವನು. ಈ ಎಲ್ಲಾ ಅಂಶಗಳ ಜೊತೆಗೆ ಹಳ್ಳಿಯ ಪರಿಸರದ ಒಡನಾಡಿಯಾಗಿ ಇರುವಂತ ಪ್ರಾಣಿ, ಪಕ್ಷಿ, ಸಸ್ಯ, ಖನಿಜ, ಜಲ, ಮನುಷ್ಯ ಮತ್ತು ದೈವ ಹಾಗೂ ನಂಬಿಕೆ,

ಸಂಪ್ರದಾಯಗಳನ್ನೂ ಸಹಾಯಕ್ಕೆ ಬಳಸಿಕೊಳ್ಳುತ್ತಾನೆ. ಪ್ರಾದೇಶಿಕ ಪರಿಸರದಲ್ಲಿ ದೊರೆಯುವ ಅನೇಕ ಸಾಮಾಗ್ರಿಗಳನ್ನು ಉಪಯೋಗಿಸಿಕೊಂಡು ರೋಗಗಳಿಗೆ ಔಷಧಿ ಕೊಡುವುದರಲ್ಲಿ ನಿರತನಾಗಿರುತ್ತಾನೆ. ಕಾಯಿಲೆ, ಔಷಧಿಯ ಮೂಲಿಕೆ, ವಸ್ತು ಹೀಗೆ ಇತ್ಯಾದಿಗಳನ್ನು ಕೇಂದ್ರಿಕರಿಸಿ ಪರಿಸರಕ್ಕನುಗುಣವಾಗಿ ಜನಪದ ವೈದ್ಯವನ್ನು ಹೀಗೆ ವರ್ಗೀಕರಣ ಮಾಡಿಕೂಳ್ಳಲಾಗಿದೆ. ಅವುಗಳೆಂದರೆ ನೈಸರ್ಗಿಕ ಜನಪದ ವೈದ್ಯ(Natural Folk medicine) ಮತ್ತು (Magical Folk medicine) ಮಾಂತ್ರಿಕ ಜನಪದ ವೈದ್ಯ. ಹೀಗೆ ಎರಡು ಪ್ರಧಾನ ಭಾಗ ಮಾಡಿಕೊಳ್ಳಬಹುದು. ಆರಂಭದಲ್ಲಿ ನನ್ನಯ ಅಧ್ಯಯನಕ್ಕೆ ಬಹಳ ಮುಖ್ಯವಾಗಿ ಸಸ್ಯ, ಪ್ರಾಣಿ, ಖನಿಜ ಮತ್ತು ಮಾನವ ಹೀಗೆ ವಿಭಜಿಸಿಕೊಂಡು ಒತ್ತು ಕೊಡಲಾಗಿದೆ. ಅನಂತರ ಎರಡನೆಯದಾಗಿ ಮಾಟ, ಮಂತ್ರ, ಮೋಡಿ ಮತ್ತು ತಂತ್ರ ಹೀಗೆ ವರ್ಗೀಕರಿಸಬಹುದು. ಈ ಎರಡನೆಯ ಅಂಶಗಳಿಗೆ ಪೂರಕವಾಗಿ ಈ ಅಧ್ಯಯನದಲ್ಲಿ ಹೆಚ್ಚು ಗಮನಹರಿಸಲಾಗಿರುವುದಿಲ್ಲ. ಜೊತೆಗೆ ಇವು ಹೆಚ್ಚು ನಂಬಿಕೆ, ಸಂಪ್ರದಾಯ ಹಾಗೂ ಆಚರಣೆಗಳ ಮೇಲೆ ಅವಲಂಬಿಸಿರುತ್ತವೆ ಎಂಬ ಅಂಶವನ್ನು ಮರೆಯುವಂತಿಲ್ಲ.

ಜನಪದ ವೈದ್ಯದ ವರ್ಗೀಕರಣ

೧. ಸಸ್ಯ

೨. ಪ್ರಾಣಿ

೩. ಮನುಷ್ಯ

೪. ಖನಿಜ

೧. ಸಸ್ಯ

ಸಂಶೋಧನೆ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯೊಳಗೆ ಇರುವ ಏಳು ತಾಲೋಕಿಗೆ ಸೀಮಿತಪಡಿಸಿಕೊಂಡು ಕ್ಷೇತ್ರಕಾರ್ಯದಲ್ಲಿ ತೊಡಗಿದಾಗ ಆಶ್ಚರ್ಯ, ಕಷ್ಟ, ಭಯ ಜೊತೆಗೆ ಉತ್ಸಾಹವೂ ಉಂಟಾಯಿತು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅನೇಕ ತಾಲೋಕುಗಳಲ್ಲಿ ಕಂಡ ಸಸ್ಯಗಳು ಕುತೂಹಲಕ್ಕೆ ಕಾರಣವಾದವು. ಪ್ರಧಾನವಾಗಿ ಸಂಡೂರು, ಹಗರಿಬೊಮ್ಮನಹಳ್ಳಿ, ಕಂಪ್ಲಿ ಮತ್ತು ಬಳ್ಳಾರಿಯಲ್ಲಿ ಕೆಲವು ಭೂಪ್ರದೇಶದ ಭಾಗಗಳು ಸಸ್ಯಮಯ ಅಲ್ಲದೆ. ನಿಗೂಢವಾಗಿ ತಲೆಯೆತ್ತಿನಿಂತಿರುವ ಹಳ್ಳ, ತಗ್ಗು, ಎತ್ತರ, ಬೆಟ್ಟ, ಗುಡ್ಡ, ಶಿಖರ, ಜೊತೆಗೆ ಸಮತಟ್ಟಾದ ಭೂ ಪ್ರದೇಶಗಳಲ್ಲಿ ಹಸಿರಿನ ಬನಸಿರಿಯು ಹೊದ್ದುಕೊಂಡು ಮೈದಾಳಿರುವುದು ಕಂಡು ನನ್ನೊಳಗಿದ್ದ ಭಯ ಮರೆಯಾಯಿತು. ಈ ಭೂಪ್ರದೇಶಗಳಲ್ಲಿ ಸುಮಾರು

ಸಾವಿರಕ್ಕೂ ಹೆಚ್ಚು ಸಸ್ಯಗಳು ಇವೆ. ಸುಮಾರು ಅರ್ಧದಷ್ಟು ಸಸ್ಯಗಳು ಇನ್ನೂ ಎಲೆಮರೆ ಕಾಯಿಯಂತೆ ನಶಿಸುವ ಸ್ಥಿತಯಲ್ಲಿವೆ. ಅದಕ್ಕೆ ಬೇರೆ ಕಾರಣಗಳೂ ಇವೆ. ಈ ಸಂದರ್ಭದಲ್ಲಿ ಅವುಗಳ ವಿಶ್ಲೇಷಣೆ ಅಪತ್ಯ ಎಂದು ಭಾವಿಸಿರುತ್ತೇನೆ. ಆದರೆ ಆ ಭೂ ಭಾಗಗಳಲ್ಲಿ ನೆಲೆನಿಂತಿರುವ ಗ್ರಾಮೀಣ ಜನಪದರು ಅಳಿದುಳಿದ ಸಸ್ಯಗಳನ್ನು ಬಳಿಸಿಕೊಂಡು ಇಂದಿಗೂ ಅವುಗಳನ್ನು ವೈದ್ಯಕ್ಕೆ ಬಳಸುತ್ತಿರುವುದು ಖಂಡಿತ ಶ್ಲಾಘನೀಯ. ಸಸ್ಯಗಳಿಂದ ಜನಪದ ವೈದ್ಯ ನೀಡುವ ವಿಶ್ಲೇಷಣೆಯ ವಿವರದತ್ತ ಗಮನಹರಿಸಲಾಗಿದೆ.

ಕ್ಷೇತ್ರಕಾರ್ಯದಲ್ಲಿ ತೊಡಗಿಕೊಂಡು ಹಳ್ಳಿಯ ವೈದ್ಯ ವಕ್ತೃವನ್ನು ಭೇಟಿಯಾದಾಗ ಆತ ನುಡಿದ ನುಡಿಮುತ್ತನ್ನು ನೆನೆಯುತ್ತ ವಿಷಯಕ್ಕೆ ಒತ್ತುಕೊಟ್ಟರೆ ಹೆಚ್ಚು ಸೂಕ್ತ ಅನ್ನಿಸುತ್ತದೆ. “ಕೆಲ್ಲಂಬುದೆಲ್ಲ ದೇವರೆ ಗಿಡ ಅಂಬೋದೆಲ್ಲ ವೈದ್ಯವೇ.” ಈ ಮಾತು ಬಹಳ ಮಹತ್ವಪೂರ್ಣವಾಗಿದೆ. ವೈದ್ಯದಲ್ಲಿ ಶೇ.೧೦೦ಕ್ಕೆ ೮೦ ಭಾಗ ಸಾಮಾನ್ಯವಾಗಿ ವೈದ್ಯವೆಲ್ಲವೂ ಸಸ್ಯದಿಂದ ಬಂದಂತದ್ದಾಗಿದೆ. ಅಂದಿಗೂ ಇಂದಿಗೂ ಸಸ್ಯಗಳನ್ನು ದಿನನಿತ್ಯಲೂ ಕೂಡ ಬಲ್ಲವರೂ, ಹಿರಿಯರೂ ಆರೋಗ್ಯ ದೇವತೆಗಳೆಂದು ಪೂಜಿಸುವುದನ್ನು ಹಳ್ಳಿಗಳಲ್ಲಿ ಕಾಣಬಹುದಾಗಿದೆ. ಸಸ್ಯದ ಚಿಗುರು, ನಾರು, ಕೊಂಬೆ, ತೊಗಟೆ, ಖಾಂಡ, ಹಾಲು, ರಸ, ಚಕ್ಕೆ ಬೇರು ಹೀಗೆ ಪ್ರತಿಯೊಂದು ಭಾಗವೂ ಮನುಷ್ಯನಿಗೆ ಒಂದಿಲ್ಲೊಂದು ರೀತಿಯಲ್ಲಿ ಉಪಯೋಗವಾಗುವುದರಿಂದ ಅಂದಿಗೂ-ಇಂದಿಗೂ ಸಸ್ಯಪ್ರಪಂಚ ಜನಪದರಿಗೆ, ಪಟ್ಟಣ ಸಂಪ್ರದಾಯಸ್ಥರಿಗೆ ಸಂಜೀವಿನಿ ಪರ್ವತವಿದ್ದಂತೆ. ಅಂದರೆ ಅತಿಶಯೋಕ್ತಿ ಎನಿಸದು.

ಜನಪದ ವೈದ್ಯರನ್ನು ಸಾಮಾನ್ಯವಾಗಿ ೩ ಭಾಗ ಮಾಡಿಕೊಳ್ಳಬಹುದು. ತಲತಲಾಂತರದಿಂದ ರೂಢಿಸಿಕೊಂಡು ಬಂದ ವೈದ್ಯರು (ಪರಂಪರೆ ವೈದ್ಯರು) ಮತ್ತು ಮನೆ ವೈದ್ಯರು ಮೂರನೆದಾಗಿ ಅರೆಬರೆ ಗೊತ್ತಿರುವ ವೈದ್ಯರು. ಈ ಪರಂಪರೆಯ ವೈದ್ಯರು ಜೊತೆಗೆ ಮಾಂತ್ರಿಕ ವೈದ್ಯರು ಕೂಡ ಸೇರಿಕೊಂಡಿರುತ್ತಾರೆ. ಇವರು ಸಾಮಾನ್ಯವಾಗಿ ಎಲ್ಲಾ ಖಾಯಿಲೆಗಳಿಗೂ ಎಲ್ಲಾ ಸಂದರ್ಭಗಳಲ್ಲಿ ವೃತ್ತಿಯನ್ನಾಗಿ ಮಾಡಿಕೊಂಡಿರುತ್ತಾರೆ. ಇನ್ನೂ ಕೆಲವರು ಮನೆಯ ಗೌರವವಾಗಿ ಉಚಿತವಾಗಿ ನೀಡುತ್ತಾ ಬಂದಿರುತ್ತಾರೆ. ಇವತ್ತಿಗೂ ಬಳ್ಳಾರಿಯ ಜಿಲ್ಲೆಯಲ್ಲಿ ಇಂತಹ ಅನೇಕ ಮನೆತನದವರನ್ನು ಕಾಣಬಹುದಾಗಿದೆ. ಸಂಪ್ರದಾಯವಾಗಿ ಹೀಗೆ ವೈದ್ಯಪದ್ಧತಿಯನ್ನು ರೂಢಿಸಿಕೊಂಡು ಬಂದ ಕುಟುಂಬದವರಿಗೆ ಆ ಹಳ್ಳಿಗಳಲ್ಲಿ ಗೌರವ, ಮನ್ನಣೆ, ಹೆಸರು, ಇದೆ. ಆ ಗ್ರಾಮದ ಜನರು ಬಹಳ ಪ್ರೀತಿ ವಿಶ್ವಾಸದಿಂದ ಕರೆಯುತ್ತಾರೆ. ಇವತ್ತಿಗೂ ಗ್ರಾಮಗಳಲ್ಲಿ ಆಚಾರಿ, ಪಂಡಿತರು, ಪೂಜಾರಿ ಹೀಗೆ ಅವರನ್ನು ಗೌರವಯುತವಾಗಿ ಕಾಣುವುದನ್ನೂ ನೋಡಬಹುದಾಗಿದೆ. ಕೆಲವರು ವೈದ್ಯಪದ್ಧತಿಯನ್ನೇ ಪ್ರಧಾನ ಕಸುಬನ್ನಾಗಿ ಮಾಡಿಕೊಂಡು ಬಂದಿದ್ದರೆ ಇನ್ನೂ ಕೆಲವರು ವೈದ್ಯಪದ್ಧತಿಯನ್ನು ಉಪಕಸುಬನ್ನಾಗಿ ಸ್ವೀಕರಿಸಿದ್ದಾರೆ. ಇವರು ಹಣದಾಹಿಗಳಲ್ಲ.

ರೋಗಿ ಪ್ರೀತಿಯಿಂದ ಎಷ್ಟು ಕೊಡುತ್ತಾರೆಯೋ ಅಷ್ಟನ್ನು ಮಾತ್ರ ಸ್ವೀಕರಿಸುತ್ತಾರೆ. ಅದರಲ್ಲೂ ಮೂಕ ಪ್ರಾಣಿಗಳಿಗೆ ವೈದ್ಯವನ್ನು ನೀಡಿದಾಗಂತೂ ಪುಣ್ಯ ಬರುತ್ತದೆ ಎಂದು ನಂಬಿರುತ್ತಾರೆ. ಹಳ್ಳಿಗಳಲ್ಲಿ ಹಣವನ್ನು ತೆಗೆದುಕೊಂಡರೆ ದೇವರು ನಮ್ಮನ್ನು ಕ್ಷೇಮಿಸುವುದಿಲ್ಲವೆಂದು ನಂಬಿರುತ್ತಾರೆ. ಕೆಲವು ವೈದ್ಯರು ವೀಳ್ಯೆದೆಲೆ ಅಡಿಕೆ ಪಡೆಯುತ್ತಾರೆ. ಔಷಧಿಯನ್ನು ಪಡೆದಂತಹ ರೋಗಿಗಳು ಔಷಧಿ ಕೊಟ್ಟವರ ಮನೆಗಳಲ್ಲಿ ಊಟವನ್ನು ಮಾಡುವ ಸಂಪ್ರದಾಯವನ್ನು ಇಟ್ಟುಕೊಂಡಿರುವುದಿಲ್ಲ. ಇದಕ್ಕೆ ವೈದ್ಯರೊಬ್ಬರು ಕೊಡುವ ಸ್ವಾರಸ್ಯವಾದ ಕಾರಣ ಹೀಗಿದೆ. ತಲೆ ಮೇಲೆ ಬಂದದ್ದು ಎಲೆ ಮೇಲೆ ಹೋಗ್ಲಿ ಎಂದು ಹೇಳುತ್ತಾ ಎಲೆ ಅಡಿಕೆ ತೆಗೆದುಕೊಳ್ಳುವ ಪರಿಪಾಠವಿದೆ. ಅದ್ದರಿಂದ ಜನಪದ ವೈದ್ಯರು ನಿಜವಾಗಿಯು ಸತ್ಯದ ನೆಲೆಯಲ್ಲಿ ಔಷಧಿ ಕೊಡುತ್ತಾ ವೈದ್ಯಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಸಸ್ಯಗಳ ಗಿಡಮೂಲಿಕೆಗಳ ಸಂಗ್ರಹಣೆ ಮತ್ತು ಸಂದರ್ಭ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿರುವ ಜನಪದ ವೈದ್ಯರು ಮನಬಂದಂತೆ ಚಿಕಿತ್ಸೆಯನ್ನು ನೀಡುವುದಿಲ್ಲ. ಆದರೆ ಒಬ್ಬೊರಿಗೊಬ್ಬರು ಪ್ರಾದೇಶಿಕವಾಗಿ ಭಿನ್ನ ಮತ್ತು ವೈವಿಧ್ಯಮಯ. ಜನಪದ ವೈದ್ಯರನ್ನು ಭೇಟಿ ಮಾಡಿದಾಗ ಅವರು ಹೇಳಿದ ಮಾತುಗಳೆಂದರೆ ಮನುಷ್ಯ, ಪ್ರಾಣಿ ಅಥವಾ ಇತರರಿಗೆ ಕೊಡುವ ಮುನ್ನ ಗಿಡಮೂಲಿಕೆಗಳನ್ನು ಶೇಖರಿಸಿ ಇಟ್ಟುಕೊಂಡಿರಲಾಗುತ್ತದೆ. ಹೀಗೆ ಮಾಡುವಾಗ ಒಂದು ನಿರ್ದಿಷ್ಟವಾದ ದಿನ, ತಮ್ಮ ಮನೆದೇವರಿಗೆ ಕೈಮುಗಿದು ಪೂಜೆ ಮಾಡಿದ ನಂತರದಲ್ಲಿ ಶೇಖರಣೆ ಮಾಡಿಕೊಳ್ಳಲಾಗಿರುತ್ತದೆ ಎಂದು ಉತ್ತರಿಸಿದ.

ಸಂಡೂರು ಗ್ರಾಮ ವೈದ್ಯನೊಬ್ಬ ಸಸ್ಯದ ಔಷಧಿಯನ್ನು ಸುಮ್ಮ ಸುಮ್ಮನೆ ಯಾವತ್ತೋ ಹೋಗಿ ತಂದು ಇಟ್ಟುಕೊಳ್ಳವುದಿಲ್ಲ. ಅದಕ್ಕೆ ನಿರ್ಧಿಷ್ಟವಾದ ತಿಂಗಳು, ದಿವಸ, ಗಂಟೆ ಅಲ್ಲದೆ ಅಮಾವಾಸೆ ಪ್ರಶಸ್ತವಾದ ದಿನ ಎಂದು ಉತ್ತರಕೊಟ್ಟ. ಮುಂದುವರಿಸುತ್ತ ಒಂದು ದಿವಸ ಮುಂಜಾನೆ ಕೋಳಿ ಕೂಗುವ ಮೊದಲು ಎದ್ದು ಯಾರನ್ನು ಮಾತನಾಡಿಸದೆ, ಬರಿ ಬೆತ್ತಲೆಯಾಗಿ ಹೋಗಿ (ಒಬ್ಬನೆ) ಗಿಡದ ಸುತ್ತ ನೀರನ್ನು ಹಾಕಿ, ಪೂಜೆ ಮಾಡಿ ಅನಂತರ ಕುಡುಗೋಲಿನಿಂದ ಕೊಯ್ದು ತಂದು ಯಾರಿಗೂ ಕಾಣದ ಹಾಗೆ ಮನೆಯಲ್ಲಿ ಇಟ್ಟುಕೊಂಡಿರುತ್ತೇವೆ. ಯಾರಾದರು ಔಷಧಿ ಕೇಳಲು ಬಂದಾಗ ಅದನ್ನು ನಮ್ಮ ಮನೆ ದೇವರನ್ನು ನೆನಸಿಕೊಂಡು ಬಂದ ರೋಗಿಗಳಿಗೆ ಕೊಡುವುದು ಸಂಪ್ರದಾಯ.

ಮಗದೊಬ್ಬ ಪಶುವೈದ್ಯ ಮಗದೊಂದು ರೀತಿಯಲ್ಲಿ ಉತ್ತರಿಸಿದ್ದನ್ನು ಹೇಳದಿದ್ದರೆ ಮೋಸ ಮಾಡಿದಂತೆ. ಸಂಡೂರು ಬೆಟ್ಟ ಗುಡ್ಡಗಳಿಂದ ಅವರಿಸಿಕೊಂಡಿದೆ. ಆ ಪ್ರದೇಶ ಹಸಿರು ಸಸ್ಯಗಳಿಂದ ಮೈದಾಳಿದೆ. ಆ ಗ್ರಾಮದಲ್ಲಿ ನೆಲೆಸಿರುವ ಜನಪದ ವೈದ್ಯನ ಹೆಸರು ಶರಣಬಸವ. ಈತ ಎರಡು ಸಸ್ಯಗಳು ಅಂದರೆ ಉತ್ತಾರಾಣಿ ಮತ್ತು ಬಿಲ್ವಪತ್ರೆ ಕುರಿತು ಮಾಹಿತಿ ನೀಡುವಾಗ ಆತ ಅಮವಾಸ್ಯೆಯ ಹಿಂದಿನ

ದಿನ ಎಲ್ಲಿ ಇವೆ ಎಂದು ಗುರುತು ಹಾಕಿ ಬಂದಿರಬೇಕು. ಅನಂತರ ಮಾರನೇ ದಿನ ಮುಂಜಾನೆ ಇನ್ನೂ ಯಾವ ಮನುಷ್ಯನ ಅಲೆದಾಟ ಇಲ್ಲದಾಗಲೇ ಅಂದರೆ ಕತ್ತಲಾಗಿದ್ದಾಗಲೇ ಬರಿ ಬೆತ್ತಲೆಯಾಗಿ ಈ ಮೊದಲೇ ಗುರುತು ಹಾಕಿದ ಗಿಡಗಳನ್ನು ಪೂಜೆ ಮಾಡಿ ತಾನುಕೊಡುವ ಬೇರು, ಕಾಂಡ, ಇಲ್ಲದಿದ್ದರೆ ಎಲೆಯನ್ನು ಕತ್ತರಿಸಿಕೊಂಡು ಮನೆಯಲ್ಲಿ ಇಟ್ಟುಕೊಳ್ಳಲಾಗುತ್ತದೆ. ಅದೇ ಅವರಿಗೆ ದೈವವಾಗಿರುತ್ತದೆ. ಆ ನಡುಹೊತ್ತಿನಲ್ಲಿ ಆ ಗಿಡ ಕೀಳುವಾಗಲೇ ಹಾವಾಗಿಯೋ, ದೆವ್ವವಾಗಿ, ಚೇಳಾಗಿ, ಭಯಂಕರ ರೂಪದಲ್ಲಿ ಹೆದರಿಸುವ ಸಾಧ್ಯತೆ ಇರುತ್ತದೆ. ಈ ಯಾವ ಅಂಶಗಳಿಗೂ ಹೆದರಿಕೊಳ್ಳದೆ ಧೈರ್ಯಗೆಡದೆ ಕಿತ್ತುಕೊಂಡು ಆ ಸ್ಥಳವನ್ನು ಹಿಂತಿರುಗಿ ನೋಡದೆ ಮನೆಗೆ ತಂದರೆ ಅವರು ಕೊಟ್ಟ ಔಷಧಿ ಹುಸಿಯಾಗುವುದಿಲ್ಲ ಎಂಬ ಅಪಾರವಾದ ನಂಬಿಕೆ ವೈದ್ಯರಿಗೆ ಇರುತ್ತದೆ.

ಕ್ಷೇತ್ರಕಾರ್ಯದ ಹೊತ್ತಿನಲ್ಲಿ ಅನೇಕ ಜನಪದ ವೈದ್ಯರನ್ನು ಕಾಣಲು ಹೋದಾಗ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗಿ ಬಂತು. ಏಕೆಂದರೆ ಕೆಲವರಂತೂ ನೀನು ಆಗಾಗ ಬರಬೇಡ. ನಾನು ಹೇಳಿಕೊಡುವುದಿಲ್ಲ. ಇನ್ನೊಮ್ಮೆ ಬಂದರೆ ಬೇರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದೂ ಕಠೋರವಾಗಿ ಹೇಳಿದ ಪ್ರಸಂಗಗಳಿವೆ. ಅಲ್ಲದೆ ಕೆಲವರಂತೂ ತಾವು ಉಪಯೋಗಿಸುವ ಗಿಡಮೂಲಿಕೆಗಳ ಹೆಸರುಗಳನ್ನು ಹೇಳುವುದಿಲ್ಲ. ಮಂತ್ರತಂತ್ರಗಳನ್ನೂ ಹೇಳುವುದಿಲ್ಲ. ನಾವು ಹೇಳಿದರೆ ನಮಗೆ ಮುಂದೆ ಫಲಿಸುವುದಿಲ್ಲ ಎಂಬ ನಂಬಿಕೆ ಇದೆ. ಜೊತೆಗೆ ಇತರರಿಗೆ ನಾಟುವುದಿಲ್ಲ ಎಂಬ ಬಲವಾದ ನಂಬಿಕೆಯಿಂದ ಗಿಡಮೂಲಿಕೆಗಳ ಹೆಸರನ್ನು ಹೇಳಲು ಹಿಂಜರಿದು ಅದರ ಹಿನ್ನಲೆಯಾಗಿ ಅನೇಕ ಕಥೆಗಳನ್ನು ಹೇಳಿದ್ದಾರೆ. ಈಗ ಅಪತ್ಯ ಎಂದು ಭಾವಿಸಿ ಉಲ್ಲೇಖಿಸಿರುವುದಿಲ್ಲ.

ಇನ್ನೊಂದು ಬಹಳ ಮುಖ್ಯವಿಷಯ ಅಂದರೆ, ಬಳ್ಳಾರಿಯಲ್ಲಿರುವ ಅನೇಕ ತಾಲೋಕುಗಳ ಹಳ್ಳಿಗಳಲ್ಲಿ ಒಂದು ಪರಂಪರೆ ಇದೆ. ಹೆಣ್ಣು ಮಕ್ಕಳಿಗೆ ಆಸಕ್ತಿ ಇದ್ದರೂ ವೈದ್ಯಪದ್ಧತಿಯನ್ನು ಕಲಿಸುವುದಿಲ್ಲ. ವ್ಯವಹಾರಿಕ ಕಾರಣವೆಂದರೆ ಅವರು ಮನೆಬಿಟ್ಟು ಇನ್ನೊಂದು ಮನೆಗೆ ಹೋಗುವವರು. ಅಲ್ಲದೆ ನಾವು ಹೇಳಿಕೊಟ್ಟ ಅಂಶಗಳನ್ನು ಬೇರೆಯವರಿಗೆ ಮತ್ತು ಅಲ್ಲಿಯೂ ಹೇಳಿಬಿಟ್ಟಾರು ಎಂಬ ಭಯ ಅವರಿಗೆ ಕಾಡುತ್ತಿರುತ್ತದೆ. ಆದುದರಿಂದ ಹೆಣ್ಣು ಹೋದ ಮನೆಯಲ್ಲಿಯೂ ಸೊಸೆಯಂದಿರು ಬೇರೆಯವರಿಗೆ ಹೇಳಿಬಿಡುತ್ತಾರೆ ಎಂಬ ಭಯ ಗಂಡಸರಿಗೆ ಇರುತ್ತದೆ. ತಲತಲಾಂತರದಿಂದ ಮನೆತನದಿಂದ ಕಾಪಾಡಿಕೊಂಡು ಬಂದ ವಿದ್ಯೆ ದುರಪಯೋಗವಾಗಿ ಹೋಗುತ್ತದೆ ಎಂಬ ಆತಂಕವಿರುತ್ತದೆ. ಆದರೆ ಹೆಣ್ಣುಮಕ್ಕಳ ಕುರಿತು ಭಾವನಾತ್ಮಕವಾಗಿ ಯೋಚನೆಗೆ ತೊಡಗಿದಾಗ ಅದರ ಸ್ವರೂಪವೇ ಭಿನ್ನವಾಗುತ್ತದೆ. ಆದುದರಿಂದ ಅನವಸ್ಯಕವೆಂದು ಈ ಚರ್ಚೆ ನಿಲ್ಲಿಸುತ್ತೇನೆ. ಒಟ್ಟಾರೆಯಾಗಿ ವೈದ್ಯ ಪದ್ಧತಿ ಪವಿತ್ರ

ಅಂತಲೋ, ಇಲ್ಲಿ ಸ್ತ್ರೀಯರಿಗೆ ಈ ಅವಕಾಶ ಒದಗಿಸಬಾರದೆಂತಲೋ ಅಥವಾ ಹೆಣ್ಣು ಪುರುಷನಷ್ಟೆ ಸಮನಾಗಿ ಕಾಣ ಬಾರದೆಂತಲೇನೋ ಹೀಗೆ ಅನೇಕ ಎಡರು ತೊಡರುಗಳ ಹಿನ್ನೆಲೆಯಲ್ಲಿರುವ ಪಾತಾಳಿಯಳಿಗಳನ್ನು ಗಮನಿಸಿ ಸ್ಟ್ಯಾಂಡರ್ಡ್ ಡಿಕ್ಷನರಿ ಆಫ್ ಫೋಕಲೋರಿನಲ್ಲಿ ಜನಪದ ವೈದ್ಯದ ಗುಟ್ಟಿನಲ್ಲಿ ಕಾಯ್ದಿರಿಸುವ ಬಗ್ಗೆ "Knowledge of such medicine is usually Kept as Jealously gourded Secset" ಎಂದು ಉಲ್ಲೇಖಿಸಿರುತ್ತಾನೆ.

ಒಟ್ಟಿನಲ್ಲಿ ಜನಪದ ವೈದ್ಯವು ಶತಶತಮಾನಗಳಿಂದ ಪಾರಂಪರಗಾತವಾಗಿ ಬಂದಿದ್ದು, ಬಾಯಿಂದ ಬಾಯಿಗೆ ಹರಿಯುತ್ತಾ ಜೊತೆಗೆ ವೈದ್ಯರು ತಮ್ಮ ವೈದ್ಯಪದ್ಧತಿಯನ್ನು ಹೇಳಿಕೊಳ್ಳದೇ ಗುಟ್ಟಾಗಿ ಇಟ್ಟಕೊಂಡು ಬಂದಿದ್ದಾರೆ. ಅಲ್ಲದೆ, ತಮಗೆ ಬಾರಿ ಹತ್ತಿರದ ಸಂಬಂಧಿಕರಿಗೆ, ಶಿಷ್ಯಂದಿರಿಗೆ ಅಲ್ಲದೆ ವೈದ್ಯಪದ್ಧತಿ ಬಗ್ಗೆ ಬಹಳ ಶ್ರದ್ಧೆ ಆಸಕ್ತಿ ಇರುವವರಿಗೆ ಮಾತ್ರ ಹೇಳಿಕೊಡುತ್ತಾರೆ.

ಈ ಮೇಲಿನ ಎಲ್ಲಾ ವಿಶ್ಲೇಷಣೆಯ ಪಾತಾಳಿಯಲ್ಲಿ ಆಡಗಿರುವ ಅಂಶಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅವಲೋಕಿಸುವಾಗ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಿಗಳನ್ನು ಸಾವಿರಾರು ಜನಪದರು ಉಪಯೋಗಿಸಿಕೊಂಡು ಇಂದಿಗೂ ಹಳ್ಳಿಗಳಲ್ಲಿ ನಾಟಿ ವೈದ್ಯ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಅಲ್ಲದೆ ಇಂತಹವುಗಳಿಂದ ಹೆಚ್ಚು ಉಪಯುಕ್ತವಾಗಿದ್ದು, ಜನಪ್ರಿಯವಾಗಿದೆ. ಆದರೆ ಕೃತಕವಾಗಿ ತಯಾರಿಸಿದ ಔಷಧಿಗಳಿಂದ ಬೇರೆ ಬೇರೆ ರೀತಿಯಾಗಿ ತೊಂದರೆಗಳಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ಆದರೆ ಇಂದಿಗೂ ಹಳ್ಳಿಗಳಲ್ಲಿ ನೆಲೆನಿಂತಿರುವ ಜನಪದವೈದ್ಯರು ಅವರು ನೆಲೆನಿಂತ ಆಸುಪಾಸಿನಲ್ಲಿ ಬೆಳೆದಿರುವ ಗಿಡಗಳನ್ನು ಬಳಸಿಕೊಂಡು ಔಷಧಿ ತಯಾರಿಸಿ ರೋಗಿಗಳಿಗೆ ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ, ಜಿಲ್ಲೆಯೊಳಗೆ ಬರುವ ತಾಲೋಕುಗಳ ಹಳ್ಳಿಗಳಲ್ಲಿ ನೆಲಸಿರುವ ಜನಪದರು ಅಲ್ಲಿ ಪ್ರಾದೇಶಿಕತೆಗನುಗುಣವಾಗಿ ದೊರೆಯುವ ಸಸ್ಯಗಳನ್ನು ಬಳಸಿಕೊಂಡು ವೈದ್ಯ ತಯಾರಿಸಿ ರೋಗಿಗಳಿಗೆ ಕೊಡುವರು. ಆದರೂ ಈ ಹೊತ್ತಿನಲ್ಲಿ ಅನೇಕ ಗಿಡ, ಮರ, ಸಸ್ಯಗಳು ಗೌಣವಾಗುತ್ತವೆ. So more Than 90% of the valuable properties are hidden in natural resourees in form of Secondary metabolites. these metabolites has the potetiality to even cure and resist some of the deadly disease like heart allack, AIDS, Conur, hypo glycemic, hyperglycemic diseases etc which are challenging to mankind of moden society. The various, Scientists Throughout the world isolated innumerable number of chemical conslituents from plants like morphine, Cocaine, hydrastine atropine, hyocyamine, ephedrine, quinine, qucrcelin,

pol-phenols, Di-flavonoids, Vincristine, vinblastine, texol, etc are used to treat for various human ailments like hemorrahagic, sposmodic, hypotensive, hgperetensive, ant-canurous, hear-attac-diabetic, fertitity drugs etc.

Furthermore, an increasiny ralianu on the use of medicinal plants in the industrialzed socilies has been traeed to the extraction and development of several drags and chemothe rapeutics from the traditionally used rural herbal remediy.

೧. **ಗುಲಗಂಜಿ** : ಬಯಲು ಪ್ರದೇಶದಲ್ಲಿ ಸಣ್ಣ ಸಣ್ಣ ಪೊದೆಗಳು ಯಥೇಚ್ಚವಾಗಿವೆ. ಇಂತಹ ಸಸ್ಯಾವರಣದಲ್ಲಿ ಬೆಳೆಯುವ 'ಗುಲಗಂಜಿ' ಪೊದೆಗಳ ಮೇಲೆ ಹಬ್ಬಿ ಅಂಕುಡೊಂಕಾಗಿ ಬೆಳೆಯುತ್ತದೆ. ಬಳ್ಳಿಯ ಕಾಂಡದ ಮೇಲೆ ಎಲೆಗಳು ಜೋಡಣೆಗಳಿದ್ದು ಒಂದು ಸಂಯುಕ್ತ ಎಲೆಯಲ್ಲಿ ಹತ್ತರಿಂದ ಇಪ್ಪತ್ತು ಜೊತೆ ಕಿರುಪತ್ರಗಳಿರುತ್ತವೆ. ಇದರಲ್ಲಿ ಗುಲಾಬಿ ಬಣ್ಣದಿಂದ ಕೂಡಿದ ಸಣ್ಣ ಸಣ್ಣ ಹೂಗಳು ಬಿಡುತ್ತವೆ. ಇದು ಹೂಬಿಟ್ಟು ಕಾಯಿಗಟ್ಟಿದಾಗ ೩-೪ ಸೆ.ಮೀ. ಇರುತ್ತದೆ ೨-೪, ೮ ಹೀಗೆ ಬೀಜಗಳಿರುತ್ತವೆ. ಕಾಯಿಯೊಳಗಿನ ಬೀಜಗಳು ಬೇರೆ ಬೇರೆ ಬಣ್ಣ ಉಳ್ಳವಾಗಿರುತ್ತವೆ. ಅಂದರೆ ಕೆಲವು ಕೆಂಪಾಗಿದ್ದರೆ ಇನ್ನೂ ಕೆಲವು ಕಪ್ಪು ಮತ್ತು ಬಿಳಿ ಬೀಜಗಳಿರುತ್ತವೆ. ಸಾಮಾನ್ಯವಾಗಿ ಬಿಳಿ ಹಾಗೂ ಕೆಂಪು ಬಿಡುವ ಗುಲಗಂಜಿ ಗಿಡಗಳನ್ನು ಔಷಧಿ ತಯಾರಿಕೆಯಲ್ಲಿ ಬಳಸುವುದು ರೂಢಿಯಲ್ಲಿದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಔಷಧಕ್ಕೆ ಬಳಸಿದ ಗಿಡಗಳೆಂದರೆ ಬಿಳಿಗುಲಗಂಜಿ. ಈ ಗಿಡಕ್ಕೆ ಬೇರೆ ಬೇರೆ ಭಾಷೆಯ ಬೇರೆ ಬೇರೆ ಹೆಸರುಗಳಿಂದ ಕರೆಯುವರು. ಅವುಗಳೆಂದರೆ

ವೈಜ್ಞಾನಿಕ ಹೆಸರು	:	ಎಬ್ರಸ್ ಪ್ರಿಕಟೋರಿಯಸ್(Abrus precatiorius)
ಸಸ್ಯದ ಕುಟುಂಬ	:	ಫ್ಯಾಬೇಸಿ(Fabaceae)
ಕನ್ನಡದಲ್ಲಿ	:	ಗುರುಗಂಜಿ; ಗುಂಡುಮಣೀ, ಗುಂಜಿ(Gurugunji)
ತೆಲುಗು	:	ಗುರುವೆಂದ, ಗುರಿಗಿಂಜಿ(Gurivenda)
ಇಸ್ಲಾಂ	:	ಇಂಡಿಯನ್ ಲಿಕ್ಕಿರೈಸ್; ಚೆಕ್ಕೆರಿಡಿ
ಸಂಸ್ಕೃತದಲ್ಲಿ	:	ಗುಂಜ(Gunja)
ತಮಿಳು	:	ಕುನ್ರಿಮಣಿ, ಗುಂಡುಮಣಿ
ಹಿಂದಿ	:	ರಾಟಿ (Ratti)

Botanical description : Woody climbers. leaves paripinnal leaflets 1-20 in

opposite pairs, ovate, obovate or oblong. Racemes crowded, many flowered, usnally, shorter than the leaver. Flowers subsessile, pale purple to yellowish. pods rectangular-5 seeded. seeds ovoid, scarlet with a block spot.

Distribution : Thronghout the greater ports of india, ascending the outer Himalaya to losometer.

ಕುರುಗೋಡಿನ ಹಳ್ಳಿಯಲ್ಲಿ ಕ್ಷೇತ್ರ ಕಾರ್ಯ ಮಾಡಿದಾಗ ಮಲ್ಲೇಶಪ್ಪ ಎಂಬ ವೈದ್ಯರನ್ನು ಭೇಟಿ ಆದೆ. ಮಲ್ಲೇಶಪ್ಪ ಅವರಿಗೆ ೫೪ ವರ್ಷ. ಇವರ ಊರು ಕುರುಗೋಡು. ಇವರು ಸುಮಾರು ೩೦ ವರ್ಷಗಳಿಂದಲೂ ಕೂಡ ನಾಟಿ ವೈದ್ಯವನ್ನು ನಿರ್ವಹಿಸಿಕೊಂಡು ಬಂದಿರುತ್ತಾರೆ. ಈ ವೈದ್ಯಪದ್ಧತಿಯನ್ನು ಇವರ ತಾತ ಮಾಡಿಕೊಂಡು ಬರುತ್ತಿದ್ದರು. ಅನಂತರ ಅವರ ತಂದೆ ಮಾಡುತ್ತಿದ್ದರು. ಈಗ ಅವರಿಗೆ ವಯಸ್ಸಾಗಿರುವುದರಿಂದ ಮಾಡಲು ಆಗುತ್ತಿಲ್ಲ. ಆದ್ದರಿಂದ ನಾನು ಕಲಿತು ಮಾಡುತ್ತಿದ್ದೇನೆ ಅನ್ನಾತ್ತಾರೆ. ಈ ಗಿಡದಿಂದ ಅನೇಕ ರೋಗಗಳಿಗೆ ಔಷಧಿ ಕೊಡುವುದನ್ನು ವಿವರಿಸಿದ. ಅವನ ಪ್ರಕಾರ ಗುಲಗಂಜಿ ಗಿಡದ ಎಲೆಗಳನ್ನು ಬಿಡಿಸಿ. ಅವುಗಳನ್ನು ಅರೆದು ಅಥವಾ ಹಿಂಡಿದಾಗ ರಸಬರುತ್ತದೆ. ಆ ರಸವನ್ನು ದಿನಕ್ಕೆ ಎರಡು ಬಾರಿ ಉರಿಮೂತ್ರ ಬಂದವರಿಗೆ ಕುಡಿಸುವುದರಿಂದ ಕಡಿಮೆಯಾಗಿ ವಾಸಿಯಾಗುತ್ತದೆ.

ನಾಯಿ ಕಡಿದಾಗ ಗುಲಗಂಜಿ ಗಿಡಿದ ಎಲೆಗಳನ್ನು ಚೆನ್ನಾಗಿ ಅರೆದು ಎಳ್ಳೆಣ್ಣೆಯೊಡನೆ ಬೆಳಿಗ್ಗ ನಾಷ್ಟ ಮಾಡುವ ಮೊದಲು ಕುಡಿಸಿದರೆ ನಾಯಿ ಕಚ್ಚಿದ ಮನುಷ್ಯನಿಗೆ ಹುಚ್ಚು ಹಿಡಿಯುವುದು ನಿಲ್ಲುತ್ತದೆ. ಜೊತೆಗೆ ಕಚ್ಚಿದ ಭಾಗ ಬೇಗನೆ ವಾಸಿಯಾಗುತ್ತದೆ.

ಗುಲಗಂಜಿ ಗಿಡದ ಬೇರನ್ನು ಕತ್ತರಿಸಿ, ಅದರ ಒಂದೆರೆಡು ಚೂರನ್ನು ಬಾಯಿಯಲ್ಲಿ ಹಾಕಿ ಅಗಿದು ರಸವಿಟ್ಟುಕೊಂಡರೆ, ಬಾಯಿ ಹಲ್ಲಿನ ಹುಳುಕು ಹಲ್ಲಿನಲ್ಲಿರುವ ಹುಳುಗಳು ಬಿದ್ದು ಆ ಬಾಧೆ ಗೌಣವಾಗುತ್ತದೆ. ಹೀಗೆ ಅನೇಕ ರೋಗಗಳಿಗೆ ಸಂಜೀವಿನಿ ಮದ್ದಾಗಿದ್ದು, ಇವೊತ್ತಿಗೂ ಈ ಗುಲಗಂಜಿ ಗಿಡದಲ್ಲಿ ಹಳ್ಳಿಗಳಲ್ಲಿ ಅನೇಕ ರೋಗಿಗಳಿಗೆ ವೈದ್ಯರು ಔಷಧಿ ಕೊಡುವುದನ್ನು ನೋಡಬಹುದಾಗಿದೆ.

ವೈಜ್ಞಾನಿಕ ಹೆಸರು	:	Acacia Catechu willd
ಸಸ್ಯದ ಕುಟುಂಬ	:	ಮೈಮೋಸಾಸಿಯೆ Mimosaceae
ಕನ್ನಡ	:	ಕಳು, ಕಾಚು, ಕಗ್ಗಲಿನಾರ ಅಥವಾ ಕಾಚಿನಗಿಡ
ಇಂಗ್ಲೀಷ್	:	(cutch tree) ಕಚ್ ಮರ
ಹಿಂದಿ	:	(Khair) ಕಾಹಿರ್

ತೆಲಗು : (Podalimanu, Kaviri) ಪೊಡರು ಮಣ್ಣು, ಕವಿರಿ

ತಮಿಳು : ಕರುನಕಲಿ, ಕಂದಿರಾಮ್

A moderate sized deciduous tree, upto ೩ mhigh. Leaves pinnate, with a pair of recurved prickles at the base of the rachis. is F lowers pale yellow, in cylindrical spikes. pods, glabrous, oblong.

ಈ ಗಿಡವು ಬಳ್ಳಾರಿ ಜಿಲ್ಲೆಯೊಂದರಲ್ಲೇ ಅಲ್ಲ. ಹಿಮಾಲಯ ಸರಹದ್ದಿನ ಪಂಜಾಬ್‌ನಿಂದ ಅಸ್ಸಾಂನವರೆಗೂ ಅಂದರೆ ಸುಮಾರು ೧೨೦೦ ಮೀಟರ್ ವರೆಗೆ ಅನಂತರ ಪೆನ್ಸಸೂಲ ಭೂಪ್ರದೇಶ, ಜೊತೆಗೆ ಮಧ್ಯಪ್ರದೇಶ, ಮಹಾರಾಷ್ಟ್ರ, ಬಿಹಾರ್, ರಾಜಾಸ್ಥಾನ ಮತ್ತು ತಮಿಳುನಾಡು ಹಾಗೂ ಪೂರ್ವ ಇಳಿಜಾರಿನಲ್ಲಿರುವ ಪಶ್ಚಿಮಘಟ್ಟಗಳಲ್ಲೂ ಈ ಗಿಡ ಬೆಳೆಯುತ್ತದೆ.

ಈ ಕಾಚಿನಗಿಡವು ಏಣಗಿ, ಹಗರಿಬೊಮ್ಮನಹಳ್ಳೀ, ಬಳ್ಳಾರಿ ಅಸುಪಾಸಿನಲ್ಲಿ ಕುರುಚಲು ಗಿಡಗಳ ಮಧ್ಯದಲ್ಲಿ ಬೆಳೆಯುತ್ತದೆ. ಹಳ್ಳಿವೈದ್ಯ ಯಲ್ಲಪ್ಪ ಅವರಿಗೆ ೭೯ ವರ್ಷ. ಊರು ಹಡಗಲಿ ತಾಲ್ಲೂಕಿನ ಹೊಳಗೊಂದಿಯಲ್ಲಿ ವಾಸವಾಗಿರುತ್ತಾರೆ. ಇವರು ಸುಮಾರು ಐವತ್ತು ವರುಷಗಳಿಂದಲೂ ನಾಟಿ ವೈದ್ಯವನ್ನು ಮಾಡುತ್ತಾ ಬಂದಿರುತ್ತಾರೆ. ಈ ಗಿಡವನ್ನು ತೋರಿಸಿ ಅನೇಕ ಮಾಹಿತಿಯನ್ನು ನೀಡಿರುತ್ತಾನೆ. ಈ ಗಿಡದ ಕಾಂಡದ ತಿರುಳ ಹಾಗೂ ತೊಗಟೆಯನ್ನು ಜಜ್ಜಿ, ಅರೆದು ಮನೋರೋಗ ಬಂದಂತವನಿಗೆ ಕುಡಿಸಿದಾಗ ವಾಸಿಯಾಗುತ್ತದೆ. ಅಲ್ಲದೆ, ಸಿಡುಬು, ಕಜ್ಜಿ, ಚರ್ಮದ ಮೇಲೆ ಗುಳ್ಳೆಗಳಾದಾಗ ಈ ಕಾಚುಗಿಡದ ಎಲೆಯನ್ನು ನುಣ್ಣಗೆ ಅರೆದು ಮೈಮೇಲೆ ಸವರಿ ಬಿಸಿಲಿಗೆ ಮೈ ಒಡ್ಡಿ ಸ್ವಲ್ಪ ಹೊತ್ತು ಕಳೆದ ನಂತರ ಸ್ನಾನ ಮಾಡಬೇಕು. ಹೀಗೆ ಒಂದೆರೆಡು ಮೂರು ದಿವಸಗಳು ಚಿಕಿತ್ಸೆ ಕೊಡುವುದರ ಮುಖೇನ ಕಾಯಿಲೆ ಗುಣವಾಗುತ್ತದೆ.

ಬಿಳಿ ಎಕ್ಕ : Calotropis gigantea (winn) Ait.f

ಸಸ್ಯದ ಕುಟುಂಬ : (Asclepiada ceae) ಅಸ್ಕ್ಲಿಪಿಯಡೇಸಿ

ಕನ್ನಡ : ಎಕ್ಕ, ದೇವರ ಎಕ್ಕ, ಎಕ್ಕಮೆಲಿ

ತೆಲಗು : ಜಿಲ್ಲೆಡು, ಮೊಂಡರಮು

ಹಿಂದಿ : ಸಫೇದ್ ಆರ್ಕ

ಸಂಸ್ಕೃತ : ಶ್ವೆತಾರ್ಕ

Distribution : Throughout india, upto an altitude of 900 m. mcluding the Andamans. Abofound in dry waste plaees tonec, expeetorant, depurativa and anthelminbic. The root berk is febrifuge, anthelminitic, depurative expectorant and laxatine and it is useful is cntaneous diseases, inteusinal worms, congh, ascites and anasaraca, powdered root promoteo gastric secretions and is usefull in asthama, bronchitis and dyspesia. leaves are useful in treatment of paralysis, arthralgia, Swellings and intermilled fevers. flowers are biller, digestive, aslringent stomachic, anthelmintic and tonic. They are useful in asthama. catarrh, anorexia, inflammayious and tumours in large doses it is purgative and emetic.

ಈ ಗಿಡ ಸಾಮಾನ್ಯವಾಗಿ ಬಳ್ಳಾರಿ ಜಿಲ್ಲೆಯ ಏಳು ತಾಲೋಕುಗಳಲ್ಲೂ ಕಂಡುಬರುತ್ತದೆ. ಅದರಲ್ಲೂ ಉತ್ತರ ಕರ್ನಾಟಕ ಬಹುಸಂಸ್ಕೃತಿ ಸ್ಥಳ. ಅಲ್ಲದೆ ಬಹುಳತ್ವ ದೇವರ ಆರಾದಕರು ಹೌದು. ಈ ಬಯಲು ಪ್ರದೇಶವಾದರು ಎಲ್ಲೆಂದರಲ್ಲಿ ಈ ಗಿಡ ದೊರೆಯುವುದಿಲ್ಲ. ಇದು ಸಾಮಾನ್ಯವಾಗಿ ದೇವಾಲಯಗಳ ಹತ್ತಿರ, ಅಂಗಳ ಇಲ್ಲ ಆಜುಬಾಜಿನಲ್ಲಿ ಹುಟ್ಟಿ ಆರಾಧನೆಗೆ ಪಾತ್ರವಾಗಿರುತ್ತದೆ. ಈ ಗಿಡವನ್ನು ನಮ್ಮ ಜನಪದರು ಹಳ್ಳಿಗಳಲ್ಲಿ ಇಂದಿಗೂ ದೇವರೆಂದು ನಂಬಿ ಪೂಜಿಸುವರು. ಅಲ್ಲದೆ ಸೂರ್ಯನನ್ನು ಪೂಜಿಸಿದ ಫಲ ಸಿಕ್ಕುತ್ತದೆ ಎಂಬುದು ಅವರ ನಂಬಿಕೆ. ಸಾವಿರಾರು ವರುಷಗಳಿಂದಲೂ ಜನರು ಆರಾದಿಸುತ್ತಾ ಬಂದಿರುವರು. ಇದು ಚಿಕ್ಕ ಗಿಡ ಮತ್ತು ಕೆಲವು ಚಿಕ್ಕ ಮರವಾಗಿ ಬೆಳೆಯುತ್ತದೆ.

ಈ ಗಿಡದಲ್ಲಿ ಎರಡು ಬಗೆಗಳಿವೆ. ಮೊದಲನೆಯದಾಗಿ ಬಿಳಿ ಹೂ ಬಿಡುವ ಬಿಳಿ ಎಕ್ಕ. ಎರಡನೆಯದಾಗಿ 'ಕರಿ' ಎಕ್ಕದ ಗಿಡ. ಇದು ತಿಳಿ ನೇರಳೆ ಹೂ ಬಿಡುತ್ತದೆ. ಇದರ ವಿಶೇಷ ಅಂದರೆ ಎರಡು ಬಗೆಗಳ ರೋಗ ನಿವಾರಣ ಗುಣ ಒಂದೇ ರೀತಿಯಾಗಿರುತ್ತದೆ. ಪ್ರಾದೇಶಿಕವಾಗಿ ಕೆಲವು ಕಡೆ ಬಿಳಿ ಎಕ್ಕದ ಗಿಡ ಜನಪದ ವೈದ್ಯರು ಬಳಿಸಿದರೆ ಇನ್ನೂ ಕೆಲವೆಡೆ ಕರಿ ಎಕ್ಕದ ಗಿಡ ಬಳಸುವರು. ಆದರೆ ಕ್ಷೇತ್ರ ಕಾರ್ಯದಲ್ಲಿ ಸಂಡೂರಿಗೆ ಹೋದಾಗ ಅಲ್ಲಿಯ ವೈದ್ಯ ಬಿಳಿ ಎಕ್ಕದ ಗಿಡ ಮೂಲಿಕೆಯ ವಿವರಣೆಯನ್ನು ಈ ರಿತಿ ನೀಡಿರುತ್ತಾರೆ.

ಹೊಲ, ಗದ್ದೆ ಅಥವಾ ತೋಟಗಳ್ಲಲಿ ಕೆಲಸ ನಿರ್ವಹಿಸುವಾಗ ಚೇಳು, ಕೈ, ಕಾಲು ಅಥವಾ ಮನುಷ್ಯನ ಯಾವುದೇ ಭಾಗಕ್ಕೆ ಕಚ್ಚಿದರೆ ಒಳಗಿನ ಎಕ್ಕದ ಗಿಡದ ಬೇರನ್ನು ತಣ್ಣೀರಿನಲ್ಲಿ ಅರೆದು ಚೇಳು ಕಡಿದವರಿಗೆ ಕುಡಿಸುವುದರಿಂದ ಚೇಳಿನ ವಿಷ ಗೌಣವಾಗಿ ಗುಣಮುಖ ಹೊಂದುವನು. ಇವೊತ್ತಿಗೂ ಗ್ರಾಮ ನಿವಾಸಿಗಲು ದುಡಿಯುವ ಸಂದರ್ಭದಲ್ಲಿ ಇಲ್ಲ ಬೇಲಿ ಕಟ್ಟುವಾಗ, ಮರಕಡಿಯುವಾಗ, ಕಾಲು ಎಡಿಗಿ ಅಥವಾ ಕಾಲಿಗೆ ಮುಳ್ಳು ಹೊಕ್ಕಿದಾಗ ಆ ಸ್ಥಳ ಗಾಯವಾದರೆ, ಎಕ್ಕದ ಹಾಲನ್ನು ಆ

ಜಾಗದ ಮೇಲೆ ಹಾಕುವುದರಿಂದ ಮುಳ್ಳಿನ ವಿಷವಿರುವುದಿಲ್ಲ. ಒಂದೆರೆಡು ದಿವಸಗಳಲ್ಲಿ ಗಾಯ ಕೂಡ ವಾಸಿಯಾಗುತ್ತದೆ.

ಲೇಸಿ ಬೂಬಮ್ಮ ಅವರು ತಾವು ಔಷಧಿ ಕೊಡುವ ಮುನ್ನ ಎಕ್ಕದ ಗಿಡದ ಹೂವನ್ನು ಚೆನ್ನಾಗಿ ಒಣಗಿಸಿದ ನಮತರ ಪುಡಿ ಮಾಡುವರು. ಆ ಮೇಲೆ ಸ್ವಲ್ಪ ಜೇನುತುಪ್ಪಕ್ಕೆ ಗುಲಗಂಜಿ ಗಾತ್ರದಷ್ಟು ತಾವು ತಯಾರಿಸಿ ಇಟ್ಟಿದ ಎಕ್ಕದ ಹೂವಿನ ಪುಡಿಯನ್ನು ಊಟಕ್ಕೆ ಮುನ್ನ ಒಂದಿಷ್ಟು ನೆಕ್ಕಲು ಕೊಡುವರು. ಈ ಚಿಕಿತ್ಸೆ ಯಾವಾಗ ಅಂದರೆ ಹೆಣ್ಣು ಮಕ್ಕಳ ಬಿಳಿಸೆರಗು ರೋಗವಿದ್ದರೆ ಅನಂತರ ಸಕ್ಕರೆ ರೋಗ ಹೋಗುತ್ತದೆ. ಜೊತೆಗೆ ತೊಡೆಯ ಸಂದಿಯಲ್ಲಿ ತೊಡಬಾಳೆ ಎದ್ದಿರುವಾಗ ಅದಕ್ಕೆ ಎಕ್ಕದ ಹಾಲನ್ನು ಹಾಕಿದರೆ ಆದು ಒಡೆದು ಹೋಗುತ್ತದೆ. ಹೀಗೆ ಇನ್ನೂ ಅನೇಕ ರೋಗಗಳಿಗೆ ಔಷಧಿಕೊಡುತ್ತಾರೆ.

ಉತ್ತರಾಣಿ	: Acyranthus aspera linn.
ವೈಜ್ಞಾನಿಕ ಹೆಸರು	: ಅಕಿಲ್ಯಾಂಥಸ್ ಆಸ್ಪೆರಾ
ಸಸ್ಯದ ಕುಟುಂಬ	: ಅಮರ ನಾತ ಅಸಿಯೆ (Amaranath aceae)
ಕನ್ನಡ	: ಉತ್ತರಾಣಿ
ಸಂಸ್ಕೃತ	: ಅಡಸಲೆಯ
ತೆಲಗು	: ಉತ್ತರವೆನಿ
ಹಿಂದಿ	: ಚಿರಚಿತ

Botanical distribution : Persennial herbs, 3-90 cmtall, of ten with a woody base, tranches ablusely -angled, striate, pubescent. Leave briable, ovate elliptic or abovate rounded, flowers greenish while, numcrous in anriliary ar terminal Spikes, seeds sub cylindrical, truncate at the apex, rounded at the base reddis brown. **Distribution :** throughout india, upto anattitudas as 2100 m. and is the South Islads.

ಈ ಸಸ್ಯವು ಬಯಲು ಪ್ರದೇಶಗಳಲ್ಲಿರುವ ಬರಡು ಭೂಮಿಯಲ್ಲಿ ಅಲ್ಲದೆ ಸಾಗುವಳಿ ಭೂಮಿಯ ಬದುಗಳು, ಇಲ್ಲಾ ಸಾಗುವಳಿಗೆ ಯೋಗ್ಯವಲ್ಲದ ನೆಲದಲ್ಲಿ ಹುಲುಸಾಗಿ ನೆಟ್ಟಗೆ ಬೆಳೆದು ನಿಲ್ಲುತ್ತದೆ. ಇದರ ಎಲೆಗಳು ಕಾಂಡದ ಮೇಲೆ ಅಭಿಮುಖವಾಗಿ ಬೆಳೆದಿರುತ್ತದೆ. ಇದು ತೊಟ್ಟಿಲ್ಲದ ಹೂ ಬಿಡುತ್ತದೆ. ಪ್ರಾದೇಶಿಕವಾಗಿ ಹೂಬಿಡುವುದರಲ್ಲಿ ವಿಶೇಷತೆಯಿಂದ ಕೂಡಿರುತ್ತದೆ. ಅಂದರೆ ಕೆಲವು

ಪ್ರದೇಶಗಳಲ್ಲಿ ತಿಳಿಹಸಿರು ಹೂ ಬಿಟ್ಟರೆ ಇನ್ನೂ ಕೆಲವೆಡೆ ಸ್ವಲ್ಪ ಕೆಂಪಾಗಿರುತ್ತದೆ. ಪ್ರತಿ ಹೂವಿನಲ್ಲೂ ಉದುರದೆಯಿರುವ ಮುಳ್ಳಿನಂತಹ ಹೂ ಸೂಚಿ(ಬ್ರಾಕ್ಟ್ಸ್)ಗಳಿರುತ್ತವೆ. ಇದೇ ಬೀಜ ಪ್ರಸಾರಕ್ಕೆ ನೆರವಾಗುತ್ತದೆ.

ಕಂಪ್ಲಿಯ ನಿವಾಸಿ ಲೇಸಿ ಚೌಡಮ್ಮ ಸುಮಾರು ೪೦-೫೦ ವರುಷಗಳಿಂದಲೂ ಈ ಉತ್ತರಾಣಿ ಗಿಡ ಮೂಲಿಕೆಯನ್ನು ಉಪಯೋಗಕ್ಕೆ ತಂದುಕೊಂಡು ಅನೇಕ ಸುತ್ತಮುತ್ತ ಹಳ್ಳಿಗರಿಗೆ ಔಷಧಿಯನ್ನು ನೀಡುತ್ತಾ ಬಂದಿರುವರು. ಈ ಗಿಡದಲ್ಲಿ ತಯಾರಿಸುವ ಔಷಧಿಗಳಲ್ಲಿ ಒಂದೆರೆಡು ಕಾಯಿಲೆಗಳಿಗೆ ಇಲ್ಲಿ ವಿವರಿಸಲಾಗುವುದು.

ಹೆಂಗಸರೀರಲಿ, ಗಂಡಸರೀರಲಿ, ಮಕ್ಕಳು, ಮುದುಕ-ಮುದುಕಿಯರಿಗೆ ತೊಡೆಸಂದಿಯಲ್ಲಿ ತೊಡೆಬಾಳು ಎಳುತ್ತದೆ. ಅಂದರೆ ಅದು ವೃತ್ತಾಕಾರವಾಗಿ ದಪ್ಪಗಿದ್ದು ಗೆಡ್ಡೆ ಆಕಾರದಲ್ಲಿರುತ್ತದೆ. ಈ ರೋಗಕ್ಕೆ ತುತ್ತಾದ ರೋಗಿಗಳಿಗೆ. ಆಕೆ ಕೆಂಪು ಉತ್ತರಾಣಿ ಬೇರು ಆ ಸಂದರ್ಭದಲ್ಲಿ ಬೇರು ಸಿಗದಿದ್ದರೆ ಅದರ ಸೊಪ್ಪನ್ನು ತೆಗೆದುಕೊಂಡು ಬಂದು ನುಣ್ಣಗೆ ಅರೆದು ಆ ಗಾಯವಾದ ಸ್ಥಳದ 'ಗೆಡ್ಡೆ' ಮೇಲೆ ಹಾಕಿ ಬಟ್ಟೆಯಲ್ಲಿ ಕಟ್ಟುವಳು. ಹೀಗೆ ೩-೪ ಬಾರಿ ಮಾಡಿದಾಗ ಕ್ರಮೇಣ ಆ ಗೆಡ್ಡೆ ಒಡೆದು ರಕ್ತ ಶ್ರಾವ, ನೋವು ಕಡಿಮೆಯಾಗುತ್ತದೆ. ಅನಂತರ ಆ 'ಗೆಡ್ಡೆ' ಒಡೆದ ಸ್ಥಳಕ್ಕೆ ಅರಿಸಿನದಿಂದ ಕಟ್ಟುವರು. ಹೀಗೆ ಚಿಕಿತ್ಸೆ ನೀಡುತ್ತಾನೆ. ಆಕೆ ಇದಕ್ಕೆ ಯಾವುದೇ ರೀತಿಯ ಹಣ, ಆಹಾರ ಧಾನ್ಯ ತೆಗೆದುಕೊಳ್ಳುವುದಿಲ್ಲ. ರೋಗಿಯೇ ಪ್ರೀತಿಯಿಂದ ಕೊಟ್ಟಷ್ಟು ಹಣವನ್ನು ತೆಗೆದುಕೊಳ್ಳುವುದು ಪ್ರತೀತಿ.

ಲೇಸಿ ಚೌಡಮ್ಮ ಅವರು ಈ ಉತ್ತರಾಣಿ ಗಿಡದಲ್ಲಿನ ಎಲೆ, ಕಾಂಡ, ಬೇರು 'ಹೂ'ಗಳನ್ನು ಹದಮಾಡಿ ಇರಿಸಿಕೊಂಡು ಹೆಂಗಸರಿಗೆ ಔಷಧಿ ಮಾಡಿಕೊಡುವರು. ಹೆಂಗಸರು ಸಂಕೋಚಪ್ರಿಯರು, ಅಲ್ಲದೆ ಅವರಲ್ಲಿನ ರೂಗಗಳನ್ನು ತನ್ನ ಪುರುಷನಿಗೂ ಜೊತೆಗೆ ಅಕ್ಕಪಕ್ಕದವರಿಗೂ ತೋರಿಸದೆ ಗುಪ್ತವಾಗಿ ಔಷಧಿ ತೆಗೆದುಕೊಳ್ಳುತ್ತಾರೆ. ಅಂತಹ ಕಾಯಿಲೆಗಳೆಂದರೆ ಬಿಳಿಸೆರಗು, ರಕ್ತ ಸೋರುವಿಕೆ, ಅಲ್ಲದೆ ಗುಪ್ತಾಂಗದ(ಯೋನಿ) ನೋವು, ಉರಿ, ತುರಿಕೆ ಉಂಟಾಗುವಿಕೆಗೆ ಔಷಧಿಯನ್ನು ಈ ಗಿಡದಲ್ಲಿ ತಯಾರಿಸುವುದು ಪದ್ಧತಿ. ಈ ಗಿಡದ ಬೇರನ್ನು ಹರಳೆಣ್ಣೆಯಲ್ಲಿ ಬೆಚ್ಚಗಿಟ್ಟು ನಂತರ ಬಾಡುವುದು. ಹೀಗೆ ಬಾಡಿದ ಬೇರನ್ನು ಈ ಮೇಲೆ ಹೇಳಿದ ರೋಗ ಕಾಣಿಸಿಕೊಳ್ಳುವ ಹೆಂಗಸರಿಗೆ ಜಗಿದು ತಿನ್ನಿಸುವರು ಬಿಳಿಸೆರಗು, ರಕ್ತಸೋರುವಿಕೆ ನಿಂತುಕೊಳ್ಳುತ್ತದೆ.

ಅಲ್ಲದೆ ಹೆಂಗಸರ ಗುಪ್ತಾಂಗ ನೋವು ಬಂದಾಗ ಉತ್ತರಾಣಿ ಗಿಡದ ಎಲೆಗಳನ್ನು ಬಿಡಿಸಿ ಚೆನ್ನಾಗಿ ಜಜ್ಜಿ ಲೇಪಿಸುವುದರಿಂದ ನೋವು ಗೌಣಗೊಂಡು, ತುರಿಕೆ ಇದ್ದರೂ ವಾಸಿಯಾಗುತ್ತದೆ.

ವೈಜ್ಞಾನಿಕ ಹೆಸರು : Pongamia, Pinnata, Pierre

ಸಸ್ಯದ ಕುಟುಂಬ : Papitionaceae. ಪಾಪಿಲಿನೆಸ್ಸಿಯ

ಇಂಗ್ಲಿಷ್ : ಇಂಡಿಯನ್ ಬೀಚ್

ಕನ್ನಡ : ಹೊಂಗೆ ಮರ

ಸಂಸ್ಕೃತ : ಕಾರನಂಜ

ಮರಾಠಿ : ಕಾರಂಜೆ

ತಮಿಳು : ಪೊಂಗ

ತೆಲಗು : ಗಾನುಗ

Description : Pongamia Pinnata is a handsome tree which is normally found growing along rivers and Streams. The leaves of the tree are placed alternately and impai-pinnately compound. The 5 to 9 leaglets are over ovat-oblong. The while or purplish papilionaceous flowers are found in axillary raccemes. The pod is abliguely-oblong, bilaterally compressed and woody. The single. seed in side the podis kindney. Shaped, parts used, The roots tender shoots, leares F lowers and seeds.

ಸಂಡೂರು ನಿಸರ್ಗದ ತಪ್ಪಲು. ಹಸಿರಿನ ಮೈಹೊದಿಕೆ ಹೊದ್ದುನಿಂತ ಬೆಟ್ಟಗಳು, ಕಂದಕಗಳು, ಬಯಲು ಪ್ರದೇಶ ನೋಡುಗರ ಕಣ್ಮನಗಳನ್ನು ತಣಿಸುತ್ತದೆ. ಇಷ್ಟಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಅಲ್ಲಿ ನೂರಾರು ಸಸ್ಯ ಸಂಜೀವಿನಿ ಗಿಡಗಳು ರೋಗಿಗಳಿಗೆ, ವೈದ್ಯರಿಗೆ ಚಿರಪರಿಚಿತ, ಸಂಡೂರಿನಲ್ಲಿ ನೆಲೆನಿಂತಿರುವ ಕೊಟ್ರೇಶ್ ಅವರು ಸುಮಾರು ೫೦-೬೦ ವರ್ಷಗಳಿಂದಲೂ ಹೊಂಗೆ ಮರದ ಬೇರು, ತೊಗಟೆ, ಕಾಂಡ, ಎಲೆ, ಕುಡಿಯಿಂದ, ಅನೇಕ ಕಾಯಿಲೆಗಳಿಗೆ ಔಷಧಿ ನೀಡುತ್ತಾ ಬಂದಿರುತ್ತಾರೆ. ಈ ಗಿಡ ಅಥವಾ ಮರ ನೀರಿನ ದಡದಲ್ಲಿ ಹೊಳೆಯ ದಂಡೆಯಲ್ಲಿ ಹುಲುಸಾಗಿ ಬೆಳೆಯುತ್ತದೆ. ಅಲ್ಲದೆ, ಬಳ್ಳಾರಿಯ ಅನೇಕ ತಾಲೋಕುಗಳಲ್ಲಿ ಈ ಗಿಡವನ್ನು ಕಾಣಬಹುದು. ಆದರೆ ಇದರಿಂದ ಔಷಧಿ ತಯಾರಿಸುವುದು ಅಪರೂಪ.

ಈ ಮರದ ಎಲೆಯನ್ನು ಚೆನ್ನಾಗಿ ಅರೆದು ಮೈಯೆಲ್ಲ ಕಜ್ಜಿಯಾದ ರೋಗಿಗೆ ಹಚ್ಚಿ ೧೦-೧೫ ನಿಮಿಷ ಬಿಸಿಲಿನಲ್ಲಿ ನಿಲ್ಲಿಸಿ ಸ್ನಾನ ಮಾಡಿಸುವುದು. ಹೀಗೆ ಒಂದೆರೆಡು ದಿವಸ ಮಾಡುವುದರಿಂದ

ಕಜ್ಜಿವಾಸೆಯಾಗುತ್ತದೆ. ಅಲ್ಲದೆ ಕಣ್ಣಿನಲ್ಲಿ ಕಿವು, ಜಿಲ್ಲು ಬಂದಂತಹ ರೋಗಿಗಳಿಗೂ ಕೂಡ ಹೊಂಗೆ ಎಲೆಯ ರಸವನ್ನು ಅಂದರೆ ಒಂದೆರೆಡು ತೊಟ್ಟು ಹಾಕುವುದರಿಂದ ವಾಸಿಯಾಗುತ್ತದೆ. ಪೈಲ್ಸ್ , ತುರಿತ, ಇನ್ನಿತರ ಗಾಯಗಳಿಗೂ ಈ ಸಸ್ಯದಿಂದ ತಯಾರಿಸಲಾದ ಔಷಧಿಯನ್ನು ರೋಗಿಗಳಿಗೆ ಕೊಡುವ ಪರಿಪಾಠ ಇಂದಿಗೂ ಮುಂದುವರೆಯುತ್ತದೆ. ಇದರಿಂದ ಸಕ್ಕರೆ ಕಾಯಿಲೆ, ಜ್ವರ, ರಕ್ತ ಶುದ್ಧಿಯಾಗುವಿಕೆ, ಎದೆ ನೋವು ಕಿಬ್ಬೊಟ್ಟೆ ನೋವು ಕೂಡ ವಾಸಿಯಾಗುತ್ತದೆ ಎಂದು ನಮ್ಮ ನಾಟಿ ವೈದ್ಯರು ಹೇಳುತ್ತಾರೆ. ದಿನನಿತ್ಯದ ಬದುಕಿನಲ್ಲಿ ನಮ್ಮ ಕಣ್ಣ ಮುಂದೆ ಇದ್ದರೂ ಈ ಸಸ್ಯದ ಮಹತ್ವವನ್ನು ನಾವು ಗುರುತಿಸಿರುವುದಿಲ್ಲ. ಹೀಗೆ ನಮ್ಮ ಸುತ್ತಮುತ್ತ ಇರುವ ಸಸ್ಯಗಳಿಂದ ಆಪಾರವಾದ ಔಷಧಿ ಸಂಪತ್ತು ಯತೇಚ್ಛವಾಗಿ ದೊರೆಯುತ್ತದೆ. ಆದರೆ ಅಂತಹವುಗಳನ್ನು ಸಂರಕ್ಷಿಸಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲೆ ಇದೆ.

ಲೋಳೆಸರ	:	A Love Vera, Mill
ಕುಟುಂಬ	:	ಲಲ್ಲಿಯಸಿಯೇ (Liliaceae)
ಇಂಗ್ಲೀಷ್	:	ಭಾರತೀಯ ಲೋಳೆ (Indian Aloe)
ಹಿಂದಿ	:	ಝೀಕಾವರ್ (Ghikavar)
ಗುಜರಾತಿ	:	ಕುನ್ ವರ್ (Kunvar)
ಕನ್ನಡ	:	ಝಿಕಾವರ್, ಲೋಳೆಸರ (Ghikavar)
ತಮಿಳು	:	ಕುಟ್ಟಿಲಾಯಿ (Kuttilai)
ಸಂಸ್ಕೃತ	:	ಕುಮಾರಿ (Kumari)
ಬೆಂಗಾಲಿ	:	ಘುರಿ takumari (Ghritakumari)
ಮರಾಠಿ	:	ಕೋರ್ ಪಾಡ್ (Korphad)

Desription : Aloe is cultivated both forornamental and medicinal purposes. It is short stemmed and the spinytoothed leaves are very scculent or juicy. The drooping flowers are yellow in colour. When the plant is mature, from the middle an erect stalk grows out which is a metre in height. The fruit is anoval capsule containing numerous seeds.

Medicinal Use

1. Promotes menstrual flow
2. Softens swollen parts and relieves pain in muscles
3. Works as a good laxative
4. Kills or expels worms from the body
5. Heals wounds and fresh cuts
6. Soothes burns, cures eczema and falling hair
7. useful in eye diseases.
8. Cheecks the growth of tumours, enlargement of the spleen, liver complaints, asthma, leprosy and jaundice

ಈ ಸಸ್ಯ ಭಾರತದಲ್ಲಿ ಅಲ್ಲದೇ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಕೂಡ ಈ ಸಸ್ಯ ಇರುತ್ತದೆ. ಸಾಮಾನ್ಯವಾಗಿ ಇದು ಬಳ್ಳಾರಿಯ ಸಂಡೂರು, ಹಗರಿಬೊಮ್ಮನಹಳ್ಳಿ, ಸಿರುಗುಪ್ಪ ಹೀಗೆ ಬೇರೆ ಬೇರೆ ಗ್ರಾಮೀಣ ಪ್ರದೇಶಗಳಲ್ಲಿಯೂ ಕೂಡ ಕಂಡುಬರುತ್ತದೆ. ಈ ಸಸ್ಯದಿಂದ ಅನೇಕ ಪ್ರಯೋಜನಗಳು ಉಂಟು. ಈ ಸಸ್ಯ ಬಳಸಿ ಮನುಷ್ಯ ಅನೇಕ ರೋಗಗಳಿಗೆ ಔಷಧಿಯನ್ನು ತಯಾರಿಸುವನು. ಇದು ನೋಡಲಿಕ್ಕೆ ಹಸಿರಾಗಿದ್ದು, ಇದರ ಎಲೆಗಳು ಉದ್ದವಾಗಿದ್ದು ಬೇಸಿಗೆ ಕಾಲ, ಮಳೆಗಾಲ, ಚಳಿಗಾಲದಲ್ಲಿಯೂ ಕೂಡ ಹಸಿರಾಗಿರುತ್ತದೆ. ಇದರ ಎಲೆಗಳನ್ನ ತೆಗೆದುಕೊಂಡು ಚೆನ್ನಾಗಿ ಅರೆದು ಅದರ ಗಸಿಯಿಂದ ಸುಟ್ಟ ಗಾಯಗಳಿಗೆ ತಲೆಕೂದಲು ಉದುರುವವರಿಗೆ, ಮೂಲವ್ಯಾಧಿ ಇರುವವರಿಗೆ ಇದರಿಂದ ತಯಾರಿಸಿದ ಔಷಧಿಯನ್ನು ಕೊಡುವರು. ಈ ಮೇಲೆ ಈಗಾಗಲೇ ಇಂಗ್ಲಿಷಿನಲ್ಲಿ ಇದರ ಉಪಯೋಗವನ್ನು ಉಲ್ಲೇಖಿಸಲಾಗಿದೆ.

ದಾಸವಾಳ

ವೈಜ್ಞಾನಿಕ ಹೆಸರು : Hibiscus-rosa-Sinesis, Linn

ಸಸ್ಯ ಕುಟುಂಬ : Malvacace

ಕನ್ನಡ : ದಾಸವಾಳ

ಸಂಸ್ಕೃತ : ಜಾಪ

ಹಿಂದಿ	:	ಜಸ್ತು
ತೆಲಗು	:	ಜಾಪಪುಷ್ಪಂ
ತಮಿಳು	:	ಸೆಂಪರುತಿ
ಇಂಗ್ಲಿಷ್	:	ಹೈಬಿಸ್ಕಸ್

Desription : Hibiscus is one of the most common garden shrubs used for hedges. It grows in any soil with little care. The flower is solitary, half opened in the morning, but as the weather warms up, it opens fully. The foliage of this shrub is deep green in colour or variegated.

Medicinal Use

1. Used for coughs and colds
2. Gentle laxative and a softener or inflamed parts
3. Soothes internal and external wounds and sores, also soothes the alimentary tract and relieves inflamation
4. Lowers body heat.

ಈ ಸಸ್ಯ ಬಳ್ಳಾರಿ ಜಿಲ್ಲೆಯಾದ್ಯಂತ ಕಂಡುಬರುತ್ತದೆ. ಇದರ ಎಲೆಗಳನ್ನ ಹಾಗೂ ಕಾಂಡವನ್ನು ತೆಗೆದು ಚೆನ್ನಾಗಿ ಅರೆದು ರಸ ಮಾಡಬೇಕು. ಅನಂತರ ಯಾವತಾನಿಗೆ ಕೆಮ್ಮು, ಸೀತ ಇರುತ್ತದೆಯೂ ಆ ವ್ಯಕ್ತಿಯು ಕುಡಿದಾಗ ವಾಸಿಯಾಗುತ್ತದೆ. ಅಲ್ಲದೆ ಮನುಷ್ಯನ ಮುಖ ಕಣ್ಣಿನ ಭಾಗಕ್ಕೆ ಈ ಹೂವಿನಿಂದ ತಯಾರಿಸಿದ ಲೇಪವನ್ನು ಹಚ್ಚಿ ಒಂದೆರಡು ಕಾಲದನಂತರ ಸ್ನಾನ ಮಾಡಿದರೆ ಪರಿಪೂರ್ಣ ಕಾಂತಿ ಉಂಟಾಗುತ್ತದೆ. ಅಲ್ಲದೆ ಮನುಷ್ಯನ ಬೇರೆ ಬೇರೆ ಗಾಯಗಳಿಗೆ ದಾಸವಾಳ ಗಿಡದಿಂದ ತಯಾರಿಸಿದ ಲೇಪವನ್ನು ಹಚ್ಚುವುದರಿಂದ ಗಾಯವಾಸಿಯಾಗುತ್ತದೆ.

ಬೇವಿನ ಮರ

ವೈಜ್ಞಾನಿಕ ಹೆಸರು	:	ಅಝೂದಿರಕ್ತ ಇಂಡಿಕ (Azadirachta Indica A Juss)
ಸಸ್ಯ ಕುಟುಂಬ	:	ಮೆಲಿಯೇಸಿ (Meliaceae)
ಕನ್ನಡ	:	ಕಹಿಬೇವು, ಕಹಿನಿಂಬೆ ಮರ, ಬೇವು

ಸಂಸ್ಕೃತ	:	ಬ್ರಹ್ಮಮೋಡಿ, ಅರಿಷ್ಟ, ಸರ್ವತೋಭದ್ರ
ಹಿಂದಿ	:	ನೀಮ್
ತೆಲಗು	:	ವೇಪ
ತಮಿಳು	:	ವೇಪಂ
ಇಂಗ್ಲಿಷ್	:	ನೀಮ್ ಟ್ರೀ, ಮಾರ್ಗೋಸ್ ಟ್ರಿ

ಬೇವು ಜನಪದರ ಆರಾಧ್ಯ ದೇವತೆಯಾಗಿ ಪೂಜಿಸಲ್ಪಡುತ್ತದೆ. ಯುಗಾದಿ ಹಬ್ಬದ ದಿನ ಬೇವು ಬೆಲ್ಲದೊಡನೆ ಸವಿಯುವುದು ಸಂಪ್ರದಾಯ. ಇವೆರಡನ್ನು ಅಂದು ಜಗಿದು ತಿಂದರೆ ಬದುಕಿನಲ್ಲಿ ಸಮನಾಗಿ ಕಷ್ಟ ಸುಖವನ್ನು ಅನುಭವಿಸಬೇಕೆಂಬುದು ನಮ್ಮ ಪೂರ್ವಿಕರ ಭಾವನೆ. ಇಂದಿಗೂ ಅದನ್ನು ಮುಂದುವರೆಸಿಕೊಂಡು ಹೋಗಲಾಗುತ್ತದೆ. ಉತ್ತರ ಕರ್ನಾಟಕದಾದ್ಯಂತ ಈ ಮರ ದಕ್ಷಿಣ ಕರ್ನಾಟಕಕ್ಕಿಂತ ಹೆಚ್ಚಾಗಿ ಬೆಳೆಯುತ್ತದೆ. ಮೂಲವಾಗಿ ಇದು ಬರ್ಮಾ ದೇಶವಾಗಿದ್ದು, ರಾಜ್ಯದಾದೆಲ್ಲ ಹರಡಿದೆ. ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಮರದ ಗೊಂಚಲಿನಲ್ಲಿ ಬೆಳ್ಳಗಿನ ಹೂ ಬಿಡುತ್ತದೆ. 'ಹೂ'ಗಳು ಸುವಾಸನೆಯಿಂದ ಕೂಡಿದ್ದು ಜೇನಿನಂತಹ ಪರಿಮಳದ ವಾಸನೆ ಆಸ್ವಾದಿಸುವಂತೆ ಮಾಡುತ್ತದೆ.

ಬೇವು ಒಂದೊಂದು ರೀತಿಯಲ್ಲಿ ಜನಪದರ 'ಮನೆ ಮದ್ದಾಗಿ' ಬಳಸುತ್ತಾ ಬಂದಿರುತ್ತಾರೆ. ಈ ಸಸ್ಯಕ್ಕೆ ಅನೇಕ ರೋಗನಿವಾರಣ ಶಕ್ತಿ ಇದೆ. ಬಳ್ಳಾರಿ ಜಿಲ್ಲೆ ಹೊಣೆನೂರಿನಲ್ಲಿ ನೆಲೆನಿಂತಿರುವ ಮಲ್ಲಿಕಾರ್ಜುನ ಹೊಸಮನಿ ಅವರು ತಮ್ಮ ಗ್ರಾಮದ ನಿವಾಸಿಗಳಿಗೆ ಹಾಗೂ ಅಕ್ಕಪಕ್ಕದ ಊರಿನ ಜನಪದರಿಗೆ ರೋಗ ರುಜಿನಗಳಿಗೆ ಸುಸ್ತಾದವರಿಗೆ, ಅಲ್ಲದೆ ಪಶುಗಳಿಗು ಸಹ ಈ ಬೇವಿನ ಮರದ ಎಲೆ, ಬೇರು, ಕಾಂಡ, ತೊಗಟೆ, ಬೀಜದಿಂದ ಔಷಧಿ ಮಾಡಿ ಈ ಬೇವಿನ ಮರದ ಎಲೆ, ಬೇರು, ಕಾಂಡ, ತೊಗಟೆ, ಬೀಜದಿಂದ ಔಷಧಿ ಮಾಡಿಕೊಡುವುದನ್ನು ಇಂದಿಗೂ ಕಾಣಬಹುದಾಗಿದೆ. ಸಾಮಾನ್ಯವಾಗಿ ಬಳ್ಳಾರಿ ಜಿಲ್ಲೆಯ ಇತರ ಹಳ್ಳಿಗಳಲ್ಲಿ ಈ ಸಸ್ಯವನ್ನು ಇಂದಿಗೂ ಅನೇಕ ರೋಗಗಳಿಗೆ ಬಳಸುವುದನ್ನು ನೋಡಬಹುದಾಗಿದೆ. ಹೊಣೆ ನೂರಿನಲ್ಲಿರುವ ಮಲ್ಲಿಕಾರ್ಜುನ ಹೊಸಮನಿ ಅವರು ಸುಮಾರು ೭೦ ವರ್ಷಗಳಿಂದಲೂ ಮನುಷ್ಯರ ಅನೇಕ ರೋಗಗಳಿಗೆ ಈ ಸಸ್ಯದಿಂದ ತಯಾರಿಸಿದ ಔಷಧಿಯನ್ನು ಕೊಡುವರು. ಕೆಲವು ಔಷಧಿಗಳ ಉಪಯೋಗವನ್ನು ಅವರ ಹೇಳಿಕೆಯ ಮೇಳೆ ವಿವರಿಸಲಾಗಿದೆ. ಸಾಮಾನ್ಯವಾಗಿ ಮೂಲವ್ಯಾಧಿ ಹೆಣ್ಣು ಗಂಡು, ಮಕ್ಕಳು, ಮುದುಕ, ಮುದುಕಿಯರಲ್ಲಿ ಉಲ್ಬಣಿಸುತ್ತದೆ. ಇನ್ನೂ ಅನೇಕ ರೋಗಗಳಿಗೆ ಇದರಿಂದ ಔಷಧಿ ಮಾಡಿಕೊಡುವರು.

ಮೊದಲು ಬೇವಿನ ಎಲೆಗಳನ್ನು ಕಿತ್ತು ತಂದು ಒಣಗಿಸುವರು. ಒಣಗಿಸಿದ ನಂತರ ಅದನ್ನು ಕುಟ್ಟಿ ಸಣ್ಣಗೆ ಪುಡಿ ಮಾಡಿ ಒಂದು ಡಬ್ಬಿಗೆ ಇಟ್ಟುಕೊಳ್ಳುವರು. ಮೂಲವ್ಯಾಧಿಯಿಂದ ನರಳುವಂತ ರೋಗಿಗಳು ಬಂದಾಗ ಆಗ ಕರೆದ ಮೇಕೆ ಹಾಲಿಗೆ ಸಣ್ಣಗೆ ಮಾಡಿದ ಪುಡಿಯನ್ನು ಲೋಟದೊಳಗೆ ಒಂದು ಚಮಚದಷ್ಟನ್ನು ಹಾಕಿ ಕೊಡುವರು. ಈ ರೀತಿ ಒಂದೆರೆಡು ವಾರಕೊಡುವುದರಿಂದ ಮೂಲವ್ಯಾಧಿ ಕ್ರಮೇಣ ವಾಸಿಯಾಗುತ್ತದೆ.

ಈ ವ್ಯಕ್ತಿಯೇ ಬೇವಿನ ಎಲೆಗಳನ್ನು ಚೆನ್ನಾಗಿ ಪುಡಿ ಮಾಡಿದ ನಂತರ ಅದನ್ನು ಉಂಡೆ ಮಾಡಿ ಅನೇಕ ದಿವಸಗಳವರೆಗೆ ಒಣಗಿಸುವನು. ಹೀಗೆ ಒಣಗಿದ ಬೇವಿನ ಉಂಡೆಗಳನ್ನು ಹೊಟ್ಟೆಯಲ್ಲಿ ಹುಳಗಳಿವೆ ಅಥವಾ ಜಂತುಹುಳುಗಳಿವೆ ಅಂತ ಊಹಿಸಿ ಆ ಉಂಡೆಗಳನ್ನು ನುಂಗಲು ಕೊಡುವನು. ಹೀಗೆ ಒಂದು ವಾರದವರೆಗೆ ಮಾಡಿದಾಗ ಹುಳುಗಳು ಸತ್ತು ರೋಗಿಯು ಆರೋಗ್ಯವಾಗುತ್ತಾನೆ. ಅಲ್ಲದೆ ಇವೊತ್ತು ಕೂಡ ಅಕ್ಕಿಯ ಮೂಟೆಗೆ ಬೇವಿನ ರೆಂಬೆಯನ್ನು ಹಾಕಿ ಇಡುವುದನ್ನು ಉತ್ತರ ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ನೋಡಬಹುದು. ಹೀಗೆ ಮಾಡುವಾಗ ಅಕ್ಕಿಯು ಯಾವುದೇ ಹುಳ ಹಿಡಿಯದೆ, ಕೆಲವು ತಿಂಗಳವರೆಗೆ ಬಳಸುವುದನ್ನು ನೊಡಬಹುದಾಗಿದೆ. ಒಟ್ಟಿನಲ್ಲಿ ಈ ಸಸ್ಯದಿಂದ ಅನೇಕ ರೋಗಗಳಿಗೆ ಹಳ್ಳಿಯ ಜನಪದ ವೈದ್ಯರು ಬಳಸುವುದನ್ನು ನೋಡಬಹುದಾಗಿದೆ.

ಸಸ್ಯ ಹಾಗು ಇನ್ನಿತರ ವಸ್ತುಗಳಲ್ಲಿರುವ ಅಂಶಗಳನ್ನು ವೈಜ್ಞಾನಿಕವಾಗಿ ಪ್ರಯೋಗ ಮಾಡಲಾಗಿದ್ದು, ರಾಸಾಯನಿಕ ಅಂಶಗಳ ಕುರಿತು ಅವುಗಳ ವಿಶ್ಲೇಷಣೆಯನ್ನು PHARMACOLOGICAL STUDIES ಎಂದು ಕರೆದು ಯಥವತ್ತು ಅಂತಹ ಅಂತಹ ಅಂಶಗಳನ್ನು ಇಂಗ್ಲೀಷ್‌ನಲ್ಲಿ ಕೊಡಲಾಗಿದೆ.

ANTIBACTERIAL ACTIVITY

The alcoholic extracts of all these plants were subjected for antibacterical and anti-fungal activities. The results of these studies are given below.

The different coneentrations of alcoholic extract of Tinospora cordifolia, pongamia pinnata celome viscose and phyllanthus niruri le, 20mg/ 5m, 40mg / 5ml, 60 mg / 5ml 80 mg / 5 ml have shown significant antibactterial activity against various.

Pothogenic bacteria. The moderate activity has shown in lower do ses. But the maximum activity was reported in higher doses. all the results of different concentrations Tinospora cordifolia, pongamia pinnata are compared with control and streptomycin Standard drug treated groups.

The different coneentrations (20, 40, 60 and 80mg ml of DMF of 0.2 ml) of Tinospora cordifolia, Pongamia pinnata has shown promising antibactcrial activity against all the bacteria tested. The bacterial grouth in hibition was also recorded on 2nd and 5th day in only in only drug treaded groups. But no bacterial grouth. inhibition was notiud ofter 24 hours in well containing. standard streptomycin sulpate. The bacteria did not shoce any futcther growth ofter 24 hours to 5th day in and drug treated wells. It is indicated that theys drugs have given complete prevention to the development of the drug resistanee in bacteria for delaged growth (Plate 2, 3, 4)

Pinnata has shown potent and promising antibacterial activity against E.colis It is highly pathogenic, Small, rod shaped, grem negative bacteria.

The alcoholic extreact of Tinospora cordifolia has shown mild antibacterial activity against p.aeruginosa and it has shown effective antibacterial activity against E.coli under higher doses. But it has shown no antibacterial activity against klabsiella, Buillus, and slaphyllococcus ssp.

Similarly Tinospora cordifolia The alcoholic extract of pongamia pinnata also shown mild anitbacteial activity against p.aeraginosa, E.coli and Bacillns. But it does not shown any antibacterial activity Klebsiella and staphyllococcus ssp.

In the same way the alcohol extract of C.viscosa and p.niruri have shown mild antibacterial activity against all Threthogenic form tested.

The result of all thess experimental me compared with standard antibiotic streplomycin sulpate. The lower doses fall These test samples have shown mild antibacterial activity when compared to higher cases.

These experiments were reapeled minimum doses and found the mean and standard errors of all the abore results.

When compared to lower doses of test samples, higher doses have shown significant antibacterial activity.

ಗೋವಿನ ಕಥೆಯೊಂದಿಗೆ ಚರ್ಚೆಗೆ ತೊಡಗಿ ವಿವರಣೆಯ ಕಡೆಗೆ ಮುಂದುವರಿಯಲಾಗಿದೆ.

"ಖಂಡವಿದೆಕೊ ಮಾಂಶವಿದೆಕೊ"

"ಗುಂಡಿಗೆಯ ಬಿಸಿರಕ್ತವಿದಕೊ"

ಈ ಹಾಡಿನಲ್ಲಿ ಸ್ಪಷ್ಟ ಅಭಿಪ್ರಾಯ ಮೂಡುವುದು ಸಹಜ. ಅಂದರೆ ಜನಪದರಿಗೂ ಪ್ರಾಣಿಗಳಿಗೂ ಒಂದು ರೀತಿಯ ಅವಿನಾಭಾವ ಸಂಬಂಧ ಶತಶತಮಾನಗಳಿಂದಲೂ ಮೂಡಿಬಂದಿದೆ. ಪಾಶ್ಚಾತ್ಯ ಸಂಸ್ಕೃತಿ ಒಂದು ರೀತಿಯಲ್ಲಿ ಮನುಷ್ಯ ಕೇಂದ್ರಿತವೆನ್ನಬಹುದು. ಆದರೆ ಭಾರತೀಯ ಜೀವಜಗತ್ತಿನಲ್ಲಿ ಜಾನಪದ ಸಂಸ್ಕೃತಿ ಜೀವ ಕೇಂದ್ರವೆನ್ನಬಹುದಾಗಿದೆ. ಮಾನವನ ನಾಗರಿಕತೆ ವಿಜ್ಞಾನ ಬೆಳೆದು ಹೆಮ್ಮರವಾದಂತೆಲ್ಲ ಸಸ್ಯ ಸಂಕುಲ ಮನುಷ್ಯನಿಂದ ದಿನ ದಿನ ದೂರವಾಗಿಯೇ ಉಳಿಯತೊಡಗುತ್ತಿದೆ. ಇನ್ನೂ ಸಸ್ಯ, ಪ್ರಾಣಿ, ಪಕ್ಷಿ, ಕೀಟ, ಜಲಚರಗಳಿಗೂ ಕೂಡ ಜೀವವಿರುವುದು ಗೊತ್ತಿರುವ ವಿಚಾರವೆ. ಒಟ್ಟಾರೆಯಾಗಿ ಜನಪದರಿಗೆ ಮನುಷ್ಯರಂತೆ ಜೀವವಿರುವ ಎಲ್ಲಾ ಜೀವಿಗಳೂ ಕೂಡ ಮುಖ್ಯವಾಗಿದ್ದು ಸಂಬಂಧವನ್ನು ಇರಿಸಿಕೊಂಡು ಬಂದಿದ್ದಾರೆ. ಅಲ್ಲದೆ ಅವುಗಳು ಅವರಿಗೆ ಪ್ರಧಾನವೂ ಹೌದು. ಆದರೆ ನಾಗರಿಕತೆ ಬೆಳೆದ ಪಾಶ್ಚಾಮಾತ್ಯ ದೇಶಗಳಲ್ಲಿ ಮನುಷ್ಯ ಮಾತ್ರ ಮುಖ್ಯವಾಗಿದ್ದು ಉಳಿದ ಜೀವಿಗಳನ್ನು ಒಂದು ರೀತಿಯಲ್ಲಿ ಕಡೆಗಣಿಸುತ್ತಿರುವುದನ್ನು ಕಾಣಬಹುದಾಗಿದೆ. ಜಾನಪದ ಸಂಸ್ಕೃತಿಯಲ್ಲಿ ಸಕಲ ಜೀವಿಗಳಿಗೂ ಪ್ರಾಧ್ಯಾನತೆಯಿದೆ. ಆದುದರಿಂದ ಇದು ಈ ನಾಡಿನ ಈ ದೇಶದ ಸಂಸ್ಕೃತಿಯ ಬಹುದೊಡ್ಡ ಕೊಡುಗೆಯೆಂದು ಹೇಳಬಹುದು.

ಮನುಷ್ಯ ಒಂದಿಲ್ಲ ಒಂದು ರೀತಿಯಾಗಿ ಪ್ರಾಣಿಗಳ ಸಂಬಂಧವನ್ನು ಇರಿಸಿಕೊಂಡು ಬಂದಿರುವುದನ್ನು ಕಾಣಬಹುದು. ಅವನು ಸಂಘಜೀವಿ. ಆದುದರಿಂದ ಪ್ರಾಣಿಗಳ ಚಹರೆಯತ್ತ ಗಮನಹರಿಸಿ ಮುಂದೆ ಸಾಗುವುದು ಸೂಕ್ತ.

ಮನುಷ್ಯ ತನ್ನೊಂದಿಗೆ ಜೀವಿಸುವ ಪ್ರಾಣಿಗಳ ಕುರಿತು ತನಗೆ ಗೊತ್ತಿಲ್ಲದಂತೆ ಬಿಟ್ಟುಹೋಗಿರುವುದನ್ನು ಈಗಾಗಲೇ ಗುರುತಿಸಿ ಅಧ್ಯಯನಕ್ಕೆ ಬಳಕೆ ಮಾಡಿಕೊಂಡಿರುತ್ತಾರೆ. ಇತಿಹಾಸ ಪೂರ್ವದ ಜನವರ್ಗಗಳು ಇದಕ್ಕೆ ಉದಾಹರಣೆ. ಪ್ರಾಚೀನ ಕಾಲದಲ್ಲಿ ಬುಡಕಟ್ಟು ಜನರು ಕಾಡಿನಲ್ಲಿ ವಾಸಿಸುತ್ತಿದ್ದಾಗ ಅನೇಕ ಪೊಟರೆಯಲ್ಲಿ ಇದ್ದಂತ ಕಲ್ಲು ಹಾಗೂ ಗುಹೆಗಳು ಇದ್ದ ಸ್ಪಷ್ಟವಾದ ನಿದರ್ಶನಗಳಿವೆ. ತಾನು ಬೇಟೆಯಾಡುತ್ತಿದ್ದ ಪ್ರಾಣಿಯನ್ನು ಆಗಲೇ ಬೇಟೆಯಾಡಿದ ಚಿತ್ರಗಳು ಜೀವಂತವಾಗಿವೆ. ಆ ಚಿತ್ರಗಳು

ಹೊರ ಚೆಲ್ಲಿರುವ ಎಲ್ಲ ಪ್ರಾಣಿಗಳು ಜೀವಂತವಾಗಿದ್ದೋ ಅಥವಾ ಇಲ್ಲವೆಂಬುದನ್ನು ಹೇಳಲಿಕ್ಕೆ ಕಷ್ಟಸಾಧ್ಯ. ಆ ಹೊತ್ತಿನ ಪ್ರಾಚೀನ ಕಾಲದಲ್ಲಿಯೂ ಕೂಡ ಸುತ್ತಮುತ್ತ ಜೀವಿಸುತ್ತಿದ್ದ ಜೀವಿಗಳ ಬಗ್ಗೆ ಆಸಕ್ತಿ ಇದ್ದುದರ ಬಗ್ಗೆ ಕುರುಹುಗಳು ಇವೆ. ಆದರೆ ಪ್ರಾಣಿಗಳ ಬಗ್ಗೆ ಪ್ರಾಚೀನರಿಗೆ ಸಾಕಷ್ಟು ಜ್ಞಾನವಿಲ್ಲದಿರಲಿಲ್ಲವೇನೋ. ತನ್ನ ದಿನ ನಿತ್ಯದ ಬದುಕಿನ ದಿವಸಗಳನ್ನು ಕಳೆಯಲು ಆತ ಸ್ವಾಭಾವಿಕವಾಗಿಯೇ ಬೇರೆ ಬೇರೆ ರೀತಿಯ ಪ್ರಾಣಿಗಳತ್ತ ತನ್ನ ಗಮನ ಹರಿಸಲಾಗಿತ್ತು. ಕ್ರಮೇಣ ನಾಗರಿಕತೆಯ ಹಂತದಲ್ಲಿ ಪಶು ಸಂಗೋಪನೆಯ ಹಂತದಲ್ಲಿ ಪ್ರಾಣಿಗಳ ಕಡೆಗೆ ಹೆಚ್ಚಿನ ಗಮನ ಹರಿಸಲಾಗಿರುವುದು ಸ್ಪಷ್ಟ.

ಹರಪ್ಪ ಮತ್ತು ಮೆಹೆಂಜೊದಾರಗಳಲ್ಲಿ ದೊರೆತಿರುವ ಅವಶೇಷಗಳಲ್ಲಿ ಅನೇಕ ಮುದ್ರೆಗಳಲ್ಲಿ ಪ್ರಾಣಿಗಳು ಕಂಡಿವೆ. ಮೊಹೆಂಜೊದಾರೊ ಮುದ್ರೆಗಳ ಪೈಕಿ (ಅ) ಕುದುರೆ ಮೈ ಹಾಗೂ ಒಂದೇ ಕೊಂಬಿರುವ ಪ್ರಾಣಿ ಆ ಕೊಂಬು, ಗೊರಸು ಮತ್ತು ಬಾಲವಿರುವ ಮನುಷ್ಯ ದೇಹದ ಪ್ರಾಣಿ(ಇ) ಟಗರು, ಎತ್ತು, ಮನುಷ್ಯ, ಆನೆ ಹಾಗೂ ಹುಲಿಗಳು ಮಿಶ್ರವಾಗಿರುವ ಪ್ರಾಣಿ. ಈ ಮೂರು ತಲೆಗಳುಳ್ಳ ಪ್ರಾಣಿ. ಇನ್ನೂ ಅನೇಕವು ಕಾಣಬಹುದಾಗಿದೆ. ಇವುಗಳೆಲ್ಲ ಮೊಹೆಂಜೊದಾರೊ ನಾಗರಿಕತೆಯ ಕಾಲದಲ್ಲಿ ಬದುಕಿದ್ದವು. ಅಲ್ಲದೆ ಅಂದು ವಾಸಿಸುತ್ತಿದ್ದ ಜನಪದರಿಗೆ ಅವುಗಳ ಪರಿಚಯವಿದ್ದಿತು. ಅಥವಾ ಕಡಾಕಂಡಿತವಾಗಿ ಹೇಳಲು ಬರದೆ ಇರಲೂಬಹುದು.

ಪ್ರಾಣಿಗಳ ಕುರಿತು ಅನೇಕ ಹಸ್ತಪ್ರತಿ, ಗ್ರಂಥ ಮತ್ತು ಶಾಸ್ತ್ರಗಳು, ವೇದ, ಪುರಾಣ, ಚರಿತ್ರೆಯಲ್ಲಿ ವಿವರಣೆ ಕೊಡಲಾಗಿದೆ.

ವೈದಿಕ ಸಾಹಿತ್ಯದ ಬೇರೆ ಬೇರೆ ಭಾಗಗಳಲ್ಲಿ ೨೬೦ಕ್ಕೂ ಹೆಚ್ಚು ಪ್ರಾಣಿಗಳನ್ನು ಉಲ್ಲೇಖಿಸಲಾಗಿದೆ. ಅವುಗಳೆಂದರೆ ಸಸ್ತನವರ್ಗದ ಪ್ರಾಣಿಗಳು ಮತ್ತು ಪಕ್ಷಿಗಳು ಇದ್ದು ಉರಗವರ್ಗದ ಪ್ರಾಣಿಗಳು ಹಾಗೂ ಕೀಟಗಳು ಕಡಿಮೆ ಪ್ರಮಾಣದಲ್ಲಿವೆ. ಅಶ್ವಮೇಧ ಯಾಗದಲ್ಲಿ ಕುದುರೆಯೊಡನೆ ವಧೆಗೆ ಗುರಿಯಾಗುವ ಅನೇಕ ಪ್ರಾಣಿಗಳ ಹೆಸರುಗಳು ಯಜುರ್ವೇದದಲ್ಲಿ ಇದೆ. ಅಲ್ಲದೆ ಉರಗವರ್ಗದ ಪ್ರಾಣಿಗಳು ಹಾಗೂ ಕ್ರಿಮಿಗಳ ಹೆಸರುಗಳು ಅಥರ್ವವೇದದಲ್ಲಿ ಅಡಕವಾಗಿದೆ. ಅನಂತರ ಪಶುಗಳಿಗೆ ಮತ್ತು ಮನುಷ್ಯರಿಗೆ ರೋಗ ತರುವುದೆನ್ನಲಾದ ಇವು ತಲೆ, ಪಕ್ಕೆಲುಬುಗಳು, ಕಣ್ಣು, ಮೂಗು ಮತ್ತು ಹಲ್ಲುಗಳಿಗೆ ನುಗ್ಗಿ ನೋವುಂಟು ಮಾಡುವುದನ್ನು ಉಲ್ಲೇಖಿಸಲಾಗಿದೆ.

ರಾಮಾಯಣ ಮಹಾಭಾರತಗಳಲ್ಲಿ ಪ್ರಾಣಿಗಳಲ್ಲದೆ ಹಲವು ಜೀವಿಗಳ ಬಗ್ಗೆ ಪ್ರಸ್ತಾಪವಿದೆ. ಜನಮೇಜಯನು ಸರ್ಪಯಜ್ಞ ಮಾಡಹೊರಟ ಸಂದರ್ಭವನ್ನು ಚಿತ್ರಿಸುವಾಗ ಮಹಾಭಾರತವು ೧೭೦

ಭಿನ್ನ ಹಾವುಗಳ ಪ್ರಸ್ತಾಪವಿದೆ. ಇವುಗಳನ್ನು ಒಳಗೊಂಡಂತೆ ಆರ್.ವೇದಿ ಅವರು ಭಾರತೀಯ ಸಾಹಿತ್ಯದಲ್ಲಿ ಒಟ್ಟಾರೆಯಾಗಿ ೧೪೮ ವಿಧವಾದ ಹಾವುಗಳನ್ನು ಉಲ್ಲೇಖಿಸಿದ್ದಾರೆ. ಮುಂದುವರೆದು ಪ್ರಾಣಿಗಳ ಬಗ್ಗೆ ವಿಂಗಡಣೆಯನ್ನು ಮಾಡಲಾಗಿದೆ. ಪ್ರಾಣಿಗಳ ಪೌಷ್ಟಿಕತೆ ಮತ್ತು ಅವುಗಳ ಶರೀರ ರಚನೆ ಕುರಿತು ಯಾವ ಯಾವ ಪ್ರಾಣಿಗಳು ತುಂಬ ಮುಖ್ಯವಾದವು ಎಂಬುದರ ಕುರಿತು ಚರಕ ಮತ್ತು ಸುಶ್ರುತ ಸಂಹಿತೆಯ ಗ್ರಂಥಗಳಲ್ಲಿ ಬರೆಯಲಾಗಿದೆ.

ಸುಶ್ರುತ ಸಂಹಿತೆಯ ವಿಂಗಡಣೆಯು ಇದಕ್ಕಿಂತಲೂ ಹೆಚ್ಚು ವಿಶಾಲವಾಗಿದೆ. ಆರಂಭದಲ್ಲಿ ಜೀವಿಗಳನ್ನು ತಿನ್ನಬಹುದಾದವು. ಇನ್ನೂ ಕೆಲವು ತಿನ್ನಬಾರದವು. ಹಿಗೆ ಎರಡು ರೀತಿಯಾಗಿ ಮಾಡಲಾಗಿದೆ. ಅಂದರೆ ಮನುಷ್ಯನನ್ನು ಕೇಂದ್ರವಾಗಿರಿಸಿಕೊಂಡು ಮಾಡಲಾಗಿರುವ ವಿಭಜನೆ. ಅಲ್ಲದೆ ತಿನ್ನಬಾರದ ಪ್ರಾಣಿಗಳನ್ನು ಸುಶ್ರುತ ಸಂಹಿತೆಯ ಜಂಗಮ ವಿಷಕಲ್ಪ ಮತ್ತು ಕೀಟ ಕಲ್ಪವೆಂದು ಎರಡು ಭಾಗಗಳಾಗಿ ಮಾಡಲಾಗಿದೆ. ಮೊದಲ ಭಾಗದಲ್ಲಿ ಉಡ, ಬೆಕ್ಕು ವಿಷಪೂರಿತ ಮೀನುಗಳು, ನಾಯಿ, ಕೋತಿ, ಹಾವು ಇತ್ಯಾದಿಗಳು ಸೇರಿವೆ.

ಋಗ್ವೇದದಲ್ಲಿ ಪ್ರಾಣಿಗಳನ್ನು 'ಗ್ರಾಮ್ಯ' ಮತ್ತು 'ಅರಣ್ಯ' ಎಂದು ಎರಡೇ ಭಾಗ ಮಾಡಲಾಗಿದೆ. ಇವನ್ನೇ ಅಥರ್ವವೇದದಲ್ಲಿ ಜಗತ್ ಮತ್ತು 'ಶ್ವಾಪದ' ಎಂದು ಕರೆಯಲಾಗಿತ್ತು. ಗ್ರಾಮ್ಯ ಪ್ರಾಣಿಗಳನ್ನು ಒಂದು ಗೊರಸಿನವು (ಏಕಶಫ) ಮತ್ತು ಎರಡು ಗೊರಸಿನವು(ದ್ವಿಶಫ) ಎಂದು ಋಗ್ವೇದವು ಪುನರ್ವಿಂಗಡನೆ ವಿವರಣೆ ಅಡಕಗೊಂಡಿರುತ್ತದೆ.

ಪ್ರಾಣಿಗಳ ಬಗ್ಗೆ ಮೀಸಲಾಗಿರುವ ಒಂದು ಸಂಸ್ಕೃತ ಗ್ರಂಥ ಹದಿಮೂರನೆಯ ಶತಮಾನದ ಹಂಸದೇವನ 'ಮೃತಪಕ್ಷಿಶಾಸ್ತ್ರ'. ಜಿನಪುರದಲ್ಲಿದ್ದ ಜೈನ ರಾಜಸೌದ ದೇವನ ಆಣತಿಯಂತೆ ಈ ಗ್ರಂಥ ರಚಿತವಾಗಿರುತ್ತದೆ. ಮೃತಗಳ ಬೇಟೆ ಮಾಡುವ ಬದಲು ಅವುಗಳ ಬಗ್ಗೆ ತಿಳುವಳಿಕೆ ಹೆಚ್ಚಿಸಿಕೊಳ್ಳುವ ಉದ್ದೇಶ ಅವನಿಗಿದ್ದಿತೆಂದು ಗ್ರಂಥಕರ್ತೃವು ತಿಳಿಸಿರುವನು. ಅವನ ಉದ್ದೇಶವು ಪೂರೈಸದೆ ಉಳಿದಿರುವ ಸಂಭವವೇ ಹೆಚ್ಚು. ಪ್ರಸ್ತುತ ಗ್ರಂಥವು ಮೃತ-ಪಕ್ಷಿಗಳ ಬಗ್ಗೆ ನೀಡುವ ಮಾಹಿತಿಯ ಅತ್ಯಲ್ಪ ಮತ್ತು ಅಪಕೃತ.

ಒಟ್ಟಿನಲ್ಲಿ ಜನಪದರು ಪ್ರಾಣೀಗಳೊಂದಿಗೆ ಒಡನಾಟವನ್ನು ಇರಿಸಿಕೊಂಡು ಬಂದಿರುವುದು ಈ ಮೇಲಿನ ವಿವರಣೆಯಿಂದ ತಿಳಿದುಕೊಳ್ಳಬಹುದು. ಜನಪದರು ಪ್ರಾಣಿಗಳನ್ನು ಮನುಷ್ಯರಿಗಿಂತ ಹೆಚ್ಚಾಗಿ ಪ್ರೀತಿಸುವರು. ಇಂದಿಗೂ ಗ್ರಾಮಗಳಲ್ಲಿ ನೆಲೆಸಿರುವಂತ ನಿವಾಸಿಗಳು ಅವರ ಮನೆಗಳಲ್ಲಿ ದನಕರುಗಳು ಸತ್ತರೆ ಮನುಷ್ಯ ಸತ್ತಾಗ ಪಡುವ ದುಃಖವನ್ನೇ ಪಡುವರು. ಹೀಗಾಗಿ ಜನಪದರು ಪ್ರಾಣಿಗಳೊಂದಿಗಿರಿಸಿ

ಕೊಂಡಿರುವ ಸಂಬಂಧ ತುಂಬ ಜೀವಪರವಾಗಿರುತ್ತದೆ. ಅಲ್ಲದೆ ಅನೇಕ ಪ್ರಾಣಿಗಳನ್ನು ಇವೊತ್ತು ಕೂಡ ದೇವತೆಗಳ ರೂಪದಲ್ಲಿ ಕಾಣುತ್ತಾರೆ. 'ತೆಂಗಿನ' ಮರವನ್ನು ಕಲ್ಪವೃಕ್ಷವೆಂದು ಕರೆದರೆ, ಗೋವನ್ನು ಕಾಮಧೇನು, ಲಕ್ಷ್ಮಿ ಎಂದು ಆರಾಧಿಸುವುದು ಜೀವಂತವಾಗಿದೆ. ಎತ್ತುಗಳನ್ನು ನಂದಿಯ ಅವತಾರವೆಂದು ನಂಬಿ ಆಚರಿಸಿಕೊಂಡು ಬಂದಿರುವರು. ಇನ್ನೂ ಹುಲಿ-ಕುದುರೆ ಗ್ರಾಮದೇವತೆಗಳ ವಾಹನಗಳಾಗಿವೆ. ಇಂದಿಗೂ ಕೂಡ 'ಗೂಳಿ'ಯನ್ನು ದೇವರಿಗೆ ಬಿಟ್ಟು ಪೂಜಿಸುವ ಪರಿಪಾಠ ಹಳ್ಳಿಗಳಲ್ಲಿ ನಡೆಯುತ್ತಿದೆ. ನಾಗರಹಾವನ್ನು ಪೂಜಿಸಲು ನಾಗರಪಂಚಮಿ ಹಬ್ಬವೇ ಇದೆ. ನಾಯಿ-ಮಲ್ಲಯ್ಯನಾಗಿ, ಮಂಗ-ಹನುಮಂತನಾಗಿ, ಹಂದಿ-ವರಹವಾಗಿ, ಜನಪದರಲ್ಲಿ ಸ್ವೀಕರಿಸಲ್ಪಟ್ಟಿದೆ. ನವನಾಗರಿಕತೆಯ ಪರಿಣಾಮವಾಗಿ ತಿರಸ್ಕರಿಸಲ್ಪಟ್ಟ ಪ್ರಾಣಿಗಳು ಜನಪದರಿಗೆ ಪೂಜ್ಯವಾಗಿ ಕಾಣಿಸುತ್ತಿವೆ. ಧರ್ಮ ದೇವರುಗಳ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿಯೂ ಜನಪದರಲ್ಲಿದೆ.

ನಾಯಿ ನಂಬಿಕೆಗೆ ಯೋಗ್ಯವಾದುದು ನಿಜ. ಸಾಕಿದವರು ಯಾರಾದರೂ ಆಗಲಿ ಆದರೆ ನಾಯಿ ಅವರನ್ನು ನಂಬುತ್ತದೆ. ತನ್ನನ್ನು ಸಾಕಿದ ಧಣಿಗೆ ನಾಯಿ ಕಾವಲುಗಾರನಾಗಿರುತ್ತದೆ. ಧಣಿ ಹಾಕಿದ ತುತ್ತನ್ನು ತಿಂದು ಬಾಲ ಮುದುಡಿ ಹಿಂದೆ ಹಿಂದೆ ಅಲೆಯುತ್ತದೆ. ಅದ್ದರಿಂದ ಬಂಡಾಯ ಕವಿಗೆ ಈ ನಾಯಿ ಬಂಡವಾಳಶಾಯಿಯ ಕಾವಲುಗಾರನಾಗಿ ಕಾಣುತ್ತದೆ. ಇಂತಹ ಬಂಡವಾಳಶಾಹಿ ವ್ಯವಸ್ಥೆಯನ್ನು ಅಸಮಾನತೆಯ ವ್ಯವಸ್ಥೆಯನ್ನು ಯಥವತ್ತಾಗಿ ಮುಂದುವರೆಸಿಕೊಂಡು ಹೋಗುವುದೇ ಇಂದಿನ ಜನಸಾಮಾನ್ಯರಿಗೆ ರೂಢಿಯಾಗಿದೆ.

ಸರ್ವಾಧಿಕಾರದ ಸಮಾಜವಾದದ ನಡುವೆ ಅಂತರವ ರಿಯದ ಮುಗ್ಧಜನ ಯಂತ್ರಗಳಂತೆ ಇಲ್ಲಿ ಬದುಕುತ್ತಿದ್ದಾರೆ. ಅಮಾಯಕರ ಈ ಮುಗ್ಧತೆಯನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವ ಅಧಿಕಾರಶಾಯಿ ಪರಂಪರೆ ಇಲ್ಲಿ ಶೋಷಣೆಯನ್ನು ಮುಂದುವರೆಸಿದೆ. ಆದ್ದರಿಂದ ಈ ನಾಯಿ ಎಚ್ಚೆತ್ತುಕೊಳ್ಳುವುದು ಮುಖ್ಯವಾದ ಅಂಶ. ಅದು ಸರಿತಪ್ಪುಗಳನ್ನು ಅರಿಯುವಂತಾಗಬೇಕು. ಈ ಒಳತಿರುಳೇ ಕವಿಯ ಮುಖ್ಯವಾದ ಆಶಯವಾಗಿದೆ. ಹೀಗಾಗಿ ನಾಯಿ ಪ್ರತಿಮೆಯ ಮುಖೇನ ವಾಸ್ತವ ನಿಜ ಅಂಶವನ್ನು ಕವಿ ಕಟ್ಟಿಕೊಟ್ಟಿರುವುದನ್ನು ಮನನ ಮಾಡಿಕೊಳ್ಳಬಹುದಾಗಿದೆ.

"ಕಲ್ಪವೃಕ್ಷ ಹೂಬಿಟ್ಟು
ಫಲ ನೀಡುವ ಮುನ್ನ
ನಾಯಕರಾಗಿ ಬಂದ ನರಿಗಳು
ಇಂದೂ ಅದರ ಮೂಲಕವೇ
ಕೊಡಲಿ ಇಕ್ಕುತ್ತಿದ್ದಾರೆ"

ಸ್ವಾಭಿಮಾನದ ಬೀಡಿಗೆ ಪುಟ ೩೪ ಮುನಿವೆಂಕಟಪ್ಪ) ಮುಗ್ಧ ಜನಪದರನ್ನು ಖಾನಾಪುರ ನಾಯಿಗೆ ಹೋಲಿಸಿರುವರು. ರಾಜಕೀಯ ನಾಯಕರನ್ನು ಮುನಿವೆಂಕಟಪ್ಪ ನರಿಗೆ ಹೋಲಿಸಿರುತ್ತಾರೆ.

ನರಿಯ ಕಪಟತನ, ಸ್ವಾರ್ಥ, ಇವೆಲ್ಲವೂ ರಾಜಕೀಯರಲ್ಲಿ ಅಡಗಿಕೊಂಡಿರುತ್ತವೆ. ಈ ಕಟುಸತ್ಯವನ್ನು ಕವಿ ಬಹಳ ಸೂಕ್ಷ್ಮವಾಗಿ ಅಭಿವ್ಯಕ್ತಪಡಿಸಿರುತ್ತಾರೆ. ಜನಪದರೂ ಕೂಡ ತಮ್ಮ ಹಾಡು ಕವಿತೆಗಳಲ್ಲಿ ನರಿಯನ್ನು ಕಪಟತನದ ಪ್ರತೀಕವಾಗಿ ಬಿಂಬಿಸಿರುತ್ತಾರೆ. ಒಟ್ಟಾರೆಯಾಗಿ ಪ್ರಾಣಿಗಳೂ ಮನುಷ್ಯರೊಂದಿಗೆ ಅವಿನಾಭಾವ ಸಂಬಂಧವನ್ನು ಇರಿಸಿಕೊಂಡು ಬಂದಿರುವ ಹಿನ್ನಲೆಯ ಪೂರಕವಾದ ಅಂಶಗಳು ಹೇಗೆ ವ್ಯಕ್ತವಾಗುತ್ತವೆ ಎಂಬುದಕ್ಕೆ ಉದಾಹರಣೆಯಾಗಿದೆ.

ಹಸು, ಎಮ್ಮೆ, ಕುರಿಗಳಿಗೆ ಭೇದಿಗೆ ಚಿಕಿತ್ಸೆ

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನ ಹಳ್ಳಿ ತಾಲೋಕಿನಲ್ಲಿರುವ ಏಣಿಗಿಗೆಯಲ್ಲಿ ಪ್ರಾಣಿ ವೈದ್ಯದ ಬಗ್ಗೆ ಕುರುವುಗಳನ್ನು ಸಂಗ್ರಹಿಸಲು ಹೋದಾಗ ಸುಮಾರು ಎಪ್ಪತ್ತೈದು ವರುಷದ ಅಕಾರಿ ಕಾಳಪ್ಪನವರನ್ನು ಭೇಟಿ ಮಾಡಿ ಅವರೊಂದಿಗೆ ಚರ್ಚೆಗೆ ಕುಳಿತೆ. ಇವರು ಸುಮಾರು ೬೫ ವರುಷಗಳಿಂದಲೂ ಹಳ್ಳಿಯ ಸುತ್ತಮುತ್ತಲ ಪ್ರದೇಶಗಳಿಗೆ ಚಿರಪರಿಚಿತ. ಅಲ್ಲಿ ಪಶುವೈದ್ಯದ ಆಸ್ಪತ್ರೆಗಳೂ ಇಲ್ಲ. ಇವರೇ ಪಶು ನಾಟಿ ವೈದ್ಯರಾಗಿರುವರು. ಈ ವಿದ್ಯೆ ತಮ್ಮ ಪೂರ್ವಜರಿಂದ ಕಲಿತ ಜ್ಞಾನದ ಫಲ. ಇವರು ಎಮ್ಮೆ, ದನ, ಮೇಕೆಗಳಿಗೆ ಪ್ರಾದೇಶಿಕವಾಗಿ ದೊರೆಯುವಂತ ಗಿಡಮೂಲಿಕೆಗಳಿಂದ ತಾವೇ ತಯಾರಿಸಿ ಔಷಧಿಯನ್ನು ನೀಡುವರು. ಇವರು ಪ್ರಧಾನವಾಗಿ ದನ ಕರುಗಳಿಗೆ ಹೊಟ್ಟೆ ಉಬ್ಬರವಾದಾಗ, ಇಲ್ಲಾ ಅದಕ್ಕೆ ಭೇಧಿಯಾದಾಗ ಅಲ್ಲದೆ ಅವುಗಳ ಕಾಲು, ಕೊಂಬುಗಳಿಗೆ ಗಾಯವಾದಾಗ ಔಷಧಿಯನ್ನು ಇಂದಿಗೂ ನೀಡುವರು.

ಅ ಕಾರಿ ಕಾಳಪ್ಪ ಅವರು ಅಮೃತ ಬಳ್ಳಿಯನ್ನು ಕಿತ್ತು ತಂದು ಸ್ವಚ್ಛತೆ ಮಾಡುವರು. ಅನಂತರ ಆ ಬಳ್ಳಿಯನ್ನು ಚೆನ್ನಾಗಿ ಗೆಜ್ಜಿ ಅದರ ರಸವನ್ನು ತೆಗೆದು ಅದಕ್ಕೆ ಅರಿಸಿನ ಪುಡಿಯನ್ನು ಹಾಕಿ ಬೇದಿಯಿಂದ ನರಳುವ ಧನ, ಹಸು ಇಲ್ಲಾ ಕರುವಿಗೆ ಕುಡಿಸುವರು. ಈ ರೀತಿ ಮೂರು ನಾಲ್ಕು ದಿವಸ ಮಾಡುವುದರಿಂದ ಆ ಪ್ರಾಣಿಗಳು ಗುಣಮುಖ ಹೊಂದುತ್ತವೆ. ಅಲ್ಲದೆ ಪ್ರತ್ಯಕ್ಷವಾಗಿ ನನ್ನ ಎದುರಿಗೆ ಆ ರೀತಿ ಮಾಡಿದುದನ್ನು ಕಂಡಿರುತ್ತೇವೆ. ಈಗಲೂ ಕೂಡ ಈ ವೃತ್ತಿಯನ್ನು ನಿರ್ವಹಿಸುತ್ತಿದ್ದಾರೆ.

ಕಪ್ಪು ನಾಲಿಗೆ ಹರಿಯುವುದು

ದನ, ಎಮ್ಮೆ, ಕುರಿ, ಆಡುಗಳಲ್ಲಿ ನಾಲಿಗೆಯ ಕೆಲಭಾಗದಲ್ಲಿ ಹಸಿರು ಅಥವಾ ಕಪ್ಪು ನರ ಕಾಣಿಸಿಕೊಳ್ಳುವುದು. ಆ ಸಂದರ್ಭದಲ್ಲಿ ನೋವು ಹಾಗೂ ಉದಿಕೊಳ್ಳುವುದರಿಂದ ಪ್ರಾಣಿಗಳಲ್ಲಿ ಬಿಳಿ

ಜೊಲ್ಲು ಸೋರುತ್ತಿರುತ್ತದೆ. ಆದುದರಿಂದ ಪ್ರಾಣಿಗಳು ಹುಲ್ಲು, ಹಿಂಡಿ, ಕಲಗಚ್ಚು ಇನ್ನಿತರ ಆಹಾರವನ್ನು ತಿನ್ನುವುದಿಲ್ಲ. ಇಂತಹ ಸಮಯವನ್ನು ಅರಿತ ನಾಟಿ ವೈದ್ಯ ಸೂಜಿಯನ್ನು ತೆಗೆದುಕೊಂಡು ಅಂತಹ ನಾಲಿಗೆಯ ಕೆಳಗಿನ ನರವನ್ನು ಕೀಳುತ್ತಾನೆ. ಈ ರೋಗವನ್ನು ಶಮನಗೊಳಿಸಲು ಪ್ರಾಣಿಗಳಿಗೆ ಅರಿಸಿನ, ಉಪ್ಪು ಹಾಗು ಹುಣಸೆ ಹಣ್ಣನ್ನು ಗೆಜ್ಜಿ ಅಥವಾ ಮಿಶ್ರಣ ಮಾಡಿ ಅನಂತರ ಪ್ರಾಣಿಗಳ ನಾಲಿಗೆಗೆ ತಿಕ್ಕುತ್ತಾನೆ. ಹೀಗೆ ತಿಕ್ಕಿದ ಮೇಲೆ ನೋವು ಹಾಗೂ ರಕ್ತಸೊರುವಿಕೆ ಕಡಿಮೆಯಾಗುತ್ತದೆ. ಅನಂತರ ಕರಿಕಂಬಳಿ ಒಂದು ತುಂಡನ್ನು ಸುಟ್ಟು ಅದರ ಪುಡಿಯನ್ನು ನಾಲಿಗೆಗೆ ತಿಕ್ಕಿದಾಗ ಅವುಗಳ ರಕ್ತ ಶ್ರಾವ, ಊದು ಮತ್ತು ನೋವು ಕಡಿಮೆಯಾಗುತ್ತಾ ಹೋಗುತ್ತದೆ. ಹೀಗೆ ಒಂದೆರೆಡು ಮೂರು ದಿವಸಗಳು ಬೆಳಿಗ್ಗೆ ಮತ್ತು ಸಾಯಂಕಾಲ ಮಾಡಿದರೆ ಈ ರೋಗದಿಂದ ಪ್ರಾಣಿಗಳು ಗುಣಮುಖ ಹೊಂದುತ್ತದೆ.

ಈ ರೋಗಕ್ಕೆ ಯಾವಾಗಬೇಕೋ ಆಗ ವೈದ್ಯನು ಔಷಧಿ ಕೊಡುವುದಿಲ್ಲ. ವಾರದ ದಿನಗಳಾದ ಗುರುವಾರ ಹಾಗೂ ಭಾನುವಾರ ಅಂದರೆ ಎರಡು ದಿನಗಳಲ್ಲಿ ಮಾತ್ರ ಈ ಔಷಧಿಯನ್ನು ಕೊಡುತ್ತಾನೆ. ಉಳಿದ ದಿನಗಳಲ್ಲಿ ಕೊಡುವುದಿಲ್ಲ. ಈ ರೀತಿಯಾದ ಪದ್ಧತಿಯನ್ನು ಆತ ಸುಮಾರು ೬೫ ವರ್ಷಗಳಿಂದಲೂ ಸಂಪ್ರದಾಯದಂತೆ ಸ್ವೀಕರಿಸಿ ಆಚರಿಸಿಕೊಂಡು ಬರುತ್ತಿರುವುದನ್ನು ಇಂದಿಗೂ ಏಣಗಿಯಲ್ಲಿ ವೈದ್ಯ ಪದ್ಧತಿಯನ್ನು ರೂಢಿಸಿಕೊಂಡು ಬಂದಿರುವ ಮಲ್ಲಪ್ಪ ಅವರನ್ನು ಮರೆಯುವಂತಿಲ್ಲ. ಈ ವಿದ್ಯೆಯನ್ನು ಮಲ್ಲಪ್ಪ ಅವರ ಮಕ್ಕಳಿಗೂ ಹೇಳಿ ಕೊಟ್ಟಿಲ್ಲವಂತೆ. ಹಾಗಾದರೆ ನಿಮಗೆ ಹೇಳಿಕೊಟ್ಟವರು ಯಾರು ಎಂದು ಪ್ರಶ್ನೆ ಮಾಡಿದಾಗ ನಾನು ನನ್ನ ತಂದೆಯವರನ್ನು ನೋಡಿ ಕಲಿತೆ ಅನ್ನುತ್ತಾರೆ. ಬೇರೆಯವರಿಗೆ ಹಾಗೂ ಈಗ ನಿಮಗೆ ಹೇಳಿದೆ. ಇನ್ನು ಮುಂದೆ ದೇವರೇ ಕಾಪಾಡಬೇಕು. ಹೇಳಿಕೊಟ್ಟರೆ ವಿದ್ಯೆ ಮರೆತು ಹೋಗುತ್ತದೆ ಎನ್ನುವ ನಂಬಿಕೆ ಅವರಲ್ಲಿದೆ.

ಮಲ್ಲಪ್ಪ ಅವರಿಗೆ ಸುಮಾರು ೭೮ ವರ್ಷ. ಇವರ ಊರು ಹಗರಿಬೊಮ್ಮನ ಹಳ್ಳಿ ಹತ್ತಿರ ಹಗರಿ. ಇಂದಿಗೂ ಇವರು ಈ ವೃತ್ತಿಯಲ್ಲಿ ಮುಂದುವರೆಯುತ್ತಿದ್ದಾರೆ. ಈ ಚಿಕಿತ್ಸೆ ಮಾಡಿದಾಗ ಹಣ ಕೇಳಿ ಪಡೆಯುವುದಿಲ್ಲ. ತಮ್ಮ ಕುರಿ, ಎಮ್ಮೆ, ದನ ಕರುಗಳ ವಾರಸುದಾರರೇ ಪ್ರೀತಿಯಿಂದ ಕೊಟ್ಟ ಹಣವನ್ನು ಪಡೆಯುವರು. ಎಷ್ಟಾದರೂ ಸರಿ. ಮಲ್ಲಪ್ಪ ಅವರು ಈ ವೃತ್ತಿಯೊಂದಿಗೆ ತಮ್ಮ ಮನೆಯ ಕೆಲಸದಲ್ಲಿ ನಿರತರಾಗುವರು.

ಹುಚ್ಚು ಹಿಡಿದವರಿಗೆ ಚಿಕಿತ್ಸೆ

ಈ ರೋಗ ಮನುಷ್ಯನಿಗೆ ಬಂದರೆ ಅವನ ಬದುಕೇ ನಾಶವಾದಂತೆ. ಇಂತಹ ಕಾಯಿಲೆಗೂ ಇಂದಿಗೂ ಹಳ್ಳಿಗಳಲ್ಲಿ ಔಷಧಿ ಕೊಡುವ ನಾಟಿವೈದ್ಯರಿದ್ದಾರೆ. ಅಂದರೆ ಪಟ್ಟಣದಲ್ಲಿ ನೆಲೆನಿಂತವರಿಗೆ

ಆಶ್ಚರ್ಯ ಹಾಗೂ ತಮಾಷೆ ಅಂತ ಅಂದುಕೊಳ್ಳಬಹುದು. ಆದರೆ ಪಟ್ಟಣದವರೂ ಕೂಡ ಹಳ್ಳಿಗೆ ಬಂದು ನಾಟಿ ಔಷಧಿಯನ್ನು ಪಡೆಯುವವರಿದ್ದಾರೆ ಎಂಬ ಸತ್ಯವನ್ನು ಮರೆಯುವಂತಿಲ್ಲ. ನಾನು ಕ್ಷೇತ್ರಕಾರ್ಯದಲ್ಲಿ ಈ ಬಗ್ಗೆ ಅಲೆಯುತ್ತಾ ಹೋದಾಗ ನಂಬದಾದೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಎರಡು ಮೂರು ತಾಲೋಕುಗಳಲ್ಲಿ ಹುಚ್ಚು ಹಿಡಿದವರಿಗೆ ಚಿಕಿತ್ಸೆಯನ್ನು ಕೊಡುತ್ತಿದ್ದ ನಾಟಿ ವೈದ್ಯರನ್ನು ಸಂಪರ್ಕಿಸಿ ವಿಚಾರ ವಿನಿಮಯ ಮಾಡಿ ಒಬ್ಬ ವೈದ್ಯನ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ. ಅಷ್ಟೇ ಈ ನಾಟಿವೈದ್ಯ ಯಾವುದೇ ವೈಜ್ಞಾನಿಕ ಉಪಕರಣ, ಔಷಧಿ ಅಥವಾ ನಾಗರೀಕತೆಗೆ ಪೂರಕವಾಗಿರುವ ಸಾಮಗ್ರಿಗಳನ್ನು ಬಳಸದೆ ಈ ಕಾಯಿಲೆ ಬಂದ ರೋಗಿಗೆ ಔಷಧಿ ಕೊಡುವುದು ಇಂದಿಗೂ ರೂಢಿಯಲ್ಲಿದೆ.

ತಿಮ್ಮಪ್ಪ ಅವರಿಗೆ ಸುಮಾರು ೬೫ ವರ್ಷ. ತಂದೆ ಲಿಂಗಪ್ಪ. ಹೊಸಪೇಟೆ ತಾಲೋಕಿನಲ್ಲಿರುವ ಮುದ್ದಾಪುರ ಈತನ ಊರು. ಜಿಲ್ಲೆ ಬಳ್ಳಾರಿ. ಇವರ ಕುಟುಂಬದವರು ಮೂರು ತಲೆ ಮಾರಿನಿಂದಲೂ ನಾಟಿ ವೈದ್ಯ ಪದ್ಧತಿಯನ್ನು ಆಚರಿಸಿಕೊಂಡು ಈ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿರುವರು. ಎಲ್ಲಾ ಸಮಯ, ಸಂದರ್ಭ ದಿನಗಳಲ್ಲಿ ಔಷಧಿಯನ್ನು ನೀಡುವುದಿಲ್ಲ. ಇವರ ಊರಿನ ಮಾರೆಮ್ಮನ ದೇವಿಯನ್ನು ಪೂಜಿಸುವರು. ಗುರುವಾರ ಮತ್ತು ಭಾನುವಾರ ಮಾತ್ರ ಈ ಚಿಕಿತ್ಸೆ ನೀಡುವ ಪರಿಪಾಠವನ್ನಿಟ್ಟುಕೊಂಡಿದ್ದಾರೆ. ಕುಪ್ಪೆ ತಪ್ಪಲು, ಮೆಣಸು, ಬೆಳ್ಳುಳ್ಳಿ ಮತ್ತು ವಿಷದ ಹಿರೇಕಾಯಿಯನ್ನು ಒಟ್ಟಿಗೆ ಜಜ್ಜಿ ಇಲ್ಲಾ ಅರೆದು ರಸ ಮಾಡುವರು. ಅನಂತರ ಹುಚ್ಚು ಹಿಡಿದ ವ್ಯಕ್ತಿಯನ್ನು ಅಂಗಾತ ಮಲಗಿಸುವರು. ಆಮೇಲೆ ಆ ವ್ಯಕ್ತಿಯ ಎರಡು ಹೊಳ್ಳೆಗಳಿಗೆ ಒಂದು ಲಾಲಿಕೆಯನ್ನಿಟ್ಟು ದೇವಿಗುಡಿಯ ಅಂಗಳದಲ್ಲಿ ಅಂಗಾತ ಮಲಗಿಸಿ ಹಾಕುವರು. ಹೀಗೆ ಎರಡು ಮೂರು ತಿಂಗಳವರೆಗೆ ವಾರದಲ್ಲಿ ಎರಡು ದಿವಸ ಚಿಕಿತ್ಸೆ ಕೊಡುವರು. ಹೀಗೆ ಮಾಡಿದಾಗ ಮೂಗಿನ ಹೊಳ್ಳೆಗಳಿಂದ ರಕ್ತಸ್ರಾವ ಉಂಟಾಗುತ್ತದೆ. ಹೀಗೆ ಆದಾಗ ಮಾತ್ರ ರೋಗಿ ಗುಣಮುಖವಾಗುತ್ತಾನೆ/ಳೆ. ತಿಮ್ಮಪ್ಪ ಇಂದಿಗೂ ಹಳ್ಳಿ ಪಟ್ಟಣದವರಿಗೆ ಚಿರಪರಿಚಿತ.

ಒಂದು ವರ್ಷಕ್ಕಿಂತ ಕಡಿಮೆ ಉಳ್ಳವರಿಗೆ ಎರಡರಿಂದ ಮೂರು ವಾರದಲ್ಲಿ ಈ ಚಿಕಿತ್ಸೆ ನೀಡಿ ವಾಸಿ ಮಾಡುವರು. ಅಲ್ಲದೆ ೫ ರಿಂದ ೬ ವರುಷದವರಿಗೆ ಹೆಚ್ಚು ವಾರಗಳೂ ಬೇಕಾಗುತ್ತವೆ ಅನ್ನುವರು ತಿಮ್ಮಪ್ಪ. ಇನ್ನು ವಯಸ್ಕ, ಪುರುಷ, ಸ್ತ್ರೀಯರಿಗೆ ಐದು, ಏಳು, ಎಂಟು ತಿಂಗಳಲ್ಲಿ ಈ ಕಾಯಿಲೆ ಗುಣಮುಖವಾಗುತ್ತದೆ ಎಂದು ಹೇಳುತ್ತಾರೆ. ಆದರೆ ಇವತ್ತಿಗೂ ಈ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಹಾಲು ಕುಡಿಯದ ಹಸು ಕೂಸುಗಳಿಗೆ ಮುಳ್ಳು ಹಂದಿಯಿಂದ ಔಷಧಿ ಕೊಡುವುದು

ರಾವಲ ಮಾರೆಪ್ಪನವರಿಗೆ ಸುಮಾರು ೫೮ ವರ್ಷ. ಇವರ ತಂದೆ ದೊಡ್ಡ ಮಾರೆಪ್ಪ. ಇವರು ಸಿಂಧೋಳ ಜನಾಂಗಕ್ಕೆ ಸೇರಿದವರು. ಬಳ್ಳಾರಿ ತಾಲ್ಲೂಕಿನ ಮೋಕ ಎಂಬ ಊರಿನಲ್ಲಿ ವಾಸಮಾಡುತ್ತಿದ್ದಾರೆ. ಈ ನಾಟಿ ವೈದ್ಯಪದ್ಧತಿಯನ್ನು ಸುಮಾರು ೨೫ನೇ ವರ್ಷದಲ್ಲಿ ಕಲಿತೆ, ನನ್ನ ತಂದೆಯನ್ನು ನೋಡಿ. ಆದರೆ ನನ್ನ ತಂದೆ ಹೇಳಿಕೊಡಲಿಲ್ಲ. ನೋಡಿ ಕಲಿತೆಯಷ್ಟೇ ಅನ್ನುತ್ತಾರೆ. ನನ್ನ ತಂದೆ ಮರಣಗೊಂಡ ಅನಂತರದಲ್ಲಿ ಕೂಲಿ ಮಾಡುವುದರ ಜೊತೆಗೆ ಈ ನಾಟಿ ವೈದ್ಯವನ್ನು ಮಾಡುತ್ತಿದ್ದೇನೆ. ನಾನಾಗಿಯೇ ಹೋಗುವುದಿಲ್ಲ. ತೊಂದರೆ ಇದ್ದ ಮಕ್ಕಳ ತಾಯಂದಿರು ಅಥವಾ ಸಂಬಂಧಿಸಿದವರು ಬಂದು ಕೇಳಿದರೆ ಕೊಡುತ್ತೇನೆ ಎನ್ನುತ್ತಾರೆ.

ಚಿಕಿತ್ಸೆಗೆ ಮೊದಲು ಮುಳ್ಳುಹಂದಿಯನ್ನು ಬೇಟೆಯಾಡುವರು. ಅನಂತರ ಅದರ ಜಠರವನ್ನು ಹೊರಗೆ ತೆಗೆದು ಒಣಗಿಸುವರು. ಈ ಒಣಗಿಸಿದ ಪದಾರ್ಥಕ್ಕೆ 'ಬೆಲ್ಕಯಪ್ಪನ' ಮಿಶ್ರಣ ಮಾಡುವರು. ಹೀಗೆ ಮಿಶ್ರಣ ಮಾಡಿದ ನಂತರ ಔಷಧಿ ತಯಾರಿಸಿದಂತೆ. ಹೀಗೆ ಔಷಧಿಯನ್ನು ತಯಾರಿಸುವಂತ ಅವರ ಮನೆದೇವರನ್ನು ನೆನೆಯುತ್ತಾನೆ. ಅನಂತರ ಹಾಲು ಕುಡಿಯದ ಹಸುಳೆಯನ್ನು ಅಂಗಾತ ಮಲಗಿಸಿ ವಿಳ್ಳೆದೆಲೆ ಅಥವಾ ಚಮಚದಲ್ಲಿ ಆ ಮಗುವಿನ ಬಾಯಿಗೆ ಬಿಡುವರು. ಹೀಗೆ ಪ್ರತಿ ದಿನ ಒಂದು ಹೊತ್ತು ಅಂದರೆ ಬೆಳಗಿನ ಜಾವ ಕುಡಿಸುವರು. ಹಾಲು ಕುಡಿಯದೆ ಬೆಳವಣಿಗೆ ಕಾಣದ ಹಸುಳೆಗಳ ಹೊಟ್ಟೆ ಹಸಿವು ಬಂದು ಹಾಲು ಕುಡಿಯಲು ಸುರುಮಾಡುತ್ತವೆ. ಅಲ್ಲದೆ ಅವುಗಳ ಬೆಳವಣಿಗೆ ಕಾಣದ ಮಕ್ಕಳು ಬೆಳೆವಣಿಗೆಯನ್ನು ಎರಡು ಮೂರು ತಿಂಗಳಲ್ಲಿ ಕಾಣಬಹುದಾಗಿದೆ. ರಾವಲ ಮಾರೆಪ್ಪ 'ಮಕ್ಕಳಪ್ಪ' ಅಂತ ಎಲ್ಲರೂ ಪ್ರೀತಿಯಿಂದ ಸಂಬೋಧಿಸುವುದು ವಾಡಿಕೆ. ಯಾವುದೇ ವೈಜ್ಞಾನಿಕವಾದ ರಾಸಾಯಿನಿಕ ಅಂಶಗಳೂ ಕೂಡ ಕಂಡುಬರುವುದಿಲ್ಲ.

ಮೊಸಳೆ ಕೊಬ್ಬಿನಿಂದ ತಯಾರಿಸಿದ ಔಷಧಿಯನ್ನು ಕೈಕಾಲು, ಮಂಡಿ, ಬೆನ್ನು, ತಲೆ ಉಳುಕಿದ ವ್ಯಕ್ತಿಗಳಿಗೆ ಚಿಕಿತ್ಸೆ ನೀಡುವುದು

ನರೆಗಲ್ಲಪ್ಪ ಸುಮಾರು ೬೮ ವರ್ಷ ಇವರ ತಂದೆ ದೊಡ್ಡ ನರೆಗಲ್ಲಪ್ಪ. ಇವರು ಶಿರಗುಪ್ಪ ತಾಲೋಕಿನ ತೆಕ್ಕಲಕೋಟೆ ನರೆಗಲ್ಲಪ್ಪನವರ ತಂದೆ ಈಗಿಲ್ಲ. ತಂದೆಯವರು ಈ ಚಿಕಿತ್ಸೆ ಮಾಡುತ್ತಿದ್ದರು. ನಾನು ಆವಾಗ ಅವರು ಹೇಳಿದಂತೆ ಮಾಡುತ್ತಿದ್ದೆ. ಕ್ರಮೇಣ ಕಲಿತೆ. ನಮಗೆ ಜಮೀನು ಏನು ಇಲ್ಲ. ಇಡೀ ಕುಟುಂಬ ಕೂಲಿಯನ್ನು ಅವಲಂಬಿಸಿದೆ. ನನಗೆ ಎಂಟು ಮಕ್ಕಳಿದ್ದಾರೆ. ಎಲ್ಲರೂ ಅವರವರ

ಪಾಡು. ನನಗೂ ವಯಸ್ಸಾಯಿತು. ಕಣ್ಣು ಬೇರೆ ಕಾಣೋಲ್ಲ. ಆಮೇಲೆ ಮೊಸಳೆಯಂತೂ ಈಗ ಬೇಟೆ ಆಡುವ ಹಾಗಿಲ್ಲ. ಏನೋ ಇಟ್ಟುಕೊಂಡಿದ್ದ ಮೊಸಳೆ ಕೊಬ್ಬಿಂದ ಯಾರಾದರೂ ಕೈ, ಕಾಲು, ಕುತ್ತಿಗೆ, ಸೊಂಟ ಉಳುಕಿದವರು ಬಂದರೆ ಅವರಿಗೆ ಚಿಕಿತ್ಸೆ ಮಾಡುತ್ತಿನಪ್ಪ.

ಔಷಧಿ ತಯಾರಿಸುವ ಕ್ರಮ

ಮೊಸಳೆಯನ್ನು ಕೊಂದು, ಅದರ ಬಾಲವನ್ನು ತುಂಡು ತುಂಡಾಗಿ ಕತ್ತರಿಸಬೇಕು. ಹೀಗೆ ತುಂಡು ಮಾಡಿದ ಕೊಬ್ಬಿಗೆ ಅರಿಸಿನ ಹಾಕಿ ಚೆನ್ನಾಗಿ ಬಿಸಿಲಿನಲ್ಲಿ ಒಂದು ದಬ್ರೆ ಒಳಗೆ ಇಟ್ಟು ಒಣಗಿಸಬೇಖು. ಅದು ಆ ಬಿಸಿಲಿಗೆ ಕೊಬ್ಬುಕರಗಿ ಎಣ್ಣೆಯಾಗುತ್ತದೆ. ಆ ಎಣ್ಣೆಯನ್ನು ಒಂದು ಕುಪ್ಪಿ ಅಥವಾ ಯಾವುದಾದರೂ ಡಬ್ಬಿಗೆ ಹಾಕಿ ಇಟ್ಟುಕೊಳ್ಳಬೇಕು. ಕೈ, ಕಾಲು, ಕುತ್ತಿಗೆ ಉಳುಕಿದವರು ಬಂದು ಕೇಳಿದಾಗ ಅವರಿಗೆ ಆ ಎಣ್ಣೆಯನ್ನು ದಿನಕ್ಕೆ ಒಂದು ಬಾರಿ ತಿಕ್ಕಿ ಬಿಸಿನೀರನ್ನು ಹಾಕಬೇಕು. ಹೀಗೆ ಎರಡು ಮೂರು ದಿನ ಮುಂಜಾನೆ ಅಥವಾ ಸಂಜೆ ಮಾಡಿದರೆ ಕೈ, ಕಾಲು, ಕುತ್ತಿಗೆ, ಬೆನ್ನಿನ ಉಳುಕು ಮೊದಲಿನ ಸ್ಥಿತಿ ಬಂದು ರೋಗಿಯು ಆರಾಮವಾಗುತ್ತಾನೆ ಎನ್ನುತ್ತಾರೆ ನರಗಲ್ಲಪ್ಪ. ಈಗಲೂ ಸ್ವಲ್ಪ ಕೊಬ್ಬು ಇದೆ ನೋಡಿ. ಬಿಸಿಲಿಗೆ ಇಟ್ಟಾಗ ಕರಗಿ ಎಣ್ಣೆ ಬಿಡುತ್ತದೆ. ನೋಡಿ ಅಂತ ತೋರಿಸಿದರು.

ಮನುಷ್ಯ

ಇಲ್ಲಿ ತರ್ಕವಾಗಿ ವಿಶ್ಲೇಷಣೆಯನ್ನು ಮುಂದುವರೆಸಬಹುದೆಂದು ಅಂದಕೊಂಡಿದ್ದೇನೆ. ಆರಂಭದಲ್ಲಿ ಮನುಷ್ಯ ಸಸ್ಯ ಪ್ರಾಣಿಗಳಂತೆ ಬಿಡಿಯಾಗಿ ಅಥವಾ ಇಡಿಯಾಗಿ ಹೆಚ್ಚು ಬಳಕೆಗೆ ಅಥವಾ ಉಪಯೋಕ್ಕೆ ಬರುವವನಲ್ಲ. ಆದರೆ ಕೆಲವು ಪ್ರಧಾನವಲ್ಲ ಅಂದುಕೊಂಡರೂ ಒಮ್ಮೊಮ್ಮೆ ಉಪಯೋಗಕ್ಕೆ ಬರುವನು. ಉದಾಹರಣೆ ಮೂಲಕ ಹೇಳುವುದಾದರೆ ಹಳ್ಳಿಗಳಲ್ಲಿ ನಾನು ಕಂಡಂತೆ ಒಬ್ಬ ವ್ಯಕ್ತಿ ವಿಷ ಕುಡಿದು ಸತ್ತರೆ, ಒಣಗಿದ ಪೈಯಿಖಾನೆಯನ್ನು ನೀರಲ್ಲಿ ಮಿಶ್ರಣಮಾಡಿ ಕುಡಿಸಿದರೆ ಆ ವ್ಯಕ್ತಿ ವಾಂತಿ ಮಾಡಿಕೊಳ್ಳುತ್ತಾನೆ. ಹಾಗೆಯೇ ಸ್ವಮೂತ್ರ ಅನೇಕ ಬಾರಿ ಉಪಯೋಕ್ಕೆ ಬರುವುದುಂಟು. ಇನ್ನೊಂದು ಪ್ರಧಾನ ಉದಾಹರಣೆ ಅಂದರೆ ತಾಯಿಯಂದಿರ ಎದೆಹಾಲು ಮಕ್ಕಳ, ವೃದ್ಧರ ಕಣ್ಣಿನಲ್ಲಿ ರೋಗ ಕಂಡುಬಂದಾಗ ಆ ಹಾಲನ್ನು ಹಾಕಿದರೆ ಕಣ್ಣು ಗುಣಮುಖವಾಗಬಹುದು. ಇನ್ನೂ ಕೆಲವು ರೋಗಗಳಿಗೆ ಬಳಸಬಹುದಾಗಿದೆ.

ಆದರೆ ಮನುಷ್ಯ ಬೇರೆ ಬೇರೆ ಪ್ರದೇಶಗಳಲ್ಲಿ ಪ್ರಾದೇಶಿಕತೆಗಳಿಗನುಗುಣವಾಗಿ ಬೆಳೆಯುವಂತಹ ಗಿಡಮೂಲಿಕೆಗಳನ್ನು ಬಳಸಿಕೊಂಡು ಮಕ್ಕಳಿಗೆ, ದೊಡ್ಡವರಿಗೆ, ವೃದ್ಧರಿಗೆ, ಸ್ತ್ರೀಯರಿಗೆ ಅವರಲ್ಲಿ ಕಂಡುಬರುವ ಗಾಯ, ಹುಣ್ಣು, ಹುಚ್ಚು, ಹಾವು ಕಡಿದವರಿಗೆ ಪ್ರಾಣಿಗಳಿಗೆ, ಉಳುಕು, ಚಳಕುಗಳಿಗೆ

ವಿಷಜಂತುಗಳು ಕಚ್ಚಿದವರಿಗೆ, ಕಾಲು ಕೈಮುರಿದವರಿಗೆ ಯಾವುದೇ ವಯಸ್ಸು ಅಂತರವಿಲ್ಲದೆ ತಾನು ವೈದ್ಯವನ್ನು ಮಾಡಿ ಆರೋಗ್ಯಗಳಿಂದ ಶಮನ ಮಾಡುವುದನ್ನು ನಾವು ಕಾಣುತ್ತೇವೆ. ಆದ್ದರಿಂದ ಇಲ್ಲಿ ಮನುಷ್ಯ ಸ್ವತಃ ತಯಾರಿಸಿ ರೋಗ ಪ್ರಾಣಿಗಳಿಗೆ ಕೊಡುವ ಔಷಧಿಯತ್ತ ಇಲ್ಲಿ ಗಮನಹರಿಸಲಾಗಿದೆ.

ಹೆಂಗಸರಿಗೆ ಸಂತಾನ ಚಿಕಿತ್ಸೆ

ಕಾತ್ರಿಕೆ ಹುಚ್ಚಮ್ಮನವರು ಹಗರಿಬೊಮ್ಮನಹಳ್ಳಿ ತಾಲ್ಲೂಕು ತಪ್ಪಳ್ಳಿ, ಅವರು. ಸುಮಾರು ೮೫ ವರ್ಷ. ಗಂಡ ಸಯ್ಯೆದ್‌ಸಾಬ್. ಈಕೆ ಸುಮಾರು ೬೦ ವರ್ಷಗಳಿಂದಲೂ ಈ ವೃತ್ತಿಯಲ್ಲಿ ನಿರತರಾಗಿರುವರು. ಇಂದಿಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸೂಲಗಿತ್ತಿ ಅಂತ ಕರೆಯುತ್ತಾರೆ. ಇವೊತ್ತಿಗೂ ಇವರು ಹೆಂಗಸರು ಗರ್ಭಿಣಿಯಾದಗ ಹೆರಿಗೆ ಮಾಡಿಸುವರು. ಅಲ್ಲದೆ ಮದುವೆಯಾಗಿ ಎಷ್ಟೋ ವರ್ಷಗಳವರೆಗೆ ಮಕ್ಕಳಾಗದಿದ್ದ ಹೆಂಗಸರಿಗೆ ಮಕ್ಕಳಾಗುವ ಚಿಕಿತ್ಸೆಯನ್ನು ಮಾಡಿರುತ್ತಾರೆ. ಇಂದಿಗೂ ವೃತ್ತಿ ನಿರಂತರವಾಗಿ ಮುಂದುವರಿಯುತ್ತಿದೆ. ಈಕೆಯನ್ನು ಆಸಕ್ತಿಯಿಂದ ಪ್ರಶ್ನಿಸಿದಾಗ ಹೇಳಿದರು ನೀವು ಕೊಡುವ ಔಷಧಿಯಿಂದ ಮಕ್ಕಳಾಗುತ್ತದೆಯೇ ಎಂದು ಕೇಳಿದಾಗ ಯಾವ ನಿರ್ಭಿತಿಯಿಲ್ಲದೆ ನಾನು ಔಷಧಿ ಕೊಟ್ಟು ಎಷ್ಟೋ ಹೆಂಗಸರಿಗೆ ಮಕ್ಕಳಾಗಿವೆ. ನೋಡಿ ನನ್ನ ಪಕ್ಕದಲ್ಲಿಯೇ ಇರುವ ಈ ಹೆಂಗಸನ್ನು ಕೇಳಿ ಎಂದು ತೋರಿಸಿದಳು. ಅದಕ್ಕೆ ಪ್ರತಿಯಾಗಿ ಹ್ಞೂ ಅಂದಳು ಪಕ್ಕದಲ್ಲಿದ್ದ ಹೆಂಗಸು. ನಿಮಗೆ ಯಾರು ಈ ಔಷಧಿಯನ್ನು ತೋರಿಸಿಕೊಟ್ಟರು. ಅಂದರೆ ನನ್ನ ಅಜ್ಜಿ ಈ ನಾಟಿ ಔಷಧಿ ಕೊಡುತ್ತಿದ್ದಳು. ಆಗ ನಾ ಸಣ್ಣವಳಿದ್ದೆ ನೋಡುತ್ತಿದ್ದೆ. ಅವಳು ಹೇಳಿದ್ದನ್ನು ತಂದುಕೊಡುತ್ತಿದ್ದೆ. ಹೀಗೆ ನೋಡಿ ಕಲಿತೆ ಅಷ್ಟೆ. ಈ ಔಷಧಿಯನ್ನು ತಯಾರಿಸುವ ಹಾಗೂ ಕೊಡುವ ವಿಧಾನ ಹೇಳಿ ಅಂದಾಗ ಆಕೆ ಪ್ರಾರಂಭ ಮಾಡಿದಳು.

ಈ ಔಷಧಿಯನ್ನು ಹೆಂಗಸರು ಹೊರಗಡೆ ಆದಾಗ ಮೂರು ದಿನ ಸತತವಾಗಿ ತೆಗೆದುಕೊಳ್ಳಬೇಕು. ಸಾಮಾನ್ಯವಾಗಿ ಮುಂಜಾನೆ ಬರಿ ಹೊಟ್ಟೆಯಲ್ಲಿ ಜಗಿದು ನುಂಗಬೇಕು. ಈ ರೀತಿ ಒಂದು, ಎರಡು ಮೂರು ತಿಂಗಳು ಮಾಡಿದರೆ ಸಾಕು ಕ್ರಮೇಣ ಮಕ್ಕಳಾಗುತ್ತವೆ. ಹೀಗೆ ಕೊಡುವಾಗ ಅವರ ಮನೆ ದೇವರನ್ನು ಮನದಲ್ಲಿ ನೆನೆಸಿಕೊಕೊಡುತ್ತೇನೆ. ಯಾವ ಸಸ್ಯ ಅಥವಾ ಗಿಡವನ್ನು ತಾವು ಈ ಚಿಕಿತ್ಸೆಗೆ ಬಳಸುತ್ತಿರಿ ಅಂದರೆ ಆಕೆ ಸ್ವಾಡ್ರಿಯಪ್ಪ ಮುಂಜಾನೆ ಎದ್ದು ಯಾರಿಗೂ ಹೇಳದೆ, ಯಾರ ಮುಖವನ್ನು ನೋಡದೆ ಹಿಂದಿನ ದಿವಸ ಗುರುತು ಮಾಡಿ ಬಂದಿದ್ದ ಗಿಡದ ಹತ್ತಿರಕ್ಕೆ ಹೋಗುತ್ತೇನೆ. ಆ ಗಿಡವೆಂದರೆ ಹೊನ್ನಮ್ರಿಕಿ. ಅದರ ಸುತ್ತ ನೀರನ್ನು ಹಾಕಿ, ದೇವರನ್ನು ನೆನೆದು ಅದರ ಚಿಗರನ್ನು ಕಿತ್ತು ತರುತ್ತೇನೆ. ಅದನ್ನು ಒಣಗಿಸಬಾರದು. ಅನಂತರ ಒಂದು ಎಲೆಗೆ ಅಡಿಕೆ, ಸುಣ್ಣ ಇವುಗಳ ಜೊತೆಯಲ್ಲಿ ಹೊನ್ನಮ್ರಿಕೆ

ಚಿಗರನ್ನು ಸೇರಿಸಿ ಕೊಡುತ್ತೇನೆ. ಮಕ್ಕಳಾಗದ ಹೆಂಗಸು ಅದನ್ನು ಜಗಿದು ನುಂಗುವಳು. ಈ ಮೊದಲೆ ಹೇಳಿದ ಹಾಗೆ ಎರಡು ಮೂರು ತಿಂಗಳು ಮಾಡಿದಾಗ ಆಕೆ ಗರ್ಭಧರಿಸಿ ಮಗುವನ್ನು ಹಡೆಯುವಳು ಅಂತ ಉತ್ತರಿಸಿದಳು.

ಈ ತಪ್ಪಲು ಎಲ್ಲ ಕಡೆಯು ಸಿಗುತ್ತದೆ. ಆದರೆ ನೆನಪು ಮಾಡಿಕೊಂಡು ಅದೇ ಸೊಪ್ಪು ತರಬೇಕು. ಈ ತಪ್ಪಲಿನ ಹಾಗೆ ಬೇರೆ ತಪ್ಪಲುಗಳಿವೆ. ಅಂತಹ ಬೇರೆ ತಪ್ಪಲನ್ನು ತಿಂದರೆ ಹುಚ್ಚು ಹಿಡಿಯುವ ಇಲ್ಲ ಅಸ್ವಸ್ಥರಾಗುವ ಸಂಭವ ಉಂಟು. ಆದುದರಿಂದ ಬಹಳ ಎಚ್ಚರಿಕೆಯಿಂದ ಹೊನ್ನಮ್ರಿಕೆ ಸೊಪ್ಪನ್ನು ಮಾತ್ರ ಬಳಸಬೇಕು.

ದನಿಗೆ ಕಸಿ ಕಟ್ಟುವ ಚಿಕಿತ್ಸೆ

ಮಲ್ಲಪ್ಪನವರಿಗೆ ಸುಮಾರು ೬೦ ವರ್ಷ. ಈತನ ಊರು ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಏಣಿಗಿ. ಈತ ಸುಮಾರು ೩೫ ವರ್ಷಗಳಿಂದಲೂ ಈ ವೃತ್ತಿಯಲ್ಲಿ ನಿರತರಾಗಿರುವನು. ಸುತ್ತಲ ಹಳ್ಳಿಗಳಲ್ಲಿ ಈತನ ಹೆಸರು ಚಿರಪರಿಚಿತ. ದನಗಳನ್ನು ಕಸಿ ಮಾಡುವುದರಲ್ಲಿ ಎತ್ತಿದ ಕೈ. ಕೋಣವಿರಲಿ ಇಲ್ಲಾ ಎತ್ತಿರಲಿ ಅವುಗಳನ್ನು ಕಸಿ ಮಾಡುವನು. ಕಸಿ ಮಾಡಲು ಬಳಸುವ ಉಪಕರಣಗಳೆಂದರೆ ಒನಕೆ ಮತ್ತು ಕೊಡಲಿ. ಐದಾರು ಜನ ಎತ್ತು ಅಥವಾ ಕೋಣದ ಕಾಲನ್ನು ಕಟ್ಟಿ ನೆಲಕ್ಕೆ ಉರುಳಿಸುತ್ತಾರೆ. ಅನಂತರ ಈತ ಕೊಡಲಿ ಹಾಗೂ ಒನಕೆ ತೆಗೆದುಕೊಂಡು ಅವುಗಳ ಬೀಜವನ್ನು ಈ ಉಪಕರಣಗಳ ಮಧ್ಯಕ್ಕೆ ಸಿಲುಕಿಸಿ ಒಂದು ಅಥವಾ ಎರಡು ಸಲ ನಿಧಾನಗತಿಯಿಂದ ಬೀಜಗಳನ್ನು ಪುಡಿಯಾಗುವಂತೆ ಮಾಡುವನು. ಅವುಗಳು ಆ ಸಂದರ್ಭದಲ್ಲಿ ನೋವಿನಿಂದ ನರಳಾಡುತ್ತವೆ. ಕೆಲವು ಸಂದರ್ಭದಲ್ಲಿ ರಕ್ತವು ಕಂಡುಬರುತ್ತದೆ. ಆಗ ಆ ನೋವು ಹಾಗೂ ಗಾಯವಾದರೆ ಅಂತಹದನ್ನು ವಾಸಿಮಾಡಲು ಈಗಾಗಲೇ ತಯಾರಿಸಿಕೊಂಡಿರುವಂತ ಅರಿಸಿನ ಮತ್ತು ಮೊಸರನ್ನು ಮಿಶ್ರಣ ಮಾಡಿ ಬೀಜದ ಸುತ್ತ ಸವರಲಾಗುತ್ತದೆ. ಹೀಗೆ ಒಂದೆರಡು ಮೂರು ದಿನಗಳು ಮಾಡುವರು. ಅನಂತರ ತಣ್ಣಿರನ್ನು ಒಂದು ವಾರದವರೆಗೆ ಬೀಜದ ಸುತ್ತಮುತ್ತ ಹಾಕಿದಾಗ ಗಾಯದ ಊದು, ನೋವು ಶಮನಗೊಳ್ಳುತ್ತದೆ.

ಇನ್ನೊಂದು ವಿಧಾನವೆಂದರೆ ಸಾಮಾನ್ಯವಾಗಿ ದನಕರ, ಎಮ್ಮೆಗಳನ್ನು ಕಾಡು ಅಥವಾ ಬಯಲುಗಳಿಗೆ ಮೇವಿಗಾಗಿ ಬಿಡುವುದು ಇದು ದಿನನಿತ್ಯದ ಕ್ರಮ. ಆಗ ಅಲ್ಲೆಯೇ ಇರುವಂತಹ ಕೆರೆ, ಹಳ್ಳ, ಹೊಳೆ, ತೋಡುಗಳಲ್ಲಿ ಸ್ನಾನ ಮಾಡಿಸಿದರೆ ಕಸಿಕಟ್ಟಿಸಿದ ದನಗಳ ಎಮ್ಮೆಗಳ ನೋವು, ಊದು ಕ್ರಮೇಣ ವಾಸಿಯಾಗುತ್ತದೆ. ಜೊತೆಗೆ ಕಸಿಯನ್ನು ಎಲ್ಲೆಂದರಲ್ಲಿ ಕಟ್ಟುವುದಿಲ್ಲ. ವಾರದ ದಿನಗಳೆಲ್ಲ ಆತ ಕಸಿ ಕಟ್ಟುವುದಿಲ್ಲ ಬುಧುವಾರ ಹಾಗೂ ರವಿವಾರದಂದು ಊರ ಗುಡಿಯ ಮುಂದೆ ದೈವ ಹಾಗೂ ತಾನು ತಲತಲಾಂತರದಿಂದ ನಂಬಿಕೊಂಡುಬಂದ ದೇವರ ಹೆಸರನ್ನು ನೆನೆಸಿಕೊಂಡು ಆತ ಕಸಿ ಮಾಡುವನು.

ಮಲ್ಲಪ್ಪನ ಮೂಲ ವೃತ್ತಿ ಕೂಲಿ. ಈತ ಕಸಿ ಮಾಡಿದಕ್ಕೆ ಹಣವನ್ನು ಕೇಳಿ ಪಡೆಯುವುದಿಲ್ಲ. ಎಮ್ಮೆ, ಎತ್ತಿನ ವಾರಸುದಾರರು ಇಷ್ಟಪಟ್ಟು ಕೊಟ್ಟಾಗ ಮಾತ್ರ ಸ್ವೀಕರಿಸುತ್ತಾನೆ. ಇಷ್ಟೇ ಎಂದು ಕಡಾಖಂಡಿತವಾಗಿ ಕೊಡಬೇಕೆಂದು ಕೇಳುವುದಿಲ್ಲ. ಮೂಕ ಪ್ರಾಣಿಗಳಿಗೆ ಸೇವೆ ಮಾಡಿದರೆ ದೇವರು ನನ್ನನ್ನು ಕಾಪಾಡುತ್ತಾನೆ ಅನ್ನುತ್ತಾರೆ ಅವರು. ಕೆಲವು ಪ್ರದೇಶಗಳಲ್ಲಿ ಕರೆದರೆ ತಾನೆ ಹೋಗಿ ಕಸಿ ಮಾಡುವುದುಂಟು. ಇವೊತ್ತಿಗೂ ಕಾಯಕ ಕೂಲಿಯೊಂದಿಗೆ ನಿರಂತರವಾಗಿ ನಡೆಯುತ್ತಿದೆ.

ಕಾಲು ಮುರಿದ ಕುರಿ, ಹಸು, ಎಮ್ಮೆ ಕರುಗಳಿಗೆ ಚಿಕಿತ್ಸೆ

ಗೋಣೆಪ್ಪ ಸಂಡೂರು ತಾಲ್ಲೂಕಿನ ಹಚ್ಚಹಳ್ಳಿ ಇವನ ಊರು. ಈತನಿಗೆ ಸುಮಾರು ೬೫ ವರ್ಷ. ಈತನಿಗೆ ಯಾವುದೇ ಭೂಮಿ ಇರುವುದಿಲ್ಲ ಕೂಲಿ ಇವನ ಜೀವನಕ್ಕೆ ಆಧಾರ. ಕೂಲಿ ಮಾಡಿದರೆ ಉಂಟು ಇಲ್ಲದಿದ್ದರೆ ಇಲ್ಲ. ಆದರೆ ತನ್ನ ತಾತನೊಂದಿಗೆ ಬೆರೆತು ಕಂಡುಕೊಂಡಿದ್ದ ನಾಟಿ ಔಷಧಿಯನ್ನು ಇಂದಿಗೂ ಮುಂದುವರೆಸಿಕೊಂಡು ಹೋಗುತ್ತಿದ್ದಾನೆ. ಆದರೆ ಇದನ್ನೇ ಜೀವನೋಪಾಯಕ್ಕೆ ಜೋತು ಬಿದ್ದವನಲ್ಲ. ಸುತ್ತಮುತ್ತಲ ಹಳ್ಳಿಗಳಿಗೂ ಚಿರಪರಿಚಿತ. ಯಾರದೇ ಹಸು, ಎಮ್ಮೆ, ಕುರಿ, ಕರುಗಳ ಕಾಲು ಮುರಿದರೆ ಔಷಧಿ ಕೊಡುತ್ತಾನೆ. ಕುರಿಯ ಅಥವಾ ಹಸುವಿನ ಕಾಲು ಮುರಿದ ಭಾಗವನ್ನು ಕೈಯಿಂದ ಮುಟ್ಟಿನೋಡಿ ಈ ಭಾಗವನ್ನು ಸರಿಪಡಿಸಬಹುದೆಂದು ಕಂಡುಕೊಂಡು ಅರಿವಾದಗ ಸಜ್ಜಾಗುವನು.

ಮೊದಲು ಒಣಗಿದ ಬೊಂಬುಗಳಿಂದ ಬಿಡಿ ಬಿಡಿ ಪಟ್ಟಿಮಾಡಿಕೊಂಡು ಇಟ್ಟುಕೊಂಡಿರುತ್ತಾನೆ. ಅನಂತರ ನಾಟಿ ತತ್ತಿ, ಅರಿಸಿನಪುಡಿ, ಬೇವಿನ ಎಣ್ಣೆಯನ್ನು ಮಿಶ್ರಣ ಮಾಡಿ ಕಾಲು ಮುರಿದ ಪ್ರಾಣಿಯ ಭಾಗಕ್ಕೆ ಸವರುವನು. ಅನಂತರ ಆ ಭಾಗಕ್ಕೆ ಬಟ್ಟೆಯನ್ನು ತೆಗೆದುಕೊಂಡು ಬಿದಿರನ್ನು ಸುತ್ತಲು ಇರಿಸಿ ಗಟ್ಟಿಯಾಗಿ ಬಟ್ಟೆಯನ್ನು ಕಟ್ಟುತ್ತಾನೆ. ಅನಂತರ ಆ ಕಟ್ಟಿದ ಕಟ್ಟನ್ನು ಸುಮಾರು ೭ ರಿಂದ ೧೦ ದಿನಗಳವರೆಗೆ ಬಿಚ್ಚುವುದಿಲ್ಲ. ಮುರಿದ ಕಾಲು ವಾಸಿ ಅಥವಾ ಕೂಡಿಕೊಳ್ಳದಿದ್ದರೆ ಪುನಃ ಇದೇ ಪುನಾರಾವರ್ತನೆ ಮಾಡುತ್ತಾನೆ. ಹೀಗೆ ಮಾಡುವುದರಿಂದ ಕಾಲು ಮೊದಲಿನಂತೆ ಆಗಿ ನಡೆದಾಡಲು ಆರಂಭಿಸುತ್ತದೆ ಅಂತ ಉತ್ತರಿಸುತ್ತಾರೆ. ಗೋಣೆಪ್ಪ ಅವರು ಸುಮಾರು ೪೨ವರ್ಷಗಳಿಂದಲೂ ಈ ತೆರನಾದ ನಾಟಿ ವೈದ್ಯವನ್ನು ನಿರ್ವಹಿಸಿಕೊಂಡುಬಂದಿರುತ್ತೇನೆಂದು ಹೇಳುತ್ತಾರೆ. ಸಂಪ್ರದಾಯದ ಪೂರಕವಾಗಿ ಔಷಧಿ ಕೊಡುವುದು ವಾಡಿಕೆ. ಬಳ್ಳಾರಿ ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಇರುವಂತ ಹಳ್ಳಿಗಳಲ್ಲಿ ಪ್ರಾಣಿಗಳಿಗೆ ಬರುವ ಅನೇಕ ರೋಗಗಳಿಂದ ಆಂದರೆ ಹಂಪೇರಿಗಂಟು ಗಂಟಲಬಾವು, ಸೊಂಡಿಹುಣ್ಣು, ಕಿವಿಸೋರುವುದು, ಮೂಗಿನಲ್ಲಿ ನೀರು ಸೋರುವ, ಹೊಟ್ಟೆ ಉಬ್ಬುವುದು, ಮೂಗಿನಿಂದ ರಕ್ತ ಸೋರುವುದು, ಮೂತ್ರ ತಟ್ಟಿಸುವುದು ಹೀಗೆ ಇನ್ನೂ ಅನೇಕ ರೋಗಗಳಿಗೆ ಹಳ್ಳಿಯ ನಾಟಿ ವೈದ್ಯರು

ಔಷಧಿಯನ್ನು ನೀಡುವರು. ಕ್ಷೇತ್ರಕಾರ್ಯದಲ್ಲಿ ನೋಡಿದ ಹಾಗೂ ಸಂಗ್ರಹಿಸಿದ ಅಂಶಗಳನ್ನು ಟಿಪ್ಪಣಿ ಮಾಡಿಕೊಂಡಿದ್ದೇನೆ. ಅಲ್ಲದೆ ಬಹಳ ಪ್ರಧಾನವಾದ ರೋಗಗಳ ಕುರಿತು ನನ್ನ ಪ್ರಬಂಧದಲ್ಲಿ ವಿವರಣೆಯನ್ನು ನೀಡಲಾಗಿದೆ.

ಖನಿಜ, ನೀರು ಮತ್ತು ದ್ರವ ಬಳಸಿ ಚಿಕಿತ್ಸೆ ಮಾಡುವುದು

ಹಳ್ಳಿಗರಲ್ಲಿರುವ ಗಾದೆಯ ಮಾತನ್ನು ನೆನಪು ಮಾಡಿಕೊಂಡು ವಿವರಣೆ ನೀಡಲು ಮುಂದಾಗುತ್ತೇನೆ. ಬಲ್ಲವನಿಗೆ ಹುಲ್ಲೇ ಮದ್ದು ಎಂಬಂತೆ ಸಂದಿಗ್ಧ ಸಂದರ್ಭದಲ್ಲಿ ಹುಲ್ಲುಕಡ್ಡಿಯೂ ಸಹ ಔಷಧಿಯಾಗಿ ಕೆಲಸ ನಿರ್ವಹಿಸುತ್ತದೆ. ಔಷಧಿಗಳು ಸಸ್ಯ, ಪ್ರಾಣಿ, ಪಕ್ಷಿಗಳಲ್ಲಿ ಅಲ್ಲದೆ ಖನಿಜ, ದ್ರವರೂಪದಲ್ಲಿಯೂ ದೊರೆತು ಮಾನವ ಅವುಗಳಿಂದಲೂ ಚಿಕಿತ್ಸೆ ನೀಡುವಲ್ಲಿ ಮುಂದಾಗಿರುವುದನ್ನು ವೇದಕಾಲದಿಂದ ಹಿಡಿದು ಪ್ರಸ್ತುತ ಹಳ್ಳಿಗಳಲ್ಲಿ ಇಂದಿಗೂ ಜೀವಂತವಾಗಿರುವುದನ್ನು ನಾವು ನೋಡಬಹುದಾಗಿದೆ.

ಹೆಂಚಿನಚೂರು, ಕೆಮ್ಮಣ್ಣು, ವಿಭೂತಿ, ಹುತ್ತದಮಣ್ಣು, ಕಬ್ಬಿಣದ ತುಂಡು, ಬೆಣಚುಕಲ್ಲು, ಕೋಳಿ ಮೇಲೆಯಲ್ಲಿರುವ ಕಲ್ಲು, ಬೇವಿನ ಕಡ್ಡಿ, ಚಿನ್ನ, ಬೆಳ್ಳಿ, ತಾಮ್ರ, ಬಳೆಚೂರು ಇನ್ನೂ ಅನೇಕ ಖನಿಜಗಳೂ ಔಷಧವಾಗಿ ಮಾನವ ಬಳಸಿ ಚಿಕಿತ್ಸೆ ನೀಡುವುದನ್ನು ಮರೆಯುವಂತಿಲ್ಲ. ಇಂದಿನ ನಾಗರಿಕತೆ ಬದಲಾವಣೆ ಆಗುತ್ತಿರುವ ಈ ಸಂದರ್ಭದಲ್ಲಿಯೂ ಜನಪದರಲ್ಲಿ ನಾಟಿವೈದ್ಯದಲ್ಲಿ ಯಾವುದೇ ರೀತಿಯಲ್ಲಿ ಬದಲಾವಣೆ ಆಗುತ್ತಿಲ್ಲವೆಂಬುದನ್ನು ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡಿದ್ದೇನೆ. ಅಂತಹವುಗಳಲ್ಲಿ ಕೆಲವನ್ನು ಉಲ್ಲೇಖಿಸಲಾಗಿದೆ.

ಲೋಹಗಳಿಂದ ಚಿಕಿತ್ಸೆ

ಶ್ರೀನಿವಾಸಚಾರ್ ವಯಸ್ಸು ೫೫. ಊರು ಕಂಪ್ಲಿಯ ಅರಕ್ಷಠಾಣೆ ಹತ್ತಿರ ವಾಸ. ಹೊಸಪೇಟೆ ತಾಲ್ಲೂಕು. ಇವರ ವೃತ್ತಿ ಆಚಾರಿ ಕೆಲಸ. ಪ್ರವೃತ್ತಿಯಾಗಿ ನಾಟಿವೈದ್ಯವನ್ನು ಬೇರೆ ಬೇರೆ ರೋಗಗಳಿಗೆ ನೀಡುತ್ತಾರೆ. ಇವರು ೩೦ ವರ್ಷಗಳಿಂದಲೂ ಈ ವೃತ್ತಿಯನ್ನು ನಿರ್ವಹಿಸಿಕೊಂಡು ಮುಂದುವರೆಯುತ್ತಿದ್ದಾರೆ. ಇವರು ತಮ್ಮ ತಂದೆಯಿಂದ ಈ ಚಿಕಿತ್ಸೆ ನೀಡುವುದನ್ನು ಕಲಿತೆ ಅನ್ನವರು. ಕ್ಷೇತ್ರಕಾರ್ಯದಲ್ಲಿ ನಾನು ಬಳ್ಳಾರಿಯಲ್ಲಿನ ಅನೇಕ ಹಳ್ಳಿಗಳಲ್ಲಿ ಸುತ್ತಾಡುತ್ತಿದ್ದಾಗ ಮನುಷ್ಯರಿಗೆ ಬರುವ ಅರೆ ತಲೆನೋವಿಗೆ ಬೇರೆ ಬೇರೆ ರೀತಿಯಾಗಿ ಚಿಕಿತ್ಸೆ ಮಾಡುವುದನ್ನು ಕಂಡಿರುತ್ತೇನೆ. ಅಲ್ಲದೆ ಸಂಗ್ರಹವನ್ನು ಕೂಡ ಮಾಡಿಕೊಂಡಿರುತ್ತೇನೆ. ಆದರೆ ಈ ಶ್ರೀನಿವಾಸಚಾರ್ ಅವರು ಬಹಳ ಭಿನ್ನವಾಗಿ ಲೋಹಗಳಿಂದ ಔಷಧಿಯನ್ನು ನೀಡುವರು. ನನಗೆ ತುಂಬಾ ಆಶ್ಚರ್ಯ ಜೊತೆಗೆ ಕುತೂಹಲ ಉಂಟಾಯಿತು. ಆದ್ದರಿಂದ ಅರೆದಲೆ ನೋವು, ನರಸಿಡಿತ, ಬಾವುಗೆ ಇವರು ಲೋಗಳಿಂದ ತಯಾರಿಸಿದ ಚಿಕಿತ್ಸೆ ಮಾಡುವರು.

ಸಾಮಾನ್ಯವಾಗಿ ಅರೆದೆಲೆ ನೋವು ಆರಂಭವಾಗುವುದು ಸೂರ್ಯ ಉದಯಿಸುವಂತೆ ಹೆಚ್ಚಾಗುತ್ತಾ ಹೋಗುತ್ತದೆ. ಹಾಗೆಯೇಸೂರ್ಯ ಇಳಿಮುಖವಾಗುತ್ತಿಗುತ್ತಿರುವಂತೆ ಕಡಿಮೆಯಾಗುತ್ತಾ ಹೋಗುತ್ತದೆ. ಆ ಬಾಧೆಯನ್ನು ಅನುಭವಿಸಿದವರಿಗೆ ಮಾತ್ರ ಅದರ ನೋವು ಅರಿವಾಗುತ್ತದೆ. ಒಟ್ಟಿನಲ್ಲಿ ಅರ್ಧ ತಾಮ್ರಕ್ಕೆ ಒಂದು ಚೂರು ಬೆಳ್ಳಿ, ಬಂಗಾರ, ಕಬ್ಬಿಣ ಮತ್ತು ಹಿತ್ತಾಳೆಯನ್ನು ಸೇರಿಸಿ ಕಾಯಿಸಿದಾಗ ಮಿಶ್ರಣವಾಗುತ್ತದೆ. ಅನಂತರ ಉಂಗುರ ಮಾಡಲಾಗುತ್ತದೆ. ಆ ಮೇಲೆ ಅರೆ ತಲೆ ನೋವು ಬಂದಂತಹ ವ್ಯಕ್ತಿಯನ್ನು ಕರೆದು ಕೂರಿಸಿ ತನ್ನ ಇಷ್ಟದೇವರನ್ನು ನೆನೆಯುತ್ತಾನೆ. ಅನಂತರ ಆ ಉಂಗುರಕ್ಕೆ ಅರಸಿನ, ಕುಂಕುಮ ಇಟ್ಟು ಪೂಜೆ ಮಾಡುತ್ತಾನೆ. ಅನಂತರ ತಲೆನೋವು ಇದ್ದಂತಹ ವ್ಯಕ್ತಿ ಯಾವ ಕಡೆ ಅಂದರೆ ಬಲಗಡೆ ಅರೆತಲೆ ನೋವು ಉಂಟಾದರೆ ಎಡಕಾಲಿನ ಎರಡನೇ ಬೆರಳಿಗೆ ಈ ಮೊದಲೇ ತಯಾರಿಸಿದ ಉಂಗುರವನ್ನು ಹಾಕುವನು. ಎಡಗಡೆ ಉಂಟಾದರೆ ಬಲಕಾಲಿನ ಎರಡನೇ ಬೆರಳಿಗೆ ತೊಡಗಿಸಿದಾಗ ಅರೆ ತಲೆನೋವು ಕಡಿಮೆಯಾಗುತ್ತದೆ. ಸಾಮಾನ್ಯವಾಗಿ ಆ ಉಂಗುರವನ್ನು ಒಂದೆರಡು ತಿಂಗಳು ಬಿಚ್ಚುವುದಿಲ್ಲ.

ಈ ಉಂಗುರವನ್ನು ಇಷ್ಟವಾದ ಗಳಿಗೆಯಲ್ಲಿ ತೊಡಿಸುವಾಗಿಲ್ಲ. ಸೂರ್ಯೋದಯವಾದ ನಂತರ ಅಂದರೆ ೧೧ ಗಂಟೆಯ ಒಳಗೆ ಅನಂತರ ಸಂಜೆ ೪ ಗಂಟೆಯಿಂದ ೬ ಗಂಟೆಯ ಒಳಗೆ ಗುರುವಾರ ಮತ್ತು ರವಿವಾರ ಈ ಉಂಗುರವನ್ನು ತೋಡಿಸುವುದು ರೂಢಿಯಲ್ಲಿದೆ. ಅಲ್ಲದೆ ಅಮವಾಸೆ ದಿನ ಅತ್ಯುನ್ನತವಾದ ಶ್ರೇಷ್ಠ ದಿನವೆಂದು ನಂಬಿಕೆ ಇರಿಸಿದ್ದಾರೆ. ಅಮವಾಸೆ ದಿನ ತೊಡಿಸಿದರೆ ಜೀವಿತದಲ್ಲಿ ಇನ್ನೆಂದೂ ಅರೆ ತಲೆನೋವು ಬರುವುದಿಲ್ಲವೆಂದು ಹೇಳುತ್ತಾರೆ.

ಈ ಚಿಕಿತ್ಸೆಗಾಗಿ ಹಣ ತೆಗೆದುಕೊಳ್ಳುವುದಿಲ್ಲ. ಯಾರೇ ಕೇಳಿದರೂ ಚಿಕಿತ್ಸೆ ನೀಡುವರು. ಚಿಕಿತ್ಸೆ ಪಡೆದ ವ್ಯಕ್ತಿಗಳು ತಾವಾಗಿಯೇ ಇಷ್ಟಪಟ್ಟುಕೊಟ್ಟಂತಹ ಹಣವನ್ನು ತೆಗೆದುಕೊಳ್ಳುತ್ತಾರೆ.

ನೀರು ಬಳಸಿ ಬೊಜ್ಜು ಕರಗಿಸುವಿಕೆಗೆ ಚಿಕಿತ್ಸೆ

ಪದ್ಮಮ್ಮನಿಗೆ ಸುಮಾರು ೬೦ ವರ್ಷಗಳಿರಬಹುದಾಗಿದೆ. ಊರು ಕಂಪ್ಲಿ ೪ನೇ ವಾರ್ಡ್‌ನಲ್ಲಿ ವಾಸ. ಹೊಸಪೇಟೆ ತಾಲ್ಲೂಕು. ಈಕೆ ಅನೇಕ ಕಾಯಿಲೆಗಳಿಗೆ ಮದ್ದನ್ನು ನೀಡುವಳು. ಅವುಗಳೆಂದರೆ ಬಿಳಿ ಸೆರಗು, ಹೆರಿಗೆ ಮಾಡಿಸುವುದು, ಮುಟ್ಟು ನಿಲ್ಲುವುದಕ್ಕೆ, ವಾಂತಿ, ಭೇದಿ, ತಲೆನೋವು ಮತ್ತು ಇನ್ನಿತರ ಕಾಯಿಲೆಗಳು. ಆದರೆ ಬೊಜ್ಜು ಕರಗಿಸುವಿಕೆಗೆ ಚಿಕಿತ್ಸೆ ಪ್ರಧಾನವಾಗಿ ಇಂದಿಗೂ ಮುಂದುವರೆಸುತ್ತಿದ್ದಾರೆ. ೩೦ ೩೫ ವರ್ಷಗಳಿಂದಲೂ ಈ ವೃತ್ತಿಯನ್ನು ಕೂಲಿ ಮಾಡುವುದರೊಂದಿಗೆ ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ನೀವು ಹೇಗೆ ಕಲಿತಿರಿ. ಅದೆಲ್ಲ ಹೇಳೊಂಗೆ ಇಲ್ಲಾ. ಏಕೆಂದರೆ

ಮರೆತು ಹೋಗುತ್ತದೆ ಅನ್ನುತ್ತಾರೆ. ಆದ್ರೂ ನೀವು ಕೇಳುತ್ತಿದ್ದೀರಿ ಅನ್ನೊ ಕಾರಣದಿಂದ ಹೇಳುತ್ತಿದ್ದೀನಿ. ನಮ್ಮ ಅಜ್ಜಿ ನಾನು ಆ ಬಾಲ್ಯದಿಂದ ಬೇರೆಯವರ ಮನೆಗಳಿಗೆ ಕರೆದುಕೊಂಡು ಹೋಗುತ್ತಿದ್ಲು. ಅಂತ ಸಂದರ್ಭದಲ್ಲಿ ಆ ತಪ್ಪಲಕೊಡು ಈ ಎಣ್ಣೆಕೊಡು, ಆ ರಸ ಹಾಕು ಅನ್ನುತ್ತಿದ್ದಳು. ನಾನು ಕೂಡ ದೊಡ್ಡವಳಾದೆ ಅನಂತರ ನನ್ನ ಅಜ್ಜಿ ನನ್ನ ಕೈಯುಲ್ಲಿಯೇ ಕೊಡಿಸುತ್ತದ್ದಳು. ಆದರಿಂದ ಬೇರೆ ಬೇರೆ ಕಾಯಿಲೆಗಳಿಗೆ ಔಷಧಿ ಮಾಡುವುದನ್ನು ಕಲಿತೆ ಅನ್ನುತ್ತಾರೆ ಈಕೆ. ಒಂದು ತಣಿಗೆಯನ್ನು ತೆಗೆದುಕೊಂಡು ಅದರ ತುಂಬ ನೀರು ತುಂಬಿ ಒಂದು ಬಟ್ಟೆಯಿಂದ ಅದರ ಬಾಯಿಯನ್ನು ಮುಚ್ಚಿ ಕಟ್ಟಬೇಕು. ಅನಂತರ ಅದನ್ನು ಮನೆಯಿಂದ ಹೊರಗಿನ ಪಡಶಾಲೆಯ ಮುಂದೆ ಇರುವ ಸೂರಿಗೆ ಕಟ್ಟಿ ನೇತು ಬಿಡಬೇಕು. ಅನಂತರ ಮುಂಜಾನೆ ಅದನ್ನು ತೆಗೆದುಕೊಂಡು ಬಂದು ಅದರೊಳಗೆ ಒಂದೆರಡು ತೊಟ್ಟು ಜೇನ ಹನಿಗಳು, ಆ ಮೇಲೆ ನಿಂಬೆಹಣ್ಣಿನ ರಸವನ್ನು ಹಿಂಡಬೇಕು. ಅನಂತರ ಚೆನ್ನಾಗಿ ಎಲ್ಲವನ್ನು ಮಿಶ್ರಣ ಮಾಡಿದ ನಂತರ ಬೊಜ್ಜು ಇರುವ ವ್ಯಕ್ತಿಗೆ ಹಾಳು ಹೊಟ್ಟೆಗೆ ಕುಡಿಸಬೇಕು. ಹೀಗೆ ಒಂದೆರಡು ವಾರ ಮಾಡಿದರೆ ಬೊಜ್ಜು ಇದ್ದ ವ್ಯಕ್ತಿ ಮೊದಲಿನಂತೆ ಆಗುವನು ಅನ್ನುತ್ತಾರೆ ಪದ್ದಮ್ಮ ಅವರು.

ಇಸುಬು, ಚಿಬ್ಬು, ಹುಳಕಡ್ಡಿಗೆ ಚಿಕಿತ್ಸೆ

ಸಾಮಾನ್ಯವಾಗಿ ಈ ರೋಗ ದೊಡ್ಡವರು, ಚಿಕ್ಕವರು ಮತ್ತು ಮಕ್ಕಳಲ್ಲಿ ಉಂಟಾಗುವುದು ಸಹಜ. ಈ ಆಧುನುಕತೆಯಲ್ಲಿಯೂ ಹಳ್ಳಿಗಳಲ್ಲಿ ನೆಲೆನಿಂತಿರುವ ಜನಪದರು ಆಧುನಿಕ ಚಿಕಿತ್ಸೆಯನ್ನು ಇಷ್ಟಪಡದೆ ಇನ್ನೂ ನಾಟಿ ಔಷಧಿಯನ್ನೇ ಅವಲಂಬಿಸಿರುತ್ತಾರೆ ಎಂಬುದಕ್ಕೆ ಈಗಾಗಲೇ ಅನೇಕ ರೋಗಗಳಿಗೆ ನಾಟಿ ಔಷಧಿ ವೈದ್ಯರ ಚಿಕಿತ್ಸೆಯ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಈ ರೋಗಕ್ಕೆ ಸಂಬಂಧಿಸಿದಂತೆ ಅನೇಕ ಹಳ್ಳಿಗಳಲ್ಲಿ ಅನೇಕ ವೈದ್ಯರನ್ನು ಭೇಟಿ ಮಾಡಿ ಅವರುಗಳಲ್ಲಿ ತುಂಬ ಸರಳ ಹಾಗೂ ಯಾವ ಸಂಕೋಚವಿಲ್ಲದೆ ನಮಗೆ ಸ್ಪಂದಿಸಿರುವ ವೈದ್ಯರಲ್ಲಿ ವೆಂಕಟೇಶಲು ಒಬ್ಬರು.

ವೆಂಕಟೇಶಲು ಅವರಿಗೆ ಸುಮಾರು ೪೯ ವರ್ಷ. ಇವರ ತಂದೆ ಉರುಕುಂದಪ್ಪ. ಇವರ ಊರು ಬಳ್ಳಾರಿ ರೂಪನಗುಡಿ. ವೆಂಕಟೇಶಲು ಓದಿಕೊಂಡಿದ್ದು, ಚಾಕರಿಯನ್ನು ಮಾಡುವುದರ ಜೊತೆಗೆ ತಮ್ಮ ಮನೆತನದಲ್ಲಿದ್ದ ನಾಟಿ ವೈದ್ಯಪದ್ಧತಿಯನ್ನು ಸುಮಾರು ೩೫ ವರ್ಷಗಳಿಂದಲೂ ಮಾಡಿಕೊಂಡು ಬಂದಿರುತ್ತಾರೆ. ತಾತನಿಂದ ತಂದೆ ಅನಂತರ ನಾನು ಈಗ ಮಾಡುತ್ತಿದ್ದೇನೆ. ನನ್ನ ಮಕ್ಕಳನ್ನು ಕಲಿಯಿರಿ ಅಂದರೆ ಮುಖ ತಿರುಗಿಸಿಕೊಂಡು ಹೋಗುತ್ತಾರೆ. ಕಾಲಬದಲಾಯಿತು ಅನ್ನುತ್ತಾ ಚಿಕಿತ್ಸೆಕ್ರಮವನ್ನು ತಿಳಿಸಿದರು.

ನಾಟಿ ಬೆಳ್ಳುಳ್ಳಿಗಳನ್ನು ಎಷ್ಟುಬೇಕು ಅಷ್ಟು ಬಿಡಿಸಿಕೊಳ್ಳಬೇಕು. ಅನಂತರ ಅರಸಿನ, ಹರಳೆಣ್ಣೆ ಒಂದು ಸ್ಪಟಿಕದಷ್ಟು ಸುಣ್ಣ ಮತ್ತು ಒಂದು ಹಂಚಿನ ಚೂರನ್ನು ಅರೆದು ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು. ಅನಂತರ ಬಿಳಿ ಚಿಬ್ಬು ಅಥವಾ ಹುಳುಕಡ್ಡಿ ಕಂಡುಬಂದ ಕೈ, ಕಾಲು, ಬೆನ್ನು, ಕುತ್ತಿಗೆ, ಎದೆ ಹೀಗೆ ರೋಗಿಯ ಯಾವುದೇ ಭಾಗದಲ್ಲಿದ್ದರೆ ಅಲ್ಲಿ ಹಂಚಿನ ಚೂರಿನಿಂದ ಕೆರೆದು ಆ ಜಾಗಕ್ಕೆ ನಿಧಾನವಾಗಿ ಹಚ್ಚಬೇಕು. ಹೀಗೆ ಒಂದೆರೆಡುವಾರ ಮಾಡಿದರೆ ಆ ಕಾಯಿಲೆ ಗುಣುಖವಾಗುತ್ತದೆ ಎನ್ನುತ್ತಾರೆ ನಾಟಿವೈದ್ಯರು.

ಲಕ್ವಾ ಅಥವಾ ಪಾರ್ಶ್ವವಾಯು

ಬ್ಯಾಲಿ ಚಿಂತಿ ತಿಮ್ಮಪ್ಪ ಅವರಿಗೆ ೭೭ ವರ್ಷ. ತಂದೆ ಲಿಂಗಪ್ಪ. ಇವರು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಬ್ಯಾಲಿಚಿಂತಿ ಅಂತ ಪ್ರಸಿದ್ಧಿ. ಹಾಗೆಯೇ ಲಕ್ವಾ ಎಂದ ತಕ್ಷಣ ಅವರ ಹೆಸರನ್ನು ನೆನಪು ಮಾಡಿಕೊಳ್ಳುತ್ತಾರೆ. ಈ ರೋಗಕ್ಕೆ ಕುಪ್ಪಿನ ಟಾಕು ಅಥವಾ ಕನ್ನಡದಲ್ಲಿ ನಾರ್‌ಗೋಳೆ ಗಿಡ ಅಂತ ಕರೆಯುತ್ತಾರೆ. ಈ ಗಿಡದ ಎಲೆಯನ್ನು ಬಿಡಿಸಿಕೊಳ್ಳುವರು. ಅನಂತರ ಅದನ್ನು ಚೆನ್ನಾಗಿ ಅರೆದು ಹಿಂಡಿದಾಗ ರಸ ಬರುತ್ತದೆ. ಆ ರಸವನ್ನು ಕರ್ಪೂರವನ್ನು ಸೇರಿಸಿ ಮಿಶ್ರಣ ಮಾಡುವರು. ಅನಂತರ ಕರಿ ಎಳ್ಳಿನ ಎಣ್ಣೆಯಲ್ಲಿ ಕುದುಸಿದಾಗ, ಆ ಗಿಡ ಇಂಗಿದಾಗ ಗಸಿ ಉಳಿಯುತ್ತದೆ. ಅನಂತರ ಉಳಿದ ಗಸಿಯಿಂದ ಪಾರ್ಶ್ವವಾಯು ಆದ ಮನುಷ್ಯನ ಭಾಗಕ್ಕೆ ಚೆನ್ನಾಗಿ ತಿಕ್ಕಬೇಕು. ಹೀಗೆ ದಿನಕ್ಕೆ ಎರಡು ಬಾರಿ ಮಾಡಬೇಕು. ಹೀಗೆ ನಿರಂತರವಾಗಿ ಮೂರು ಅಥವಾ ನಾಲ್ಕು ತಿಂಗಳು ಮಾಡಿದಾಗ ಈ ರೋಗ ಗುಣಮುಖವಾಗುತ್ತದೆ.

ನರಸಿಡಿತ, ಪಿಡಸ್ಸು, ನಂಜು, ರೊಚ್ಚೆ ಹಟ ಹಿಡಿದವರಿಗೆ ಚಿಕಿತ್ಸೆ

ಆಯ್ಯಾಳಿ ಅಂಬಮ್ಮಳಿಗೆ ಸುಮಾರು ೬೫ ವರ್ಷ. ಈಕೆ ಹೊಸಪೇಟೆ ತಾಲೂಕಿನ ಅನಂತಶಯನ ಗುಡಿಯಲ್ಲಿ ವಾಸ ಮಾಡುತ್ತಿದ್ದಾಳೆ. ಸುಮಾರು ೩೦ ವರ್ಷಗಳಿಂದಲೂ ನಾಟಿವೈದ್ಯಪದ್ಧತಿಯನ್ನು ರೂಢಿಸಿಕೊಂಡು ಬಂದಿರುವರು. ತನ್ನ ತಾಯಿಯಿಂದ ಕಲಿತು ಇಂದಿಗೂ ಮುಂದುವರಿಸಿಕೊಂಡು ಬಂದಿರುವರು. ತಲೆಸಿಡಿತ, ಹೊಟ್ಟೆ, ಕಿಬ್ಬೊಟ್ಟೆ, ಎದೆ, ಅರೆ ತಲೆನೋವು ಬಂದವರಿಗೆ ಒಡೆದ ಬಳೆಯ ಚೂರನ್ನು ತೆಗೆದುಕೊಂಡು ದೀಪದಲ್ಲಿ ಕಾಯಿಸಿ ಶರೀರದ ಯಾವ ಭಾಗದಲ್ಲಿ ನರಸಿಡಿತ ಇರುತ್ತದೆಯೋ ಆ ಭಾಗಕ್ಕೆ ಕಾಯಿಸಿದ ಬಳೆ ಚೂರಿನಿಂದ ಆ ಭಾಗಕ್ಕೆ ಇಟ್ಟು ಚುಟುಕಿ ಹಾಕುತ್ತಾಳೆ. ಅನಂತರ ಆ ಭಾಗದ ಮೇಲೆ ಹರಳೆಣ್ಣೆ ಮಿಶ್ರಿತವಾದ ಅರಿಸಿನವನ್ನು ಹಚ್ಚುವಳು. ಹೀಗೆ ಮಾಡಿದ ಕೂಡಲೇ ಆ

ನರಸಿಡಿತ ನಿಂತು ಹೋಗುತ್ತದೆ ಎಂದು ಚಿಕಿತ್ಸೆ ತೆಗೆದುಕೊಂಡವರು ಮತ್ತು ನಾಟಿ ವೈದ್ಯ ನೀಡುವ ಅಂಬಮ್ಮ ಹೇಳುವರು.

ಅಲ್ಲದೆ ಈಕೆ ಬೇವಿನ ಕಡ್ಡಿಯನ್ನು ತೆಗೆದುಕೊಂಡು ಇನ್ನೂ ಬೇರೆ ಬೇರೆ ಚಿಕಿತ್ಸೆ ನೀಡುವಳು. ಮಕ್ಕಳಿಗೆ ನಂಜು ಬಂದಾಗ ಅಥವಾ ತುಂಬಾ ರೊಚ್ಚೆ ಹಿಡುತ್ತಿರುವ ಅಲ್ಲದೆ ಪಿಡಸು ಬರುವ ಮಕ್ಕಳಿಗೆ ಬೇವಿನ ಕಡ್ಡಿಯನ್ನು ತೆಗೆದುಕೊಂಡು ಬೆಂಕಿ ಅಥವಾ ದೀಪದಿಂದ ಕಾಯಿಸಿ ತಲೆಯ ಬಲಗಡೆ ಉಬ್ಬಿನ ಸ್ವಲ್ಪ ಮೇಲೆ ಚಿಕಟಿ ಹಾಕುವಳು. ಇಲ್ಲಾ ಮಕ್ಕಳ ಹೊಕ್ಕಳ ಮೇಲಿನ ಭಾಗಕ್ಕೆ ಅದೇ ಬೇವಿನ ಕಡ್ಡಿಯನ್ನು ಕಾಯಿಸಿ ಚಿಟಕಿ ಹಾಕುವಳು. ಹೀಗೆ ಮಾಡಿದಾಗ ಮಕ್ಕಳು ರೊಚ್ಚೆ, ಪಿಡಸು ನಿಂತು ಹೋಗುತ್ತದೆ.

ಕರಿಕೆ ಅಥವಾ ಗರಿಕೆಯಿಂದ ಚಿಕಿತ್ಸೆ

ರಾಯಪ್ಪ ಅವರಿಗೆ ಸುಮಾರು ೫೪ ವರ್ಷ. ಈತನ ಊರು ಬಳ್ಳಾರಿಯ ಡಿ.ನಾಗೇನಹಳ್ಳಿ. ಇವರ ಮೂಲಕಸುಬು ವ್ಯವಸಾಯ. ಈತನ ಕುಟುಂಬದವರಲ್ಲಿ ತಾತ ಮನುಷ್ಯರ ಬೇರೆ ಬೇರೆ ರೋಗಗಳಿಗೆ ನಾಟಿ ಔಷಧಿಯನ್ನು ಕೊಡುತ್ತಿದ್ದರಂತೆ. ಆದುದರಿಂದ ತನ್ನ ತಾತನಿಂದ ಬಳುವಳಿಯಾಗಿ ಬಂದಂತಹ ವೈದ್ಯಪದ್ಧತಿ ಈ ರಾಯಪ್ಪ ಅವರಿಗೆ ಬಂದಿದೆ. ಆದರೆ ರಾಯಪ್ಪ ಇತರ ರೋಗಗಳಿಗೆ ಔಷಧಿ ನೀಡುತ್ತಾರೆ. ಆದರೆ ಕ್ಷೇತ್ರಕಾರ್ಯದಲ್ಲಿ ವಿಶಿಷ್ಟವೆನಿಸಿದ್ದು ಈ ಗದ್ದೆ, ಹೊಲ ತೋಟ, ಬಯಲಿನಲ್ಲಿ ಬೆಳೆಯುವ ಗರಿಕೆಯಿಂದ ಔಷಧಿ ಕೊಡುವುದು ವಿಶೇಷ ಅನ್ನಿಸಿ ಇಲ್ಲಿ ಉಲ್ಲೇಖಿಸಿರುತ್ತೇನೆ.

ಸಾಮಾನ್ಯವಾಗಿ ಗರಿಕೆ ಹೊಲದಲ್ಲಿ ಬೆಳೆದರೆ ರೈತರಿಗೆ ತೊಂದರೆ. ಏಕೆಂದರೆ ಪೂರ್ತಿಯಾಗಿ ಕ್ರಮೇಣ ಹೊಲವನ್ನೆಲ್ಲ ಆವರಿಸಿ ಬೀಡುತ್ತದೆ. ಇದರಿಂದ ಬೆಳೆಗಳು ಬೆಳೆಯುವುದಿಲ್ಲ. ಇದರಿಂದ ಇತ್ತೀಚೆಗೆ ಗರಿಕೆ ಬೇರೆ ಬೇರೆ ಕಾರಣಗಳಿಂದ ನಾಶ ಹೊಂದುತ್ತಿದೆ. ಈ ಗರಿಕೆಯನ್ನು ಪೂಜೆಯ ಸಂದರ್ಭದಲ್ಲಿ ವಿಘ್ನವಿನಾಸಕ ಅಂತ ಭಕ್ತರ ಮನೆಯಲ್ಲಿ ಪೂಜಿಸುವರು. ಜೊತೆಗೆ ವಿಘ್ನೇಶ್ವರನ ಸಂಕೇತ ಅಂದಕೊಂಡು ಜನಪದರು ಇಂದಿಗೂ ಭಾವಿಸಿರುತ್ತಾರೆ. ಆದರೆ ಇದರಿಂದ ಮನುಷ್ಯ ಪ್ರಾಣಿಗಳಿಗೆ ಚಿಕಿತ್ಸೆ ಮಾಡಬಹುದಾಗಿದೆ.

ರಾಯಪ್ಪ ಅವರು ಮನೆದೇವರನ್ನು ಪೂಜೆ ಮಾಡುವರು. ಅನಂತರ ಗರಿಕೆಗೆ ನೀರನ್ನು ಹಾಕಿ ಬೇರು ಸಮೇತ ಕೀಳುವರು. ಅನಂತರ ಇಡೀ ಬೇರನ್ನು ರಸ ಮಾಡಿ ಯಾರಿಗೆ ತುಂಬಾ ವರ್ಷಗಳಿಂದ ಹೊಟ್ಟೆನೋವು ಇದ್ದವನಿಗೆ ಕುಡುಸಿದರೆ ಹೊಟ್ಟೆನೋವು ಕಾಣಿಸುವುದಿಲ್ಲ. ಹೀಗೆ ದಿನಕ್ಕೆ ಒಂದು ಸಾರಿಯಂತೆ ಮೂರು ದಿವಸ ಕುಡಿಸಿದರೆ ಹೊಟ್ಟೆನೋವು ದೂರವಾಗುತ್ತದೆ ಎಂದು ಹೇಳುತ್ತಾರೆ.

ಅಲ್ಲದೆ ಗರಿಕೆ, ಅರಿಶಿಣ, ಮೊಸರನ್ನು ಚೆನ್ನಾಗಿ ಮಿಶ್ರಣ ಮಾಡಿ ಮನುಷ್ಯನ ಶರೀರದಲ್ಲಿ ಗಾಯ, ತುರಿಕೆ ಕಂಡುಬಂದ ಭಾಗಕ್ಕೆ ಹಾಕಿದರೆ ಕ್ರಮೇಣ ಗಾಯ ವಾಸಿಯಾಗುತ್ತದೆ. ಅಂದರೆ ದಿನಕ್ಕೆ ಒಂದು ಸಾರಿ ಮಾಡಬೇಕು. ಹೀಗೆ ಒಂದು ವಾರ ಮಾಡಿದರೆ ಗಾಯ ಕ್ರಮೇಣ ಗುಣಮುಖ ಹೊಂದಿ ವಾಸಿಯಾಗುತ್ತದೆ.

ತಾಮ್ರ ತಗಡಿನಿಂದ ಚಿಕಿತ್ಸೆ

ಯರಗುಡಿ ಕೆ.ನಾರಾಯಣರಾವ್, ವಯಸ್ಸು ೮೦ವರ್ಷ, ಊರು ಗೋಟೂರು. ಇವರು ವಂಶಪಾರಂಪರಿಕವಾಗಿ ಈ ಚಿಕಿತ್ಸೆಯನ್ನು ರೂಢಿಸಿಕೊಂಡು ಬಂದಿದ್ದಾರೆ. ಇವರ ತಂದೆ ಯರಗುಡಿ ಪುಟ್ಟಪ್ಪನವರಿಂದ ಕಲಿತುಕೊಂಡೆ ಎನ್ನುತ್ತಾರೆ. ಈ ಚಿಕಿತ್ಸೆಯ ಬಗ್ಗೆ ಯಾರೊಡನೆಯೂ ಪ್ರಸ್ತಾಪ ಮಾಡಿರಲಿಲ್ಲವೆನ್ನುತ್ತಾರೆ. ಏಕೆಂದರೆ ತಾವು ಕಲಿತುಕೊಂಡು ಬಂದಂತಹ ವಿದ್ಯೆ ಮರೆಯಾಗುತ್ತದೆ ಎಂಬ ನಂಬಿಕೆ ಅವರಲ್ಲಿದೆ. ಈ ವೃತ್ತಿ ಪ್ರವೃತ್ತಿಯಾಗಿದೆ. ಚಿಕಿತ್ಸೆ ಎಂದರೆ ಯಾವ ಮನುಷ್ಯನಿಗೆ ಕೈ ಕಾಲು ಸೋತುಕೊಂಡು ಬೆನ್ನು, ಕುತ್ತಿಗೆ, ಕಣ್ಣು ಸುಸ್ತಾಗಿ ಶಕ್ತಿಗುಂದಿರುತ್ತದೆಯೋ ಅಂತಹವರಿಗೆ ಇವರು ತಾಮ್ರದ ತಗಡನ್ನು ತೆಗೆದುಕೊಂಡು ಅವರ ಮನೆದೇವರನ್ನು ನೆನೆದು ಮಂತ್ರವನ್ನು ಪಠಣ ಮಾಡಿ ಜೊತೆಗೆ ಜನಪದೀಯ ಸಸ್ಯಗಳಾದ ಬೇವು, ಹೊಂಗೆ, ತೊಗಟೆ ತೆಯುದು ಆ ತಗಡಿಗೆ ಹಚ್ಚಿ ಅವರು ಡಬ್ಬಣದಿಂದ ಬರೆಯುವರು. ಈ ರೀತಿ ಬರೆದ ತಗಡನ್ನು ಹಸಿನೂಲಿನಿಂದ ಸುತ್ತಿ ಅನಂತರ ತಾಯತದೊಳಗೆ ಹಾಕುವರು. ಆ ತಾಯತವನ್ನು ಈರಣ್ಣ ದೇವರಗುಡಿಯ ಮುಂದೆ ಆರಾಧಿಸಿ ಆ ತಾಯತವನ್ನು ಹೆಣ್ಣುಮಕ್ಕಳ ಬಲತೋಳಿಗೆ ಅಥವಾ ಕೊರಳಗಿ ಕಟ್ಟುವರು. ಈ ತಾಯತವನ್ನ ವಾರದಲ್ಲಿ ಎರಡು ದಿವಸ ಅಂದರೆ ಸೋಮವಾರ ಮತ್ತು ಭಾನುವಾರ. ಅದರಲ್ಲೂ ವಿಶೇಷವಾಗಿ ಅಮವಾಸ್ಸೆಯ ದಿನ ಒಳ್ಳೆಯದೆಂದು ಭಾವಿಸುವರು.

ಈ ನಾಟಿವೈದ್ಯರು ಆಡುಮುಟ್ಟದ ಗಿಡದ ಬೇರಿನಿಂದ ಕಫ, ಹೊಟ್ಟೆನೋವು ಇರುವವರಿಗೆ, ಹೊಟ್ಟೆ ಉಬ್ಬರಿಸಿದವರಿಗೆ ಮತ್ತು ಹುಳಿ ತೇಕು ಬರುವವರಿಗೆ ಚಿಕಿತ್ಸೆಯನ್ನು ಕೂಡ ಮಾಡುವರು. ಇವರು ಅಡಿಕೆಯಷ್ಟು ಆಡು ಮುಟ್ಟದ ಬೇರನ್ನು ತಂದು ಒಣಗಿಸಿ ಅರೆದು ಪುಡಿಮಾಡಿ ಕರಿಬಣ್ಣದ ಮೇಕೆ ಹಾಲಿನಲ್ಲಿ ಬೆರೆಸಿ ಕುಡಿಸುತ್ತಾರೆ. ಹೀಗೆ ಮಾಡುವುದರಿಂದ ಕಫ ಹೊರಗೆ ಬರುತ್ತದೆ. ಮತ್ತು ಅಜೀರ್ಣವಾದ ಆಹಾರವು ವಾಂತಿಯಾಗಿ ಹೊರಬರುತ್ತದಲ್ಲದೇ ಹೊಟ್ಟೆಯನ್ನು ತೊಳೆದು ಶುಚಿಗೊಳಿಸುತ್ತದೆ. ಅದಲ್ಲದೇ ಇದರಿಂದಾಗುವ ಇತರೆ ತೊಂದರೆಗಳನ್ನು ನಿವಾರಿಸುತ್ತದೆ. ವಾಂತಿ ಭೇದಿ ಮತ್ತು ಕಫ ಕ್ರಮಬದ್ಧವಾಗಿ ನಡೆದುಕೊಳ್ಳುವಂತೆ ಮಾಡುತ್ತದೆ.

ಬಲಹೀನತೆಗೆ ಚಿಕಿತ್ಸೆ

ಅಲ್ಲದೇ ಈ ಮೇಲೆ ತಿಳಿಸಿದ ಚಿಕಿತ್ಸೆಯನ್ನು ನಾರಾಯಣರಾವ್ ರೂಡಿಸಿಕೊಂಡು ಬಂದಿದ್ದಾರೆ. ಅಂದರೆ ಹಿಂದಿನ ಕಾಲದಲ್ಲಿ ಕುಸ್ತಿ ಪಟುಗಳಿಗೆ ಮತ್ತು ಹೊಸದಾಗಿ ಮದುವೆಯಾದ ತರುಣರಿಗೆ ಶಕ್ತಿ ಹೆಚ್ಚಿಸುವಂತ ಚಿಕಿತ್ಸೆಯನ್ನು ಮಾಡುವರು. ಇಂತಹ ನಿಶಕ್ತಿಗೆ ಇವರು ಬಾದಾಮಿ, ಕಾರಿಕ್, ದ್ರಾಕ್ಷಿ, ಶುಂಠಿ, ಲವಂಗ, ಜಾಪತ್ರಿ, ಮೋಡಿ, ಮೆಣಸು, ಎಲಕ್ಕಿ, ಹಾಲು, ಜೇನು ಕುಂಚ ಅರಿಶಿನ ಬೆಲ್ಲ ಇವುಗಳನ್ನು ಹುರಿದು ಪುಡಿ ಮಾಡಿ ಆಕಳ ತುಪ್ಪ ಮಿಶ್ರಣ ಮಾಡಿ ಲೇಹವನ್ನು ತಯಾರಿಸುತ್ತಾರೆ. ಇದನ್ನು ಬಲಹೀನತೆಯಿಂದ ಬಳಲುವ ವ್ಯಕ್ತಿಗಳಿಗೆ ಕೊಡುವ ಪದ್ಧತಿ ರೂಢಿಯಲ್ಲಿದೆ. ಈ ಲೇಹವು ಆರೋಗ್ಯವನ್ನು ಸ್ಥಿರವಾಗಿ, ಸದೃಢವಾಗಿ ಮತ್ತು ಶಕ್ತಿಯುತವಾಗಿಡಲು ಸಹಕಾರಿಯಾಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಜನಪದ ವೈದ್ಯ ಚಿಕಿತ್ಸೆಗಳ ತೊಂದರೆಗಳು

ಆಧುನಿಕದ ಯುಗದಲ್ಲಿ ವೈಜ್ಞಾನಿಕವಾದಂತಹ ಚಿಕಿತ್ಸೆಗಳು ಬಂದಿದ್ದು, ದಿನದಿನೇ ಜನಪದರು ಚಿಕಿತ್ಸೆಗಳ ಉಪಯೋಗವನ್ನ ಕಡಿಮೆ ಮಾಡುತ್ತಾ ಬಂದಿದ್ದಾರೆ. ಇದಕ್ಕೆ ಕಾರಣಗಳೇನೆಂದರೆ ಪಥ್ಯ ಕ್ರಮ ಮಾಡುವ ಮನಸ್ಸಿಲ್ಲದೇ ಕಟ್ಟುಪಾಡುಗಳಿಗೆ ಒಳಗಾಗದೆ ಬೇಗ ಬೇಗನೆ ತಮ್ಮ ರೋಗಗಳನ್ನ ವಾಸಿ ಮಾಡಿಕೊಳ್ಳುವ ಕಾತುರದಿಂದ ಜನಪದ ವೈದ್ಯ ಚಿಕಿತ್ಸೆಗಳು ಮರೆಯಾಗುತ್ತಾ ಹೋಗುತ್ತಿವೆ. ವನಸ್ಪತಿಗಳ ಜ್ಞಾನ ಈಗ ಕಣ್ಮರೆಯಾಗುತ್ತಿದೆ. ಅವುಗಳಿಗೆ ಪ್ರೋತ್ಸಾಹವು ಕೂಡ ಕುಂದುತ್ತಿದೆ. ಪ್ರಧಾನವಾಗಿ ಪರಿಸರ ಮಾಲಿನ್ಯದಿಂದಾಗಿ ಅಡವಿಗಳ ನಾಶದಿಂದ ಸುಲಭವಾಗಿ ದೊರೆಯುತ್ತಿದ್ದಂತಹ ಸಸ್ಯಗಳು ಇಂದು ಕಣ್ಮರೆಯಾಗುತ್ತಿವೆ. ನಮ್ಮೊಡನಿರುವಂತಹ ನಿಸರ್ಗದ ಮಡಿಲಿನಲ್ಲಿ ಜನಪದ ಔಷಧಿಯನ್ನ ಮಾಡಿಕೊಳ್ಳುವಂತಹ ಕಿಂಚಿತ್ತು ತಾಳ್ಮೆ, ಪ್ರಜ್ಞೆ, ಪ್ರಯತ್ನ, ಕಷ್ಟ, ಸಹಿಷ್ಣುತೆ ಜನಪದರಲ್ಲಿ ಕಡಿಮೆಯಾಗಿದೆ.

ಇತ್ತೀಚಿಗಂತೂ ಗ್ರಂಥಗಳನ್ನು ಓದಿಕೊಂಡು ಚಿಕಿತ್ಸೆಗಳನ್ನು ಪ್ರಚಾರ ಮಾಡುವುದು ಒಂದು ಕಡೆಯಾದರೆ, ಅವುಗಳಿಗೆ ಪೂರಕವಾಗಿ ಪ್ರಾದೇಶಿಕವಾಗಿ ಭಿನ್ನ ಭಿನ್ನ ಹೆಸರುಗಳಿಂದ ಇಂತಹವೇ ಸಸ್ಯಗಳು ಎಂದು ತಿಳಿಯಲು ತೊಡಕುಂಟಾಗುತ್ತಿದೆ. ಜಾಗತೀಕರಣದ ನೆಲೆಯಲ್ಲಿ ಎಲ್ಲ ಜನಪದರು ಬಳಸುತ್ತಿದ್ದಂತಹ ಸಸ್ಯ ಖನಿಜ ಸಂಪತ್ತುಗಳು ತುಂಬಾ ಕ್ಷೀಣಿಸುತ್ತಿವೆ. ಈ ಹಿನ್ನೆಲೆಯಲ್ಲಿ ಜನಪದರು ಕೂಡ ನಾಟಿವೈದ್ಯವನ್ನು ಮರೆಯುವಂತಾಗಿದ್ದಾರೆ. ಆದ್ದರಿಂದ ಅವುಗಳನ್ನು ಪುನಃ ಪಡೆಯುವ ನಿಟ್ಟಿನಲ್ಲಿ ವಿದ್ವಾಂಸರು, ಆಸ್ತಕರು ಗ್ರಾಮೀಣ ಜನಪದರು ಕೂಡ ಅವುಗಳ ರಕ್ಷಣೆಯತ್ತ ಗಮನಹರಿಸಿದರೆ ನಾಟಿ ವೈದ್ಯವು ಜೀವಂತವಾಗಿ ನೆಲೆಯೂರಲು ಸಾಧ್ಯ.

ಅಧ್ಯಾಯ ೬

ಆಧುನಿಕತೆ ಮತ್ತು ಜನಪದ ವೈದ್ಯ

೬

ಆಧುನಿಕತೆ ಮತ್ತು ಜನಪದ ವೈದ್ಯ

ಪಾಶ್ಚಿಮಾತ್ಯರ 'ಆಧುನಿಕತೆ' ಭಾರತದಂತಹ ಹಳ್ಳಿಗಳ ವಿಷಯದಲ್ಲಿ ದಾಪುಗಾಲು ಇಡುತ್ತಿದೆ. ಅಲ್ಲಲ್ಲಿ ವಿರೋಧವಿಲ್ಲದೆ ಇಲ್ಲ, ಇದಕ್ಕೆ ಅನೇಕ ಕಾರಣಗಳೂ ಇದೆ. ಅವುಗಳೆಂದರೆ ಸಂಸ್ಕೃತಿಯ ಜಡತ್ವ. ಜೊತೆಗೆ ತನ್ನ ಮೌಲ್ಯವನ್ನು ಕಳೆದುಕೊಳ್ಳುವ ಭಯವೂ ಇರಬಹುದಾಗಿದೆ. ಆದರೆ ಗಾಂಧಿ-ಲೋಹಿಯಾ, ಅಂಬೇಡ್ಕರ್, ಜಯಪ್ರಕಾಶ್ ಹಾಗೂ ಬುದ್ಧ ಬಸವ ಅವರ ಧಾರೆಯ ಪರಿಣಾಮಗಳಿರ ಬಹುದು. ಇಲ್ಲಿ ಸೂಕ್ಷ್ಮವಾಗಿಹೇಳುವುದಾದರೆ ಭಾರತೀಯವಾದ ಅಭಿವೃದ್ಧಿ, ಪ್ರಗತಿಗೆ ವಿರೋಧ ಇಲ್ಲ. ಆದರೆ ಹೊಸ ತನದ ಪರಿಣಾಮವಾಗಿ ಜನಪದರು ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳುವುದೆಂದು ತತ್ತರಿಸುತ್ತಿರುವರು. ಒಂದು ಕಡೆ ಪಟ್ಟಣವಾಸಿಗಿಗೆ ಜಾಗತೀಕರಣ ಆಕರ್ಷಣೆಯಾಗುತ್ತಿದ್ದರೆ, ಇನ್ನೊಂದುಕಡೆ ಆಧುನಿಕತೆಗೆ ಒಗ್ಗಿಕೊಳ್ಳಬೇಕೆಂಬ ಭರಾಟೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಸರಕಾರ ಜನರ ಹಿತಾಶಕ್ತಿ ಹಾಗೂ ಒತ್ತಡಗಳನ್ನು ಪೂರೈಸಲಾಗದೆ ಒಂದೊಂದು ಘಟಕವನ್ನು ಖಾಸಾಗಿಕರಣ ಮಾಡುತ್ತಾ ಬಂಡವಾಳವಿದ್ದವರನ್ನು ಆಹ್ವಾನಿಸುತ್ತಿದೆ. ಇನ್ನೂ ಬಂಡವಾಳಶಾಹಿಗಳು ತಮ್ಮ ಬಂಡವಾಳದ ವ್ಯಾಮೋಹವನ್ನು ಬಿಡದೆ ಇನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಬಂಡವಾಳವನ್ನು ಹೂಡಿ ಸಾಮಾನ್ಯ ಜನರ ಆಶಯ, ಕಸುಬು ಹಾಗೂ ಪದ್ಧತಿಗಳನ್ನು ನಾಶಮಾಡುವ ಪ್ರಯತ್ನ ಮುಂದುವರೆಯುತ್ತಿದೆ.

ಈ ಹೊತ್ತಿನಲ್ಲಿ ಪ್ರಶ್ನಿಸಿಕೊಳ್ಳುವುದಾದರೆ ಆಧುನಿಕ ಸಂದರ್ಭದಲ್ಲಿ ಜಾನಪದ ಪ್ರಕಾರಗಳು ಸ್ಪಂಧಿಸಬೇಕಾಗುತ್ತದೆಯೋ ಅಥವಾ ಬೇಡವೆಂದು ಹೇಳುವುದು ಎಷ್ಟು ಸೂಕ್ತ! ಈ ಪ್ರಶ್ನೆಗಳನ್ನು ಜಾನಪದ ವಿಷಯಕ್ಕೆ ಅಡಿ ಇಡುತ್ತಿರುವವರು, ಜಾನಪದ ವಿದ್ವಾಂಸರು, ಜಾನಪದ ವಿಜ್ಞಾನಿಗಳು ಯೋಚಿಸುವಂತ ವಿಚಾರ. ಆದುದರಿಂದ ಎಲ್ಲಿಯವರೆಗೆ ಒಂದು ಕಲಾಪ್ರಕಾರ ಆಧುನಿಕತೆ ಅಥವಾ ಸಮಕಾಲೀನ ಪರಿಸರಕ್ಕೆ ಸ್ಪಂದಿಸುವುದಿಲ್ಲವೋ ಅಲ್ಲಿಯವರೆಗೆ ಅದು ಬೇರೆ ಬೇರೆಯಾಗಿ ಜೊತೆಗೆ ಭಿನ್ನವಾಗಿಯೇ ಉಳಿದುಬಿಡಬಹುದು. ಪ್ರಸ್ತುತ ಸಂದರ್ಭದಲ್ಲಿ ನಮ್ಮ ಜೊತೆಗೆ ಬಂದಿರುವಂತ

ಪ್ರಕಾರಗಳು ನೆನ್ನೆ ಮೊನ್ನೆಯವುಗಳಾಗಿರುವುದಿಲ್ಲ. ಅವುಗಳು ಶತಶತಮಾನಗಳಿಂದ ಕಾಲಪ್ರವಾಹದಲ್ಲಿ ಭಿನ್ನರೂಪಗಳನ್ನು ಪಡೆದು ಬಂದುವುಗಳಾಗಿರುವ ಪಳೆಯುಳಿಕೆಗಳು. ಆದುದರಿಂದ ಈ ಆಧುನಿಕತೆ, ಜಾಗತೀಕರಣ, ಖಾಸಗೀಕರಣ, ಬಂಡವಾಳಶಾಹಿ, ಉದಾರೀಕರಣ ಹೀಗೆ ಹೊಸತನ ಬಂದರೂ, ಬದಲಾಯಿಸಿದರೂ ನಮ್ಮ ಜೊತೆಗೆ ಅವಿಭಾಜ್ಯ ಅಂಗವಾಗಿ ಬಂದಂತಹ ಪದ್ಧತಿ, ರೂಢಿ, ಆಚರಣೆ, ಸಂಪ್ರದಾಯ ಹಬ್ಬ ಹರಿದಿನಗಳು, ಊಟೋಪಚಾರ, ಗೀತೆ, ಕತೆ, ಹಾಡು, ವೈದ್ಯ ಪದ್ಧತಿಗಳು ಇನ್ನೂ ಅನೇಕ ಮುಲಾಂಶಗಳೂ ಸಂವಹಿಸಿಕೊಂಡು ಬಂದಿರುತ್ತವೆ. ಈ ಅರ್ಥದಲ್ಲಿಯೇ 'ಜಾನಪದವು ಸಾವನ್ನೂ ದಿಕ್ಕರಿಸುವ ಒಂದು ಜೀವಂತ ಪಳಿಯುಳಿಕೆ' ಎಂದು ಜಾನಪದ ವಿದ್ವಾಂಸರಾದ ಸಿ.ಎಪ್ .ಪಾಟರ್ ಉಲ್ಲೇಖಿಸಿರುತ್ತಾರೆ. ಅಲ್ಲದೆ ಮತ್ತೊಬ್ಬ ವಿದ್ವಾಂಸರೂ, ಇತಿಹಾಸತಜ್ಞರೂ ಆದ ಆರ್ನಾಲ್ಡ್ ಬಯ್ನಬಿ 'ಹೊಸ ಸಂಸ್ಕೃತಿಯೊಂದನ್ನು ಜನಾಂಗ ಹೊಂದಿದಾಗ ಹಳೆಯದು ಪೂರ್ಣ ಮಾಯಾವಾಗುವುದಿಲ್ಲ. ಹಳೆಯದನ್ನು ಉಳಿಸಿಕೊಂಡು ಹೊಸದು ಬರುತ್ತದೆ. ಹೀಗೆ ಹೊಸತನವನ್ನು ಇಟ್ಟುಕೊಂಡು ಹಳೆತನ ಹೇಗೆ ನಮ್ಮ ಜೊತೆಗೆ ಬೆಸದುಕೊಂಡು ಬರುತ್ತದೆ ಎಂಬುದಕ್ಕೆ ನಮ್ಮ ಜನಪದರೂ ಶತಶತಮಾನಗಳಿಂದಲೂ ರೂಢಿಸಿಕೊಂಡು ಬಂದಿರುವ ಜನಪದ ವೈದ್ಯವೇ ಕಾರಣ ಎಂಬುದಾಗಿ ಹೇಳಬಹುದು.

ಈ ಸಂದರ್ಭದಲ್ಲಿ ಆಧುನಿಕತೆ ಒಳ್ಳೆದು, ಕೆಟ್ಟದ್ದು, ಶಾಪ, ವರ ಅಥವಾ ಒಗ್ಗಿಕೊಳ್ಳುವುದಂತೂ ಅಲ್ಲ ಎಂದು ತೀರ್ಮಾನಿಸುವುದು ಸೂಕ್ತವಲ್ಲ. ಇದರ ಬಗ್ಗೆ ಅನೇಕ ಜನವರ್ಗಗಳು, ಬುಡಕಟ್ಟುಗಳು, ಇಲ್ಲಿ ಸಮುದಾಯಗಳೂ ಕುಳಿತು ಚರ್ಚೆಗೆ ಒಳಪಡಿಸಿದರೂ ಆಧುನಿಕತೆ ಒಂದು ರೀತಿ ಎಲ್ಲರನ್ನು ಆಕರ್ಷಿಸುತ್ತದೆ. ಬುಡಕಟ್ಟು ಜನಾಂಗದವರಿಗೆ, ಅಥವಾ ಇನ್ನೂ ಹಳ್ಳಿಗಳಲ್ಲಿ ನಾಗರಿಕತೆಗೆ ಒಗ್ಗಿಕೊಳ್ಳದಿರುವ ಜನಪದರು ಅದರ ಬಗ್ಗೆ ಯೋಚಿಸುತ್ತಾರೆ ಎಂದಾದರೆ ಈ ಆಧುನಿಕತೆಗೆ ಒಗ್ಗಿಕೊಳ್ಳುವತ್ತಾ ಮನಸ್ಸು ಮಾಡುತ್ತಿದ್ದಾರೆ ಅಂತಲೂ ಹೇಳಬಹುದು. ಒಂದು ರೀತಿಯಲ್ಲಿ ಹೊಸತನದತ್ತ ವಾಲುವುದೇ ಬದಲಾವಣೆ ಹಾಗೂ ಮನುಷ್ಯನ ವಿಕಾಸದ ಕಡೆ ಹೋಗುತ್ತಿದ್ದಾನೆ. ಅಂದರೆ ಆಧುನಿಕತೆಯ ಕಡೆಗೆ ತನ್ನ ಮನಸ್ಸು ಕೊಡುತ್ತಿದ್ದಾನೆ ಎಂದರ್ಥ. ಆದರೆ ಹೊಸತನದ ಕಡೆ ಹೋದ ಹಾಗೆ ಹಳೆತನ ಬಿಡುತ್ತೇವೆ ಎಂದು ಅರ್ಥವಲ್ಲ. ಹೊಸತನ ಎಷ್ಟು ಬೇಕೋ ಅಷ್ಟು ಸ್ವೀಕರಿಸುತ್ತಾ ಹಳೆಯದನ್ನು ಬದಲಾವಣೆ ಮಾಡಿಕೊಂಡು ನಾಗರಿಕತೆಗೆ ಒಗ್ಗಿಕೊಳ್ಳುತ್ತಾ ತನ್ನ ಬದುಕನ್ನು ಮುಂದುವರೆಸುತ್ತಿರುತ್ತಾನೆ. ಸಂಸ್ಕೃತಿಯ ರೂಪಾಂತರಗಳಲ್ಲಿ ಆಧುನಿಕರಣದ ಮಂತ್ರಗಳು ಸಮಾಜದ ತೆಕ್ಕೆಯಲ್ಲಿ ಬರುವ ಸಮುದಾಯಗಳು ತಮಗೆ ಗೊತ್ತಾಗದಂತೆ ತಮ್ಮ ಮೂಲ ಕಸುಬುಗಳನ್ನು ರೂಢಿಸಿಕೊಂಡು ಮುನ್ನುಗ್ಗುತ್ತಿರುತ್ತವೆ. ಜೊತೆಗೆ ಆಧುನಿಕತೆಯು ಅಷ್ಟೇ

ಭೀಕರವಾದ ಪ್ರತಿರೋಧಕ ಶಕ್ತಿಯನ್ನು ಸಂಸ್ಕೃತಿಯ ಪ್ರತಿಯೊಂದು ಮಜಲುಗಳ ಮೇಲೆ ಹೇರುತ್ತಾ ತನ್ನ ಶಕ್ತಿಯನ್ನುಯ ಮೆರೆಯುತ್ತಿರುತ್ತವೆ.

ಒಟ್ಟಾರೆಯಾಗಿ ಈ ಆಧುನಿಕತೆಯ ಒಳಸುಳಿಗಳ ಸೂಕ್ಷ್ಮತೆಯನ್ನು ಸಮಾಜದಲ್ಲಿ ನೆಲೆಗೊಂಡಿರುವ ಜನಪದರೀರಲಿ, ಬುಡಕಟ್ಟುಗಲು, ಅಲೆಮಾರಿಗಳು ಹಿಂದುಳಿದವರು, ಅಲ್ಪಸಂಖ್ಯಾತರು ಅಥವಾ ಇತರ ಜನಾಂಗದವರು ಬಹಳ ಅಳವಾಗಿ, ಎಚ್ಚರದಿಂದ ಅವಲೋಕಿಸಿ ತಮ್ಮ ಬದುಕಿನಲ್ಲಿ ಏರುಪೇರುಗಳು, ಜಗ್ಗಾಟಗಳು ಬರದಂತೆ ಜಾಣ್ಮೆಯಿಂದ ತೂಗಿಸಬೇಕಾಗುತ್ತದೆ. ಈ ಆಧುನಿಕತೆ ಇರಲಿ, ಜಾಗತೀಕರಣಗಳೀರಲಿ, ಉದಾರೀಕರಣಗಳಿರಲಿ, ಕೈಗಾರೀಕರಣವಿರಲಿ, ಈ ಎಲ್ಲವೂ ಮನುಷ್ಯನ ಪ್ರತಿಹಂತದಲ್ಲೂ ಒಂದಿಲ್ಲ ಒಂದರಂತೆ ನುಸುಳುತ್ತಾ, ಏಳುತ್ತಾ ಮುಂದುವರೆಯುತ್ತಿರುತ್ತವೆ. ನಮ್ಮ ಜನಪದರ ವೃತ್ತಿಗಳಲ್ಲಿ, ಊಟೋಪಚಾರದಲ್ಲಿ, ವೈದ್ಯಪದ್ಧತಿಯಲ್ಲಿ, ಹಾಡು, ಗೀತೆ, ವಾದ್ಯೋಪಕರಣಗಳಲ್ಲಿ ಜೊತೆಗೆ ದಿನನಿತ್ಯದ ದೈನಂದಿನ ಚಲನವಲನೆಗಳಲ್ಲಿ ಆಧುನಿಕತೆಗೆ ಪ್ರವೇಶವಿಲ್ಲವೆಂದುಕೊಂಡೋ ಅಥವಾ ಈ ಹೊಸತನವನ್ನು ಸ್ವೀಕರಿಸಬಾರದೆಂದೂ ಪ್ರಜ್ಞೆಯನ್ನು ವಹಿಸಿದರೂ ಅದು ಗೊತ್ತಿಲ್ಲದ ರೀತಿಯಲ್ಲಿ ನುಸುಳುತ್ತಿರುತ್ತವೆ. ಇದನ್ನು ಒಂದು ರೀತಿಯಲ್ಲಿ ದೇಸೀತನದ ಉಳಿಸಿಕೊಳ್ಳುವಿಕೆಯಲ್ಲಿ ಆಡುವ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳಲು ಪ್ರಯತ್ನ ಪಡುತ್ತಿರುವಂತೆ ಎಂದು ಬಾಸವಾಗುತ್ತದೆ.

ಈ ಆಧುನಿಕತೆಗೆ ಒಗ್ಗಿಕೊಳ್ಳುವುದು ಅಷ್ಟು ಸುಲಭವಾಗಿ ಕಂಡರೂ ಅದರೊಳಗೆ ಬೆಸುಗೆಯಾಗಿ ಸೇರಲು ಬಯಸುವಂತವರು ಕೆಲವರು ಇರಬಹುದು. ಆದರೆ ಎಲ್ಲರೂ ಅಲ್ಲ. ಸಾಮಾನ್ಯವಾಗಿ ಸಮುದಾಯಗಳೂ ಅಧುನಿಕತೆಯನ್ನು ಒಪ್ಪಿಕೊಂಡು ಮುಂದಾಗಲು ಅವುಗಳ ಅಂತಃಕರಣಗಳ ಪ್ರೇರಣೆಯಾಗಬೇಕು. ಯುಗಪಲ್ಲಟಗೊಳ್ಳುತ್ತಿದೆ ಇದರೊಳಗಿನ ಎಲ್ಲಾ ಜನಾಂಗಗಳು ಸ್ವತಃ ತಮ್ಮ ಆಚಾರ-ವಿಚಾರ, ಆಚರಣೆ, ಪದ್ಧತಿ, ರೂಢಿ, ಸಂಪ್ರದಾಯ, ಊಟೋಪಾಚಾರ, ಕಲೆಗಳು, ಸಾಹಿತ್ಯ, ಗೀತೆ, ಕಥನಗಳು ಹೀಗೆ ಇನ್ನೂ ಅನೇಕ ಪ್ರಕಾರಗಳಲ್ಲಿ ತಮ್ಮುಲಗಳನ್ನು ಮರೆಯುತ್ತಿದ್ದಾರೆ ಅಂದರೆ ತಪ್ಪಾದಿತೇನೋ, ಅಥವಾ ಬದಲಾಗಿದ್ದಾರೆ ಅಂದರೆ ಕಷ್ಟವಾದಿತೇನೋ, ಅಥವಾ ಆಧುನಿಕತೆಯಿಂದ ನಮ್ಮ ಸಂಪೂರ್ಣ ಸಂಸ್ಕೃತಿಯ ಬೇರುಗಳೇ ರೂಪಾಂತರಗೊಂಡಿವೆ ಎಂದರೆ ಸರಿಯೇನಿಸುವುದಿಲ್ಲ ಈ ಆಧುನಿಕತೆಯ ದೃಷ್ಟಿಯಿಂದ ಒಂದು ಸಂಸ್ಕೃತಿ ವಿಕಾಸವಾಯಿತೆನ್ನಲಿಕ್ಕೂ ಸಾಧ್ಯವಿಲ್ಲ.

ಸಮಕಾಲೀನತೆಯ ಈ ಸಂದರ್ಭದಲ್ಲಿ ಮೆಟ್ರೊಪಾಲಿಟನ್ ಪಟ್ಟಣಗಳಲ್ಲಿ ಇನ್ನೂ ಜೀವಂತ ವಾಗಿರುವ ಅಂಶಗಳಿವೆ. ಈ ದಿನಗಳಲ್ಲಿ ನಾವು ಪಟ್ಟಣಗಳಲ್ಲಿ ಪೂಜೆ, ಮಾಡುವ ಪರಿಪಾಠ ಇಂದಿಗೂ ಇದೆ. ಅಂತಹ ಸಂದರ್ಭದಲ್ಲಿ ಸಗಣಿಯಿಂದ ಮಾಡಿದ ಬೆನವವನ್ನು ಗಣಪತಿಯಾಗಿ ಸ್ವೀಕರಿಸುತ್ತಾರೆ.

ಅಥವಾ ಊಡಾವಣೆಯ ಸಂದರ್ಭದಲ್ಲಿ ದೇವರನ್ನು ಪೂಜೆ ಮಾಡಿರುವ ಅನೇಕ ಉದಾ.ಗಳು ಇವೆ. ಅಥವಾ ಮನುಷ್ಯನಿಗೆ ಯಾವುದಾದರೂ ಒಂದು ಭಾಗವನ್ನು ಅಪರೇಷನ್ ಮಾಡುವಾಗ ಆಯಾಯ ಸಮುದಾಯದ ಡಾಕ್ಟರ್ ಗಳು ಅವರವರು ಪೂಜಿಸುವ ದೈವನನ್ನು ಮನದಲ್ಲಿ ನೆನೆಯುವುದು ವಾಡಿಕೆ. ಆದ್ದರಿಂದ ಇವತ್ತಿಗೂ ಸಿಟಿಗಳಿರಲಿ ಹಳ್ಳಿಯಲ್ಲಿರಲಿ ಸ್ವತಃ ಹುಷಾರಿಲ್ಲದೆ ಇರುವಾಗ ತಾವೇ ತಮ್ಮ ಮನೆಯಲ್ಲಿ ಸಿಗುವ ಆಹಾರ ದಿನಸಿ, ಪದಾರ್ಥಗಳಿಂದ ಔಷಧಿಯನ್ನು ಮಾಡಿಕೊಳ್ಳುವರು. ಆದುದರಿಂದ ಯಾವುದೇ ಆಧುನಿಕತೆಯು ಇಡಿ ಸಂಸ್ಕೃತಿಯಲ್ಲಿ ಯಾವ ಪ್ರಕಾರಗಳನ್ನು ನಾಶ ಮಾಡುವುದೇ ಆಗಲೀ ಅಥವಾ ಪರಿಪೂರ್ಣ ಬದಲಾವಣೆ ಅಥವಾ ರೂಪಾಂತರಗಳು ಆಗಬಹುದಷ್ಟೇ. ಪರಿಪೂರ್ಣವಾಗಿ ಆಗಲು ಸಾಧ್ಯವಿಲ್ಲ ಎಂಬ ಅಂಶವನ್ನು ಮರೆಯುವಂತಿಲ್ಲ.

ಆಧುನಿಕ ಯಾತ್ರೆಯಲ್ಲಿ ಜನಪದ ವೈದ್ಯದ ನೂರಾರು ಚಿಕಿತ್ಸೆಗಳನ್ನು ಸಂಶೋಧನಾ ಮಜಲುಗಳಿಗೆ ಇಲ್ಲಾ ತಂತ್ರಗಳಿಗೆ ಒಳಪಡಿಸಿ ಅವುಗಳ ಉಪಯೋಗವನ್ನು ವೈಜ್ಞಾನಿಕವಾಗಿ ಕಂಡುಕೊಳ್ಳುವುದು ಸೂಕ್ತ. ಉದಾ : ಅಮೇರಿಕದ ಕೆಂಪು ಇಂಡಿಯನ್ನರು ಮಲೇರಿಯಾ ಚಿಕಿತ್ಸೆಯಲ್ಲಿ ಬಳಸುತ್ತಿದ್ದ ಸಿಂಕೋನಾ ಗಿಡಗಳ ತೊಗಟೆಗಳಿಂದ ಕ್ವಿನಾನ್ ಆವಿಷ್ಕರಣೆ ಅಥವಾ ಶೋಧವಾದ ಬಗ್ಗೆ ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಆಮೇಲೆ ದಿ.ರುಸ್ತುಂ ಜಾಲ ವಕೀಲರು ಪ್ರಾಚೀನ ಆಯುರ್ವೇದ ಗ್ರಂಥಾಧಾರದಿಂದ ಸರ್ಪಗ್ರಂಥ ವನಸ್ಪತಿಯು ರಕ್ತದ ಏರೋತ್ತಡಕ್ಕೆ ಬಹಳ ಶಮನಕಾರಿಯೆಂದು ಲಂಡನ್ ನ ಪ್ರತಿಷ್ಠಿತ ವೈದ್ಯಪತ್ರಿಕೆಯಲ್ಲಿ ಲೇಖನವು ಭೀತ್ತಾರಗೊಂಡಾಗ ಜಗತ್ತಿನಾದ್ಯಂತ ಇದು ರಕ್ತದ ಏರೋತ್ತಡ ಮತ್ತು ಉನ್ಮಾದ ಚಿಕಿತ್ಸೆಯ ಸಂದರ್ಭದಲ್ಲಿ ಬಳಸಲಾಗುತ್ತಿತ್ತು. ಹಾಗೆಯೇ ಬ್ರಿಟನ್ನಿನ ಡಾ.ಡೇವಿಡ್ ಲ್ಯೂವಿಸ್ ಎಂಬ ಬರ್ಮಿಗ್ ಹಾಮ್ ಏಷ್ಟನ್ ಯೂನಿವರ್ಸಿಟಿಯ ಚಿಕಿತ್ಸಕರು ತಮ್ಮ ಕೆಲವು ಗೆಳೆಯರೊಂದಿಗೆ ಸೇರಿಕೊಂಡು ಮಾಡಿದ ಪ್ರಯೋಗದ ಹಿನ್ನಲೆಯಲ್ಲಿ ತಮ್ಮ ಅನುಭವವನ್ನು ಹೇಳಿಕೊಂಡಿದ್ದಾರೆ.

ಜಾನಪದವು ಹೊಸ ಪ್ರಕಾರ ಆಧುನಿಕತೆಯಲ್ಲಿ ಮುಳುಗಿಹೋಗುವುದನ್ನು ತಡೆದು ಹೊಸತನ ಒಗ್ಗಿಕೊಂಡು ಹಳತನ್ನು ಉಳಿಸಿಕೊಳ್ಳಬೇಕಾಗುತ್ತದೆ. ಒಟ್ಟಾರೆಯಾಗಿ ಜಾನಪದದಲ್ಲಿ ಅನೇಕ ಪ್ರಕಾರಗಳಿವೆ. ಇವುಗಳು ಬದುಕಿಗೆ ಸ್ಪಂದಿಸದೆ, ಹಾಗೆಯೇ ಮುನ್ನುಗುತ್ತಿದ್ದರೆ, ಹೊಸ ಸಂಸ್ಕೃತಿಯ ಜೀವನಾಡಿಯಾಗದೆ ಹೋಗುವುದರ ಕಾರಣವನ್ನು ತಿಳಿಯದೇ ಹೋದರೆ ತುಂಬಾ ಕಷ್ಟಕರವಾಗುತ್ತದೆ. ಇಲ್ಲಿ ಸೂಕ್ಷ್ಮವಾಗಿ ಹೇಳುವುದಾದರೆ ಪರಿಸರದ ರೂಪಾಂತರಗಳೂ, ಬದಲಾವಣೆಗಳೂ ಘಟಿಸುತ್ತಿದ್ದರೂ, ನಮ್ಮಲ್ಲಿರುವ ಭಾವನೆ, ದೇಶೀಯಲ್ಲಿ ಪ್ರಾದೇಶಿಕತೆ ಮತ್ತು ಸಂಬಂಧಗಳು, ಜಾನಪದ ಭೂತ ಪೂರಕವಾದ

ವಿಚಾರಗಳಿಂದ ಮುಕ್ತವಾಗಿ ಹೊಸತನ, ಅಥವಾ ಸಂಸ್ಕೃತಿ ನಿರ್ಮಾಣಕ್ಕೆ ಕಾರಣವಾಗುವುದಿಲ್ಲ ಎಂದಾದರೇ ಅಥವಾ ಒಪ್ಪಬಹುದಾದ ತನ್ನ ಅಥವಾ ಸಂಸ್ಕೃತಿ ನಿರ್ಮಾಣಕ್ಕೆ ಕಾರಣವಾಗುವುದಿಲ್ಲ ಎಂದಾದರೇ ಅಥವಾ ಒಪ್ಪಬಹುದಾದರೂ ಆ ಭಾವನೇಗಳೇ ಅದಕ್ಕೆ ಮುಖ್ಯಕಾರಣವಾಗುವುದಿಲ್ಲ. ಅಮೇರಿಕಾ ಮತ್ತು ರಷ್ಯಾ ದೇಶಗಳಲ್ಲಿ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಗಳು ಪ್ರಾದೇಶಿಕವಾಗಿ ಜಾನಪದದಲ್ಲಿ ಹೆಚ್ಚು ಬದಲಾವಣೆಗೆ ಹಾಗೂ ಹೆಚ್ಚು ಕ್ರಿಯಾಶೀಲತೆಗೆ ಕಾರಣವಾಗಿವೆ. ಅಲ್ಲದೆ ಸ್ವದೇಶೀಯ ಭಾವನೆ ಕಲ್ಪನೆಯನ್ನು ಉಳಿಸಿಕೊಂಡು ಪೂರಕವಾಗಿ ಕ್ರೀಯಶೀಲ ಹಾಗೂ ಆಧುನಿಕತೆಗೆ ಒಗ್ಗಿಕೊಂಡು ಹಳತನ್ನು ಎಷ್ಟು ಬೇಕೋ ಅಷ್ಟು ಹೊಂದಿಕೊಳ್ಳುವಲ್ಲಿ ಪ್ರಯತ್ನಪಡ ಬಹುದಾಗಿದೆ.

ಕನ್ನಡ ಜಾನಪದಕ್ಕೂ ಅಧುನಿಕತೆಯನ್ನು ರೂಪಿಸಿಕೊಳ್ಳುವ ಅವಶ್ಯಕತೆ ಉಂಟು. ಅದ್ದರಿಂದ ಜಾನಪದ ತನಗೆ ತಾನೇ ಬದಲಾವಣೆಯನ್ನು ರೂಪಿಸಿಕೊಳ್ಳಬೇಕು. ಸಾಮಾಜಿಕ ಬದಲಾವಣೆಗಳು ಸ್ವಯಂ ಚಾಲಿತವಾದಂತೆ ಜಾನಪದ ಕೂಡ ತನ್ನ ತಂತ್ರಜ್ಞಾನಗಳನ್ನು ಬದಲಿಸಿಕೊಂಡು ಹೊಸ ತಂತ್ರ, ವೈದ್ಯ ಪದ್ಧತಿ ಇನ್ನಿತರ ಪ್ರಕಾರಗಳನ್ನು ಕೂಡ ರೂಪಿಸಿಕೊಳ್ಳುವುದರಲ್ಲಿ ತಪ್ಪಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿರುವ ಅನೇಕ ಜಾನಪದ ಪ್ರಕಾರಗಳಲ್ಲಿ ಬದಲಾವಣೆಗಳು ತನಗೆ ತಾವೇ ಆಗುವುದಿಲ್ಲ ಎಂಬ ವಾಸ್ತವತೆಯನ್ನು ಅರ್ಥಮಾಡಿಕೊಳ್ಳುವುದು ಸರಿಯಲ್ಲ. ಈ ಆಧುನಿಕತೆಯಲ್ಲಿ ಜಾನಪದ ಎಲ್ಲಾ ಪ್ರಕಾರಗಳಲ್ಲಿಯೂ ಅವಶ್ಯಕವಾದಂತವುಗಳನ್ನು ಅಳವಡಿಸಿಕೊಂಡು, ಹೊಸಶಕ್ತಿಯಿಂದ ಕ್ರೀಯಾಶೀಲವಾಗಿ ನಿರಂತರವಾಗಿ ಅಭಿವ್ಯಕ್ತಿಸತೊಡಗಬೇಕು. ಈ ಹೊಸ ಯುಗದಲ್ಲಿ ಕನ್ನಡ ಜಾನಪದ ಕ್ರೀಯಶೀಲ ಬದಲಾವಣೆ ಹಾಗೂ ದೇಶೀ ತನವನ್ನು ಮುಂದುವರಿಯಬೇಕು. ಸಮಕಾಲೀನತೆಯಲ್ಲಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ನೆಲೆಗಳನ್ನು ಉಳಿಸಿಕೊಂಡು ಹೊಸ ಬದುಕನ್ನು ಪ್ರಾರಂಭಿಸಬೇಕು. ಯಾವುದೇ ಜಾನಪದ ಪ್ರಕಾರವಿರಲಿ ತಾನು ನಿರ್ಮಾಣಗೊಂಡ ಪರಿಸರಕ್ಕಿಂತ, ಹೊಸತನ, ವಿಭಿನ್ನವಾದ ಪರಿಸರದಲ್ಲಿ ಪ್ರದರ್ಶಿತವಾಗುತ್ತಿದ್ದ ಅದು ಪರಿಸರಕ್ಕೆ ಸ್ಪಂದಿಸದೆ ತನ್ನ ಮೌಲ್ಯವನ್ನು ಉಳಿಸಿಕೊಳ್ಳಲಾಗುವುದಿಲ್ಲ. ಆದ್ದರಿಂದ ಆಧುನಿಕತೆಯಿಂದ ನಮ್ಮ ದೇಶೀ ಜ್ಞಾನ, ಪದ್ಧತಿಗಳು ನಾಶವಾಗುವುದಿಲ್ಲ. ಆದರೆ ಅಂತವುಗಳನ್ನು ಸಂರಕ್ಷಿಸಿಕೊಂಡು, ಪರಿಸರಕ್ಕೆ, ಹೊಸತನಕ್ಕೆ ಸ್ಪಂದಿಸುವಂತ ಕೆಲಸವನ್ನು ವಿದ್ವಾಂಸರು ಸರಕಾರಗಳು, ಜನಸಾಮಾನ್ಯರು, ಅಶಕ್ತಿಯನ್ನು ವಹಿಸಬೇಕು.

(ಜನಪದ ವೈದ್ಯ ಪದ್ಧತಿ ಆಧುನಿಕ ವೈದ್ಯ ಪದ್ಧತಿ ಅಸ್ತಿತ್ವಕ್ಕೆ ಬರುವ ಮುಂಚಿತವಾಗಿಯೇ ಸಮಾಜದಲ್ಲಿ ಊರ್ಜಿತವಾಗಿದ್ದಿತು. ಇಂದು ಆಧುನಿಕತೆ ದಿಲ್ಲಿಯಿಂದ ಹಳ್ಳಿಯವರೆಗೂ ಹಬ್ಬಿದೆ

ಅಂದುಕೊಂಡರೂ, ಈಗಲೂ ಹಳ್ಳಿಗಳಲ್ಲಿ ಅನೇಕ ಕಾಯಿಲೆಗಳಿಗೆ ಅಸ್ಪತ್ರೆಗೆ ಹೋಗುವ ಪರಿಪಾಠವಿರುವುದಿಲ್ಲ. ಅನೇಕ ಕಾಯಿಲೆಗಳನ್ನು ತಡೆಗಟ್ಟುವ ಔಷಧಿಯನ್ನು ಅವರ ಮನೆಗಳಲ್ಲಿ ಇಲ್ಲಾ ಹಳ್ಳಿಯ ವೈದ್ಯರಿಂದ ಚಿಕಿತ್ಸೆ ಪಡೆಯುವುದು ರೂಢಿಯಲ್ಲಿದೆ. ಇವೊತ್ತು ಸರಕಾರದ ಆಸ್ಪತ್ರೆಗೆ ಹಳ್ಳಿಗಳಿಂದ ಹೋಗಲು ಸಾಧ್ಯವಾಗುವುದಿಲ್ಲ. ಕಾರಣಗಳೆಂದರೆ ಆರ್ಥಿಕ ವ್ಯವಸ್ಥೆ ಇರಬಹುದು ಅಥವಾ ಸಾರಿಗೆ ಸಂಪರ್ಕಗಳಿರಬಹುದು. ಅಲ್ಲದೆ ತಮ್ಮ ವೈಯಕ್ತಿ ಸಮಸ್ಯೆಗಳಿರಬಹುದು. ಪಶು ಪ್ರಾಣಿಗಳಂತೂ ತಮ್ಮ ಜೀವದಲ್ಲಿ ವೈದ್ಯಶಾಲೆ ಕಾಣುವುದು ಇನ್ನೂ ದೂರವಾಗಿಯೇ ಉಳಿದಿದೆ. ಒಟ್ಟಾರೆ ಹೇಳುವುದಾದರೆ ನಮ್ಮ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯಲ್ಲಿ ಜನಪದ ವೈದ್ಯ ಬಹುಮಹತ್ವ ಪಡೆದಿರುತ್ತದೆ. ಈ ಆಧುನಿಕತೆಯ ಭರಾಟೆಯಲ್ಲಿ ಜನಪದರು ಪಟ್ಟಣಗಳಲ್ಲಿ ವೈದ್ಯರಿಗೆ ದುಬಾರಿ ಹಣವನ್ನು ಕೊಡಬೇಕಾಗುತ್ತದೆ. ಆಧುನಿಕತೆಯ ಯಂತ್ರೋಪಕರಣಗಳನ್ನು ಚಿಕಿತ್ಸೆ ಪಡೆಯುವ ಮಟ್ಟದಲ್ಲಿ ಜನಸಾಮಾನ್ಯರು ಇರುವುದಿಲ್ಲ. ಅಲ್ಲದೆ ಕಡಿಮೆ ಖರ್ಚಿನಲ್ಲಿ ಅವರ ಕೈಗೆಟುಕುವ ಮನೆಮದ್ದು, ನಾಟಿ ವೈದ್ಯ ತಮ್ಮ ಆಸುಪಾಸಿನಲ್ಲಿಯೇ ಸಿಕ್ಕುವುದರಿಂದ ಈ ಆಧುನಿಕತೆ ಹೊತ್ತಿನಲ್ಲಿಯು ಜನಪದ ವೈದ್ಯಪದ್ಧತಿ ಹಳ್ಳಿಗಳಲ್ಲಿ ನೆಲಸಿರುವ ಜನಪದರಲ್ಲಿ ಇನ್ನೂ ಜೀವಂತ ಸಾಕ್ಷಿ.

ಇಂದಿಗೂ ಪಟ್ಟಣಗಳಲ್ಲಿ ನೆಲೆಸಿರುವ ಅನೇಕರು ಜನಪದ ವೈದ್ಯದ ಮೊರೆಹೋಗುವುದನ್ನು ಕಾಣುತ್ತೇವೆ. ಆಧುನಿಕ ವೈದ್ಯಪದ್ಧತಿ ಆಧೂನಿಕತೆಯಲ್ಲಿ ಜನಮೆಚ್ಚಿಗೆ ಪಡೆದಿರುವಂತದ್ದು. ಆದರೆ ರಾಸಾಯನಿಕ ಅಂಶಗಳಿಂದ ತಯಾರಿಸಿಕೊಡುವುದರಿಂದ ಬೇಗ ಕಾಯಿಲೆಗಳು ಗುಣಮುಖಗೊಂಡರೂ ಬೇರೆಬೇರೆ ಕಾಯಿಲೆಗಳಿಗೆ ರೂಪಾಂತರ ಪಡೆಯುವ ಸಾಧ್ಯತೆ ಇರುತ್ತವೆ. ಆಧುನಿಕ ಔಷಧಿಗಳಿಂದ ಹೀಗಾಗದೆ ಇರಲೂಬಹುದು. ಅದು ಜನಪದ ವೈದ್ಯ ಪದ್ಧತಿ ಬಹಳ ಮುಖ್ಯವಾಗಿ ಸಸ್ಯವನ್ನು ಅವಲಂಬಿಸಿರುವಂತದ್ದಾಗಿರುತ್ತದೆ. ಸಸ್ಯ ಮತ್ತು ಪ್ರಾಣಿಗಳ ಪೂರಕವಾಗಿ ಹಳ್ಳಿಯಲ್ಲಿ ನೆಲಸಿರುವಂತಹ ವೈದ್ಯರು ಸಾಮಾನ್ಯವಾಗಿ ಸಸ್ಯಗಳಿಂದ ತಯಾರಿಸಿದ ಔಷಧಿಯನ್ನು ಕೊಡುವರು.

ಹಳ್ಳಿ, ನಾಟಿ, ವೈದ್ಯದಲ್ಲಿ ಔಷಧಿಗೆ ನಿರ್ಧಿಷ್ಟ ಅಳತೆ ತೂಕ ಇರುವುದಿಲ್ಲ. ಎಲ್ಲವು ಗುರುತು ಹಾಗೂ ರೋಗಿಯ ವಯಸ್ಸನ್ನು ಅವಲಂಬಿಸಿರುತ್ತದೆ. ಅಲ್ಲದೆ ಇಂದಿಗೂ ಮನುಷ್ಯ ಪ್ರಾದೇಶಿಕವಾಗಿ ಸಿಕ್ಕುವಂತ ಔಷಧಿಗೆ ಒಗ್ಗಿಹೋಗಿರುತ್ತಾನೆ. ಏಕೆಂದರೆ ಮನುಷ್ಯಗಿರಬಹುದು ಅಥವಾ ಪ್ರಾಣಿಗಳಿರಬಹುದು. ಅವುಗಳು ಪ್ರಾದೇಶಿಕವಾಗಿ ಕೆಲವು ರೋಗಗಳು ಭಿನ್ನತೆಯಿಂದ ಕೂಡಿರುತ್ತವೆ. ಇದಕ್ಕೆ ಆಯಾಯ ಪ್ರದೇಶದಲ್ಲಿ ಸೇವಿಸುವ ಆಹಾರ, ಗಾಳಿ, ಮಣ್ಣಿನ ಅಂದರೆ ಒಂದು ರೀತಿಯಲ್ಲಿ ಪರಿಸರ ಹಾಗೂ

ಪ್ರಜ್ಞೆ ಕಾರಣವಾಗಿರುತ್ತದೆ. ಇಂತಹ ಕಾಯಿಲೆಗಳಿಗೆ ಔಷಧವಾಗಿ ಉಪಯೋಗಿಸುವ ಗಿಡಮೂಲಿಕೆಗಳೂ ಕೂಡ ಆಯಾಯ ಪ್ರದೇಶದವುಗಳೇ ಆಗಿರುತ್ತವೆ. ಆದುದರಿಂದ ಒಂದು ಪ್ರದೇಶದ ಕಾಯಿಲೆಗೆ ಮತ್ತೊಂದು ಪ್ರದೇಶದ ಔಷಧಿ ಹಾನಿ ಉಂಟುಮಾಡುವುದು ಕಡಿಮೆ ಅಂದರೆ ತಪ್ಪಾಗಲಾರದೇನೋ, ಇದಕ್ಕೆ ಪೂರಕವಾಗಿ ಉಪಯೋಗಿಸುವ ಔಷಧಿಗಳೂ ಕೂಡ ಆಯಾಯ ಪ್ರದೇಶದಲ್ಲಿ ದೊರೆಯುತ್ತವೆ. ಈ ಆಧುನಿಕತೆಯ ಸಂದರ್ಭದಲ್ಲಿಯೂ ಕೂಡ ಹಳ್ಳಿ ಜನಪದರು ಸಾಕಷ್ಟಾಗಿ ಜನಪದ ವೈದ್ಯಪದ್ಧತಿಗೆ ಮೊರೆಹೋಗುವರು.

ಆಧುನಿಕತೆಯ ಈ ಸಂದರ್ಭದಲ್ಲಿ ಜನಪದರು ಏಕೆ ನಾಟಿ ವೈದ್ಯಕ್ಕೆ ಹೆಚ್ಚು ಒತ್ತುಕೊಡುತ್ತಾರೆ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಚರ್ಚೆಗೆ ಒಳಪಡಿಸಬಹುದು. ಹಳ್ಳಿಯಲ್ಲಿ ಸಾಮಾನ್ಯವಾಗಿ ನೆಲೆನಿಂತಿರುವಂತಹ ವೈದ್ಯರು ವೃತ್ತಿಪರರಾಗಿರುವುದಿಲ್ಲ. ಒಂದು ರೀತಿಯಲ್ಲಿ ಪ್ರವೃತ್ತಿ ವೈದ್ಯರಾಗಿರುತ್ತಾರೆ. ಕೆಲವರು ವಾರದಲ್ಲಿ ಒಂದೆರೆಡು ದಿನಗಳನ್ನು ಔಷಧೋಪಚಾರಕ್ಕಾಗಿಯೇ ತಮ್ಮನ್ನು ತೊಡಗಿಸಿಕೊಂಡು ಇತರೆ ಕೆಲಸಕ್ಕೆ ಆ ದಿನಗಳಲ್ಲಿ ಹೋಗುವುದಿಲ್ಲ. ಇನ್ನೂ ಕೆಲವರು ಈ ವೈದ್ಯಪದ್ಧತಿಯನ್ನು ಜನಪದರಿಗಾಗಿ ಮೀಸಲಿರಿಸಿರುತ್ತಾರೆ. ಅಲ್ಲದೆ ತಾವು ನೀಡಿದ ವೈದ್ಯ ಪದ್ಧತಿಗೆ ಯಾವುದೇ ಸಂಭಾವನೆ ರೂಪದಲ್ಲಿ ಪ್ರತಿಫಲವನ್ನು ಬಯಸುವುದಿಲ್ಲ. ಅಲ್ಲದೆ ತಾವು ನೀಡಿದ ಔಷಧಿ ಪಡೆದರೆ ಆ ಔಷಧಿ ಯಾವುದೇ ರೀತಿಯಲ್ಲಿ ಫಲನೀಡುವುದಿಲ್ಲ ಎಂದು ಈ ಆಧುನಿಕತೆಯಲ್ಲಿಯೂ ತಮ್ಮ ನಿಲುವನ್ನು ಬದಲಾಯಿಸಿಲ್ಲ. ಆದರೆ ಔಷಧಿಯನ್ನು ಪಡೆದಂತಹ ವ್ಯಕ್ತಿ ಅಥವಾ ರೋಗಿಯು ವೀಳ್ಯದೊಡನೆ ಕೊಡುವ ಕಾಣಿಕೆಯನ್ನು ಪ್ರೀತಿಯಿಂದ ಸ್ವೀಕರಿಸುವರು. ಈ ಸಂದರ್ಭದಲ್ಲಿಯೂ ಹಳ್ಳಿಗಳಲ್ಲಿ ಜನಪದ ವೈದ್ಯ ಮೂಕ ಪ್ರಾಣಿಗಳಿಗೆ ಔಷಧೋಪಚಾರ ಮಾಡುತ್ತಾನೆಯೇ ಹೊರತು ಯಾವುದೇ ಹಣವನ್ನು ಪಡೆಯುವುದಿಲ್ಲ. ಅಲ್ಲದೆ ಹಾಗೇನಾದರೂ ಮಾಡಿದರೆ ಅದು ಪಾಪದ ಕೂಪ ಎಂದು ಭಾವಿಸುತ್ತಾನೆ.

ಇನ್ನೊಂದು ಮಹತ್ವದ ಸಂಗತಿ ಎಂದರೆ ಹೆಚ್ಚು ಪ್ರಚಲಿತದಲ್ಲಿರುವ ವೈದ್ಯರನ್ನು ಅನೇಕ ಮೈಲಿಗಳಿಂದ ರೋಗಿಗಳು ಬಂದು ಸಂದರ್ಶಿಸುವರಿರುವರು. ಅಲ್ಲದೆ ಅಂತಹವನ್ನು ಹುಡುಕಿಕೊಂಡು ಹೋಗಿ ಔಷಧಿಯನ್ನು ಪಡೆಯುವುದು ಈ ಆಧುನಿಕತೆಯಲ್ಲಿಯು ಹಳ್ಳಿಗಳಲ್ಲಿ ಇದೇ ಎಂಬ ಅಂಶವನ್ನು ಮರೆಯುವಂತಿಲ್ಲ. ಅಲ್ಲದೆ ರೋಗ ಬಂದ ವ್ಯಕ್ತಿ ಇನ್ನೂ ಉಲ್ಬಣಗೊಂಡಿದ್ದಾನೆ ಎಂದು ತಿಳಿದರೆ ವೈದ್ಯ ತನ್ನ ಮನೆಗೆ ವಾರಗಳವರೆಗೆ ಹೋಗದೆ ಅಲ್ಲಿಯೇ ವೈದ್ಯೋಪಚಾರವನ್ನು ನೀಡುತ್ತಾನೆ. ಆತನ ಮನೆಯವರು ಕೂಡ ಇದೊಂದು ಪುಣ್ಯಕಾರ್ಯವೆಂದು ತಿಳಿಯುತ್ತಾರೆ. ಆದರೆ ಈ ಆಧುನಿಕತೆಯಲ್ಲಿ

ಅಸ್ಪತ್ರೆಯ ವೈದ್ಯ ಪುಕ್ಕಟೆಯಾಗಿ ಔಷಧಿ ನೀಡುವುದಿಲ್ಲ, ಅಲ್ಲದೆ ಅವರು ಹಣವಿದ್ದವರ ಕಡೆ ಹೆಚ್ಚು ಗಮನ ನಿರ್ವಹಿಸುವರು. ಆಧುನಿಕತೆಯಲ್ಲಿಯೂ ಹಳ್ಳಿಗಳಲ್ಲಿ ಒಬ್ಬಿಬ್ಬರಾದರೂ ವೈದ್ಯರಿರುವರು. ಅವರು ಪಶುವೈದ್ಯರಿರಬಹುದು. ಇಲ್ಲಾ ಮಾನವ ವೈದ್ಯರಿರಲೂ ಬಹುದಾಗಿದೆ. ಇಲ್ಲಾ ಒಬ್ಬನೆ ಕೆಲವು ಸಂದರ್ಭಗಳಲ್ಲಿ ಪಶು ಹಾಗೂ ಪ್ರಾಣಿಗಳಿಗೆ ಒಬ್ಬನೇ ವೈದ್ಯ ಔಷಧಿಕೊಡುವುದು.

ಜನಪದ ವೈದ್ಯರು ಅನಕ್ಷರಸ್ಥರಾಗಿರುತ್ತಾರೆ. ಆದರೆ ಮಾನವೀಯತೆಯಿಂದ ಕೂಡಿರುತ್ತಾರೆ. ವಿಶಾಲವಾದ ಗುಣ, ಭಾವನೆಗಳಿಂದ ಕೂಡಿದ್ದು, ರೋಗಿಗಳ ಹತ್ತಿರ ಒಡನಾಡಿಯಾಗಿ ವರ್ತಿಸುವುದರಿಂದ ಅವರಿಗೆ ಹತ್ತಿರವಾಗುವರು ಜೊತೆಗೆ ಮಾನಸಿಕವಾಗಿ ಕಾಯಿಲೆಯೂ ಕೂಡ ಗುಣಮುಖವಾಗುವಲ್ಲಿ ಪ್ರಯತ್ನಪಡುತ್ತಾರೆ. ಆಧುನಿಕತೆಯಲ್ಲಿ ಇನ್ನೂ ಏಕೆ ಜನಪದ ವೈದ್ಯ ಜೀವಂತವಾಗಿದೆ ಎಂದರೆ ಆ ಪಥ್ಯಗಳು ಹೆಚ್ಚಿಗೆ ಇರುವಿದಿಲ್ಲ. ಏಕೆಂದರೆ ಜನಪದರ ದೈನಂದಿನ ದಿನಗಳಲ್ಲಿ ಉಪಯೋಗಿಸುವ ಆಹಾರವೇ ಔಷಧಿಯಿಂದ ಕೂಡಿರುತ್ತದೆ. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಮಗಣಿ(ಹೊಲ, ಗದ್ದೆ, ತೋಟ, ಬಯಲು, ಕಲ್ಲು ಬಂಡೆ, ವಕ್ಕ ಇಂತಹ ಸ್ಥಳದಲ್ಲಿ ಬೆಳೆಯುತ್ತಿರುವ ಸೊಪ್ಪುಗಳಾದ ಯಾಗೀರೆ ತಪ್ಪಲ ಸೊಪ್ಪು) ತೊಗರಿಬೇಳೆ ಸೊಪ್ಪು, ಕುಪ್ಪಸಿಗೆ ಸೊಪ್ಪು, ಕರಿಬೇವಿನ ಎಲೆ, ಬಾಯಿಬಸಳೆಸೊಪ್ಪು, ಕಾಶಿಕುಡಿ, ತರಣಿಕುಡಿ, ಕುಂಬಳದ ಕುಡಿ, ನುಗ್ಗೆಸೊಪ್ಪು, ಅದರ ಕುಡಿ, ಗಿಡಗಡಲೆಕುಡಿ, ಕಡಲೆಕುಡಿ, ಪುಂಡಿಪಲ್ಯ, ರಾಜಗಿರಿ, ಮೆಂತ್ಯೆ, ಹುಣುಚಿಕ್ಕಪಲ್ಯ, ಪಂಕನಪಲ್ಯ, ಕೋಳಿಜುಟ್ಟು, ಹರಿವಿಸೊಪ್ಪು, ನುಗ್ಗಿನಮುಳ್ಳೀನ ಸೊಪ್ಪು, ಹುಣಿಸೆಚಿಗುರು, ಪುದಿನ, ಈರುಳ್ಳಿಸೊಪ್ಪು(ಸೋಗು). ಮನುಷ್ಯ ಹಾಗೂ ಪ್ರಾಣಿಗಳು ಈ ಮೇಲೆ ಹೆಸರಿಸಲಾದ ಸೊಪ್ಪುಗಳನ್ನು ತಿನ್ನುತ್ತವೆ. ಅಂತಹವುಗಳಲ್ಲಿ ಜನಪದೀಯ ಔಷಧಿ ಆಹಾರವಾಗಿರುತ್ತದೆ. ಇಂತಹವುಗಳ ಸೊಪ್ಪಿನ ರಸ ನಮ್ಮ ಆಧುನಿಕತೆಯ ಟಾನಿಕ್ ಗಳನ್ನೂ ಮೀರಿಸುವ ಶಕ್ತಿಯನ್ನು ಪಡೆದಿರುತ್ತದೆ.

ಅದೇ ರೀತಿ ಪ್ರಾಣಿಗಳಿಗೆ ವಿಷಜಂತುಗಳು ಹಳ್ಳಿಗಳಲ್ಲಿ ಕಡಿದಾಗ ಯಾವ ಆಧುನಿಕತೆ ಅಸ್ಪತ್ರೆ ಔಷಧಿಗಳು ಕೆಲಸಕ್ಕೆ ಬರುವುದಿಲ್ಲ. ಆದರೆ ಹಳ್ಳಿಯ ಹೊಲ, ಗದ್ದೆ, ತೋಟ, ಬಯಲು, ಕಾಡುಗಳಲ್ಲಿ ಬೆಳೆಯುವ ಸಸ್ಯಗಳೇ ಆಧಾರ. ಹಳ್ಳಿಯ ವೈದ್ಯನೇ ಅಪತ್ ಬಾಂಧವನಾಗಿರುತ್ತಾನೆ. ಉದಾ : ಪ್ರಾಣಿಗಳಿಗೆ ವಿಷಜಂತುಗಳು ಕಡಿದಾಗ, ಅಥವಾ ಅಜೀರ್ಣವಾದಾಗ, ಕಾಲು, ಮೈಗೆ ಗಾಯವಾದಾಗ, ಆ ಪರಿಸರದಲ್ಲಿಯೇ ಇರುವಂತ, ಹುಲ್ಲು, ಗಿಡಮೂಲಿಕೆ ಜೊತೆಗೆ ಪ್ರಾಣಿಗಳ ಮೇಲೆ ಗಾಯವಾದಾಗ ಕಾಗೆಗಳು ಆ ಗಾಯದ ಮೇಲೆ ಆಗಿರುವಂತ ಹುಳುಗಳನ್ನು ಹೆಕ್ಕಿ ತಿಂದು ವಾಸೆ ಮಾಡಿಕೊಳ್ಳುವುದನ್ನು ಗಮನಿಸಬಹುದು.

ಜನಪದ ವೈದ್ಯಪದ್ಧತಿಯಲ್ಲಿ ಆಧುನಿಕತೆಯ ಮಾದರಿಯ ಒಲವುಗಳನ್ನು ಹೊಂದಿದ್ದರೆ, ಆಧುನಿಕತೆಯ ಜನಪದ ವೈದ್ಯಪದ್ಧತಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಯಿದ್ದರೂ ತಲಾತಲಾಂತರದಿಂದ ಬಂದ ಅಂದರೆ ಮೂಲ ಜನಪದ ವೈದ್ಯಪದ್ಧತಿ ಆಚರಣೆ, ಪದ್ಧತಿಗಳನ್ನು ಅಲ್ಲಿ ಇಲ್ಲಿ ಉಳಿಸಿಕೊಂಡಿರಬಹುದಾಗಿದೆ. ಅಲ್ಲದೆ ಶಿಷ್ಟ ವೈದ್ಯಪದ್ಧತಿಯನ್ನು ತಿರಸ್ಕರಿಸದೆ ನಾಟಿವೈದ್ಯ ಪದ್ಧತಿಯನ್ನು ಪ್ರೋತ್ಸಾಹ ಮಾಡದೆ ಎರಡೂ ಸಂಸ್ಕೃತಿಗಳ ಸಂಪ್ರದಾಯಗಳಿಗೂ ಒಗ್ಗುವ ಮೌಲ್ಯಗಳನ್ನು ನಾವಿಂದು ಪತ್ತೆ ಮಾಡಿಕೊಳ್ಳುವಲ್ಲಿ ಪ್ರಧಾನ ಚಿಂತನೆಯನ್ನು ಮಾಡಬೇಕಾಗಿದೆ. ಅಲ್ಲದೆ ಎರಡು ಪ್ರಧಾನ ಸಂಸ್ಕೃತಿಗಳ ಮಗ್ಗಲುಗಳನ್ನು ಕೊಳು-ಕೊಡುಗೆ, ಇತಿ-ಮಿತಿ, ಪರ-ನಿರೋಧಗಳನ್ನು ಮನವರಿಕೆ ಮಾಡಿಕೊಂಡು ವೈದ್ಯ ಪದ್ಧತಿಯನ್ನು ಬಳಸುವುದು ಒಳ್ಳೆಯದು.

ಜನಪದ ವೈದ್ಯ ಪದ್ಧತಿಗೆ ಜನಸಾಮಾನ್ಯರಿಗೆ ಪ್ರಧಾನವಾಗಿರುತ್ತದೆ. ಅಲ್ಲದೆ ಹೆಚ್ಚು ಶ್ರೀಮಂತವಾಗಿರುವುದಿಲ್ಲ. ಆದರೆ ಶಿಷ್ಟ ವೈದ್ಯಪದ್ಧತಿಯು ಶ್ರೀಮಂತವಾಗಿರುತ್ತದೆ. ಜನಪದ ವೈದ್ಯ ಹಳ್ಳಿಗಳಲ್ಲಿ ಎಲೆಂದರಲ್ಲಿ ದೊರೆಯುತ್ತದೆ, ಕಡಿಮೆ ವೆಚ್ಚದ್ದಾಗಿರುತ್ತದೆ. ಈಗ ಆಧುನಿಕ ಜಗತ್ತಿನಲ್ಲಿರುವ ಶಿಷ್ಟ ವೈದ್ಯಪದ್ಧತಿಗೆ ಭವ್ಯವಾದ ಕಟ್ಟಡಗಳೊಂದಿಗೆ ನಿರ್ಮಿತಗೊಂಡು ಬಹಳ ಅಚ್ಚುಕಟ್ಟಾದ ವ್ಯವಸ್ಥೆ ಇರುತ್ತದೆ. ಒಟ್ಟಿನಲ್ಲಿ ಆಧುನಿಕತೆಯ ಆಹ್ವಾನದೊಂದಿಗೆ ಜನಪದರು ಹಲವಾರು ಸಮಸ್ಯೆಗಳಿಗೆ ಗುರಿಯಾಗುತ್ತಿದ್ದಾರೆ. ಏಕೆಂದರೆ ವೈಜ್ಞಾನಿಕ ಅಭಿವೃದ್ಧಿಯೆ ಜನಪದ ಹಿನ್ನಡೆಗೆ ಮುಳುವಾಗಿದೆ.

ಈ ಸಂದರ್ಭದಲ್ಲಿ ಮಾಹಿತಿ ತಂತ್ರಜ್ಞಾನ ವಿಕಾಶತೆಯಿಂದಾಗಿ ಜನಪದರ ಅನೇಕ ವೃತ್ತಿಗಳು ದಿನದಿಂದ ದಿನಕ್ಕೆ ಗೌಣವಾಗುತ್ತಿರುವುದಂತು ನಿಜ. ಅಲ್ಲದೆ ಶ್ರೀಮಂತ ವರ್ಗದವರು ಆಧುನಿಕತೆಯ ವೈದ್ಯಕ್ಕೆ ಹೆಚ್ಚು ಮಹತ್ವ ಕೊಡುತ್ತಿರುವುದರಿಂದ ಜನಪದ ವೈದ್ಯಪದ್ಧತಿಯು ಕುಂಠಿತಗೊಳ್ಳುತ್ತಿದೆ. ಜೊತೆಗೆ ಆಧುನಿಕತೆಗೆ ಗ್ರಾಮ ಜನಪದರು ಹೊಂದಿಕೊಳ್ಳುವುದರತ್ತ ಗಮನಹರಿಸುತ್ತಿದ್ದಾರೆ. ಅಲ್ಲದೆ ತಲಾತಲಾಂತರದಿಂದ ರೂಢಿಸಿಕೊಂಡು ಬಂದಂತಹ ವೈದ್ಯಪದ್ಧತಿಯತ್ತ ಅವರ ಮಕ್ಕಳು ಆಸಕ್ತಿವಹಿಸುತ್ತಿಲ್ಲ. ಅಲ್ಲದೆ ಉನ್ನತ ವ್ಯಾಸಂಗದತ್ತ ಮನಸ್ಸನ್ನು ವಾಲಿಸುತ್ತಿರುವುದರಿಂದ ಜನಪದ ವೈದ್ಯಪದ್ಧತಿಯೂ ಹಳ್ಳಿಗಳಲ್ಲಿ ಅವನತಿಯ ಹಾದಿಯಲ್ಲಿ ಸಾಗುತ್ತಿದೆ.

ಅಧ್ಯಾಯ ೭

ಉಪಸಂಹಾರ

೭

ಉಪಸಂಹಾರ

ಜಾಗತೀಕರಣ, ಆಧುನೀಕರಣ, ಉದಾರೀಕರಣ ಹೀಗೆ ಕರಣಗಳಿಂದಾಗಿ ವೈಜ್ಞಾನಿಕ ಅಭಿವೃದ್ಧಿ ದಿನದಿಂದ ದಿನಕ್ಕೆ ಬದಲಾವಣೆ ಹೊಂದುತ್ತಿದೆ. ಇದರಿಂದಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಹೊಸ ಹೊಸ ಅವಿಷ್ಕಾರಗಳು, ಶೋಧನೆಗಳು ಬರದಲ್ಲಿ ನಾಗಾಲೋಟಕ್ಕೆ ಕೊಂಡುಯುತ್ತಿವೆ. ಈ ಹೊತ್ತಿನಲ್ಲಿ ಮಾನವನು ತಲಾತಲಾಂತರದಿಂದ ರೂಢಿಸಿಕೊಂಡಿರುವ ರೂಢಿಗಳು, ಸಂಪ್ರದಾಯಗಳು, ಆಚರಣೆಗಳು, ವೈದ್ಯಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದು ಇಂದಿಗೂ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಹಾಗೆಯೇ ಮುಂದುವರೆಯುತ್ತಿದ್ದಾರೆ. ಉಪಗ್ರಹ ಉಡಾವಣೆಗಳ ಸಮಯದಲ್ಲಿ ಜ್ಯೋತಿಷ್ಯ ಶಾಸ್ತ್ರದ ಅನುಗುಣವಾಗಿ ಸಮಯ ಸಂದರ್ಭವನ್ನು ಆಧರಿಸಿ ಉಡಾಯಿಸುವ ರೀತಿ, ಆಸ್ಪತ್ರೆಗಳಲ್ಲಿ ವೈಜ್ಞಾನಿಕ ಪದ್ಧತಿ ಪ್ರಕಾರ ಹಾರ್ಟ ಅಪರೇಷನ್ ಮಾಡುವಾಗ ಡಾಕ್ಟರ್ ಕೂಡ ತನಗೆ ಅರಿವಿಲ್ಲದ ರೀತಿಯಲ್ಲಿ ತನ್ನ ಇಷ್ಟದೇವರನ್ನು ನೆನೆಸಿ ಅಪರೇಷನ್ನಗೆ ಮುಂದಾಗುವನು. ಯಡ್ಸ್, ಕ್ಯಾನ್ಸರ್, ಗಂಟಲು ರೋಗಳಿಗೂ ಇನ್ನೂ ಗ್ರಾಮಗಳಲ್ಲಿ ನೆಲಸಿರುವ ನಾಟಿ ವೈದ್ಯನ ಹತ್ತಿರ ಚಿಕಿತ್ಸೆ ಪಡೆಯುವುದನ್ನು ನೋಡಬಹುದು. ಒಟ್ಟಿನಲ್ಲಿ ಆಧುನಿಕ ಎರಡು ಕಾಲಿನ ಮನುಷ್ಯನ ರೀತಿ ರೀವಾಜುಗಳು ತುಂಬಾ ವಿಪರ್ಯಾಸಕ್ಕೆ ತಂದುಬಿಟ್ಟಿವೆ.

ಮನುಷ್ಯ ತನ್ನದೇ ಆದ ರೀತಿ ನೀತಿ, ಆಚರಣೆಗಳನ್ನು ಆಚರಿಸುತ್ತಾ ಬರುತ್ತಿರುವುದು ಬರೀ ಗ್ರಾಮಗಳಿಗಷ್ಟೇ ಸೀಮಿತವಾಗಿ ಉಳಿದಿಲ್ಲ. ಮೆಟ್ರೋಪಾಲಿಟನ್ ಪಟ್ಟಣಗಳಲ್ಲಿಯು ಇಂದಿಗೂ ಕಾಣಬಹುದಾಗಿದೆ. ಇದಕ್ಕೆ ಪ್ರತ್ಯಕ್ಷ ಕನ್ನಡಿಯಂತೆ ಹೇಳಬಹುದಾದ ಜನಪದ ವೈದ್ಯ ಪದ್ಧತಿ. ಅಭಿವೃದ್ಧಿ ಪತದತ್ತಾ ಸಾಗುತ್ತಿದೆ. ಇಂಗ್ಲಿಷ್ ಔಷಧಿಗಳಲ್ಲಿ ವಾಸಿಯಾಗದಂತವು ಜನಪದ ವೈದ್ಯರಲ್ಲಿ ಮಾಯವಾಗುತ್ತವೆ. ಆದರೆ ಇಂದಿಗೂ ಹಳ್ಳಿಹಳ್ಳಿಗಳಲ್ಲಿ ನಮ್ಮ ವೈಜ್ಞಾನಿಕ ವೈದ್ಯಪದ್ಧತಿ ಕೈಗೆ ಎಟಕದಾಗಿದೆ. ಆದುದರಿಂದ ಹಳ್ಳಿಗರು ನಾಟಿ ವೈದ್ಯಕ್ಕೆ ಮೊರೆಹೋಗುತ್ತಿದ್ದಾರೆ.

ಜನಪದ ವೈದ್ಯ ಪದ್ಧತಿ ಭಾರತದಂತ ಹಳ್ಳಿಗಳಲ್ಲಿ ಜೀವಂತ ಸೆಲೆಯಾಗಿದೆ. ಅದಕ್ಕೆ ಪ್ರಬಲವಾದ ಕಾರಣಗಳೆಂದರೆ ಕೆಳವರ್ಗದ, ಹಿಂದುಳಿದವರ, ಅಲೆಮಾರಿಗಳ, ಅಲಕ್ಷೀತವರ್ಗದವರ, ದೀನದಲಿತರು ರೂಢಿಸಿಕೊಂಡು, ಆಚರಿಸಿಕೊಂಡು ಬಂದಂತಹ ಪದ್ಧತಿಗಳಾಗಿವೆ. ಆದರೆ ಇನ್ನೊಂದು ಲೋಕದೃಷ್ಟಿಯಲ್ಲಿ ಜನಪದ ವೈದ್ಯಪದ್ಧತಿಯು ಇಂತ ಸಾಮಾನ್ಯರಿಗೆ ನಿಲುಕದಾಗಿದೆ. ಆದರೆ ಯಾರು ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದಿರುವರೋ ಅಥವಾ ಉಚ್ಚಾ ದರ್ಜೆಯಲ್ಲಿ ಜನಿಸಿದವರೋ ಅಂತವರಿಗೆ ಇಂಗ್ಲಿಷ್ ಮೇಡಿಷನ್ ದೊರೆಯುತ್ತದೆ. ಆದರೆ ಹಿಂದುಳಿದ ವರ್ಗದವರಿಗೆ ಕೈಗೆ ಎಟಕದಾಗಿದೆ. ವಿಧಿಯಿಲ್ಲದೆ ಪೂರ್ವಿಕರಿಂದ ಬಳುವಳಿಯಾಗಿ ಜನಪದ ವೈದ್ಯದ ಕಡೆಗೆ ವಾಲುತ್ತಿರುವುದನ್ನು ನೋಡಬಹುದಾಗಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗ್ರಾಮದ ಜನಪದ ವೈದ್ಯರನ್ನು ಸಂದರ್ಶಿಸಿದಾಗ ಸೂಕ್ಷ್ಮ ಅಂಶಗಳು ಕಂಡುಬಂದಿರುತ್ತವೆ. ಇಂತಹ ವೈದ್ಯರಲ್ಲಿ ಯಾವುದೇ ರೀತಿಯಲ್ಲಿ ಅವನು ದಲಿತ, ಇವನು ಸವರ್ಣೀಯ ಎಂಬ ಬೇದ ಭಾವವಿಲ್ಲದಿರುವುದು. ಹಳ್ಳಿಗಳಲ್ಲಿ ಯಾವಾತನಿಗೆ ವೈದ್ಯ ಪದ್ಧತಿ ಗೊತ್ತಿರುತ್ತದೆಯೋ ಅಂತವನು ಯಾವುದೇ ಜಾತಿ ನೋಡದೆ ಚಿಕಿತ್ಸೆ ನೀಡುತ್ತಾನೆ. ಒಂದು ರೀತಿಯಲ್ಲಿ ಮಾನವೀಯ ಮನಸ್ಸುಗಳು ಅಲ್ಲಿ ಕೆಲಸ ಮಾಡುತ್ತಿರುತ್ತವೆ. ಪ್ರೀತಿವಾತ್ಸಲ್ಯದಿಂದ ಚಿಕಿತ್ಸೆ ನೀಡುವ ವ್ಯವಸ್ಥೆ ಅಲ್ಲಿರುತ್ತದೆ. ಆದರೆ ಪಟ್ಟಣಗಳ್ಲಲಿ ಅದನ್ನು ಕಾಣುವುದಿಲ್ಲ.

ಸಂಕ್ಷೀಪ್ತವಾಗಿ ವಿವರಿಸುವುದಾದರೆ ಕೆಳವರ್ಗದ ವ್ಯಕ್ತಿ, ಮೇಲ್ವರ್ಗದ ಸ್ತ್ರೀ ಪುರುಷರಿಗೆ, ಮೇಲ್ವರ್ಗದವರು ದಲಿತರಿಗೆ, ಚಿಕಿತ್ಸೆ ನೀಡುವುದನ್ನು ಕಾಣಬಹುದಾಗಿದೆ.

ಬದುಕಿನಲ್ಲಿ ಬರುವ ರೋಗಗಳಿಗೆ ನೀಡುವ ಜನಪದ ವೈದ್ಯಪದ್ಧತಿಯಲ್ಲಿರುವಂತ ವಿಧಿ ವಿಧಾನಗಳನ್ನು ಸೂಕ್ಷ್ಮವಾಗಿ ಅಧ್ಯಯನದ ಅಡಿಯಲ್ಲಿ ಬಳಸಿಕೊಳ್ಳಲಾಗಿದೆ. ಅಲ್ಲದೆ ಪ್ರಾಣಿಗಳಿಗೂ ಬಳಸುವಂತಹ ಔಷಧದ ಪದ್ಧತಿಯನ್ನು ವಿವರಿಸುವುದರೊಂದಿಗೆ ಖನಿಜ, ನೀರು, ಸಸ್ಯಗಳಿಂದ ತಯಾರಿಸಲಾಗುವ ವೈದ್ಯಪದ್ಧತಿಯನ್ನು ಉಲ್ಲೇಖಿಸಲಾಗಿದೆ. ಮುಂದುವರಿಸಿ ಹೇಳುವುದಾದರೆ ಬೇರೆ ಬೇರೆ ರೋಗಿಗಳಿಗೆ ಜನಪದ ವೈದ್ಯರು ಅವರದೇ ವೈದ್ಯ ಪದ್ಧತಿಯನ್ನು ಅಳವಡಿಸಿಕೊಂಡಿರುವ ಅಂಶಗಳು ಜೊತೆಗೆ ವೈದ್ಯಪದ್ಧತಿಯೊಳಗೆ ಇರುವಂತಹ ತೊಡಕುಗಳು ಮತ್ತು ಉಪಯೋಗಗಳ ಬಗ್ಗೆ ತಿಳಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯ ಮೆಟ್ಟಿಲುಗಳನ್ನು ಒಳಗೊಂಡಿದೆ. ಬಳ್ಳಾರಿ ಜಿಲ್ಲೆಯ ತೆಕ್ಕೆಯೊಳಗಿರುವ ತಾಲ್ಲೂಕುಗಳ ಗ್ರಾಮಗಳಲ್ಲಿ ನೆಲಸಿರುವ ಜನಪದ

ವೈದ್ಯರು ತಲತಲಾಂತರದಿಂದ ರೂಢಿಸಿಕೊಂಡು ಬಂದಿರುವಂತಹ ಹಾಗೂ ಇದುವರೆಗೂ ವಿವಿಧ ವಿದ್ವಾಂಸರು ಜನಪದ ವೈದ್ಯದ ಕುರಿತು ಯಾವ ದೃಷ್ಟಿಯಿಂದ ಅಧ್ಯಯನ ನಡೆಸಿರುತ್ತಾರೆ ತಿಳಿಸಿರುವುದಲ್ಲದೆ, ಅವುಗಳ ಮಹತ್ವತೆಯಲ್ಲಿ ಉದ್ದೇಶ ಹಾಗೂ ವಿಸ್ತಾರವನ್ನು ಅಧ್ಯಯನಕ್ಕೆ ಅಳವಡಿಸಲಾಗಿದೆ.


ಎರಡನೆಯ ಅಧ್ಯಾಯದಲ್ಲಿ ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಸಂಕ್ಷಿಪ್ತತೆ. ಅಲ್ಲದೆ ಇದರಡಿಯಲ್ಲಿ ಸುಮಾರು ಹತ್ತು ಉಪ ಅಧ್ಯಾಯಗಳನ್ನು ಮಾಡಿಕೊಂಡು ಅವುಗಳಲ್ಲಿ ಭೌಗೋಳಿಕತೆ, ಸಾಮಾಜಿಕತೆ, ರಾಜಕೀಯತೆ, ಆರ್ಥಿಕತೆ, ನೈಸರ್ಗಿಕತೆ, ಪೌರಾಣಿಕ ಹಿನ್ನಲೆ ಇನ್ನೂ ಕೆಲವು ಅಂಶಗಳನ್ನು ಸೇರಿಸಲಾಗಿದೆ. ಸಮಕಾಲೀನತೆಯ ಸಂದರ್ಭದಲ್ಲಿ ಪರಿಪೂರ್ಣವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿರುತ್ತದೆ.

ಮೂರನೆ ಅಧ್ಯಾಯದಲ್ಲಿ ಜನಪದ ವೈದ್ಯದ ಪರಂಪರೆ ಅಡಿಯಲ್ಲಿ ಜನಪದ ವೈದ್ಯದ ಹುಟ್ಟು ಬೆಳವಣಿಗೆಗಳ ಬಗ್ಗೆ, ಸಾಹಿತ್ಯ, ಶಾಸನ, ಗ್ರಂಥ, ವೇದ, ಉಪನಿಷತ್ತುಗಳಲ್ಲಿನ ಉಲ್ಲೇಖ, ವಿಕಾಸ, ಸ್ವರೂಪ ಹೀಗೆ ಜನಪದ ವೈದ್ಯ ಪದ್ಧತಿಯಲ್ಲಿರುವ ಅನೇಕ ಮಜಲುಗಳನ್ನು ಸೂಕ್ಷ್ಮವಾಗಿರುವ ಅಂಶಗಳನ್ನು ಪತ್ತೆ ಮಾಡಿ ಈ ಅಧ್ಯಯನಕ್ಕೆ ಸ್ಥೂಲವಾಗಿ ವಿಶ್ಲೇಷಣೆ ಮಾಡಿ ಪೂರಕ ಮಾಹಿತಿಯನ್ನು ಒದಗಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ವೈಜ್ಞಾನಿಕ ನೆಲೆಯಲ್ಲಿ ಜನಪದ ವೈದ್ಯರ ಮೂಢನಂಬಿಕೆಗಳ ಅವಲೋಕನದಡಿಯಲ್ಲಿ ಜನಪದರು ತಮಗೆ ಅರಿವಿದ್ದೂ ಅರಿವಿಲ್ಲದೆಯೋ ಅನೇಕ ಮೂಢ ಪದ್ಧತಿಗಳನ್ನು ತಮ್ಮ ವೈದ್ಯಪದ್ಧತಿಯಲ್ಲಿ ಅನುಸರಿಸುತ್ತಾ ಬಂದಿರುವರು. ಜನಪದ ವೈದ್ಯ ಪದ್ಧತಿಯನ್ನು ಹಳ್ಳಿಯ ವೈದ್ಯ ಮಾಡುವಾಗ ಅವನು ಬಳಸುವ ಸಸ್ಯಗಳಿರಬಹುದು ಆಹಾರ, ನೀರು, ಖನಿಜ ಹಾಗೂ ಇನ್ನಿತರ ವಸ್ತುಗಳಲ್ಲಿ ರಾಸಾಯನಿಕ ಅಂಶಗಳಿರುತ್ತವೆ. ಸೋಡಿಯಂ ಇರುತ್ತದೆ. ಜೀವಸತ್ವಗಳಿರುತ್ತವೆ. ಲವಣಗಳಿರುತ್ತವೆ. ಅಂತಹವುಗಳು ಇರುವುದರಿಂದ ರೋಗಿಯ ಕಾಯಿಲೆಗಳು ಗುಣಮುಖಗೊಳ್ಳುತ್ತವೆ ಎಂಬ ಅಂಶ ಅವನಿಗೆ ಗೊತ್ತಿರುವುದಿಲ್ಲ. ಆದರೆ ವೈದ್ಯ ನಾನು ಕೊಡುವ ವೈದ್ಯಪದ್ಧತಿಯಿಂದ ಗುಣಮುಖಗೊಂಡಿರುವನು ಎಂಬ ಮೂಢನಂಬಿಕೆ ಇರಿಸಿರುತ್ತಾನೆ. ಆದುದರಿಂದ ಜನಪದ ವೈದ್ಯ ಬಳಸುವ ವಸ್ತುಗಳಲ್ಲಿ ಔಷಧಿಗಳ ಸಂಯೋಜನೆ ಯಾವ ಯಾವ ಅಂಶಗಳೂ ಒಳಗೊಂಡಿರುತ್ತವೆ ಎಂಬ ಅಂಶಗಳನ್ನು ಸೂಕ್ಷ್ಮವಾಗಿ ತಲಸ್ಪರ್ಶಿಯ ಅಧ್ಯಯನ ಮಾಡಿ ವೈಜ್ಞಾನಿಕ ಅಂಶಗಳನ್ನು ವಿವರಿಸಲಾಗಿದೆ. ಈ ಹಿನ್ನೆಲೆಯಲ್ಲಿ ವೈಜ್ಞಾನಿಕ ಅಂಶಗಳತ್ತ ಗಮನಹರಿಸಿ ಮೌಲ್ಯಯುತವಾಗಿ ಅಡಕಗೊಂಡಿರುವ ಅಂಶಗಳನ್ನು ಅಧ್ಯಯನಕ್ಕೆ ಅಳವಡಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಜನಪದ ವೈದ್ಯದ ವರ್ಗೀಕರಣವನ್ನು ಮಾಡಿಕೊಳ್ಳಲಾಗಿದೆ. ಅವುಗಳೆಂದರೆ ಸಸ್ಯ, ಪ್ರಾಣಿ, ಮನುಷ್ಯ ಮತ್ತು ಖನಿಜ ಹೀಗೆ ಗುರ್ತಿಸಿಕೊಳ್ಳಲಾಗಿದೆ. ಈ ಅಂಶಗಳಿಗೆ ಪೂರಕವಾಗಿ ನೈಸರ್ಗಿಕವಾಗಿ ದೊರೆಯುವಂತಹ ಗಿಡಮೂಲಿಕೆಗಳಿಂದ ಜನಪದ ವೈವಿಧ್ಯಮಯವಾದ ಹಾಗೂ ಯಾವ ರೋಗಗಳಿಗೆ ಔಷಧಿ ನೀಡುತ್ತಾನೆ. ಅವುಗಳಲ್ಲಿರುವಂತ ನಂಬಿಕೆ, ಆಚರಣೆ ಹಾಗೂ ಸ್ತ್ರೀ, ಪುರುಷ, ಮಕ್ಕಳು ಹೀಗೆ ಲಿಂಗಭೇದವಿಲ್ಲದೇ ಸಾಮಾನ್ಯವಾಗಿ ಎಲ್ಲರಿಗೂ ಉಂಟಾಗುವ ಉಪಯೋಗ ಮತ್ತು ಆ ರೋಗದಿಂದ ಆಗುವ ಪರಿಣಾಮಗಳೇನು? ಅನಂತರ ಹಳ್ಳಿಯ ಜನಪದ ವೈದ್ಯಪದ್ಧತಿಯನ್ನು ಯಾವ ನಿಟ್ಟಿನಲ್ಲಿ ಆಧುನಿಕತೆಯ ತೆಕ್ಕೆಯೊಳಗೆ ಪಳಗಿಸುವುದು, ಕಾಪಾಡುವುದು ಮತ್ತು ಸ್ವೀಕರಿಸುವುದು ಎಂಬ ಅಂಶಗಳನ್ನು ಗಮನಿಸಿ ಈ ಅಧ್ಯಯನಕ್ಕೆ ಅಳವಡಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಆಧುನಿಕತೆ ಮತ್ತು ಜನಪದ ವೈದ್ಯಪದ್ಧತಿಯನ್ನು ಅಳವಡಿಸಲಾಗಿದೆ. ಆಧುನಿಕತೆಯ ಈ ಸಂದರ್ಭದಲ್ಲಿ 'ದೇಸೀ' ಸೊಗಡನ್ನು ಕಣ್ಮರೆಗೊಳಿಸುವ ಹುನ್ನಾರ ನಗರೀಕರಣತೆಯಲ್ಲಿ ಅಡಗಿರುತ್ತದೆ. ಈ ಹಿನ್ನೆಲೆಯಲ್ಲಿ 'ದೇಸೀ' ಸೊಗಡಿನಲ್ಲಿರುವ ಜನಪದ ವೈದ್ಯ ಪದ್ಧತಿಯನ್ನು ಉಳಿಸಿಕೊಂಡು ಎಷ್ಟು ಅವಶ್ಯವೋ ಅಷ್ಟು ಮಾತ್ರ ಆಧುನಿಕತೆಯತ್ತ ವಾಲುವುದು ಉಚಿತ. ಅಲ್ಲದೆ ಜನಪದ ವೈದ್ಯಪದ್ಧತಿ, ಆಧುನಿಕತೆಯಲ್ಲಿ ಹೇಗೆ ತನ್ನ ವಿಶಿಷ್ಟತೆ ಮತ್ತು ಮೌಲ್ಯತೆಯನ್ನು ಉಳಿಸಿಕೊಂಡು ಬಂದಿದೆ. ಹಾಗೆಯೇ ಆಧುನಿಕತೆಯಿಂದ ಉಂಟಾಗುವ ಜನಪದರು ನಂಬಿಕೊಂಡು, ರೂಢಿಸಿಕೊಂಡು, ಆಚರಿಸಿಕೊಂಡು ತಲತಲಾಂತರದಿಂದ ಪೂರ್ವಿಕರಿಂದ ಬಂದಿರುವ ಜನಪದ ವೈದ್ಯಪದ್ಧತಿಯನ್ನು ನಮ್ಮ ಅನೇಕ ವಿದ್ವಾಂಶರು ಬಹಳ ಜಾಣ್ಮೆಯಿಂದ ವಿಂಗಡನೆ ಮಾಡಿರುತ್ತಾರೆ. ಇದೊಂದು ರೀತಿಯಲ್ಲಿ ಪಕ್ವತೆ ಆಗಿದೆ. ಈ ಏಳು ತಾಲೋಕುಗಳಲ್ಲಿ ಕ್ಷೇತ್ರದಲ್ಲಿ ಸುತ್ತಾಡಿದಾಗ ನೂರೊಂದು ಕಾಯಿಲೆಗಳಿಗೆ ಬೇರೆ ಬೇರೆ ರೀತಿಯಲ್ಲಿಯೇ ವೈದ್ಯ ಪದ್ಧತಿಯನ್ನು ಅನುಸರಿಸಿರುವುದು ಮೌಲ್ಯಯುತ. ಜನಪದ ವೈದ್ಯಪದ್ಧತಿಯನ್ನು ಬಳ್ಳಾರಿ ಜಿಲ್ಲೆಯೊಳಗೆ ಬರುವ ತಾಲೋಕುಗಳು, ಹಳ್ಳಿಗಳಲ್ಲಿ ಮಹತ್ವವಾದ ಹಾಗೂ ಪರಿಪಕ್ವವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಏಳನೇ ಅಧ್ಯಾಯದಲ್ಲಿ ಒಟ್ಟಾರೆಯಾಗಿ ಮಹಾಪ್ರಬಂಧ 'ದಲ್ಲಿ ಮೌಲ್ಯಯುತ ಅಂಶಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ಅಲ್ಲದೆ ಆಧುನಿಕತೆಯ ಪರಿಣಾಮದಿಂದ ಜನಪದರು ತಮ್ಮ ತಮ್ಮ ನಾಟಿವೈದ್ಯದಲ್ಲಿ ಯಾವುದೇ ಪ್ರಭಾವಕ್ಕೆ ಒಳಗಾಗದೆ ತಮ್ಮ ಮೂಲವಾದ ಸಂಪ್ರದಾಯಿಕವಾದ ನೆಲೆಯಲ್ಲಿಯೇ ಬಳಸುತ್ತಿರುವುದು ವಿಶೇಷವಾಗಿದೆ. ಒಟ್ಟಾರೆಯಾಗಿ ಈ ಪ್ರಬಂಧವು ಏಳು ಟೀಸಿಲುಗಳಲ್ಲಿ ಬೇರೆ ಬೇರೆ ರಂಬೆಗಳನ್ನಾಗಿ ಅಧ್ಯಯನಕ್ಕೆ ಮಾಡಿಕೊಳ್ಳಲಾಗಿದೆ.



ಅಧಾಶಾಲಯ (ಸಂಸ್ಕೃತ್) ಉತ್ರಾಣಿ (ಕನ್ನಡ)

Achyranthes Aspera Linn



ಕುಮಾರಿ (ಸಂಸ್ಕೃತ್) ಘಿಕವರ (ಕನ್ನಡ)

Aloe Vera, Mill.







ABRUS PRECATORIOUS

(ಸ0ಸ್ಕೃತ) ಗು0ಜ (ಕನ್ನಡ) ಗುರುಗು0ಜ



CALOTROPIS GIGANTEA

(ಸ0ಸ್ಕೃತ) ಅಲಾರ್ಕ (ಕನ್ನಡ) ಬಿಳಿಎಕ್ಕ



PONGAMIA GLABRA

(ಸ0ಸ್ಕೃತ) ಕಾರ0ಜಾ (ಕನ್ನಡ) ಹೊ0ಗೆ










ಚಿತ್ರಕಾ (ಸಂಸ್ಕೃತ್) ಕೆಂಪುಚಿತ್ರಾಮಲಂ (ಕನ್ನಡ)

Plumbago Zeylanica



ಅಶ್ವಗಂಧ (ಸಂಸ್ಕೃತ್) ಬಿರೆಮದ್ದಿನಗಡ್ಡಿ (ಕನ್ನಡ)

Withania Somnifera (L) Dunal







ಅಮೃತ ವಳ್ಳಿ (ಸಂಸ್ಕೃತ್) ಆನೆಬುಲೆ (ಕನ್ನಡ)

Tinospora Cordifolia (Wild)



ಕರವೀರಾ (ಸಂಸ್ಕೃತ್) ಕಣಗಲೆ (ಕನ್ನಡ)

Nerium Indicum, Mill.







ಯಾಷ್ಟಿಮಧು (ಸಂಸ್ಕೃತ್) ಯಾಷ್ಟಿ (ಕನ್ನಡ)

Glycyrrhiza glabra Linn



ಶೀಗ್ರು (ಸಂಸ್ಕೃತ್) ನುಗ್ಗೆ ಗಿಡ (ಕನ್ನಡ)

Moringa Oleifera Lamk







ಕರಂಜ (ಸಂಸ್ಕೃತ್) ಹೊಂಗೆ (ಕನ್ನಡ)

Pongamia pinnata, Pieree.



ಪಿಪಾಲ (ಸಂಸ್ಕೃತ್) ಅಶ್ವಥ (ಕನ್ನಡ)

Ficus religiosa Linn







ದಾಸವಾಳ (ಕನ್ನಡ)

Hibiscus rossa sinnanisis



ಬಬ್ಬುಳ (ಸಂಸ್ಕೃತ್) ಬಬೀರ (ಕನ್ನಡ)

Acacia nilotica Delile ssp







ಔಷಧಿ ತ0ಯಾರಿಸುತ್ತಿರುವ ನಾಟಿವೈದ್ಯ ಹರಿಜನ ಮಲ್ಲಪ್ಪ ಏಣಗಿ



ಮುರಿದ ಕಾಲಿಗೆ ಚಿಕಿತ್ಸೆ ನೀಡುತ್ತಿರುವ ನಾಟಿವೈದ್ಯ ಹರಿಜನ ಮಲ್ಲಪ್ಪ



ನಾಲಿಗೆಗೆ ಮುಳ್ಳಾಗಿ ಆಹಾರ ಸೇವಿಸದೆ ಇರುವ ಎತ್ತಿಗೆ ಚಿಕಿತ್ಸೆ ನೀಡುತ್ತಿರುವುದು.



ಔಷಧಿ ಸಸ್ಯಗಳ ಬಗ್ಗೆ ಮಾಹಿತಿ ನೀಡುತ್ತಿರುವ ನಾಟಿವೈದ್ಯ ಹಂಸನಂದಚಾರಿ
ಕೋಟೆ ಹೂವಿನಹಡಗಲಿ



ರೋಗಿಗೆ ಚಿಕಿತ್ಸೆ ನೀಡುತ್ತಿರುವ ನಾಟಿವೈದ್ಯ ಹಂಸನಂದಚಾರಿ



ಔಷದಿ ಬೆರೆಸಿ ಬಿದರಿನಿ0ದ ಮುರಿದ ಎತ್ತಿನ ಕಾಲಿಗೆ ಕಟ್ಟುತ್ತಿರುವ ನಾಟಿವೈದ್ಯ
ಹರಿಜನಮಲ್ಲಪ್ಪ ಏಣಿಗಿ









ಕಡಿಮೆ ಹಾಲು ಕೊಡುವ ಎಮ್ಮೆಗೆ ಉತ್ಪನ್ನ ಹೆಚ್ಚಿಸಲು ರಸೌಷಧಿ ಕುಡಿಸುತ್ತಿವರ ನಾಟಿ ವೈದ್ಯ ದುರುಗಪ್ಪ ಕಾನಾಮಡಗು ತಾ: ಕೂಡ್ಲಿಗಿ



ಮೈಮೇಲಾದ ಹುಣ್ಣಿಗೆ ಚಿಕಿತ್ಸೆ ನೀಡುತ್ತಿರುವ ನಾಟಿವೈದ್ಯ ದುರುಗಪ್ಪ ಕಾನಾಮಡಗು ತಾ: ಕೂಡ್ಲಿಗಿ



ಕೆ0ಪು ಬಿಳಿ ಸೆರಗಿನ ತೊ0ದರೆ0ುವರಿಗೆ ಚಿಕಿತ್ಸೆ ನೀಡುತ್ತಿವ ನಾಟಿವೈದ್ಯೆ ಶಾನಭೋಗರ ಮೀನಾಕ್ಷಮ್ಮ, ಕೊಟ್ಟೂರು









ನಾಟಿ ಔಷಧಿ ತಯಾರಿಸುತ್ತಿರುವ ಏಣಿಗಿ ಹುಚ್ಚಮ್ಮ





ಹೆಂಗಸರಿಗೆ ಮುಟ್ಟು ನಿಲ್ಲುವ ಸಲುವಾಗಿ ಔಷಧಿಯನ್ನು ಕೊಡುತ್ತಿರುವ
ಏಣಿಗಿ ಹುಚ್ಚಮ್ಮ









ಔಷಧಿ ತಯಾರಿಸುತ್ತಿರುವ ನಾಟಿವೈಧ್ಯ ಗೊಲ್ಲರ ತಿಮ್ಮಪ್ಪ,
ನಂ.10, ಮುದ್ದಾಪುರ, ಕಂಪ್ಲಿ, ಹೊಸಪೇಟೆ ತಾಲ್ಲೂಕು



ಮಾನಸಿಕ ಅಸ್ವಸ್ಥರೋಗಿಗೆ ಚಿಕಿತ್ಸೆ ನೀಡುತ್ತಿರುವ ಗೊಲ್ಲರ ತಿಮ್ಮಪ್ಪ,



ನಾಟಿವೈಧ್ಯ ಗೊಲ್ಲರ ತಿಮ್ಮಪ್ಪರೊಂದಿಗೆ ಸಂಶೋಧಕ









ಪಾರ್ಶ್ವವಾಂಯುಗೆ ಔಷಧಿ ತಂಯಾರಿಸುತ್ತಿರುವ ಬ್ಯಾಲಿಚಿಂತಿ ತಿಮ್ಮಪ್ಪ, ಮೋಕ



ಪಾರ್ಶ್ವವಾಂಯು ರೋಗಿಗೆ ಚಿಕಿತ್ಸೆ ನೀಡುತ್ತಿರುವ ಬ್ಯಾಲಿಚಿಂತಿ ತಿಮ್ಮಪ್ಪ, ಮೋಕ



ನಾಟಿವೈದ್ಯ ತಿಮ್ಮಪ್ಪರೊಂದಿಗೆ ಸಂಶೋಧಕರು









ಮುಖದ ಮೇಲಿನ ಭಂಗ್ ಗೆ ಚಿಕಿತ್ಸೆ
ನೀಡುತ್ತಿರುವ ನಾಟಿವೈಧ್ಯ ಕಾಗಳ ಬಾಬು, ಗುಡಾರನಗರ



ಕೈ, ಕಾಲು, ಕುತ್ತಿಗೆ ಉಳಿಕಿದವನಿಗೆ ಮೊಸಳೆ ಬಾಲದ ಕೊಬ್ಬಿನಿಂದ
ತಯಾರಿಸಿದ ಔಷಧಿಯಿಂದ ಚಿಕಿತ್ಸೆ ನೀಡುತ್ತಿರುವ ನಾಟಿವೈಧ್ಯ ಸಿಂಧೋಳ
ರಾವಲ್ ಮಾರೆಪ್ಪ, ಗುಡಾರ ನಗರ



ಮುಳ್ಳು ಹಂದಿಯ ಹೊಟ್ಟೆಯನ್ನುಬಗೆದು









ಹಳದಿ ಕಾಮಾಲೆ ರೋಗಕ್ಕೆ ಗಿಡಮೂಲಿಕೆ ಔಷಧಿ ತ0ಯಾರಿಸುತ್ತಿರುವ ನಾಟಿವೈದ್ಯ
ವಿ.ಮ0ಜುನಾಥ, ಕಮಲಾಪುರ



ಕಾಮಾಲೆ ರೋಗಕ್ಕೆ ಔಷಧಿ ಕೊಡುತ್ತಿರುವ ವಿ.ಮ0ಜುನಾಥ, ಕಮಲಾಪುರ



ಹಳದಿ ಕಾಮಾಲೆ ಜಾಸ್ತಿ0ಯಾಗಿದ್ದಲ್ಲಿ ಕಣ್ಣಿನೊಳಗೆ ಔಷಧಿ ಹಿ0ಡುತ್ತಿರುವ ನಾಟಿವೈದ್ಯ
ವಿ.ಮ0ಜುನಾಥ, ಕಮಲಾಪುರ









ಬಿಳಿಎಕ್ಕೆ ಗಿಡ (Calotropis gigantea)



ಕಾಮಾಲೆ ರೋಗಕ್ಕೆ ಬಿಳಿಎಕ್ಕೆ ಗಿಡದ ಮೊಗ್ಗುಗಳನ್ನು ಸಿಹಿತಿಂಡಿಯಲ್ಲಿ ಬೆರೆಸಿ
ಔಷಧಿಯಾಗಿ ನೀಡುತ್ತಿರುವ ನಾಟಿವೈದ್ಯ ಬಿ.ಎಂ.ಶಾಂತಮೂರ್ತಿ



ಬಿಳಿಎಕ್ಕೆ ಗಿಡ









ಅರ್ಧ ತಲೆ ನೋವಿಗೆ ಪ0ಚಲೋಹಗಳನ್ನು ಬೆರೆಸಿ ತ0ಯಾರಿಸಿದ ತಾಮ್ರದ ಉ0ಗುರ ತ0ಯಾರಿಸುತ್ತಿರುವ ನಾಟಿವೈದ್ಯ ಶ್ರೀನಿವಾಸಆಚಾರ್, ಕ0ಪ್ಲಿ,



ತ0ಯಾರಿಸಿದ ತಾಮ್ರದ ಉ0ಗುರದೊ0ದಿಗೆ ತನ್ನ ಇಷ್ಟದೇವರಿಗೆ ಸ್ಮರಿಸಿಕೊಳ್ಳುತ್ತಿರುವುದು ಇದೊ0ದು ನ0ಬಿಕೆ



ಅರ್ಧ ತಲೆನೋವು ಇರುವ ರೋಗಿ0ು ಕಾಲ್ಬೆರಳಿಗೆ ಉ0ಗುರ ತೊಡಿಸುತ್ತಿರುವ, ನಾಟಿವೈದ್ಯ ಶ್ರೀನಿವಾಸಆಚಾರ್, ಕ0ಪ್ಲಿ










ಚುಟಿಕೆ ಹಾಕುತ್ತಿರುವ ಜನಪದೆ ಪದ್ದಮ್ಮ, 4 ನೇ ವಾರ್ಡ್, ಕ0ಪ್ಲಿ



ಚುಟಿಕೆ ಹಾಕಲು ಜನಪದರು ಬಳಸುವ ಬೇವಿನ ಮರದ ಕಡ್ಡಿ, ಸೂಜಿ ಡಬ್ಬಣ, ಬಳೆ ಚೂರುಗಳು



ಮೇಲಿ0ದ ಮೇಲೆ ಜ್ವರ ಬ0ದರೆ ಮಗುವಿಗೆ ಚುಟಿಕೆ ಹಾಕುತ್ತಿರುವ ಜನಪದೆ
ಅ0ಯ್ಯಾಳಿ ಅ0ಬಮ್ಮ, ಅನ0ತಶ0ಯನ ಗುಡಿ, ಹೊಸಪೇಟೆ









ನಾಟಿ ವೈಧ್ಯ ವೀರಣ್ಣ ರವರೊಂದಿಗೆ ಸಂಶೋಧಕ



ಸಕ್ಕರೆ ಕಾಯಿಲೆಗೆ ವೀರಣ್ಣ ತಯಾರಿಸಿದ ರಸೌಷಧಿ
ಕುಡಿಯುತ್ತಿರುವವರು



ಕಾಲು ಉಳಿಕಿದವರಿಗೆ ನಾಟಿ ಚಿಕಿತ್ಸೆ









ರಾಗಿ ತ0ಬಿಗೆ0ಯಲ್ಲಿ ರಾತ್ರಿಯಿಡಿ ನೀರು ತು0ಬಿಸಿ ಬೋರಲಾಗಿ ಕಟ್ಟಿ ಬೆಳಗಿನ ಜಾವ ತೆಗೆ0ಯುತ್ತಿರುವ ಜಾನಪದೆ ಪದ್ದಮ್ಮ



ರಾತ್ರಿಯಿಡಿ ರಾಗಿ ತ0ಬಿಗೆ0ಯಲ್ಲಿದ್ದ ನೀರಿಗೆ ಜೇನು ಮತ್ತು ನಿ0ಬೆ ರಸ ಸೇರಿಸಿ ಖಾಲಿಹೊಟ್ಟೆಗೆ ಕುಡಿಸುವುದು. ಇದರಿ0ದ ಬೊಜ್ಜು ಕರುಗುವುದು.



ಹಾವು ಕಚ್ಚಿದ ಜಾಗಕ್ಕೆ ಕೋಳಿಮರಿ0ಯ ಗುದುದ್ವಾರದಿ0ದ ವಿಷ ತೆಗೆ0ಯುತ್ತಿರುವ ಜನಪದೆ ಪದ್ದಮ್ಮ, 4ನೇ ವಾರ್ಡ್, ಕ0ಪ್ಲಿ









ಔಷಧಿ ತಯಾರಿಸುತ್ತಿರುವ ನಾಟಿವೈಧ್ಯ ಶ್ರೀನಿವಾಸ, ಕೂಡ್ಲಿಗಿ



ಆನೆ ನಗ್ಗಿಲು ಸಸ್ಯದಿಂದ ರಸಔಷಧಿ ಸೆಕರಿಸುತ್ತಿರುವುದು



ಚಿಕಿತ್ಸೆ ನೀಡುತ್ತಿರುವ ನಾಟಿವೈಧ್ಯ









ಹುಲ್ಕಡ್ಡಿ ರೋಗಕ್ಕೆ ಔಷಧಿ ತ0ಯಾರಿಸುತ್ತಿರುವ ನಾಟಿ ವೈದ್ಯ ವೆ0ಕಟೇಶುಲು, ಬಳ್ಳಾರಿ



ಚಿಕಿತ್ಸೆ ನೀಡುತ್ತಿರುವ ನಾಟಿ ವೈದ್ಯ ವೆ0ಕಟೇಶುಲು, ಬಳ್ಳಾರಿ



ಗರಿಕೆ ಹುಲ್ಲಿನಿ0ದ ರಸ ತೆಗೆದು ಔಶಧಿ ತ0ಯಾರಿಸುತ್ತಿರುವ ಶಿಖಾರಿ ಜಲ್ಲುಪೂಜಾರಿ, ಕ0ಪ್ಲಿ











ಗೆಜ್ಜಡಿಕಿ ಗಿಡದಿ0ದ ಮೈಮೇಲಾಗುವ ಗಾ0ಯಕ್ಕೆ ಔಶಧಿ ತ0ಯಾರಿಸುತ್ತಿರುವ ಶಿಖಾರಿ ಜಲ್ಲುಪೂಜಾರಿ, ಕ0ಪ್ಲಿ



ಗಾ0ಯವಾದ ವ್ಯಕ್ತಿಗೆ ಚಿಕಿತ್ಸೆ ನೀಡುತ್ತಿರುವ ಶಿಖಾರಿ ಜಲ್ಲುಪೂಜಾರಿ, ಕ0ಪ್ಲಿ



ಆಡು ಮುಟ್ಟದ ಗಿಡದ ಬೇರಿನಿ0ದ ಪದೆ ಪದೆ ವಾ0ತಿ0ಯಾಗುವವರಿಗೆ ಕರಿ ಮೇಕೆ ಹಾಲಿನಲ್ಲಿ ಬೆರೆಸಿ ಕುಡಿಸುತ್ತಿರುವ ನಾಟಿ ವೈದ್ಯ 0ಯರಗುಡಿ ಕೆ.ನಾರಾ0ಯಣರಾವ್,









ಮಕ್ಕಳಾಗದ ಹೆಣ್ಣುಮಕ್ಕಳಿಗೆ ರಾಗಿ ತಗಡಿನಲ್ಲಿ 0ಯ0ತ್ರ ಬರೆ0ಯುತ್ತಿರುವ 0ಯರಗುಡಿ ಕೆ.ನಾರಾ0ಯಣರಾವ್,



ತ0ಯಾರಾದ 0ಯ0ತ್ರವನ್ನು ಹೆಣ್ಣುಮಕ್ಕಳ ಕೊರಳಿಗೆ ಅಥವಾ ತೋಳಿಗೆ ಕಟ್ಟಬೇಕು



ಶಕ್ತಿ ವರ್ಧಕ ಲೇಹ ತ0ಯಾರಿಕೆ0ಯಲ್ಲಿ ಬಳುಸುವ ವಸ್ಥುಗಳೊ0ದಿಗೆ ದ0ಪತಿಗಳಾದ 0ಯರಗುಡಿ ಕೆ.ನಾರಾ0ಯಣರಾವ್ ಹಾಗೂ ಶೀಮತಿ.ಸುಮಿತಮ ನಾರಾ0ಯಣರಾವ್









ಲೇಹ ತ0ಯಾರಿಕೆ0ುಲ್ಲಿ ತೊಡಗಿರುವ 0ುರಗುಡಿ ಕೆ.ನಾರಾ0ುಣರಾವ್,



ಮೆಣಸು, ಜಾಜಿಕಾಯಿ, ಲವ0ಗ, ಶು0ಟಿ, ಜಾಪತ್ರಿ, ಮೋಡಿ, ಇವುಗಳನ್ನು ಹುರಿದು, ಅರೆದು ಮಿಶ್ರಣ
ಗೊಳಿಸಿ ಬೆರೆಸುತ್ತಿರುವ 0ುರಗುಡಿ ಕೆ.ನಾರಾ0ುಣರಾವ್,



ಹೀಗೆ ತ0ಯಾರಾದ ಲೇಹವನ್ನು ಶಕ್ಥಿವರ್ಧಕವಾಗಿ ಉಪ0ಯೋಗಿಸುತ್ತಾರೆ










Showing the formation of Inhibition Zones of
Pseudomonas aeruginosa
Produced by the Alcholic Extracts of
Withania somnifera & Tinospora cordiofolia.




Showing the formation Inhibition Zones of
Staphylococcus aureus
Produced by the Alcholic Extracts of
Withania somnifera & Tinospora cordiofolia.







Showing the forms of Inhibition Zones of
E.Coli
Produced by the Alcholic Extracts of Achyranthes Aspera Linn and Aloe Vera, Mill.



Showing the forms of Inhibition Zones of
Proteus vulgaris
Produced by the Alcholic Extracts of Achyranthes Aspera Linn and Aloe Vera, Mill.





ಅನುಬಂಧಗಳು

ಪರಾಮರ್ಶನ ಗ್ರಂಥಗಳು

ವಕ್ತೃ ವಿವರಗಳು

ಪರಾಮರ್ಶನ ಗ್ರಂಥಗಳು

೧. ವಿವೇಕ ರೈ ಬಿ.ಎ., ಅನ್ವಯಿಕ ಜಾನಪದ, ಅತ್ರಿಬುಕ್ ಸೆಂಟರ್, ಶರಾವತಿ ಬಿಲ್ಡಿಂಗ್, ಬಲ್ಮಠ, ಮಂಗಳೂರು, ೧೯೮೫

೨. ಜವರೇಗೌಡ ದೇ., ಜಾನಪದ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೬

೩. ಮಳಲಿ ವಸಂತಕುಮಾರ, ಕರ್ನಾಟಕ ಜನಪದ ವೈದ್ಯ, ಪಂಪ ಪ್ರಕಾಶನ, ಸರಸ್ವತಿಪುರಂ, ಮೈಸೂರು, ೧೯೭೯

೪. ಚಿನ್ನಪ್ಪಗೌಡ ಕೆ., ಜಾಲಾಟ, ಚಿಂತನ ಪ್ರಕಾಶನ, ಉಜಿರೆ, ದಕ್ಷಿಣ, ಕನ್ನಡ ಜಿಲ್ಲೆ, ೧೯೮೫

೫. ರಾಮಕೃಷ್ಣ ಟಿ.ಶೆಟ್ಟಿ, ದೃಷ್ಟಿ ಮತ್ತು ಇತರ ಲೇಖನಗಳು, ಸಮೀರ ಪ್ರಕಾಶನ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ, ೧೯೮೬

೬. ಚಂದ್ರಶೇಖರ ಸಿ.ಆರ್., ಭಾನಾಮತಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, ೧೯೮೫

೭. ಪ್ರಭು ಖಾನಪುರೆ, ನಿವಾಳಿ ಲೇಖನ, ಕವಿಮಾರ್ಗ, ಜನವರಿ ಮಾರ್ಚ್ ಸಂಚಿಕೆ, ಸಂ.ವೀರಣ್ಣದಂಡೆ, ಬ್ರಹ್ಮಪೂರ, ಕಲಬುರ್ಗಿ

೮. ಆಲೆಕ್ಸಿಸ್ ಕೆಕಿಲ್, ಅವ್ಯಕ್ತಮಾನವ, ಅನು.ಲಕ್ಷ್ಮೀನಾರಾಯಣಚಾರ್ಯ ಮತ್ತು ಕು.ಶಿ.ಹರಿದಾಸಭಟ್ಟ, ಮದ್ರಾಸು ವಿಶ್ವವಿದ್ಯಾಲಯ, ೧೯೫೩

೯. ನಾಗೇಶ್ ಎಚ್.ವಿ., ಗ್ರಾಮಾಂತರ, ಸುಜಾತ ಪ್ರಕಾಶನ, ಧಾರವಾಡ, ೧೯೮೮

೧೦. ನಾರಾಯಣ ಎಂ.ವಿಶ್ವ, ಭಾರತೀಯ ಸಮಾಜದ ಅಧ್ಯಯನ, ಆರ್.ಎಂ.ಪ್ರಕಾಶನ, ಮೈಸೂರು, ೧೯೮೬

೧೧. ಹೆಬ್ಬಾಲೆ ಕೆ.ನಾಗೇಶ್, ಜಾನಪದ ಬನಸಿರಿ, ರುಚಿಕ ಪ್ರಕಾಶನ, ಎಂ.ಪಿ.ಪ್ರಕಾಶನಗರ, ಹೊಸಪೇಟೆ, ೨೦೦೨

೧೨. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯

೧೩. ಕಾರ್ಸ್ಪೆಯರ್ಸ್ ಜಿ.ಎಂ.ಆರ್.ಎಲ್‌ಕಪೂರ, **ಕೋಟ ಮಹಾಜಗತ್ತು**, ಅನು.ಶಿವರಾಮಕಾರಂತ, ಅಕ್ಷರ ಪ್ರಕಾಶನ ಸಾಗರ, ೧೯೮೫

೧೪. ಮಹೇಶ್ವರಯ್ಯ ಎಚ್.ಎಂ., *ಅರ್ಥವಿಜ್ಞಾನ*, **ಸಾಧನೆ**, ಸಂ.೧೪, ಸಂ.೪, ೧೯೮೫

೧೫. ಸತ್ಯನಾಥ್ ಟಿ.ಎಸ್., **ಕನ್ನಡ ಜಾನಪದ ಕೆಲವು ಮುಖಗಳು**, ಶಾರದ ಪ್ರಕಾಶನ, ಬೆಂಗಳೂರು, ೧೯೮೮

೧೬. ಸುಧಾಕರ, **ನಮ್ಮ ಸುತ್ತಿನ ಗಾದೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೩

೧೭. ರಂಗಾರೆಡ್ಡಿ ಕೋಡಿರಾಂಪುರ, **ಲಿಖಿತ ಜಾನಪದ**, ಶಂಬೂಕ ಪ್ರಕಾಶನ ಸಂಸ್ಥೆ, ಗೌರಿಬಿದನೂರು, ೧೯೭೯

೧೮. ರೇವಣ್ಣ ಮೈಲಹಳ್ಳಿ, **ಕನ್ನಡದಲ್ಲಿ ಬೆಡಗು**, ಕರ್ನಾಟಕ ಜಾನಪದ ಸಮೀಕ್ಷೆ ಸಂ.ಜಿ.ಸಂ.ಪರಮಶಿವಯ್ಯ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೨

೧೯. ರಾಜೇಂದ್ರ ಡಿ.ಕೆ., **ಗ್ರಾಮೀಣ ಜಾನಪದ**, ವಿಶಿಷ್ಟ ಜಾನಪದ, ಸಂ.ಲಕ್ಕಪ್ಪಗೌಡ ಎಚ್.ಜೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೪

೨೦. ಪಂಡಿತಾರಾಧ್ಯ ಎಂ.ಎನ್.ವಿ., *ನಗರ ಜಾನಪದ*, **ವಿಶಿಷ್ಟ ಜಾನಪದ**, ಸಂ.ಲಕ್ಕಪ್ಪಗೌಡ ಎಚ್.ಜೆ., ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೨೧. ರಾಮಚಂದ್ರೇಗೌಡ ಹಿ.ಶಿ., **ಜಾನಪದ ವ್ಯಕ್ತಿ ಮತ್ತು ವಿಚಾರ**, ಮಾನವಿ ಪ್ರಕಾಶನ, ಮಾನಸಗಂಗೋತ್ರಿ, ಮೈಸೂರು, ೧೯೮೭

೨೨. ರಾಮಚಂದ್ರೇಗೌಡ ಹಿ.ಶಿ., **ಜಾನಪದ ಅಂತರಂಗ**, ಮಾನವಿ ಪ್ರಕಾಶನ, ಮಾನಸಗಂಗೋತ್ರಿ, ಮೈಸೂರು, ೧೯೮೭

೨೩. ಅರವಿಂದ ಮಾಲಗತ್ತಿ, **ಜಾನಪದ ವ್ಯಾಸಂಗ**, ನವೋದಯ ಮುದ್ರಣಾಲಯ, ಗದಗ, ೧೯೮೫

೨೪. ಪುರುಷೋತ್ತಮ ಬಿಳಿಮಲೆ, **ಕರಾವಳಿ ಜಾನಪದ**, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ, ೧೯೯೦

೨೫. ಮಹೇಶ್ವರಯ್ಯ ಎಚ್.ಎಂ., ಕ್ರಿಯಾಶೀಲ ಜಾನಪದ, ಜಾನಪದ ಗಂಗೋತ್ರಿ, ವಿಶೇಷ ಸಂಚಿಕೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೮೮

೨೬. ಅಂಬಳಿಕೆ ಹಿರಿಯಣ್ಣ, ಮಲೆನಾಡಿನ ಜನಪದ ಸಂಪ್ರದಾಯಗಳು, ಪುಸ್ತಕ ಚಿಲುಮೆ, ಮೈಸೂರು, ೧೯೭೮

೨೭. ಸ್ವಾಮಿ ಎಸ್.ಎಂ.ವಿ., ಜಾನಪದ ದರ್ಶನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೭

೨೮. ಪಾಟೀಲ ಎ.ಓ., ಉತ್ತರ ಕರ್ನಾಟಕದ ವಿಧಿಕ್ರಿಯೆ ಆಚರಣೆ, (ಅ.ಪ್ರ) ೧೯೮೫

೨೯. ಹಲಸಂಗಿ ಚೆನ್ನಮಲ್ಲಪ್ಪ ಮತ್ತು ಇತರರು, ಗರತಿಯಹಾಡು, ೧೯೩೩

೩೦. ಸೋಮಶೇಖರ ಇಮ್ರಾಪೂರ, ಹಂತಿ ಗೀಗೀ ಹಾಗೂ ಲಾವಣಿ ಸಂಪ್ರದಾಯ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬

೩೧. ಕ್ಯಾತನಹಳ್ಳಿರಾಮಣ್ಣ, ಐದು ಐತಿಹಾಸಿಕ ಲಾವಣಿಗಳು, ಜಾನಪ್ಲೀಟರ್ ಸಂಗ್ರಹದಿಂದ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೨

೩೨. ಜಾನಪದ ಸಾಹಿತ್ಯ ದರ್ಶನ, ಭಾಗ ೧, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೪

೩೩. ಸ್ವಾಮಿ ಎಸ್.ಎಂ.ವಿ., ಜಾನಪದ ದರ್ಶನ ೧೦, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೭

೩೪. ಹಕಾರಿ ಡಿ.ಎಸ್., ಜಾನಪದ ಮೂಲಭೂತ ತತ್ವಗಳು, ೧೯೮೩

೩೫. ತಿರುಕ (ಶ್ರೀಶ್ರೀ ರಾಘವೇಂದ್ರಸ್ವಾಮೀಜಿ), ಸ್ವಯಂವೈದ್ಯ, ೧೯೮೦, ಅನಾಥಸೇವಾಶ್ರಮ ವಿಶ್ವಸಮಿತಿ, ಮಲ್ಲಾಡಿಹಳ್ಳಿ, ೧೯೮೦

೩೬. ನರಸಿಂಹಾಚಾರ್ ಎಸ್.ಜಿ., ಕೆಲವು ಸಸ್ಯಗಳ ವೈಜ್ಞಾನಿಕ ಕುಟುಂಬ, ಕನ್ನಡ ಅಧ್ಯಯನ ವಿಭಾಗ, ಕೃಷಿವಿಶ್ವವಿದ್ಯಾಲಯ, ಬೆಂಗಳೂರು, ೧೯೭೯

೩೭. ಬುಲಿನ ಮ.ವಾ., ಹಳ್ಳಿಯ ವೈದ್ಯ, ಶ್ರೀಧೂತಪಾಪೇಶ್ವರ ಆಯುರ್ವೇದ ಔಷದಿ ಕಾರಖಾನೆ, ಪನವೇಲ, ಕಲಾಬಾ ಜಿಲ್ಲೆ, ೧೯೩೭

೩೮. ರಂಗೇಗೌಡ ಸಿ.ಆರ್. ಮತ್ತು ಮಾಗಡಿ ಆರ್.ಗುರುದೇವ, ಜನಪದ ಸುಲಭ ಚಿಕಿತ್ಸೆ, ಗಾಯತ್ರಿ ಪ್ರಕಾಶನ, ಬಸವೇಶ್ವರನಗರ, ಬೆಂಗಳೂರು, ೧೯೯೨

೩೯. ರಂಗೇಗೌಡ ಸಿ.ಆರ್. ಮತ್ತು ಮಾಗಡಿ ಆರ್.ಗುರುದೇವ, ಜಾನಪದ ಪಶುರೋಗ ಚಿಕಿತ್ಸೆ, ಗಾಯತ್ರಿ ಪ್ರಕಾಶನ, ಬಸವೇಶ್ವರನಗರ, ಬೆಂಗಳೂರು, ೧೯೯೩

೪೦. ವೆಣ್ಮಾತಿಯನ್ ಜಿ.ಪಿ., ಸಿದ್ಧವೈದ್ಯ, ರಾಣಿ ಚೆನ್ನಮ್ಮ ಪ್ರಕಾಶನ, ಅಂಜನೇಯ ದೇವಸ್ಥಾನ ಬೀದಿ, ಅಲಸೂರು, ಬೆಂಗಳೂರು, ೧೯೯೩

೪೧. ಶ್ರೀನಿವಾಸಮೂರ್ತಿ ಜಿ ಮತ್ತು ಎನ್.ರಾಘುವೇಂದ್ರ (ಸಂ), ವೈದ್ಯಸಾರ ಸಂಗ್ರಹ, ದ್ವಿತೀಯ ಭಾಗ, ಓರಿಟಂಲ್ ಮನುಸ್ಕ್ರಿಪ್ಟ್ ಲೈಬ್ರರಿ, ಮದ್ರಾಸು, ೧೯೫೩

೪೨. ರಾಮಲಿಂಗಯ್ಯ ಉಪ್ಪಿನಕೆರೆ, ವೈದ್ಯಕೀಯ ನಂಬಿಕೆಗಳ ವಿಶ್ಲೇಷಣೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೪೩. ಮರಿಯಪ್ಪಭಟ್ ಎಂ., ರಾಜಾಧಿತ್ಯನ ವ್ಯವಹಾರ ಗಣಿತಂ, ಸರ್ಕಾರಿ ಪ್ರಾಚ್ಯವಿದ್ಯ ಹಸ್ತಪ್ರತಿಗಳ ಗ್ರಂಥಭಂಡಾರ, ಮದ್ರಾಸ್, ೧೯೫೫

೪೪. ಶೇಷಅಯ್ಯಂಗಾರ್ ಎಚ್.(ಸಂ.), ಚಾವುಂಡರಾಯನ ಲೋಕೋಪಕಾರಂ, ಸರ್ಕಾರಿ ಪ್ರಾಚ್ಯವಿದ್ಯ ಹಸ್ತಪ್ರತಿಗಳ ಗ್ರಂಥಭಂಡಾರ, ಮದ್ರಾಸ್, ೧೯೫೦

೪೫. ಶ್ರೀನಿವಾಸಮೂರ್ತಿ ಜಿ. ಮತ್ತು ರಾಮಚಂದ್ರಭಟ್ ಎನ್., ವೈದ್ಯಸಾರ ಸಂಗ್ರಹಂ, ಸರ್ಕಾರಿ ಪ್ರಾಚ್ಯವಿದ್ಯ ಹಸ್ತಪ್ರತಿಗಳ ಗ್ರಂಥಭಂಡಾರ, ಮದ್ರಾಸ್, ೧೯೫೧

೪೬. ವೈದ್ಯಜಾದವ್ ತ್ರಿಕಾಚಾರ್ಯ(ಸಂ), ಶ್ರೀಬಿಂದುವಿನ ರಸಪದ್ಧತಿ, ಮುಂಬೈ, ೧೯೨೫

೪೭. ಶ್ರೀ ಸುರೇಶ್ವರನ ಲೋಹಸರ್ವಸ್ವಂ(ಸಂ), ವೈದ್ಯ ಜಾದವ್ ತ್ರಿಕಂ ಆಚಾರ್ಯ, ಮುಂಬೈ, ೧೯೨೫

೪೮. ಕುಲಕರ್ಣಿ ಬಿ.ಎಸ್.(ಸಂ), ಬ್ರಹ್ಮಶಿವನ ಸಮಯ ಪರೀಕ್ಷೆ, ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡ,

೪೯. ಹೆಗ್ಗಡೆ ಎಲ್.ಆರ್., ಜನಪದ ಮತ್ತು ಗಿರಿಜನರ ಕಥೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦

೫೦. ಸಿದ್ಧಪ್ಪಾರಾಧ್ಯ ಟಿ.ಜಿ., ಕೌಟಿಲ್ಯನ ಅರ್ಥಶಾಸ್ತ್ರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೫

೫೧. ರಾಮಕೃಷ್ಣ ಜಿ., ಭಾರತೀಯ ವಿಜ್ಞಾನದ ಹಾದಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭

೫೨. ಅಮೃತ ಸೋಮೇಶ್ವರ, ತುಳುಬದುಕು, ಪ್ರಕೃತಿ ಪ್ರಕಾಶನ, ಕೋಟಿಕಾರು, ೧೯೮೪

೫೩. ಅಮೃತಸೋಮೇಶ್ವರ, ತುಳುಪಾಡ್ದನದ ಕಥೆಗಳು, ಸಾಹಿತ್ಯಾಂಜಲಿ ಗ್ರಥಮಾಲೆ, ಕೋಟಕಾರು, ೧೯೬೨

೫೪. ಅಭಯ್‌ಕುಮಾರ್ ಕೆ., ಮುಗೇರರು ಜನಾಂಗ ಜಾನಪದ ಅಧ್ಯಯನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಮತ್ತು ಕರ್ನಾಟಕ ತುಳುಸಾಹಿತ್ಯ ಅಕಾಡೆಮಿ, ಮಂಗಳೂರು, ೧೯೯೭

೫೫. ಅಶೋಕ ಆಳ್ವ ಕೆ., ತುಳುನಾಡಿನ ಪ್ರಾಣಿ ಜಾನಪದ(ಅಪ್ರಕಟಿತ), ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೧೯೯೪

೫೬. ಪೀಟರ್ ಜಿ.ಕ್ಲಾಸ್, ತುಳುವ ದರ್ಶನ, ಅನು.ನಾವಡ ಎ.ವಿ.,ಸುಭಾಶ್ಚಂದ್ರ, ಪ್ರಾದೇಶಿಕ ವ್ಯಾಸಂಗ, ಕುಂದಾಪುರ, ೧೯೮೭

೫೭. ಚಿನ್ನಪ್ಪಗೌಡ ಕೆ., ಭೂತಾರಾಧನೆ ಕೆಲವು ಅಧ್ಯಯನಗಳು, ತುಳುವ ಪ್ರಕಾಶನ, ಮಂಗಳೂರು, ೧೯೮೩

೫೮. ವಿವೇಕ ರೈ ಬಿ.ಎ., ತುಳುವ ಅಧ್ಯಯನ ಕೆಲವು ವಿಚಾರಗಳು, ತುಳುವ ಪ್ರಕಾಶನ, ಮಂಗಳೂರು, ೧೯೮೦

೫೯. ವಿವೇಕ ರೈ ಬಿ.ಎ., ತುಳು ಜಾನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫

೬೦. ಶೀನಪ್ಪ ಹೆಗ್ಡೆ ಎ.ಎನ್., ಕಿಲ್ಲೆ ಎಸ್.ಎಸ್., ಪ್ರಾಚೀನ ತುಳುನಾಡು, ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು, ೧೯೫೪

೬೧. ಚಾವುಂಡರಾಯನ ಕೃತಿ ಲೋಕೋಪಕಾರ

೬೨. ಕರ್ನಾಟಕ ಕವಿಚರಿತೆ, ಭಾಗ ೨

೬೩. ನಾಗೇಗೌಡ ಎಚ್.ಎಲ್., ನನ್ನೂರು,

೬೪. ಶಾಂತಕುಮಾರಿ ಪಾಟೀಲ, ಜನಪದ ವೈದ್ಯ

೬೫. ಶಿವರಾಮು ವಿ.ಎಸ್., ಮಾಗಡಿ ಸುತ್ತಿನ ಜನಪದ ವೈದ್ಯ

೬೬. ರವಿಕಲಾ ಎಸ್.ಟಿ., ಜನಪದ ವೈದ್ಯ, ಮಲೆನಾಡಿ ಜಾನಪದ

English Refference Books

1. Patridge Eric, Origins, **A Short Etymological Dictionary of Modern English,** Second Edition, Newyork, Macmillan Company, 1958
2. Alan Dundes, **The Study of Folklore,** Prentice Hall, 1965
3. Tewari L.C., Agarwal R.G., M.J.and Pandey C., Phytochemical Scruning of certain Ayurvedic Arugs used in Unani system of Medicine from U.P. Himalaya, Aryavadiyan
4. Sinha S.K.P. and Dogra J.V.V., An observation on the organic acid Composition of rertain speies of phyllanthus Indian Bot
5. Sadasivan S. and Manickam A, **Boichemical methods for Agricultural Sciences,** Wiley Eastern Ltd, Ansari Road, Daryaganj, New Delhi
6. Shuchita Kumar, Jai Prakash Singh and Sudhir Kumar, Phtochemical Screeing of some plants of Manipurl J.Econ Bot and Phyochem
7. Paul L.Huang, Philip L.Huang, Henry I huang and Sylvia Lee Huang, Developing drugs from traditional medicinal plants, Chemistry and Industry, 1992
8. Kulkarni S.K., A hand book of Experimental Pharmacology, Vallabh Prakashan, Shalimar Bilg, Delhi
9. Annonymous, Pharmacopoeia of India, Govt. of India, Ministry of Health and Family welfare, Published by the Controller, Delhi, 1985
10. Brian E.Lebovitz and jennifer Ann Mueller, Bioflavonoids and Polyphenols, Medical application Journal of optional Nutritin, 1993
11. Cecil Saldanha, Flora of Karnataka, Vol.1, Vol.2, Oxford and IBH Publishing Company(P) Ltd, New Delhi, 1984
12. Cecil J.Saldanha and Dan H.Nicolon, Filora of Hass District, Karnataka, India, Amernind Publishing Company (P) Ltd, New Delhi, 1978
13. Dubey N.K., Rajesh Kumar and Pramil Tripathi, Global promotion of Herbal medicine : India's Opportunity, current Science Vol-86, No.1, 2004
14. Durga R.Sridhar P. and Polasa, Effects of Plumbagin on autibiotic resistance

in bacteria, Indian Journal of Medical Research, 1990

15. Ergon and Stahl, 1965, Thin Layer Chromatography, Springer International Student Edition, New York, 1965

16. Gamble J.S., Filore of Presidencey of Madres, Vol-3, Adlard and Son Limited, Hart Street, W.C.London, 1935

17. Jain S.K., Medicinal Plants, Published by the Director, National Book Trust, India A.S.Green Park, New Delhi, 1935

18. Pattern of Resort in the use of Therapy System and their Significane of health planning in South Asia, Mak Nichier, Medical Anthropology-Spring, 1978

19. The use of Analogy in the Communication of Promotive Health Mark Nichter, Mimi Nichter Paper Delovered at the First International Symposum on Public Health in asia and the Pacific Basin, March 1983, School of Public Health, University of Hawail

20. Folk Medicine, Don Yoder Article

21. Journal of Americal Folklore, Journal of the American Folklore Society Vol.98, 1985

22. Patridge Eric, Origins A Short Etymological Dictionary of Modern English, Second Edition, New York, Macmill Company, 1958

23. Onions C.T.(ed), The Oxford Dictionary of English Etymonolgy, New York, Oxford University Press, 1967

24. Alan Dundes, The Study of Folklore, Pentice Hall, 1965

25. Jan Brumand, The Study of American Folklore, Newyork, 1978

26. Quoted See, Journal of Americal Folklore

27. Derick S.Thompson, The Gaetic Sourus of Macphersons Ossian

28. Willim A. Wilson, Folklore and Nationalism in Modern Trinland(Bloomington: Indian University Press, 1976)

29. Lauri Honke, Empty Texts Full meanings Journal of Folklore Research, Vol.22, 1985

30. Srinivas M.N.(ed), Social Change in Modern India, Berkley and Los Angels, University of California Press, 1969

31. Srinivas M.N.(ed), India's Villages, Asia Publishing House, Bombay, 1960

32. Knapp Mark L., Non Verbal Communication in Human Interaation Holt, Rinehart and Winston in Newyork

33. Srinivas S.L., Folk Culture and oral Tradition

34. Chattopadhyaya K.P., Study of Changes in traditional Culture, Culcutte University, Culcutta, 1957

35. Mathur J.C., Dram in rural India, Indin Council for Cultural Relations, New Delhi, 1964

36. Monica Willson, Rituals of Knship Among the Nyakgusa, Oxfor University Press, 1957

37. Firager J.G., The Workship of Nature, Macmillan & Company London, 1926

೨

ವಕ್ತೃ ವಿವರಗಳು

ಕ್ರ.ಸಂ.	ಹೆಸರು	ವಿದ್ಯಾಭ್ಯಾಸ	ಊರು	ವಯಸ್ಸು	ವೃತ್ತಿ	ತಾಲ್ಲೂಕು
೧.	ತಿಮ್ಮಪ್ಪ	ಅನಕ್ಷರಸ್ತ	ಮುದ್ದಾಪುರ	೬೫		ಬಳ್ಳಾರಿ
೨.	ರಾವಲಮಾರೆಪ್ಪ	”	ಮೋಕ	೫೮	ಕೂಲಿ	ಬಳ್ಳಾರಿ
೩.	ನರೆಗಲ್ಲಪ್ಪ	”	ತೆಕ್ಕಲಕೋಟೆ	೬೮	”	ಶಿರುಗುಪ್ಪ
೪.	ಕಾಗಳ ಬಾಬು	”	ಗುಡಾರನಗರ	೭೦	”	ಬಳ್ಳಾರಿ
೫.	ಕಾತ್ರಿಕೆ ಹುಚ್ಚಮ್ಮ	”	ತಮ್ರಳ್ಳಿ	೮೫	”	ಹ.ಬೊ.ಹಳ್ಳಿ
೬.	ಬೋರಯ್ಯ	”	ನಿಂಬಳಕೆರೆ	೬೯	”	ಕೊಟ್ಟೂರು
೭.	ಮಲ್ಲಪ್ಪ	”	ಏಣಗಿ	೬೦	”	ಹ.ಬೊ.ಹಳ್ಳಿ
೮.	ಗೋಣಿಪ್ಪ	”	ಹಚ್ಚುಹಳ್ಳಿ	೬೫	”	ಸಂಡೂರು
೯.	ಗಂಡಿಬೋರ	ಅಕ್ಷರಸ್ಥ	ಚಾರುನೂರು	೭೦	”	ಸಂಡೂರು
೧೦.	ಶ್ರೀನಿವಾಸಚಾರ್	ಅಕ್ಷರಸ್ಥ	ಕಂಪ್ಲಿ	೫೫	”	ಹೊಸಪೇಟೆ
೧೧.	ಪದ್ಮಮ್ಮ	ಅಕ್ಷರಸ್ಥ	ಕಂಪ್ಲಿ	೬೦	”	ಹೊಸಪೇಟೆ
೧೨.	ಅಯ್ಯಾಳಿ ಅಂಬಮ್ಮ	ಅಕ್ಷರಸ್ಥ	ಅನಂತಶಯಗುಡಿ	೧೫	”	ಹೊಸಪೇಟೆ
೧೩.	ಬ್ಯಾಲಿಚಿಂತಿ ತಿಮ್ಮಪ್ಪ	ಅಕ್ಷರಸ್ಥ	ಮೋಕ	೭೭	”	ಹೊಸಪೇಟೆ
೧೪.	ಮಂಜುನಾಥ	ಅಕ್ಷರಸ್ಥ	ಕಮಲಾಪುರ	೫೦	”	ಹೊಸಪೇಟೆ
೧೫.	ಶ್ರೀನಿವಾಸ	ಅಕ್ಷರಸ್ಥ	ಕೂಡ್ಲಿಗಿ	೪೫	”	ಹ.ಬೊ.ಹಳ್ಳಿ
೧೬.	ಮಲ್ಲೇಶಪ್ಪ	ಅಕ್ಷರಸ್ಥ	ಶಿರುಗುಪ್ಪ	೭೫	”	ಬಳ್ಳಾರಿ
೧೭.	ರುದ್ರಮುನಿ	ಅಕ್ಷರಸ್ಥ	ಕುರುಗೋಡು	೫೪	”	ಬಳ್ಳಾರಿ

೧೮.	ಯಲ್ಲಪ್ಪ	ಅನಕ್ಷರಸ್ಥ	ಹೊಳಗುಂದಿ	೭೯	”	ಹಡಗಲಿ
೧೯.	ಬೊಬಮ್ಮ	ಅನಕ್ಷರಸ್ಥ	ದೌಲತ್ತಪುರ	೮೦	”	ಸಂಡೂರು
೨೦.	ಲೇಸಿ ಚೌಡಮ್ಮ	ಅನಕ್ಷರಸ್ಥ	ಕಂಪ್ಲಿ	೮೬	”	ಕಂಪ್ಲಿ
೨೧.	ಕೋಟ್ರೇಶ್	ಅನಕ್ಷರಸ್ಥ	ಕೃಷ್ಣನಗರ	೫೯	”	ಸಂಡೂರು
೨೨.	ಮಲ್ಲಿಕಾರ್ಜುನ ಹೊಸಮನಿ	ಅನಕ್ಷರಸ್ಥ	ಕಲ್ಲಕಂಬ	೬೫	”	ಬಳ್ಳಾರಿ
೨೩.	ಅಕಾರಿಕಾಳಪ್ಪ	ಅಕ್ಷರಸ್ಥ	ಏಣಿಗಿ	೭೫	”	ಹ.ಬೊ.ಹಳ್ಳಿ
೨೪.	ರಾವೆಲಮಾರೆಪ್ಪ	ಅಕ್ಷರಸ್ಥ	ಮೋಕ	೫೮	”	ಬಳ್ಳಾರಿ
೨೫.	ಜಿ.ವೆಂಕಟೇಶಲು	ಅಕ್ಷರಸ್ಥ	ಸಂಗನಕಲ್ಲು	೪೫	”	ಬಳ್ಳಾರಿ
೨೬.	ಗಂಗವ್ವ ಮಹದೇವಪ್ಪ	ಅಕ್ಷರಸ್ಥ	ಬಳ್ಳಾರಿ	೪೯	”	ಬಳ್ಳಾರಿ
೨೭.	ರುದ್ರವ್ವ ಮಾರುತಿ	ಅಕ್ಷರಸ್ಥ	ನಿಂಬಳಕೇರೆ	೫೨	”	ಕೂಡ್ಲಿಗಿ
೨೮.	ಫಕೀರವ್ವಪೂಜಾರಿ	ಅಕ್ಷರಸ್ಥ	ಹೊಸಳ್ಳಿ	೪೯	”	ಕೂಡ್ಲಿಗಿ
೨೯.	ದೊಡ್ಡ ಹನುಮಂತಪ್ಪ	ಅಕ್ಷರಸ್ಥ	ಸೆರಿಗೇರಿ	೫೫	”	ಶಿರುಗುಪ್ಪ
೩೦.	ಮಲ್ಲಪ್ಪ ಬಸಪ್ಪ ಕಕ್ಕೇರಿ	ಅಕ್ಷರಸ್ಥ	ರಾರಾವಿ	೬೩	”	ಶಿರುಗುಪ್ಪ
೩೧.	ಯಮನೂರು	ಅಕ್ಷರಸ್ಥ	ಕಲ್ಲಕಂಬ	೪೮	”	ಬಳ್ಳಾರಿ
೩೨.	ನಾಗಪ್ಪ ಬಸವ್ವ	ಅಕ್ಷರಸ್ಥ	ಹಗರಿ	೫೫	”	ಬಳ್ಳಾರಿ
೩೩.	ಭರಮಪ್ಪ	ಅಕ್ಷರಸ್ಥ	ತಾರಾನಗರ	೭೮	”	ಸಂಡೂರು
೩೪.	ಹನುಮಂತಪ್ಪ	ಅಕ್ಷರಸ್ಥ	ಕಮಲಾಪುರ	೬೫	”	ಹೊಸಪೇಟೆ
೩೫.	ಶಂಕ್ರಿ	ಅಕ್ಷರಸ್ಥ	ಗದ್ದಿಗೇರಿ	೮೩	”	ಹ.ಬೊ.ಹಳ್ಳಿ
೩೬.	ಬಾಳಪ್ಪ	ಅಕ್ಷರಸ್ಥ	ಮೈಲಾರ	೬೫	”	ಹಡಗಲಿ
೩೭.	ಭರ್ಮಪ್ಪ	ಅಕ್ಷರಸ್ಥ	ಮೈಲಾರ	೮೩	”	ಹಡಗಲಿ
೩೮.	ಕ್ಯಾನಪ್ಪ	ಅಕ್ಷರಸ್ಥ	ಜರುಗಲಿ	೭೫	”	ಕೂಡ್ಲಿಗಿ
೩೯.	ನರಗಲ್ಲಪ್ಪ	ಅಕ್ಷರಸ್ಥ	ಹಂಪದೇವನಹಳ್ಳಿ	೫೨	”	ಹೊಸಪೇಟೆ

೪೦.	ಹನುಮವ್ವ ವಿಠಲ	ಅಕ್ಷರಸ್ಥ	ಕೆಂಚನಗುಡ್ಡೆ	೪೯	”	ಶಿರುಗುಪ್ಪ
೪೧.	ದ್ಯಾವಪ್ಪ	ಅನಕ್ಷರಸ್ಥ	ಹಂಪಸಾಗರ	೩೯	”	ಹ.ಬೊ.ಹಳ್ಳಿ
೪೨.	ಯಲ್ಲವ್ವ	ಅನಕ್ಷರಸ್ಥ	ಕಂಪ್ಲಿ	೪೩	”	ಹೊಸಪೇಟೆ
೪೬.	ರಾಯಪ್ಪ	ಅನಕ್ಷರಸ್ಥ	ಡಿ.ನಾಗೇನಹಳ್ಳಿ	೫೪	”	ಬಳ್ಳಾರಿ
೪೭.	ಯಲ್ಲಪ್ಪ	ಅನಕ್ಷರಸ್ಥ	ಜೋಗ	೬೯	”	ಸಂಡೂರು
೪೮.	ವೆಂಕಟೇಶಲು	ಅಕ್ಷರಸ್ಥ	ರೂಪನಗುಡಿ	೪೯	”	ಬಳ್ಳಾರಿ
೪೯.	ಬ್ಯಾಲಿಚಿಂತಿ ತಿಮ್ಮಪ್ಪ	ಅನಕ್ಷರಸ್ಥ	ಅನಂತಶಯನಗುಡಿ	೬೫	”	ಹೊಸಪೇಟೆ
೫೦.	ಅಯ್ಯಳಿ ಅಂಬಮ್ಮ	ಅನಕ್ಷರಸ್ಥ	ಅನಂತಶಯನಗುಡಿ	೬೫	”	ಹೊಸಪೇಟೆ
೫೧.	ಕೆ.ನಾರಾಯಣರಾವ್	ಅಕ್ಷರಸ್ಥ	ಗೋಟೂರು	೮೦	ವ್ಯವಸಾಯ	ಬಳ್ಳಾರಿ
೫೨.	ಶಿಕಾರಿ ಜೆಲ್ಲುಪೂಜಾರಿ	ಅನಕ್ಷರಸ್ಥ	ಕಂಪ್ಲಿ	೮೫	ಕೂಲಿ	ಹೊಸಪೇಟೆ